ಕಸ್ತೂರಿ


ಜನೆವರಿ, ೧೯೮೫

ಬೆಲೆ: ರೂ. ೨-೫೦



ದಾವಣಗೆರೆ

ಬೆಡಗಿನ ಬಟ್ಟೆಗಳು



ವೈಖರಿ ವಿಶೇಷ ಮತ್ತು ಆರಾಮದ
ಸುಖ ಪಡೆಯುವಿರಿ ಸ್ಟಾರ್‌ಲೈಟ್
ಟ್ರೀನ್* ಹತ್ತಿಯ ಬಟ್ಟೆಗಳಲ್ಲಿ.

ದಿ. ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್
ಹನುಮಂತಪ್ಪ ಬಿಲ್ಡಿಂಗ್
ಚಿತ್ರದುರ್ಗ ರೋಡ್, ದಾವಣಗೆರೆ 577 002

ಷೋ ರೂಮ್
ಕಾವೇರಿ ಭವನ ಬೆಂಗಳೂರು 560 009
ದಾಜಿಬಾನ್ ಪೇಟ್ ಹುಬ್ಬಳ್ಳಿ 580 020
ಚಿತ್ರದುರ್ಗ ರೋಡ್ ದಾವಣಗೆರೆ 577 002

* ಟೆರಿನ್ — CAF ಅವರ ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

THOMAS/8402-C/KAN

ನಲ್ಲ! ಬಿಲ್ ಪಡೆಯುವುದನ್ನು ಮರೆಯಬೇಡಿ!

ಬಿಲ್ ಪಡೆಯದಿದ್ದರೆ ನಿಮ್ಮನ್ನು ನೀವೇ ವಂಚಿಸಿಕೊಳ್ಳಬಹುದು ಇದು ನಿಮಗೆ ಗೊತ್ತೆ?

ಎಷ್ಟೋ ಸಲ ಬಿಲ್ ಕೊಡದೆ, ನಿಮಗೆ ತೆರಿಗೆ ಮಿಗಿಸುವ ನೆಪದಲ್ಲಿ ಮೋಸಗಾರ ವ್ಯಾಪಾರಿಗಳು ಹಾಳಾದ ಮತ್ತು ಖೋಟಾ ವಸ್ತುಗಳನ್ನು ಮಾರುತ್ತಾರೆ.

ಬಹಳಷ್ಟು ಸರಕುಗಳನ್ನು ಈಗಾಗಲೇ ಒಂದೇ ಹಂತದ ತೆರಿಗೆಯ ವ್ಯಾಪ್ತಿಯಲ್ಲಿ ತರಲಾಗಿದೆ. ಅಂದರೆ ರಾಜ್ಯದಲ್ಲಿ ಮೊದಲು ಮಾರಾಟವಾಗುವ ಹಂತದಲ್ಲೇ ತೆರಿಗೆ ಪಾವತಿ ಮಾಡಿರಲಾಗುತ್ತದೆ. ಬಿಲ್ ಕೊಡದಿದ್ದರೆ ನೀವು ತೆರಿಗೆ ನೀಡಬೇಕಾಗಿಲ್ಲ ಎಂದು ವ್ಯಾಪಾರಿಗಳು ಹೇಳಿದರೆ ಅದು ಅಪ್ಪಟ ಸುಳ್ಳು. ಅದನ್ನು ನಂಬಿದರೆ ಕಾನೂನು ಮುರಿಯುವುದರಲ್ಲಿ ಮಾತ್ರ ನೀವು ಪಾಲುದಾರರಾಗಬಹುದು. ನೆನಪಿಡಿ, ಪ್ರತಿ ೫೦ ರೂಪಾಯಿಗೂ ಹೆಚ್ಚಿನ ಮಾರಾಟಕ್ಕೆ ಕಾನೂನಿನಂತೆ ವ್ಯಾಪಾರಿಯು ಬೆಲೆ ನೀಡಲೇ ಬೇಕು.

ಹೆಚ್ಚಿನ ಸರಕುಗಳಿಗೆ ನೀಡಬೇಕಾದ ತೆರಿಗೆ ದರ ದುಬಾರಿಯೇನಲ್ಲ. ಈ ಸಣ್ಣ ಪ್ರಮಾಣದ ತೆರಿಗೆ ಉಳಿಸುವ ಭ್ರಮೆಯಲ್ಲಿ ಪಡೆಯದಿದ್ದರೆ, ನಿಮಗೆ ಮತ್ತು ನಿಮ್ಮ ಆತ್ಮೀಯರಿಗೆ ತೊಂದರೆಯಾಗುವದಲ್ಲದೆ ನಿಮಗೆ ತಿಳಿಯದಂತೆ ಕಾನೂನು ಉಲ್ಲಂಘಿಸುತ್ತಿರಬಹುದು. ಅಷ್ಟೇ ಅಲ್ಲ, ಇದರಿಂದ ನಿಮಗೆ ಯಾವ ರೀತಿಯ ಲಾಭವೂ ದೊರೆಯುವುದಿಲ್ಲ. ಸಾಮಾಜಿಕ ಪ್ರಜ್ಞೆಯುಳ್ಳ ಪ್ರಾಮಾಣಿಕ ಪ್ರಜೆಯುಳ್ಳ ಬಿಲ್ಲನ್ನು ಕೇಳಿ ಪಡೆಯುತ್ತಾರೆ. ಹಾಗೂ ತೆರಿಗೆಗಳನ್ನು ನೀಡಬೇಕಾದಲ್ಲಿ ಹಿಂಜರಿಯುವುದಿಲ್ಲ. ಅವರಿಗೆ ಗೊತ್ತು. ಪಡೆದುಕೊಂಡ ತೆರಿಗೆಯನ್ನು ಸರ್ಕಾರ ಸಾರ್ವಜನಿಕ ಸೌಕರ್ಯಗಳಿಗಾಗಿ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸುತ್ತದೆ ಎಂದು. ಉದಾಹರಣೆ ರಸ್ತೆ ನಿರ್ಮಾಣ, ನಿರ್ಮಾಲೀಕರಣ, ವಿದ್ಯುಚ್ಛಕ್ತಿ ಉತ್ತಮ ನೀರು ಸರಬರಾಜು ಆಸ್ಪತ್ರೆಗಳ ನಿರ್ಮಾಣ......

ಮಾರಾಟ ತೆರಿಗೆಯ ನಿಯಮಗಳನ್ನು ಪಾಲಿಸದಿದ್ದರೆ ನಿಮಗೆ, ನಿಮ್ಮ ಸರ್ಕಾರಕ್ಕೆ ಹಾಗೂ ಸಮಾಜಕ್ಕೆ ನಷ್ಟ.

ಕೆಲವು ನಿತ್ಯೋಪಯೋಗಿ ಉತ್ಪನ್ನಗಳ ಮೇಲಿನ ಮಾರಾಟ ತೆರಿಗೆ

ಸರಕು ಉತ್ಪನ್ನಗಳು	ಮೊದಲ ಹಂತದಲ್ಲೆ ಪಾವತಿ ಮಾಡಲಾದ ತೆರಿಗೆ
ಧಾನ್ಯ ಮತ್ತು ಬೇಳೆಕಾಳುಗಳು ಖಾದ್ಯ ತೈಲ (ಶುದ್ಧ ಮಾಡಿಲ್ಲದುದು)	ಶೇಕಡ ೨
ಖಾದ್ಯ ತೈಲ (ಶುದ್ಧೀಕರಿಸಿದ್ದು)	ಶೇಕಡ ೪
ಮೊಹರಾದ ಡಬ್ಬಿಗಳಲ್ಲಿ ತುಂಬಿಸಿದ ಗಿಣ್ಣು ತುಪ್ಪ ಹಾಗೂ ಬೆಣ್ಣೆ	ಶೇಕಡ ೬
ಡಾಲ್ಡಾ ಪಕಾವ್ ಸೇರಿದಂತೆ ಎಲ್ಲಾ ತರದ ವನಸ್ಪತಿ ತೈಲಗಳು	ಶೇಕಡ ೮
ಸ್ನಾನದ ಸಾಬೂನು, ಬಟ್ಟೆ ಒಗೆಯುವ ಸಾಬೂನು, ಸೋಪ ಫ್ಲೇಕ್, ಪುಡಿ ಸೋಪು ಡಿಟರ್ಜೆಂಟ್ ಪುಡಿ	ಶೇಕಡ ೮
ಜ್ಯಾಮ ಹಣ್ಣಿನ ರಸ, ಹಾರ್ಲಿಕ್ಸ್ ಇತ್ಯಾದಿ ಡಬ್ಬಿಗಳಲ್ಲಿ;ಬಾಟಲಿಗಳಲ್ಲಿ ತುಂಬಿದ ಆಹಾರ ಪದಾರ್ಥಗಳು ಮತ್ತು ಹಣ್ಣುಗಳು.	ಶೇಕಡ ೮
ಔಷಧಿಯುಕ್ತ ತಯಾರಿಕೆಗಳು	ಶೇಕಡ ೮
ಕ್ರಾಕರಿ ಮತ್ತು ಕಟ್ಲರಿ	ಶೇಕಡ ೮
ಸ್ಟೈನಲೆಸ್ ಸ್ಟೀಲ್ ಹಾಗೂ ಪ್ಲಾಸ್ಟಿಕ್ ಪದಾರ್ಥಗಳು	ಶೇಕಡ ೧೦
ಫ್ಯಾನ್, ಬಲ್ಬ್, ಸ್ಟೋವ್, ಗ್ರೈಂಡರ ಮುತ್ತಿತರ ವಿದ್ಯುತ್ ಉಪಕರಣಗಳು	ಶೇಕಡ ೧೦
ಟೂಥ್ ಪೇಸ್ಟ್, ಟೂಥ್ ಬ್ರಶ್, ಹೇರ್ ಆಯಿಲ್ ಇತ್ಯಾದಿ ಟಾಯ್ಲೆಟ್ ಪದಾರ್ಥಗಳು	ಶೇಕಡ ೧೨
ಕಾಫಿ ಟೀ	ಶೇಕಡ ೧೦
ಸಿದ್ಧಗೊಳಿಸಿದ ಉಡುಪು (ರೂ. ೫೦ ಮತ್ತು ಹೆಚ್ಚಿನ ಬೆಲೆಯದು)	ಶೇಕಡ ೬
ಮೋಟಾರ ಟೈರ್‌ಗಳು ಮತ್ತು ಟ್ಯೂಬ್‌ಗಳು	ಶೇಕಡ ೬

ಕಾನೂನಿನಂತೆ ಮಾರಾಟ ತೆರಿಗೆಯ ಮೇಲೆ ಶೇ. ೧೦ ಸರ್‌ಚಾರ್ಜ್ ಹಾಗೂ ಶೇ. ೧೦ ರೂರಲ್ ಡೆವಲಪ್‌ಮೆಂಟ್ ಸೆಸ್ (ಗ್ರಾಮೀಣ ಅಭಿವೃದ್ಧಿ ಕರ) ಅನ್ನು ನೀಡಬೇಕು.

ಕರ್ನಾಟಕ ವಾರ್ತೆ

ಡಿಐಪಿ ೧೪೯೩/೮೪–೨೫

ಕಸ್ತೂರಿ

ಕನ್ನಡ ಡೈಜೆಸ್ಟ

ವ್ಯವಸ್ಥಾಪಕ ಸಂಪಾದಕ :
ಎಸ್. ಎ. ಪಾಟೀಲ

ಸಹಸಂಪಾದಕ :
ಮಾಧವ ನಾ. ಮಹಿಷಿ

ಕಲೆ :
ಪಿ. ಆರ್. ಪಾಟೀಲ

ಮುಖಪುಟ :
ಶೀಲಿಯ ಬಾಳಿಗೆ ಬೆಳ್ಳಿಯ ರೇಖೆ

ಚಿತ್ರ :
ದೇಬಜಾನಿ ಬ್ಯಾನರ್ಜಿ

ಚಂದಾ ದರಗಳು :

ಬಿಡಿ ಸಂಚಿಕೆ	...	೨-೫೦
೧ ವರ್ಷಕ್ಕೆ	ಅಂಚೆ ಸೇರಿ	೨೯-೦೦
೨ ವರ್ಷಕ್ಕೆ	,,	೫೫-೦೦
೩ ವರ್ಷಕ್ಕೆ	,,	೮೨-೦೦

KASTURI, January 1985

ಬೆಳಕಿಂಡಿ

ಆಧುನಿಕ ವಿಜ್ಞಾನ ಕೆಲವು ಅನುಕಂಪದ ನುಡಿಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಬಲ್ಲ ಉಪಶಾಮಕಗಳನ್ನು ಹುಡುಕುವಲ್ಲಿ ಇನ್ನೂ ಪ್ರಯತ್ನಶೀಲವಾಗಿದೆಯಂತೆ. —ಡಿಎಂ

•

ಬಹು ದೀರ್ಘಕಾಲ ನಡೆದ ವೈಜ್ಞಾನಿಕ ಸಂಶೋಧನೆಯೊಂದರ ಫಲಿತಾಂಶ ಈಗ ಹೊರ ಬಂದಿದೆ- 'ಹೊರಡುವ ಸಮಯವಾಯಿತು' ಎಂದುಕೊಂಡು ಅವಸರದಿಂದೆದ್ದ ಹೆಂಗಸು ಸರಿಯಾಗಿ ೩೭ ನಿಮಿಷಗಳ ನಂತರ ಹೊರಡಲಣಿಯಾಗುತ್ತಾಳೆ, ಎಂಬುದೇ ಆ ಫಲಿತಾಂಶ. —ಡಿಐಜಿ

•

ಒಂದು ಬಸ್ಸು, ಒಬ್ಬ ಹೆಂಗಸು ಅಥವಾ ಒಂದು ಹೊಸ ಮಿತವ್ಯಯಕಾರಿ ಔಷಧಿಗಾಗಿ ಹಂಬಲಿಸಿ ಬೆನ್ನಟ್ಟಬೇಡಿ. ಸ್ವಲ್ಪ ನಿಧಾನಿಸಿದರೆ ಮತ್ತೊಂದು ಮಗದೊಂದು ಬರುತ್ತಲೇ ಇರುತ್ತದೆ.

-ಡೆರಿಕ್ ಎಚ್. ಆ್ಯಮರಿ

ಚಂದಾದಾರರಿಗೆ ಸೂಚನೆ

"ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಹಚಿಂತನ

ಸೂರ್ಯನ ಕುದುರೆ

'ಸೂರ್ಯನ ಕುದುರೆ ಹುಳು ಮತ್ತು ಕೀಟ ಋಷಿ' ತುಂಬ ಉತ್ತಮವಾದ ಲೇಖನ. ಕೊನೆಗೋದಿದರಾಯಿತೆಂದುಕೊಂಡು ಇದನ್ನು ಪಕ್ಕಕ್ಕಿರಿಸಿದ್ದೆ. ಕೊನೆಗೆ ನನ್ನ ಮೂರ್ಖತನವನ್ನು ನಾನೇ ಮೆಚ್ಚಿ(?)ಕೊಂಡೆ.

ಕೀಟದ ಜೀವನ ಪದ್ಧತಿ 'ಕೀಟ ಋಷಿ'ಯ ಪ್ರಯೋಗ ವಿಧಾನ ಇವೆರಡೂ ತುಂಬ ಕುತೂಹಲಕಾರಿಯಾದವುಗಳು. ಯಾವ ರೋಮಾಂಚಕ ಕಥೆಗೂ ಕಡಿಮೆಯೆನಿಸದ ಲೇಖನವಿದು. ಆದರೆ ಕೊರತೆಯಾಗಿ ಎದ್ದುಕಾಣುವ ಅಂಶ– ಕೀಟದ ಜೀವನ ವಿವರಣೆಗೆ ತಕ್ಕಂತೆ ಒಂದೆರಡಾದರೂ ಫೋಟೋ ಬೇಕಿತ್ತು, ಕೀಟಋಷಿ 'ಫಾಬ್ರ'ನ ಭಾವಚಿತ್ರವಾಗಲೀ ರೇಖಾಚಿತ್ರವಾಗಲೀ ಇಲ್ಲದಿರುವದು ಲೇಖನದ ಸಮಗ್ರತೆಗೆ ಇನ್ನೊಂದು ಕೊರತೆ.

ಎಂತಿರಲಿ, ಸೊಗಸಾದ ಭಾಷೆಗೆ ಸೊಗಸಾದ ಅನುವಾದಕ್ಕೆ ಧನ್ಯವಾದಗಳು.

ಬೆಂಗಳೂರು –ಜನಾರ್ದನ ದೇವದಕೇರಿ

ನವೆಂಬರ್ ೮೪ರ ಸಂಚಿಕೆಯಲ್ಲಿ ಬಂದ ಶಶಿಧರ ವಿಶ್ವಾಮಿತ್ರರ 'ಸೂರ್ಯನ ಕುದುರೆ ಹುಳ ಮತ್ತು ಕೀಟ ಋಷಿ' ಎಂಬ ಲೇಖನ ಬಂದಿದೆ. ವಾಸ್ತವಿಕವಾಗಿ ಹೇಳಬೇಕೆಂದರೆ 'ದಿ ಇನ್‌ಸೆಕ್ಟ್ ವರ್ಲ್ಡ್' ಪುಸ್ತಕವನ್ನು ಸಂಗ್ರಹಿಸಿ ಭಾಷಾಂತರವಾದ ಲೇಖನವೊಂದು ಪುಸ್ತಕ ವಿಭಾಗದಲ್ಲಿ ಬಹಳಷ್ಟು ವರ್ಷಗಳ ಹಿಂದೆಯೇ ಪ್ರಕಟವಾಗಿತ್ತು. ಆ ಪ್ರತಿ ನನ್ನ ಸ್ವಂತ ಊರಿನಲ್ಲಿ ಇರುವುದರಿಂದ ಯಾವ ವರ್ಷದ ಯಾವ ತಿಂಗಳಿನದು ಎಂದು ಸ್ಪಷ್ಟವಾಗಿ ನೆನಪಿಲ್ಲ. ಬಹುಶಃ ಶ್ರೀಯುತ ಶಶಿಧರ ವಿಶ್ವಾಮಿತ್ರರು ಸಂಗತಿಯನ್ನು ತಿಳಿದೋ, ತಿಳಿಯದೆಯೋ ಬರೆದಿರಬಹುದು. ನೀವಾದರೂ ಬಂದ ಲೇಖನಗಳನ್ನು ಚೆನ್ನಾಗಿ ಪರೀಕ್ಷಿಸಿ ಪ್ರಕಟಿಸಬಹುದಿತ್ತಲ್ಲ.

ಹಳ್ಳಿಖೇಡ (ದೊಡ) –ಸಿ. ಎನ್. ಆದಿಶೇಷ

[ನೀವು ಹೇಳುವ ಲೇಖನ ಅಗಸ್ಟ್ ೧೯೭೧ ರ 'ಕಸ್ತೂರಿ'ಯಲ್ಲಿ ಬಂದಿದೆ. ಈ ಅಂಶವನ್ನು ನೆನಪಿಸಿದ್ದಕ್ಕಾಗಿ ಧನ್ಯವಾದಗಳು. –ಸಂ.]

ದೀಪಾವಳಿ ವಿಶೇಷಾಂಕಗಳು

'ಅಬ್ಬಾ ಎಷ್ಟೊಂದು ವಿಶೇಷಾಂಕಗಳು!' ನವೆಂಬರ್ ತಿಂಗಳ 'ಕಸ್ತೂರಿ'ಯಲ್ಲಿ ಪ್ರಕಟವಾದ ಎನ್. ಸಿ. ದೇಸಾಯಿಯವರ ಲೇಖನ ತುಂಬಾ ಸ್ವಾರಸ್ಯವಾಗಿದ್ದು ಮಾಹಿತಿಪೂರ್ಣವಾಗಿತ್ತು. ವಿಶೇಷಾಂಕಗಳ ಕುರಿತು ಕನ್ನಡದಲ್ಲಿ ಇಂಥ ಲೇಖನ ಬಹುಶಃ ಇದೇ ಪ್ರಥಮವಾಗಿರಬೇಕು.

ಬರೋಡಾ –ಎಸ್ಕೆ ಹಳೆಯಂಗಡಿ

ಇವರು ಮನುಷ್ಯರು!

'ಮನುಷ್ಯರಿಗೆ ಕರುಣೆ ದಯೆ ಇಲ್ಲ ಎಂದರೆ ಯಾರು ಒಪ್ಪುತ್ತಾರೆ' ಯಾಕೆ? ಹಣಕ್ಕಾಗಿ ಮನುಷ್ಯನ ಮನದ ವಿಭಿನ್ನ ಗುಣಗಳನ್ನು ಎತ್ತಿ ತೋರಿಸುತ್ತದೆ ಈ. ಕಥೆ ಕಂಬಳಿ ಆದವಾನಿಯವರ ಅನುವಾದ ಮೂಲಕ್ಕೆ ಹತ್ತಿರಲ್ಲೇ ಹಾದುಹೋಗಿದೆ. ಹಣಕ್ಕಾಗಿ ಮನುಷ್ಯ ಏನೂ ಮಾಡಲೂ ಸಿದ್ಧ ಎಂಬುದು ಈ ಕಥೆಯಿಂದ ತಿಳಿದುಬರುತ್ತದೆ. ವೈವಿಧ್ಯಮಯ ಕಥೆಗೆ ಧನ್ಯವಾದಗಳು. ಅನುವಾದಿಸಿದ ಕಂಬಳಿಯವರಿಗೆ ಅನಂತ ವಂದನೆಗಳು.

ಕಾಸರಗೋಡು –ವೆಂಕಟಭಟ್ ಎಡನೀರು

ಸೊಗಸಾದ ಚಿತ್ರಣ

ಹಿಂದೆ 'ಮುಂಬಯಿ ವಿಶ್ವವಿದ್ಯಾಲಯದ ನೂರ ಇಪ್ಪತ್ತೈದು ವಸಂತಗಳು' ಎಂಬ ಲೇಖನವೋದಿದ್ದೆ. ಈ 'ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ'ಯ ಕುರಿತು ಸೊಗಸಾದ ಚಿತ್ರಣ ನೀಡಿದ್ದೀರಿ. ನಮ್ಮ ಬದುಕಿಗೆ ಹೊಸ ಆಯಾಮ ನೀಡಬಲ್ಲ ಇಂಥ ಅನೇಕ ಸಂಸ್ಥೆಗಳಿವೆ. ಅವೆಲ್ಲವುಗಳನ್ನು ಆಗಾಗ ಪರಿಚಯಿಸುತ್ತಿರಿ.

ಬೆಲ್ಲದ ಬಾಗೇವಾಡಿ –ಆರ್. ಬಿ. ಗೋಕಾಕ

ಅರ್ಥಪೂರ್ಣ

ನಮ್ಮ ರಾಷ್ಟ್ರದಲ್ಲಿ ಹೆಚ್ಚಾಗುತ್ತಿರುವ

ಕೋಮು ದ್ವೇಷ ಹಾಗೂ ಕೋಮು ಗಲಭೆಗಳ ಈ ಸಂಕೀರ್ಣ ಸಮಯದಲ್ಲಿ ಪ್ರಕಟವಾದ ಎಂ. ಕೆ. ಸಆದತ್ ಉಲ್ಲಾರ 'ಮುಸ್ಲಿಂ ಬಾಂಧವರಿಗೊಂದು ಕಿವಿಮಾತು' ಎಂಬ ಕಿರುಲೇಖನ (ಕಸ್ತೂರಿ, ಡಿಸೆಂಬರ್) ಅತ್ಯಂತ ಸಮಂಜಸ ಮತ್ತು ಸ್ವಾಗತಾರ್ಹ. ತಾನು ಒಬ್ಬ ಭಾರತೀಯ ಎಂಬ ಭಾವನೆ ಮೂಡಿದಾಗಲೇ ಈಗ ಏರ್ಪಟ್ಟಿರುವ ಅಹಿತಕರ ವಾತಾವರಣಕ್ಕೆ ಅಂಕದ ಪರದೆ ಬೀಳಬಹುದು. ಸ್ವಾರ್ಥ ಸಾಧನೆಗಾಗಿ ಧಾರ್ಮಿಕ ಭಾವನೆಗಳನ್ನು ಕೆಣಕುವ ಹೇಯ ರಾಜಕಾರಣಿಗಳ ವರ್ತನೆ ತೀರಾ ಖಂಡನೀಯ. ಹಿಂದೂ-ಮುಸ್ಲಿಮರಲ್ಲಿ ಸಾಮರಸ್ಯ ಬೆಳೆದಲ್ಲಿ ದೇಶದ ಪ್ರಗತಿಯೂ ಆಗುವುದರೊಂದಿಗೆ ಕೋಟಿಗಟ್ಟಲೆ ಹಣ ಹಾನಿಯಾಗುವುದೂ ನಿಲ್ಲುತ್ತದೆ.

ಬೆಂಗಳೂರು —ಪ. ರಾಮಚಂದ್ರರಾವ್

ಪ್ರೊ. ಜಾಗಿರದಾರ

ಆದ್ಯ ರಂಗಾಚಾರ್ಯರ ಪೂರ್ವಾಶ್ರಮ ಜೀವನದ ಕುರಿತು ನಾ. ಅ. ಹೊಸಕೇರಿಯವರು ಬರೆದ ಈ ಲೇಖನ ಪೀಳಿಗೆಗೆ ತಿಳಿಯದ ಹಾಗೂ ಹಿಂದಿನವರು ಮರೆತುಬಿಟ್ಟಿರಬಹುದಾದ ಅನೇಕ ಸಂಗತಿಗಳ ಬಗ್ಗೆ ಸ್ವಾರಸ್ಯಕರ ಮಾಹಿತಿ ನೀಡುತ್ತದೆ. ಆದ್ಯರ 'ಸಾಹಿತಿಯ ಆತ್ಮಜಿಜ್ಞಾಸೆ'ಯಿಂದ ಕೆಲ ಭಾಗಗಳನ್ನು ನಿಮ್ಮ ಪುಸ್ತಕ ವಿಭಾಗದಲ್ಲಿ ಪ್ರಕಟಿಸಿ ಓದುಗರಿಗೆ ಈ ಮುನ್ನವೇ ಅವರ ಜೀವನದ ಒಂದು ಮಹತ್ವದ ಕಾಲ ಖಂಡದ ದರ್ಶನ ಮಾಡಿಸಿದ್ದೀರಿ.

ಬೆಳಗಾಂವಿ —ಬಿ. ಕೆ. ಕುರಗುಂದಕರ

ಉತ್ತಮ ಪತ್ರಿಕೆ

ಡಿಸೆಂಬರ್ ೧೯೮೪ರ 'ಕಸ್ತೂರಿ' ದಿ. ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ (ಪ್ರಿಯದರ್ಶಿನಿ) ಯವರ ಮುಖಪುಟದಿಂದ ಬಂಗಾರದ ಒಪ್ಪಕೊಟ್ಟ ಬೆಳ್ಳಿಯಂತೆ ಫಳಫಳನೆ ಮಿನುಗುತ್ತಿತ್ತು.

'ಕಸ್ತೂರಿ' ಮಾಸಪತ್ರಿಕೆಯನ್ನು ನಾನು ಇದೇ ಮೊದಲ ಬಾರಿಗೆ ಕೊಂಡುಕೊಳ್ಳುತ್ತಿದ್ದು, ಈ ಪತ್ರಿಕೆಯು ಪ್ರಕಟಿಸುವಷ್ಟು ಉತ್ತಮ ಕಥೆ, ಕವನಗಳನ್ನು ಬೇರ ಯಾವ ಮಾಸಪತ್ರಿಕೆಗಳೂ ಪ್ರಕಟಿಸುವುದಿಲ್ಲ ಎಂದು ಧೈರ್ಯವಾಗಿ ಹೇಳಲು ಸಂತೋಷವಾಗುತ್ತದೆ.

ಡಿಸೆಂಬರ್ 'ಕಸ್ತೂರಿ'ಯಲ್ಲಿ ಮೂಡಿ ಬಂದ ರೇಖಾರಾಣಿಯವರ "ಪ್ರೀತಿಯ ನೆನಪು..." ಕಥೆ ಚಿಕ್ಕದಾದರೂ ಚೊಕ್ಕವಾಗಿದ್ದು ಲೇಖಿಕೆ ತನಗಾದ ಒಂದು ಹೊಸ ಅನುಭವವನ್ನು ಓದುಗರ ಮುಂದೆ ಇಟ್ಟಿದ್ದಾರೆ.

ವಿಟ್ಲ —ಬಾಲಗೋಪಾಲ

ವಾಹನ ಅಪಘಾತಗಳು ಮತ್ತು ಪರಿಹಾರ

ನವೆಂಬರ್ 'ಕಸ್ತೂರಿ'ಯಲ್ಲಿ ವಾಹನ ಅಪಘಾತಗಳ ಕುರಿತಾದ ಲೇಖನ ಅಪ್ ಟು ಡೇಟ್ ಮಾಹಿತಿ ಒಳಗೊಂಡಿಲ್ಲ. ಲೇಖನದ ಕೊನೆಯಲ್ಲಿ ಇನ್ನೂ ಆಗಬೇಕಾದ ಸುಧಾರಣೆಯ ಬಗ್ಗೆ ಸೂಚಿಸಲಾಗಿದೆ. ಆದರೆ ಈ ಸುಧಾರಣೆ ಈಗಾಗಲೇ ಆಗಿದೆ ಎಂಬ ಅಂಶವನ್ನಿಲ್ಲಿ ಹೇಳಬೇಕಾಗಿದೆ.

೧೯೮೨ರ ಅಕ್ಟೋಬರ್ ೧ ರಿಂದ ವಾಹನ ಅಪಘಾತ ಕಾನೂನಿಗೆ ತಿದ್ದುಪಡಿ ಆಗಿದ್ದು, ಅಪಘಾತ ಮಾಡಿ ಓಡಿ ಹೋಗುವ ಸಂದರ್ಭಗಳಲ್ಲಿ ಕೂಡ ಪರಿಹಾರ ಲಭ್ಯವಾಗುವಂತೆ ಆಗಿದೆ. ಇಂಥ ಪ್ರಸಂಗಗಳಲ್ಲಿ, ಮರಣ ಸಂಭವಿಸಿದ್ದರೆ ರೂ. ೫೦೦೦/- ಮತ್ತು ತೀವ್ರ ಗಾಯಗಳಾಗಿದ್ದರೆ ರೂ. ೧೦೦೦/-ಪರಿಹಾರ ದೊರಕುವದು. ಅಪಘಾತವಾದ ಒಂದು ತಿಂಗಳೊಳಗಾಗಿ ತಹಶೀಲದಾರರ (ಹಕ್ಕು ತನಿಖಾ ಅಧಿಕಾರಿ) ಕಡೆಗೆ ಅರ್ಜಿಸಲ್ಲಿಸಬೇಕಾಗುವದು. ಪರಿಹಾರ ಹಣದ ಬಟವಾಡೆಗೆ ಕೇಂದ್ರ ಸರಕಾರವು ಒಂದು ಸಮಾಧಾನಾರ್ಥ ನಿಧಿಯನ್ನು ಸ್ಥಾಪಿಸಿದೆ.

ಬೆಳಗಾಂವಿ —ಶ. ವೀ. ಪಾಟೀಲ

ಕಸ್ತೂರಿ

ವರ್ಷ: ೨೯ | ಜನವರಿ, ೧೯೮೫ | ಸಂಚಿಕೆ : ೫

ಅಲ್ಲಿಗೆ

ಆತ ಒಬ್ಬ ಕ್ರೈಸ್ತ ಸಂನ್ಯಾಸಿ. ಸುದೀರ್ಘ ಹಾಗೂ ನೆಮ್ಮದಿಯ ಬಾಳನ್ನು ಬದುಕಿದ. ಒಂದು ದಿನ ಪ್ರಭುವಿನ ದೂತ ಆತನ ಬಳಿ ಬಂದ. ಸಂನ್ಯಾಸಿ ತನ್ನ ಮಠದ ಅಡುಗೆ ಮನೆಯಲ್ಲಿ ಪಾತ್ರೆ ಪಗಡಗಳನ್ನು ತೊಳೆಯುತ್ತಲಿದ್ದ. ದೂತ ಆತನನ್ನುದ್ದೇಶಿ, "ನನ್ನನ್ನು ಪ್ರಭು ಕಳುಹಿಸಿದ್ದಾನೆ. ನೀನು ನಿನ್ನ ಶಾಶ್ವತ ನೆಲೆಯನ್ನು ಹೊಂದುವುದಕ್ಕಾಗಿ 'ಅಲ್ಲಿಗೆ' ಹೋಗುವ ಸಮಯವೀಗ ಸನ್ನಿಹಿತವಾಗಿದೆ," ಎಂದ.

"ನನ್ನನ್ನು ಕುರಿತು ಚಿಂತಿಸಿದ ಪ್ರಭುವಿಗೆ ನಾನು ಕೃತಜ್ಞ. ಆದರೆ ನೀನೇ ನೋಡು–ತ್ತಿರುವಿ, ಈ ಪಾತ್ರೆ ಪಗಡೆಗಳ ರಾಶಿ ಎಷ್ಟು ದೊಡ್ಡದೆಂದು. ಇವನ್ನೆಲ್ಲ ತೊಳೆಯಲೇಬೇಕು. ನಾನು ಕೃತಘ್ನನಾಗಿ ನನ್ನ ಜೀವನ ಯಾತ್ರೆಯನ್ನು ಮುಗಿಸಲಿಚ್ಛಿಸುವುದಿಲ್ಲ. ಇದನ್ನೆಲ್ಲ ಮುಗಿಸುವವರೆಗೆ 'ಅಲ್ಲಿಗೆ' ಹೋಗುವುದನ್ನು ಮುಂದೂಡಲು ಸಾಧ್ಯವಿಲ್ಲವೆ?" ಎಂದ ಸಂನ್ಯಾಸಿ.

ದೂತ ಆತನನ್ನೊಮ್ಮೆ ಪ್ರೀತಿಯಿಂದ ದೇವದೂತನಿಗೊಪ್ಪುವ ರೀತಿಯಲ್ಲಿ ನೋಡಿ. "ಯತ್ನಿಸುತ್ತೇನೆ" ಎಂದು ಹೇಳಿ ಮಾಯವಾದ.

ಸಂನ್ಯಾಸಿ ಪಾತ್ರೆ ಪಗಡಗಳನ್ನು ತೊಳೆದ. ಮತ್ತೆ ಎಷ್ಟೋ ಕೆಲಸಗಳನ್ನೂ ಮಾಡಿದ.

ಪ್ರಭುವಿನ ದೂತ ಮತ್ತೆ ಒಂದು ದಿನ ಬಂದಾಗ ಸಂನ್ಯಾಸಿ ಮಠದ ತೋಟದಲ್ಲಿ ಕಳೆ

ಕೇಳುತ್ತಿದ್ದ. ದೂತನಿಗೆ ತೋಟವನ್ನೆಲ್ಲ ತೋರಿಸುತ್ತ ಸಂನ್ಯಾಸಿ, "ಈ ಉಪದ್ರವಿ ಸಸ್ಯಗಳತ್ತ, ಮುಳ್ಳು ಗಿಡಗಳತ್ತ ನೋಡು. 'ಅಲ್ಲಿಗೆ' ಹೋಗುವುದನ್ನು ಇನ್ನಷ್ಟು ದಿನ ಮುಂದೂಡುವುದು ಸಾಧ್ಯವೆನಿಸದೆ ನಿನಗೆ?" ಎಂದ.

ದೂತ ಮತ್ತೆ ನಕ್ಕು ಮಾಯವಾದ.

ಸಂನ್ಯಾಸಿ ತೋಟದ ಕಳೆಯನ್ನು ಕಿತ್ತ. ಮುಳ್ಳುಗಿಡಗಳನ್ನು ಕಡಿದ. ನಂತರ ಮಠದ ಗೋಡೆಗಳನ್ನು ಬಣ್ಣ ಬಳಿದು ಸಿಂಗರಿಸಿದ. ಹೀಗೇ ಒಂದಾದ ಮೇಲೊಂದು ಕೆಲಸಗಳು. ಒಂದು ದಿನ ಆತ ರುಗ್ಣಾಲಯದಲ್ಲಿ ರೋಗಿಯೊಬ್ಬನಿಗೆ ನೀರು ಕುಡಿಸುತ್ತಿದ್ದಾಗ ದೂತ ಮುಗುಳ್ನಗುತ್ತ ನಿಂತಿರುವುದು ಕಾಣಿಸಿತು.

ಈಗ ಸಂನ್ಯಾಸಿ ಸನ್ನೆಯಿಂದಲೇ ಸುತ್ತಮುತ್ತಲ ರೋಗಿಗಳನ್ನು ತೋರಿಸಿ, 'ಏನು ಮಾಡಲಿ?' ಎಂಬಂತೆ ದೂತನ ಮುಖ ನೋಡಿದ. ದೂತ ಮಾತನಾಡದೆ ಮಾಯವಾದ.

ಆ ಸಂಜೆ ತನ್ನ ವಿಶ್ರಾಂತಿಧಾಮಕ್ಕೆ ಮರಳಿದ ಆ ಸಂನ್ಯಾಸಿ ಹಾಸಿಗೆಯ ಮೇಲೊರಗಿದ್ದಂತೆಯೆ ಪ್ರಭುವಿನ ದೂತನನ್ನು ಕುರಿತು ಮತ್ತು ತಾನು 'ಅಲ್ಲಿಗೆ' ಹೋಗುವುದನ್ನು ತಪ್ಪಿಸಲು ಅವನನ್ನು ಇಷ್ಟು ಕಾಲ ಹೇಗೆ ಸತಾಯಿಸಿದೆನಲ್ಲಾ ಎಂದು ಯೋಚಿಸಿದ. ಆ ಕ್ಷಣವೇ ಆ ಸಂನ್ಯಾಸಿಗೆ ತಾನು ಬಹಳ ವಯಸ್ಸಾದವನಂತೆಯೂ ಕ್ಷೀಣನಾದಂತೆಯೂ ಅನಿಸತೊಡಗಿತು. ಆಗ, "ಪ್ರಭು, ನಿನ್ನ ದೂತನನ್ನು ಮತ್ತೆ ಕಳಿಸಬಲ್ಲೆಯಾದರೆ ಅವನನ್ನು ಮಾತಾಡಿಸಬೇಕೆಂದಿರುವೆ," ಎಂದುಕೊಂಡ. ಆತ ಈ ರೀತಿ ಅಂದುಕೊಳ್ಳುತ್ತಿದ್ದ ಹಾಗೆಯೇ ಆ ದೂತ ನಗುತ್ತ ಪ್ರತ್ಯಕ್ಷನಾದ. "ದೂತ, ಈಗಲೂ ನನ್ನನ್ನು 'ಅಲ್ಲಿಗೆ' ಕರೆದೊಯ್ಯಲು ನೀನು ಬಯಸುವಿಯಾದರೆ ನಾನೀಗ ಬರಲು ಸಿದ್ಧನಿರುವೆ," ಎಂದ ಸಂನ್ಯಾಸಿ.

ದೂತ ಆತನೆಡೆ ದೇವದೂತನಿಗೊಪ್ಪುವ ರೀತಿಯಲ್ಲಿ ನೋಡಿದ. ನೋಡಿ ಮುಗುಳ್ನಕ್ಕು ಹೇಳಿದ, "ಹಾಗಾದರೆ ನೀನೀಗ ಎಲ್ಲಿರುವಿಯೆಂದು ಭಾವಿಸಿರುವಿ?"



ಬೀಸಣಿಗೆ ಮತ್ತು ಕವಿತೆ

ಹಿಂದಿ ಕವಿ ನವೀನರು ಮತ್ತು ಲಾಲ ಬಹಾದ್ದೂರ ಶಾಸ್ತ್ರೀಯವರು ಒಂದೇ ಸೆರೆಮನೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಬಗ್ಗೆ ಶಿಕ್ಷೆ ಅನುಭವಿಸುತ್ತಿದ್ದರು. ಒಂದು ದಿವಸ ಮಧ್ಯಾಹ್ನದ ವೇಳೆಯಲ್ಲಿ ಕವಿ ನವೀನರು ತಮ್ಮ 'ಜೂಠೆ ಪತ್ತೆ' ಕವಿತೆಯನ್ನು ಹಾಡಿ ತೋರಿಸಿದರು. ಆ ಕವಿತೆಯಲ್ಲಿ ಒಂದು ಸಾಲು ಹೀಗಿತ್ತು: 'ಜನಕೊ ಜನಕೆ ಆಗೆ ಕರ ಫೈಲಾತೆ ದೇಖಾ' ಶಾಸ್ತ್ರೀಯವರು ನವೀನರ ಪ್ರಶಂಸೆ ಮಾಡಿದರು. ಆ ಮೇಲೆ ನವೀನರು ಮಲಗಿದರು. ಒಬ್ಬ ನೌಕರನು ಅವರಿಗೆ ಬೀಸಣಿಗೆಯಿಂದ ಗಾಳಿ ಬೀಸತೊಡಗಿದ. ಶಾಸ್ತ್ರೀಯವರಿಗೆ ಈ ಸಂಗತಿ ಸೇರಲಿಲ್ಲ. ಕವಿ ನವೀನರು ಎಚ್ಚರಾದಾಗ ಶಾಸ್ತ್ರಿ ಅಂದರು "ನವೀನಜಿ, ನಾನು ಒಂದು ಹೊಸ ಕವಿತೆ ಬರೆದಿದ್ದೇನೆ. ಅದರ ಪ್ರಾರಂಭ ಹೀಗಿದೆ– 'ಜನಕೊ ಜಿನಪರ ವಿಜನ ಡುಲಾತೆ ದೇಖಾ'! ನವೀನರು ಸುಮ್ಮನಾದರು. ಅನಂತರ ಅವರು ಯಾರಿಗೂ ಬೀಸಣಿಗೆ ಬೀಸಲು ಹೇಳಲಿಲ್ಲ.

–ರಾಮಯಾನೆ ಎಸ್. ಟಿ.

ಇದು ಅವರ ಜನ್ಮಶತಾಬ್ದಿ



ಕೈಲಾಸಂ: ಒಂದು ನೆನಪು

ಆರ್. ಬಸವರಾಜ್

ಕೈ ಬಗ್ಗೆ ನಿಮಗ್ಗೊತ್ತೆ ಅನ್ನೋ ಪ್ರಶ್ನೆಗೆ ಈ ಹೊಸ ಪೀಳಿಗೆಯೋರು ಕೊಡೋ ಉತ್ರ ಏನು? "ಗೊತ್ತಿಲ್ದೆ ಏನು? ನಮ್ಮೆಲ್ಲ ಕೆಲ ಕಾರ್ಯಗಳೂ ಕೈಯಿಂದ್ಲೇ ಆಗ್ಬೇಕಲ್ವೇ? ಕೈಕೊಡೋದು, ಕೈಗೆ ಒಟ್ಕೋಡೋದು, ಕೈ ಎತ್ತೋದು ಇಳ್ಸೋದು–ಎಲ್ಲಾ ಗೊತ್ತೂ"ಂತ ಹೇಳಿಯಾರು! "ಗಾಂಧಿ ವಿಚಾರ ನಿಮಗ್ಗೊತ್ತೇ?" ಅಂತ್ಕೇಳಿದ್ರೆ, ವಿದ್ಯಾರ್ಥಿಗಳು ಮೇಷ್ಟ್ರೇಗೇ ತಿರುಗ್ಸಿ ಕೇಳ್ತಾರಲ್ಲಾ; "ಯಾವ ಗಾಂಧಿ? ಇಂದಿರಾ ಗಾಂಧಿ, ರಾಜೀವ ಗಾಂಧಿ, ಸಂಜಯ ಗಾಂಧಿ, ಮನೇಕಾ ಗಾಂಧಿ ಅಥ್ವಾ ಗಡಿನಾಡ ಗಾಂಧಿ?" ಈ ಹೆಸರೆಲ್ಲಾ ನೆನಪಿದ್ದು, ಮಹಾತ್ಮಾ ಗಾಂಧಿ ಹೆಸರನ್ನೇ ಮರೆತಿಲ್ವೆ? ಹಾಗೇನೆ, ಕನ್ನಡಕ್ಕೊಬ್ಬನೇ 'ಕೈ' ಎನ್ನಿಸಿದ ಟಿ.ಪಿ. ಕೈಲಾಸಂ ಹೆಸರು ಕೂಡಾ ಮರೆತು ಹೋಗಿರೋದ್ರಲ್ಲಿ ಆಶ್ಚರ್ಯ ಏನಿದೆ?

ಹಾಗೆ ನೋಡಿದ್ರೆ, 'ಕನ್ನಡಕ್ಕೊಬ್ಬನೇ 'ಕೈ' ಅನ್ನೋದೂ ಕ್ಲೀಷೇನೇ ಅಲ್ವೆ? 'ಕೈ' ಒಬ್ಬನೇ ಆದಂತೆ ಬಿ. ಎಂ. ಶ್ರೀ, ಅ.ನ.ಕೃ, ತ.ರಾ.ಸು. ಎಲ್ಲಾ ಒಬ್ಬೊಬ್ಬರೇ. ಅವರಂತೆ ಇನ್ನೊಬ್ಬರಿಲ್ಲಾಂತ ಸೂತ್ರವನ್ನ ಸರಳಗೊಳಿಸಬಹ್ದು. ಆದರೆ ಕೈಲಾಸಂ ವ್ಯಕ್ತಿತ್ವವನ್ನು ಸರಳಗೊಳಿಸುವುದು ಅಷ್ಟೊಂದು ಸುಲಭವಲ್ಲ. ಅದೊಂದು ಸಂಕೀರ್ಣ ವ್ಯಕ್ತಿತ್ವ: ಅರಿತೆವೆಂದುಕೊಂಡರೂ ಅರಿಯಲಾಗದ ಬಹುಮುಖ ವ್ಯಕ್ತಿತ್ವ: ಎಲ್ಲಾ ಗೋಜಲು, ಕಗ್ಗಂಟು. ಆಟಗಾರ ಕೈಲಾಸಂ, ಶಾಸ್ತ್ರಜ್ಞ ಕೈಲಾಸಂ, ಹಾಸ್ಯಪಟು ಕೈಲಾಸಂ, ಸೂಕ್ಷ್ಮ ನೀತಿಜ್ಞ ಕೈಲಾಸಂ, ಜೀನಿಯಸ್, ಶಿಕ್ಷಕ, ವ್ಯಾಯಾಮ ಸಾಧಕ ಕೊನೆಗೆ ಶತವಕ್ರ–ಇತ್ಯಾದಿ ವೈವಿಧ್ಯಮಯ ವಿಶೇಷಣಗಳ ಮುಗಿಯದ ಸರಮಾಲೆ ಕೈಲಾಸಂ. ಕನ್ನಡದಲ್ಲಿ ಹೊಸ ಬಗೆಯ ಸಾಮಾಜಿಕ ನಾಟಕಗಳನ್ನು ಬರೆದು, ಆಡಿ ಆಡಿಸಿದ ಕೀರ್ತಿ ಕೈಲಾಸಂಗಲ್ಲದೆ ಮತ್ತಾರಿಗೆ?

'ಹಾಡು ಮತ್ತು ಜೋಕ್ಸ್ ಹೇಳಿ ನಗಸ್ತಾನೆ! ಒಳ್ಳೇ ಬಾಡಿಯಂತೊ! ಮಸಲ್ಸ್ ಕುಣಿಸ್ತಾನಂತೆ! ಫುಟ್‌ಬಾಲ್ ಗೋಲ್ ಕೀಪರಂತೆ! ಹಾಕಿ ಆಟ್ವೂ ಬರುತ್ತಂತೆ!' ಇತ್ಯಾದಿ ಆಶ್ಚರ್ಯಾರ್ಥಕ ಚಿಹ್ನೆಗಳೇ 'ಕೈ' ಬಗ್ಗೆ. ನಾಟಕದ ಪ್ಲಾಟ್ ಇರಲಿ; ಕೈಲಾಸಂ ಭಾಷೇನ

ಓದೋದು, ಬರ್ಯೋದು ಅರ್ಥಮಾಡ್ಕೊಳ್ಳೋದು – ಎಲ್ಲಾ ತಕ್ಲೀಫು. ತೊಡಕಾಗಿ ಹೆಣೆದುಕೊಂಡ ಒತ್ತಕ್ಷರ. ಇಂಗ್ಲಿಷ್, ತಮಿಳು, ತೆಲುಗು, ಸಂಸ್ಕೃತಗಳ ಕಲಸು ಮೇಲೋಗರ. ಆಂಡವನಿಗೇ ಅರ್ಥವಾಗಬೇಕು. ಪ್ರಿಂಟ್ ಮಾಡಲೂ ಮುದ್ರಣ ಯಂತ್ರ ಮುಗ್ಗರಿಸುತ್ತೆ. ಓದಲು ತೊಡಗಿದರೆ ಬಾಯಿಗೆ ವಾಯುರೋಗ ಬಡಿಯುತ್ತೆ. ಆದ್ರೆ ತಮ್ಮ ಭಾಷೆ ಬಗ್ಗೆ 'ಕೈ' ಹೇಳೋದೇ ಬೇರೊಂದು; 'ಇಬ್ಸನ್‌ದು ಇನಿಮಾತು, ಗಾಲ್ಸ್‌ವರ್ದೀದು ಗೆಳೆಮಾತು, ಶಾದು ಸುಡೋ ಮಾತು, ಕೈಲಾಸಂದು ಕೊಡಲಿ ಪೆಟ್ಟು.' ಆಡುವ ಮಾತುಗಳಿಗೆ ಅಡೆತಡೆ ಎಂಬುದೇ ಇಲ್ಲ. ಒಂದರ ಹಿಂದೊಂದರಂತೆ ಓಡುತ್ತಲೇ ಬರುವ ಬಾಣಗಳು. ಬತ್ತಳಿಕೆ ಮಾತ್ರ ಅಕ್ಷಯ–ವೇಗದ ನಿರರ್ಗಳ ಗಬಗಬ ಮಾತು.

ಆಕಾರದಲ್ಲಾದ್ರೂ ಆಕರ್ಷಣೆಯುಂಟೊ? ಕೇಳಲೇ ಬೇಡಿ. ಮೋಟು ಮನುಷ್ಯ. ಗೂನು ಬೆನ್ನು. ಮುಖ ಮೊದಲೇ ವಕ್ರ. ಮಾತು ಅಭಿನಯಗಳಿಂದ ವಕ್ರತಮ. ಅಂಗಿ, ಕೋಟು, ಬೂಟು ಪ್ಯಾಂಟು ಇರಬೇಕೆಂಬ ನಿಯಮವೂ ಇಲ್ಲ. ಬರೀ ಬನಿಯನ್ ಪಂಚೆ–ಅಷ್ಟೇ ಸಾಕಾದೀತು. ಸಿಗರೇಟಂತೂ ಸದಾ ಬಾಯಲ್ಲಿ ಹೊಗೆಯುಗುಳುತ್ತಿರಲೇ ಬೇಕು. ಹೊರನೋಟದಲ್ಲೇನೂ ಆಕರ್ಷಣೆಯಿಲ್ಲ. ಆತನ ಪ್ರತಿಭೆ ಅರ್ಥವಾದಾಗ ಮಾತ್ರ ಎಲ್ಲಾ ಸೂಜಿಗಲ್ಲಿಗೆ ಸಿಕ್ಕಿದ ಕಬ್ಬಿಣದ ಚೂರುಗಳು. 'ನಟರು ಬೇರೆ ಬೇಕಿಲ್ಲ ಭೂಪತಿಗೆ. ಅಪ್‌ಟು ಡೇಟ್ ಅಮ್ಮಯ್ಯನೂ ಅವನೇ. ನೊ ಛಾಲೆಂಜರ್ ನಾಗೂನೂ ಅವನೇ. ಕಂಡಕ್ಟ್ರು ಕವಿ ಎಲ್ಲಾ ಕಲಸು ಮೇಲೋಗರ' ಎನ್ನುತ್ತಾರೆ ಸಿದ್ದವ್ವನಹಳ್ಳಿ ಕೃಷ್ಣಶರ್ಮ.

ಕೈಲಾಸಂ ಜನಿಸಿದ್ದು ಬೆಂಗಳೂರಿನ ತಾರಾಮಂಡಲ ಪೇಟೆಯಲ್ಲಿ ೧೮೮೫ರಲ್ಲಿ. ಅಂದೇ ರಂಗಭೂಮಿಯಲ್ಲೊಂದು ಹೊಸ ತಾರೆಯ ಜನನ. ಕಬ್ಬನ್ ಪೇಟೆ, ಸುಣಕಲ್ ಪೇಟೆ ಮಾಮೂಲ್ ಪೇಟೆಗಳೆಲ್ಲಾ, ಬಾಲಕನಿಗೆ ಚಿರಪರಿಚಿತ.

ತಾಯಿ ಪ್ರೀತಿ ಮಮತೆಗಳ ಸಾಕಾರವಾದ ಕಮಲಮ್ಮ. ತಂದೆ ಪರಮಶಿವ ಅಯ್ಯರ್. ಅವರು ಸೆಂಟ್ರಲ್ ಕಾಲೇಜಿನಲ್ಲಿ ರಸಾಯನ ಶಾಸ್ತ್ರದ ಅಧ್ಯಾಪಕರು. ಅನಂತರ ನ್ಯಾಯವಾದಿ. ಅನಂತರ ಅಸಿಸ್ಟೆಂಟ್ ಕಮೀಷನರು. ಆ ಕಾಲಕ್ಕೆ ಅದು ಹೆಚ್ಚು ಸಂಬಳ ತರುವ ಉನ್ನತ ಹುದ್ದೆ. ಮೇಧಾವಿಯಾದ ಅವರು ಆಚಾರ ಮತ್ತು ಸಂಪ್ರದಾಯನಿಷ್ಠರು.

ಹುಡುಗ ಕೈಲಾಸಂಗೆ ತಂದೆ ಬಗ್ಗೆ ಅತ್ಯಧಿಕ ಭಯ ಭಕ್ತಿ. ತಾಯಿಯ ಬಗ್ಗೆ ಅತಿಶಯ ಪ್ರೀತಿ ಮಮತೆ. ತಾಯಿಯ ವಿಚಾರದಲ್ಲಿ ಅವರಿಗಿದ್ದ ಪ್ರೀತಿ ವಾತ್ಸಲ್ಯ ಅವರ ನಾಟಕಗಳಲ್ಲಿ ಸೊಗಸಾಗಿ ಅಭಿವ್ಯಕ್ತಗೊಂಡಿದೆ. ಕೈಲಾಸಂ ದೊಡ್ಡಪ್ಪ ಮದ್ರಾಸಿನ ಹೈಕೋರ್ಟಲ್ಲಿ ಜಡ್ಜು. ನಿಗರ್ವಿ. ಸೌಮ್ಯ ಸರಳ ಸ್ವಭಾವದ ಮೃದು ಹೃದಯದ ವ್ಯಕ್ತಿ. ಅಪ್ಪನಿಗಿಂತ ದೊಡ್ಡಪ್ಪನಲ್ಲಿಯೇ ಕೈಲಾಸಂಗೆ ಹೆಚ್ಚು ಪ್ರೀತಿ.

ಕೈಲಾಸಂ ಬಾಲ್ಯದಿಂದಲೂ ತುಂಟ ನಂಬರಲ್ಲಿ ಸಂದೇಹವಿಲ್ಲ. ಸುಲ್ತಾನ್‌ಪೇಟೆ ಸ್ಕೂಲಲ್ಲಿ ಓದುತ್ತಿದ್ದಾಗ ನಡೆದೊಂದು ಪ್ರಸಂಗ ಹೀಗಿದೆ. ಸೋಮೇಶ್ವರ ಶತಕ ಪಾಠ ಹೇಳಿದ್ದ ಕನ್ನಡ ಮೇಸ್ಟ್ರು ಮಾರನೇ ದಿನ, ಆ ಪದ್ಯಗಳನ್ನು ಹೇಳುವಂತೆ ವಿದ್ಯಾರ್ಥಿಗಳನ್ನು ಕೇಳಿದರು. ಯಾರೂ ಹೇಳಲಿಲ್ಲ. "ಎಲ್ಲ ಪದ್ಯಗಳೂ ಬರದಿದ್ರೂ ಪರವಾಯಿಲ್ಲ. ಯಾರಿಗೂ ಒಂದಾದ್ರೂ ಬರಲ್ವೇನೋ?" ಅಂದ್ರು. ಅದಕ್ಕೂ ಉತ್ತರವಿಲ್ಲ. "ಹೋಗಲಿ, ಒಂದು ಸಾಲಾದ್ರೂ ಬರುತ್ತೋ?" ಅಂದ್ರು. ಯಾರೂ ಮೇಲೇಳಲೇ ಇಲ್ಲ. ಕೈಲಾಸಂ ಮಾತ್ರ ಎದ್ದು ನಿಂತ್ರು. ಪರಮಾನಂದವಾಯ್ತು ಮೇಸ್ಟ್ರಿಗೆ. "ನೀ ಹೇಳ್ತೀಯೇನೊ?" "ಅರ್ಧಸಾಲು ಹೇಳ್ತೇನೆ ಸಾ" ಅಂದ್ರು ಕೈ. "ಅಷ್ಟಾದ್ರೂ ಬರುತ್ತಲ್ಲಾ. ಹೇಳು" ಅಂದ್ರು. "ಹರಹರಾ! ಶ್ರೀ ಚೆನ್ನ

ಸೋಮೇಶ್ವರಾ" ಅಂತ ಅಷ್ಟೇ ಹೇಳಿ ಕೂತು ಬಿಟ್ರು ಕೈಲಾಸಂ. ತರಗತಿಯಲ್ಲಿ ನಗೆಯೋ ನಗೆ. ಮೇಸ್ಟರಿಗೂ ನಗು ತಡೆಯಲಾಗಲಿಲ್ಲ. ಇಂಥ ನಗೆ ಬುಗ್ಗೆಗಳೆಷ್ಟು ಚಿಮ್ಮಿದುವೋ ಕೈ ವಿದ್ಯಾರ್ಥಿ ದೆಸೆಯಲ್ಲಿ! ವಿದ್ಯಾರ್ಥಿ ಮಿತ್ರರೋ ಅಧ್ಯಾಪಕರೋ ಬರೆದಿಟ್ಟಿದ್ದರೆ ಅದೊಂದು ನಗೆಗಡಲಾಗುತ್ತಿತ್ತು.

ವಿದ್ಯಾರ್ಥಿ ಕೈಲಾಸಂ ಬೆಂಗಳೂರಿಂದ ಹಾಸನಕ್ಕೆ ಹಾಸನದಿಂದ ಮೈಸೂರಿಗೆ ಅಲೆದರು. ಅನಂತರ ಉನ್ನತ ವ್ಯಾಸಂಗಕ್ಕಾಗಿ ಮದ್ರಾಸಿಗೂ ಅಲ್ಲಿಂದ ಲಂಡನ್ನಿಗೂ ಹೋದರು. ಹಾಸನದಲ್ಲಿ ಹಾಸನದಮ್ಮನ ಗುಡಿಯ ಬಳಿಯೇ, ಕೈಲಾಸಂ ಮನೆ. ಅಲ್ಲಿ ಓದಿದ್ದು ಕ್ರೆಸ್ ಸಾಹೇಬರ ಸ್ಕೂಲಲ್ಲಿ. ದೇವಗೆರೆಯ ಸುತ್ತಮುತ್ತ ಅವರ ಆಟ ಓಟ ಎಲ್ಲಾ. 'ಆಸನ, ಹರಸೀರೆಕೇ'ಯ ಜೋಕು ಅವರು ಹಾಸನದಲ್ಲಿರುವಾಗಲೇ ಜನ್ಮ ತಾಳಿರಬೇಕು.

ಸಂಬಂಧಿಕರು ಸ್ನೇಹಿತರೊಂದಿಗೆ ಕೈಲಾಸಂ ಆಗಾಗ್ಗೆ ಮೈಸೂರು ಅರಮನೆಗೂ ಹೋಗುತ್ತಿದ್ದರು. ಚಾಮರಾಜ ಒಡೆಯರಿಗೆ ಚೋಟಿ ಹುಡುಗ ಕೈಲಾಸಂ ಕಂಡರೆ ಬಹಳ ಇಷ್ಟ. ಕೈಲಾಸಂಗೆ ಅವರು ಮಹಾರಾಜರೆಂಬುದೂ ಗೊತ್ತಿಲ್ಲ. ಒಡೆಯರಿಗೆ ಮಾತಿನಲ್ಲಿ ಸ್ವಲ್ಪ ಉಗ್ಗು. "ಮ್ ಮ್ ಮೇಷ್ಟ್ರೇ, ಯಾರೀ ಚೊ ಚೋಟೀ ಹುಡುಗ?" ಅಂತ ಕೈಲಾಸಂ ಜೊತೆಗಿದ್ದ ಮೇಸ್ಟರನ್ನು ಕೇಳಿದ್ರು. ಮೇಸ್ಟರು ಹೀಗೇಂತ ಹೇಳಿದ್ರು. ಒಡೆಯರು ಅತ್ತ ಹೋಗುತ್ತಲೇ ಕೈಲಾಸಂ, "ಅರೆ! ಮಾತೇ ಬರೋದಿಲ್ಲ, ಅವ್ರಿಗೆ. ನೀವೇನಾ ಅವರಿಗೆ ಮೇಸ್ಟ್ರು?" ಅಂತಾ ಕೇಳಿಯೇಬಿಟ್ರು.

ಕೈಲಾಸಂ ಅವರಲ್ಲಿ ಅಡಗಿದ ನಾಟಕಕಾರ ತಲೆ ಎತ್ತಿದ್ದು ಮೈಸೂರಲ್ಲೇ. ತಂದೆ ಬೇರೆಡೆ ವೃತ್ತಿಯಲ್ಲಿದ್ದುದರಿಂದ ಕೈಲಾಸಂಗೆ ಮೈಸೂರಲ್ಲಿ ಹಾಸ್ಟೆಲ್‌ವಾಸ. ಬಿ. ಎಂ. ಶ್ರೀ, ಎನ್. ಎಸ್. ಸುಬ್ಬರಾವ್ ಮುಂತಾದ ಪ್ರತಿಭಾನ್ವಿತರ ಪರಿಚಯ ಸಹವಾಸ ಲಭಿಸಿದ್ದೂ ಅಲ್ಲಿಯೇ.

ಆಗ ವೃತ್ತಿ ರಂಗಭೂಮಿಯ ನಾಟಕಗಳ ವಿಜೃಂಭಣೆಯ ಕಾಲ. ಮಹಾರಾಜರೇ ಪ್ರೋತ್ಸಾಹಿಸಿದ ಅರಮನೆಯ ಕಂಪನಿ ಪೌರಾಣಿಕ ನಾಟಕಗಳನ್ನು ಸೊಗಸಾಗಿ ಅಭಿನಯಿಸುತ್ತಿತ್ತು. ಬೆಂಗಳೂರು ಯೂನಿಯನ್ ಕೂಡಾ ಬೆಂಗಳೂರಲ್ಲಿ ಈ ಬಗೆಯ ನಾಟಕಗಳನ್ನಾಡುತ್ತಿತ್ತು. ಶಾಕುಂತಲ, ರತ್ನಾವಳಿ, ಪ್ರಭಾವತಿದರ್ಬಾರ್, ಸದಾರಮೆ, ಗುಲೇಬಕಾವಲಿ, ಲೀಲಾವತಿ ರಾಮವರ್ಮ–ಇಂಥ ನಾಟಕಗಳ ಸುಗ್ಗಿ. ಸಾಹಿತ್ಯ ಸಂಗೀತಗಳ ನಿತ್ಯ ರಸದೂಟ ಕಲಾಭಿಮಾನಿಗಳಿಗೆ. ನಟಸಾರ್ವಭೌಮ ವರದಾಚಾರ್ಯರು ಅನಭಿಷಿಕ್ತ ರಂಗಸಮ್ರಾಟ.

ಕೈಲಾಸಂ ಆ ಕಂಪನಿ ನಾಟಕಗಳನ್ನೆಲ್ಲಾ ನೋಡಿ ಆನಂದಿಸಿದರು. ಸಂಗೀತ ಅಭಿನಯಗಳನ್ನು ಅನುಕರಣೆ ಮಾಡಿದರು. ರಂಗಭೂಮಿಯ ಮನೋಧರ್ಮವನ್ನು ಬೆಳಸಿಕೊಂಡರು.

ಆದರೆ ಬಹಳ ದಿನ ಮೈಸೂರಲ್ಲಿ ಇರುವಂತಿರಲಿಲ್ಲ. ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ.ಎ. ಓದಲು ಮದ್ರಾಸಿಗೆ ಹೋದರು. ಅಲ್ಲಿ ಪಾಠಕ್ಕಿಂತ ಹೆಚ್ಚಾಗಿ ಆಟದಲ್ಲಿಯೇ ಆಸಕ್ತಿ ಹೆಚ್ಚಿತು. ಫುಟ್ಬಾಲ್ ಆಟದಲ್ಲಿ ಸುಪ್ರಸಿದ್ಧ ಗೋಲ್ ಕೀಪರ್ ಎಂಬ ಕೀರ್ತಿ ಪಡೆದರು. ವಿನೋದದ ಮಾತುಗಳನ್ನಾಡುತ್ತ ಗೆಳೆಯರ ದೊಡ್ಡ ಬಳಗವನ್ನೇ ಕಟ್ಟಿದರು. ಬಿ. ಎ. ಪರೀಕ್ಷೆಯಲ್ಲೂ ಉತ್ತೀರ್ಣರಾಗಿ ಹೆಚ್ಚಿನ ವ್ಯಾಸಂಗಕ್ಕಾಗಿ ಲಂಡನ್ನಿಗೆ ಹೋದರು.

ಕೈಲಾಸಂ ವ್ಯಕ್ತಿತ್ವ ಪರಿಪೂರ್ಣಗೊಂಡದ್ದು ಲಂಡನ್ನಿನಲ್ಲಿಯೇ. ಅಲ್ಲಿನ 'ರಾಯಲ್ ಕಾಲೇಜ್ ಆಫ್ ಸೈನ್ಸ್' ವಿದ್ಯಾಲಯದಲ್ಲಿ ಆರು ವರ್ಷ ವ್ಯಾಸಂಗ ನಡೆಸಿದರು. ಆದರೆ ಕೇವಲ 'ಪುಸ್ತಕದ ಹುಳು' ಆಗಲಿಲ್ಲ. ಅಲ್ಲಿಯ ವಿದ್ಯಾರ್ಥಿ ವ್ಯವಹಾರ ಎಲ್ಲವೂ ಇಂಗ್ಲೀಷ್ ನಾಗರಿಕವೇ. ಕೈಲಾಸಂ ಇಂಗ್ಲೀಷರ ಆಚಾರ ವಿಚಾರ ವ್ಯವಹಾರಗಳಲ್ಲಿ ಬೆರೆತು ಹೋದರು. ಒಳ್ಳೆಯ ಆಟಗಾರ. ವಿನೋದಪ್ರಿಯನೆಂದೂ ಗೆಳೆಯರಿಗೆ ಆತ್ಮೀಯನಾದರು. ಫುಟ್‌ಬಾಲ್, ಹಾಕಿ ಆಟ

ಗಾರ, ವಿನೋದ, ಅನುಕರಣ ಚಮತ್ಕಾರಗಳಲ್ಲಿ ಅಗ್ರಗಣ್ಯನೆನಿಸಿದ ಕೈಲಾಸಂ ಹೆಸರು ಗೆಳೆಯರ ಬಾಯಲ್ಲಿ ಪ್ರೀತಿಯ 'ಕೈ' ಆದದ್ದೂ ಅಲ್ಲಿಯೇ. 'ಕೈ' ಇದ್ದೆಡೆಯಲ್ಲಿ ಗುಂಪು, ನಗೆ ಸಾಮ್ರಾಜ್ಯ. ಅಣಕ, ಅನುಕರಣೆ ಅಭಿನಯ. ಆಗಾಗ್ಗೆ ಗೆಳೆಯರ ಮನೆಗಳಿಗೂ ಭೇಟಿ ಕೊಡುತ್ತಿದ್ದ 'ಕೈ' ಎಲ್ಲರ ಆಚಾರ ವಿಚಾರಗಳನ್ನು ರಕ್ತಗತ ಮಾಡಿಕೊಂಡ. ಇಂಗ್ಲೀಷರಿಗಿಂತ ಚೆನ್ನಾಗಿ ಇಂಗ್ಲೀಷ್‌ನಲ್ಲಿ ಮಾತಾಡುವುದರಲ್ಲಿ ಬರೆಯುವುದರಲ್ಲಿ ಅಗ್ರಗಣ್ಯನಾದ.

ಕೈಲಾಸಂ ನಟನಾಗಲು ನಾಟಕಕರ್ತೃವಾಗಲು ಇಲ್ಲಿನ ವಾತಾವರಣ ಪುಷ್ಟಿಕೊಟ್ಟಿತು. ೩೬೫ ದಿನಗಳಲ್ಲಿ ೩೫೦ ಸಂಜೆಗಳನ್ನು ಕೈಲಾಸಂ ನಾಟಕ ಮಂದಿರಗಳಲ್ಲಿಯೇ ಕಳೆದ. ಎಲ್ಲ ಪ್ರತಿಭಾನ್ವಿತ ನಟರನ್ನೂ ಅದ್ಭುತ ರೀತಿಯಲ್ಲಿ ಅನುಕರಣೆ ಮಾಡಿದ. ನಟನೆಯೊಂದಿಗೆ ಇಂಗ್ಲೀಷ್ ಸಂಗೀತವನ್ನೂ ಕಲಿತು ಹಾಡಿದ. ಅಲ್ಲಿನವರ ಅಂತರಂಗದೊಂದಿಗೆ ಕಲಾಭಿಜ್ಞತೆಯೂ ಕರತಲಾಮಲಕವಾಯಿತು.

ಆಗ ಲಂಡನ್ನಿನಲ್ಲಿ ಶೇಕ್ಸ್‌ಪಿಯರ್ ನಾಟಕಗಳ ವಿಜೃಂಭಣೆಯ ಕಾಲ. ಅವುಗಳ ಜೊತೆಗೆ ಸಾಮಾಜಿಕ ನಾಟಕಗಳ ಸ್ಪರ್ಧೆ. ಆಸ್ಕರ್‌ವೈಲ್ಡ್, ಪಿನೆರೊ, ಹೆನ್ರಿ ಆರ್ಥರ್ ಜೋನ್ಸ್, ಬರ್ನಾರ್ಡ್‌ಶಾ – ಇವರು ಹೊಸ ರೀತಿಯ ಸಾಮಾಜಿಕ ನಾಟಕಗಳ ರಚನೆಯಲ್ಲಿ ಪ್ರಸಿದ್ಧರಾಗಿದ್ದರು. ಇಬ್ಸೆನ್ನನ ನಾಟಕಗಳ ಮನೋಧರ್ಮ ಕೈಲಾಸಂಗೆ ಬಹಳ ಮೆಚ್ಚಿಗೆಯಾಯ್ತು. ಸಾಮಾಜಿಕ ಲೋಪದೋಷಗಳಿಗೆ ಭೂತ ಕನ್ನಡಿ ಹಿಡಿಯಬೇಕು ನಾಟಕಗಳ ಮೂಲಕ. ಆದರೆ ಪರಿಹಾರ ಸೂಚಿಸುವ ಹಿರಿತನ ನಾಟಕಕರ್ತೃವಿನದಲ್ಲ. ಇದು ಇಬ್ಸೆನ್ ಮನೋಧರ್ಮ. ಕೈಲಾಸಂ ನಾಟಕ ರಚನೆಯ ರಹಸ್ಯವನ್ನರಿತದ್ದೇ ಇಬ್ಸೆನ್ ನಾಟಕಗಳಿಂದ.

ಆರು ವರ್ಷದ ವ್ಯಾಸಂಗ ಮುಗಿಯಿತು. ಕೈಲಾಸಂ ಜಿಯಾಲಜಿ ಎಂ. ಎಸ್‌ಸಿ. ಪದವಿ ಪಡೆದು ಸ್ವದೇಶಕ್ಕೆ ಹೊರಟರು. ಆದರೆ ಗೆಳೆಯರಾರಿಗೂ ಅವರನ್ನು ಕಳಿಸಿಕೊಡಲು ಇಷ್ಟವಿಲ್ಲ. ಸ್ವಂತ ಹಣ ಖರ್ಚು ಮಾಡಿ ಮತ್ತೆ ಆರು ತಿಂಗಳು 'ಕೈ' ಅವರನ್ನು ಲಂಡನ್ನಿನಲ್ಲಿ ಉಳಿಸಿಕೊಂಡರು.

"Wild horses cannot drag him in" (out of Lodon) ಎಂದು ಗೆಳೆಯರು ಗೇಲಿ ಮಾಡಿದಾಗ, "And wild asses cannot kick him out" ಎಂದು ಸೇರಿಸಿದರು ಕೈಲಾಸಂ. ಇನ್ಯಾರೊ ಒಮ್ಮೆ ಕೈಲಾಸಂನ ಕೇಳಿದ್ರು: "What employment are you in?" ಅಂತ. ತಟ್ಟನೆ ಬಂತು ಉತ್ತರ: "In none Sir, I am unemployed and unemplayable!" ಅಂತ.

ಕೈಲಾಸಂ ಇಂಗ್ಲೆಂಡಿನಿಂದ ಹಿಂತಿರುಗುವುದರೊಳಗೆ ತಾಯಿ ಕಮಲಮ್ಮ ದೈವಾಧೀನರಾಗಿದ್ದರು. ವಿಯೋಗ ದುಃಖವನ್ನು ಭರಿಸುವುದು ಕೈಲಾಸಂಗೆ ಬಹಳ ಕಷ್ಟವಾಯಿತು. ತಮ್ಮ ನಾಟಕಗಳಲ್ಲಿ ಭಾಗೀರಥಮ್ಮ, ಸರಸಮ್ಮ, ಏಕಲವ್ಯನ ತಾಯಿ–ಇಂಥ ಪೂಜನೀಯ ತಾಯಂದಿರನ್ನು ಚಿತ್ರಿಸಿ ಮಾತೃಋಣ ತೀರಿಸಿದರು.

ಇಂಗ್ಲೆಂಡ್ ರಿಟರ್ನ್‌ಡ್ 'ಕೈ' ನಾಲ್ಮಡಿ ಕೃಷ್ಣರಾಜ ಒಡೆಯರನ್ನು ಕಂಡರು. ಒಡೆಯರ ಶಿಫಾರಸಿನಿಂದ 'ಕೈ'ಗೆ ಭೂಗರ್ಭಶಾಸ್ತ್ರ ಇಲಾಖೆಯಲ್ಲಿ ಉದ್ಯೋಗ ಸಿಕ್ಕಿತು. ಬೆಂಗಳೂರಲ್ಲೇ ವಾಸ. ಆ ಕಾಲದಲ್ಲಿ ಎಷ್ಟೋ ಜನ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಹೋಗಿ ಬರುತ್ತಿದ್ದರು. ಅಂಥ ಇಂಗ್ಲೆಂಡ್ ರಿಟರ್ನ್‌ಡುಗಳು ಜಂಭದ ಕೋಳಿಗಳಾಗಿಯೂ ಮೆರೆಯುತ್ತಿದ್ದರು. ಸಾಯುವವರೆಗೂ ತಾವು 'ಇಂಗ್ಲೆಂಡ್ ರಿಟರ್ನ್‌ಡ್' ಎಂಬುದನ್ನು ಮರೆಯುತ್ತಿರಲಿಲ್ಲ. ಸತ್ತರೂ ಮರೆಯುತ್ತಿರಲಿಲ್ಲ! ಆದರೆ 'ಕೈ' ಹತ್ತಿರ ಮಾತ್ರ ಜಂಭವೆಂಬುದು ಲವಲೇಶವೂ ಸುಳಿಯದು. ಕೈಲಾಸಂ ಜನಪ್ರಿಯತೆಗೆ ಇದೂ ಒಂದು ಮುಖ್ಯ ಕಾರಣ. ಬೈಸೆಪ್ಸ್ ಕುಣಿಸುವುದು, ನಾಲ್ಗೆ ಮೇಲೆ ಸ್ಟ್ಯಾಂಪಿಟ್ಟು ಚಮ್ಮ ಮೇಲ್ತುಟಿಗೆ ಅಂಟಿಸುವುದು, ಸಿಗರೇಟ್ ಸೇದಿ ಹೊಗೆಯನ್ನು ಬಾಯಿಂದ ಮೂಗಿಗೆ, ಮೂಗಿಂದ

ಬಾಯಿಗೆ ವರ್ಗಾಯಿಸುವುದು, ಹೊಗೆ ಸುರುಳಿಯಲ್ಲಿ 'ಕೈಲಾಸಂ' ಎಂದು ಬರೆಯುವುದು ಗೆಳೆಯರಿಗೊಂದು ಸೋಜಿಗ. ಸಿದ್ದವ್ವನಹಳ್ಳಿ ಕೃಷ್ಣಶರ್ಮ, ರಾಜರತ್ನಂ ಕೆ.ವಿ. ಅಯ್ಯರ್, ಕಂದಾಡೆ ಕೃಷ್ಣಯ್ಯಂಗಾರ್ ಇವರೆಲ್ಲಾ 'ಕೈ' ಸಹವಾಸಿಗಳಾಗಿದ್ದು ಆಗಲೇ.

ಚಾಮರಾಜ ಪೇಟೆಯ ಇವರ ಬಂಗ್ಲೆ ಬಹು ದೊಡ್ಡದು. 'ಕೈ'ಗೆ ಮಾತ್ರ ಕುದುರೆ ಲಾಯದ ಮಗ್ಗುಲ ಮೂಲೆ ಕೋಣೆ. ಕೋಣೇಲಿ ಕಲ್ಪಾಂತರದ ಕಸ–ಸಿಗರೇಟಿನ ಘಾಟು ಸೇದಿ ಬಿಸಾಡಿದ ತುಂಡುಗಳು, ಅರ್ಧ ಕುಡಿದಿಟ್ಟ ಕಾಫಿ ಲೋಟ, ಎಲ್ಲೆಲ್ಲೋ ಬಿದ್ದ ಬೂಟು, ಬಟ್ಟೆ ಬರೆಗಳು, ಹೆಗ್ಗಣದ ದೊಗರಿಗೆ ತುರುಕಿದ ಗೋಣೀ ಚೀಲ – ಇನ್ನೂ ಏನೇನೋ.

ಕೈ ನಿಂತಲ್ಲಿ ನಾಟಕ ಕುಂತಲ್ಲಿ ಸಭೆ ಪ್ರಾರಂಭ. ಜಿಯಾಲಜಿ ಕಛೇರಿ, ಸೆಂಚುರಿ ಕ್ಲಬ್, ಬೆಂಗಳೂರು ಅಮೆಚೂರ್ ನಾಟಕ ಮಂಡಲಿ–ಇವುಗಳ ನಡುವೆ ೧೯೧೬ರಿಂದ ನಾಲ್ಕಾರು ವರ್ಷ ಕೈಲಾಸು ಜೀವನ ಸಾಗಿತು. ಅವರಿದ್ದೆಡೆಯೆಲ್ಲಾ ಹಾಸ್ಯ, ಹಾಡು, ಅಭಿನಯ, ಆಶ್ಚರ್ಯ. ಕೆಲವರು 'ಗಾಂಭೀರ್ಯವಿಲ್ಲ ಶುದ್ಧ ವಕ್ರ' ಎಂದರು. ಕೆಲವರು, 'ಫಿಲಾಸಫೀನೂ ಗೊತ್ತಿದ್ಯಲ್ಲ' ಅಂತ ಹುಬ್ಬೇರಿಸಿದರು. ಯಾರು ಏನೆಂದು ಟೀಕಿಸಿದರೂ 'ಕೈ' ಖಿನ್ನರಾಗಲಿಲ್ಲ. ಹೊಗಳಿಕೆಗೆ ಉಬ್ಬಲೂ ಇಲ್ಲ. ಸಿನಿಮಾ ನಾಟಕಗಳಲ್ಲಿ ನಾಲ್ಕಾಣೆಯ ಮೇಲಿನ ಸೀಟಿಗೆ ಎಂದೂ ಹೋದವರಲ್ಲ. ಆ ನಾಲ್ಕಾಣೆ ಸೀಟಿನಲ್ಲಿ ಕುಳಿತಾಗಲೇ ಅವರ, "ಲೀಯರ್! ಕುತ್ಕಳೋ ಕಂಬ್ಳೀ ಹುಳ!" ಜೋಕ್ ಹುಟ್ಟಿದ್ದು.

ಅಮೆಚೂರ್ ನಾಟಕ ಮಂಡಳಿಯವರು ಹೆಚ್ಚಾಗಿ ತೆಲುಗು ನಾಟಕಗಳನ್ನಾಡುತ್ತಿದ್ದರು. ಒಥೆಲೊ ಹ್ಯಾಮ್ಲೆಟ್ ನಾಟಕಗಳನ್ನೂ ಅಭಿನಯಿಸುತ್ತಿದ್ದರು. ಅವುಗಳಲ್ಲಿ ಕೈಲಾಸಂ ಚಿಕ್ಕ ಪಾತ್ರಗಳನ್ನು ವಹಿಸುತ್ತಿದ್ದರು. 'Its a long long way to Tipparally' ಇಂಗ್ಲೀಷ್ ಹಾಡು, 'ಬೋರೇಗೌಡನೆಂಬ ಗೌಡ' ಎಂದು ಕನ್ನಡಕ್ಕೆ ತರ್ಜುಮೆಯಾದದ್ದು ಆಗಲೇ. ಕನ್ನಡ ರಂಗಭೂಮಿಯ 'ಮಾತಾಡಬಾರದೇನೋ ಮಾರಮಣನೇ' ಹಾಡು ಇಂಗ್ಲೀಷ್ ಧಾಟಿಯ 'Why don't you speak to me dear. My dearoo my dearoo' ಆದದ್ದೂ ಅದೇ ಸಂದರ್ಭದಲ್ಲಿ. ತಿಪ್ಪಾರಳ್ಳಿ ಬಲು ದೂರಾ, ತೀರಾ ಮುದ್ದಾಲಗುಮ್ಮ, ಅಕಲಮ್ಮೆಲಚ್ಚಿಮಿ ಹೀಗೆ ಇಂಗ್ಲೀಷ್ ಮಟ್ಟಿಗೆ ಕನ್ನಡ ಕನ್ನಡ ಮಟ್ಟುಗಳಿಗೆ ಇಂಗ್ಲೀಷ್.

'ಕೈ' ತಮ್ಮ ಮೊದಲ ನಾಟಕ 'ಟೊಳ್ಳುಗಟ್ಟಿ' ಬರೆದು (ಬರೆಸಿ) ಆಡಿಸಿದ್ದು ಆ ಸಂದರ್ಭದಲ್ಲಿ. ವೃತ್ತಿ ರಂಗಭೂಮಿಯವರು ಅದನ್ನು ಅಭಿನಯಿಸಲು ಹೆದರಿದರು. ನಾಲ್ಕಾರು ಗೆಳೆಯರನ್ನು ಕಲೆ ಹಾಕಿ 'ಕೈ' ಅವರೇ ಅದನ್ನು ಯಶಸ್ವಿಯಾಗಿ ಆಡಿದರು (೧೯೧೮). ನಾಟಕದ ಪ್ರಾರಂಭದಲ್ಲೇ 'ಗುಂಡೂ ವೃತ್ತ' ಬರುತ್ತೆ. ಅದರಲ್ಲಿ ಕೈಲಾಸಂ ತಮ್ಮನ್ನು 'ಕರ್ನಾಟಕ ಪ್ರಹಸನ ಪ್ರಪಿತಾಮಹ ಪಂಡಿತ ಮಂಡಲಾಗ್ರೇಸರ ಚಂಡ ಪ್ರಚಂಡ ಗುಂಡೂರಾಯ' ಎಂದು ಕರೆದುಕೊಂಡಿದ್ದಾರೆ. ತೆಲುಗು ನಾಟಕಕಾರ ಕೃಷ್ಣಮಾಚಾರ್ಯರ ಅಣಕ ಇದು! ತೆಲುಗು ನಾಟಕಗಳಲ್ಲಿ ಅವರು ಹಾಗೇ ಬರೆದುಕೊಂಡಿದ್ದಾರೆ.

ಟೊಳ್ಳುಗಟ್ಟಿಯ ನಾಗತ್ತೆಯಾಗಿ ಕೈಲಾಸಂದು ಪ್ರಚಂಡ ಅಭಿನಯ. 'ವಿಧವಾಭಿನಯ ವಿಶಾರದ'ನೆನಿಸಿದ್ದು ಆ ಪಾತ್ರದಿಂದ. 'ಒಳ್ಳೆ born widow ಹಾಗೆ act ಮಾಡ್ತಾನೆ' ಎಂಬ ಕೀರ್ತಿ ಬೇರೆ. ವಿದ್ಯಾಭ್ಯಾಸದ ಲೋಪದೋಷಗಳ ಬಗ್ಗೆ ಆ ನಾಟಕ. ಸಮಾಜಕ್ಕೆ ಹಿಡಿದ ಭೂತಗನ್ನಡಿ ಅದು. ಬೇವು ಬೆಲ್ಲ ಸಕ್ಕರೆ ಲೇಪಿತ ಕ್ವಿನೈನ್ ಮಾತ್ರೆ. ಅದರಲ್ಲಿ ಗಂಭೀರ ಹಾಸ್ಯವಿದೆ ಕೋತಿ ಚೇಷ್ಟೆಯಿಲ್ಲ. ಕೈಲಾಸಂ ಮಾತು ಅಭಿನಯವೇ ಪ್ರಧಾನ. ಉಳಿದ ಪಾತ್ರಗಳೆಲ್ಲಾ ಅಪ್ರಧಾನ. ಕೈ ಮಾತೆಲ್ಲಾ ರುಚಿ. ತಮ್ಮ ಮಾತೆಲ್ಲೋ ಸಪ್ಪೆ ಎಂದು ಖಿನ್ನರಾದರೆ, ಕೈಲಾಸಂ ಅಲ್ಲಿ ಹೋಗಿ 'He is never happy unless he is miserable' ಎಂದು ಹೇಳಿ ಅಳುತ್ತಿದ್ದವರನ್ನು ನಗಿಸುತ್ತಿದ್ದರು.

ನಾಂಪಲಿಯುವರಿಗೆಲ್ಲಾ ಕೈ ವಿನೋದ ವಿಸಿ. ರವೀಂದ್ರರು ಬೆಂಗಳೂರಿಗೆ ಬಂದಾಗ ಕೈ ಗಾಂಭಿಸಿದವರು ಒಂದು ವಾರ ಸತತವಾಗಿ ನಾಟಕ ಮಾಡಿದರು. ಕೈಲಾಸಂ ಸಂಭಾಷಣೆ ಬಹು ಗಹನ. 'ಟ್ವಿಟಿ ಜಿಲ್ಲಿಬಿಸ್ಸ್' 'ಇಡಿಸ್ಯಾಯಾಸಾ' ಚಟ್ಟೀಕಾರರ ಇಂಗ್ಲೀಷ್. ಹಾಗೆಯೇ ಕನ್ನಡ ಇವುಗಳ ಒಡಂಬಡಿಕೆ ಕೆಲವು ಉದಾಹರಣೆಗಳು. ಟೊಳ್ಳುಗಟ್ಟಿಗೆ ಮೊದಲು, 'ಈತನೇ ಪರಮಶಿವಯ್ಯರ್ ಮಗ' ಎನ್ನುತ್ತಿದ್ದವರು ಅನಂತರ ಅಯ್ಯರರನ್ನು 'ಇವರೇ ಕೈಲಾಸಂ ತಂದೆ' ಎನ್ನುವಂತಾಯಿತು.

ಮೊದಮೊದಲು ಹಾಸ್ಯವೇ ಪ್ರಧಾನವೆಂದೆಣಿಸಿದ್ದ ಕೈಲಾಸಂ ಅನಂತರ ವಿಷಾದಕ್ಕೆ ಒತ್ತು ಕೊಟ್ಟಿದ್ದೇಕೆ? ವಿನೋದ ಖೇದಗಳೆರಡೂ ಕೈಲಾಸಂಗೆ ಹಾಸ್ಯದ ಸರಕುಗಳೆ. ಜೀವನದ ದುಃಖಗಳಿಂದ ಕೈ ಕಹಿಯಾಗದೆ ಮಾಗಿ ಹಣ್ಣಾದನು. ಮಮತೆಯ ಮೂರ್ತಿ ತಾಯಿ ತೀರಿಕೊಂಡರು. ತಂದೆಗೂ ಮಗನಿಗೂ ಹೊಂದಾಣಿಕೆ ಬರಲಿಲ್ಲ. ಹುದ್ದೆಗೆ ರಾಜೀನಾಮೆ ಕೊಡುವ ಸಂದರ್ಭ ಬಂತು. "ಸೈಫರ್ ಸಂಬಳ ಇದ್ರೂ ಸೈನ್ ಸ್ವಾರಸ್ಯವಾಗಿರ್ಬೇಕು" ಅಂತಲೇ ರಾಜೀನಾಮೆ ಪತ್ರಕ್ಕೆ ಸ್ವಾರಸ್ಯಕರವಾದ ಸೈನ್ ಹಾಕಿ ಹಾಕಿದ್ರು. 'ಎಂಜಲು ತಿಂದ್ರೂ ಎನಾಮಲ್ ಪಾತ್ರೇಲಿ ತಿನ್ಬೇಕು'. 'ಸೆರೆಮನೆಗೆ ಹೋದ್ರೂ ಸೆರಿಮನೀಸ್ ಬಿಡ್ಬಾರ್ದು'– ಇಂಥವೇ ಕೆಲವು ಹೊಸ ಗಾದೆಗಳು ಅವರಿಂದಲೇ ಸೃಷ್ಟಿ.

ಹುದ್ದೆಗೆ ರಾಜೀನಾಮೆ ಕೊಟ್ಟ ಮೇಲೆ 'ಫುಲ್ ಟೈಂ' ನಾಟಕಕಾರರಾದರು ಕೈ. 'ಬಂಡ್ವಾಳ್ವಿಲ್ಲದ ಬಡಾಯಿ' ಹುಟ್ಟಿತು. ಇಂಗ್ಲೀಷ್ ನಾಟಕ ಬೇಡವೆಂದು ಕನ್ನಡದಲ್ಲೇ ಬರೆದರು. ಇದು ಒಂದೇ ರಾತ್ರಿಯಲ್ಲಲ್ಲ, ಒಂದೇ ಗಂಟೆಯಲ್ಲಿ ಬರೆದ ನಾಟಕ. ಒಂದೇ ರಾತ್ರಿ, ಒಂದೇ ಗಂಟೆಯ ಅಭಿನಯ.

ಜಿಯಾಲಜಿಸ್ಟ್ ಹುದ್ದೆ ಬಿಟ್ಟು ಕೈಲಾಸಂ ಮಲೆಯಾಳಕ್ಕೆ ಹೋದರು. ಕೆಲವು ಕಾಲ ಯಾವುದೋ ಹುದ್ದೆಯಲ್ಲಿದ್ದರು. ಮಲೆಯಾಳ ಕಲಿತರು. 'ತಿಪ್ಪಾರಳ್ಳಿ' ನಾಟಕ ಕಟ್ಟಿದ್ದು ಆಗಲೇ. 'ಹೋಂ ರೂಲು' ಬಂದದ್ದು ಅಲ್ಲಿಯೇ. ಸಮಾಜ ಸುಧಾರಕನ ಪಾಡು ಮನೆಯಲ್ಲಿ ಪಂಚೆಂಪಾಡು ಅನ್ನೋದೇ ಹೋಂರೂಲಿನ ತಿರುಳು. 'ಬಹಿಷ್ಕಾರ' ಆದದ್ದು ಆಗ್ಲೇ. ಆ ದುಃಖಾಂತ ನಾಟಕ ರಚನೆಗೆ ಕೇವಲ ಎರಡು ದಿನ ತೆಗೆದುಕೊಂಡರು ಕೈಲಾಸಂ. ಅನಂತರ, 'ಕಟ್ಟಿಟ್ರೆ ಕಿರಿ ಕೆತ್ಕೊಂಡ್ರೆ ಕಿರುಬ' ಬರೆದರು. ಅದು ಪ್ರಕಟವಾಗಲೇ ಇಲ್ಲ.

ತೆಲುಗು ನಾಟಕಕಾರ, ಭದ್ರಾಚಲ ರಾಮದಾಸ್, 'ನಾಟಕ ಬರೆದೆ' ಅಂದಾಗ ಕೈಲಾಸಂ, "ನಾನೂ ಅಂಥದನ್ನೆ, ಬರೆದೆ" ಎಂದರು. "ನಿಮ್ಮದು ರಾಮದಾಸ್. ನನ್ನದು ದರಾಮ್ ದಾಸ್. ನಿಮ್ಮ ನಾಟ್ಕದಂತೇನೇ ಇದೂ– ನಿಮ್ಮ ರಾಮ್ದಾಸ್. ನನ್ನ ನಾಟ್ಕದಲ್ಲಿ ಡ್ರಾಮ್ದಾಸ್! ಅಲ್ಲಿ ಗುರು ಕಬೀರ್‌ದಾಸ್. ಇಲ್ಲಿ ಬರೀ ಬೀರ್‌ದಾಸ್! ಅಲ್ಲಿ ದೊರೆ ತಾನೀಷಾ! ಇಲ್ಲಿ ಬರಿ ನಿಷಾ! ಅಲ್ಲಿ ಮೊದಲ ಸೀನ್ ಭಕ್ತಾದಿಗಳ ಭಜನೆ, ಇಲ್ಲೂ ಹಾಗೇನೇ."

ದಿಗ್ಭ್ರಾಂತರಾದ ತೆಲುಗು ಪ್ರಹಸನ ಪ್ರಪಿತಾಮಹರು ಕೇಳಿದ್ರು; "ದೀನಿನಿ ಮೀರು ವ್ರಾಸಿನಾರಾ ತೆಲುಗು ಲೋನಾ?" "ಔನು, ತೆಲುಗುಲೋನೋ ರಾಸ್ತಾನು" ಅಂದ್ರು ಕೈ. ಕೈ ಜಂಭಗಾರರಲ್ಲ. ಆದರೆ ಆ ಜಂಭದ ಕೋಳಿ ತೆಲುಗು ನಾಟಕಕಾರನಿಗೆ ನಂಬಿದೆ ಬೆಕ್ಕಾದರು.

"ನೇನೇರಾಸ್ತಾನು" ಎಂದು 'ಕೈ' ಹೇಳಿದ್ದರೂ ಅವರೆಂದೂ ಪೇಪರು ಪೆನ್ನು ಹಿಡಿದು ಬರೆದವರಲ್ಲ! ಬೇರಾರಿಗೆ ಶಕ್ತಿಯಿದೆ ಅವರು ಹೇಳಿದ್ದನ್ನು ಬರೆದುಕೊಳ್ಳಲು? ಮಾತೋ, ಭೋರ್ಗರೆವ ಪ್ರವಾಹ. ಬೆಟ್ಟದಿಂದ ಜಾರುವ ನದಿ. ಶಾರ್ಟ್ ಹ್ಯಾಂಡಿಗೂ ಒಗ್ಗುವಂಥದಲ್ಲ. ಅರ್ಧ ಹೊತ್ನಲ್ಲಿ ಎದ್ದು ಕತ್ತಲೆ ಕೋಣೆಯಲ್ಲೇ ಹೇಳಲಕ್ಕೆ ಪ್ರಾರಂಭ. ಹೋಟೆಲೊ ಬೀದಿಯೋ ಲಹರಿ ಬಂದಲ್ಲಿ ಬರೆದುಕೊಳ್ಳಬೇಕು. ಯಾರೊಂದಿಗೊ ಮಾತಾಡುವಾಗಲೇ ಶುರು ನಾಟಕದ ದೃಶ್ಯಗಳು! ಜೊತೆ ಜೊತೆಗೇ ಅಭಿನಯ

ಕೂಡಾ. ಪೂರ್ವಸಿದ್ಧತೆ ಸಂಯೋಜಿತ ಕಥೆ-ಕೇಳಲೇ ಬೇಡಿ. ಆದ್ರೆ. ಪಾತ್ರೋಚಿತ ಸ್ವಾಂಗ್ಯ ಉಂಟು. ಫೋಟೋಗ್ರಫಿಯಿಂದ ಫಿಲಾಸಫಿ ಯವರೆಗೆ ಯಾವ ವಿಷಯವಾದ್ರೂ ಸೈ 'ಕೈ'ಗೆ ಯಾವುದರ ಬಗ್ಗೆಯೂ ನೇವಾವೆಂಬುದು 'ನಿಲ್.' ಹೀಗೆ ೧೯೨೨ ರಿಂದ ೧೯೨೫ರ ವರೆಗೆ ಕೈ ನಾಟಕಗಳ ಕಾರವಾನ್ ಸಾಗಿತು. 'ಏಕಲವ್ಯ' ಸೃಷ್ಟಿಯೂ ಆಗಲೇ. ಅದು ಇಂಗ್ಲೀಷ್ ನಾಟಕ. ಹಾಸ್ಯವಿಲ್ಲ. 'Salutations Gangeya' ಎಂಬ ಔಚಿತ್ಯಪ್ರಜ್ಞೆ ಕೈಗೆ ಹೊಳೆದದ್ದು ಆ ನಾಟಕ ಹೇಳುವಾಗ ಏಕಲವ್ಯ, Purpose ಭೇದನ ಭಾರ, ವಿಪ್ರಶಾಪ, ಎಲ್ಲವೂ ಅಷ್ಟೇ; ಸ್ವತಃ ಅನುಭವಿಸಿದಂತೆ ಪ್ರತ್ಯಕ್ಷ ಕಂಡಾತೆ. ಸಹಜ ಸಮ್ಮತ ಹುಟ್ಟುಗುಣ, ಸುಶಿಕ್ಷೆ ಅಭ್ಯಾಸ, ನಿಷ್ಠೆ ಈ ಮೂರರ ಸಂಯೋಗವೇ ಕೈ ಪ್ರತಿಭೆಯ ಬಂಡವಾಳ.

ಮೈಸೂರಿನಲ್ಲಿದ್ದಾಗ 'ಅಮ್ಮಾವ್ರ ಗಂಡ' ಬಂತು. ಅನಂತರ ಮದರಾಸಿಗೆ ಹೋದರು. 'ವಸಂತಸೇನಾ' ಸಿನಿಮಾದಲ್ಲಿ ಶಕಾರನ ಪಾತ್ರ. ಬೆಂಗ್ಳೂರು, ಮೈಸೂರು, ಹಾಸನ. ಧಾರವಾಡ, ಹುಬ್ಬಳ್ಳಿ– ಹೀಗೆ ಎಲ್ಲೆಲ್ಲೋ ಈ ತಿರುಗಲು ತಿಪ್ಪನ ಅಲೆದಾಟ.

ಕೈಲಾಸಂ ಪ್ರಾಸಪ್ರಿಯ. "ಚೆನ್ನಾಗ್ ಚುನಾಯಿಸೆ ಚಾಕರೀಗೀ ಚತುಷ್ಪಾದಾನ" "ಬೀದೀಲೇನಾದ್ರೂ ಬುಗಾಬ್ಬದ್ದಿದಂತ ಬಾಯ್ಬಿಟ್ಕೊಂಡ್ ಬರ್ತಿದ್ಯೆನೋ ಬಕ್ವ?" ಖಯಾಲಿ ಕಪ್ಪಣ್ಣ, ರುಧೋಲರಂಗಣ್ಣ, ಕಪ್ಪಂಕಪ್ಪ ಕಾಮಾಕ್ಷಿ ಇಂಥ ಪ್ರಾಸಗಳೆಷ್ಟೋ. ಕೈ ಅವರ ತುರ್ಜುಮೆಯಲ್ಲಿ walking stick ಚಲ ಕಾಷ್ಠ, Question mark ಹಂಸಗ್ರೀವ, Holdall ಸರ್ವಧಾರಿ. ಧ್ವನಿ ಪೂರ್ಣ ಮಾತುಗಳಿಗೂ ಕೊರತೆಯಿಲ್ಲ. "ಇನ್ನಾರು ತಿಂಗಳಲ್ಲಿ ಸತ್ತಳೋ ಬದುಕಿದಳು" "ನೀವೆಲ್ರೂ ಸಂತೋಷವಾಗಿ ಹಾಳಾಗಿ ಹೋಗಿ" "ಯಾವಾಗಿಲ್ಲದ ಅವನು ನನ್ನೇನೂ ಇಲ್ಲ" "ನಾನ್ಯಾರು ಗೊತ್ತೆ? H.P. ಭೀಮರಾವ್ ಅಂತ ನನ್ನೆಸ್ರು. ತಿಳೀಲಿಲ್ವೆ? ಹನುಮಾನಾದರ ಭೀಮರಾವ್‌ಗಟ್ಟು ಮಗ, ಘಟ್ಟೋತ್ಕಜ! ಬಾರ್ ಸಿಪಾಯಿಗಳನ್ನೆಚ್ಚರಿಸಲು ಇವರದೊಂದು ಬ್ಯೂಗಲ್ ಹಾಡು.

"ಏಳಿರ್ರೋ ಏಳಿರ್ರೋ ಏಳಿರ್ರೋ.



ಜಲ್ದೀ ಜಲ್ದೀ ಜವಾಯಿಸ್ರೋ"

ಕ್ರಿಕೆಟ್ ಆಟಕ್ಕೆ ಮಂತ್ರಗಳನ್ನ ಜೋಡಿಸಿದ ಮೇಧಾವಿ. ವೇದ ಮಂತ್ರಗಳ ಧಾಟಿಯಲ್ಲಿ we are all Brahmins ಸೃಷ್ಟಿಸಿದ ಜೀನಿಯಸ್. "ರಾರಾಜಿಸುತ್ತಿರಬಹುದು. ರಾರಾಜಿಸುತ್ತಿಹುದೂ, ರಾಜಿಸುತ್ತಿಹುದೂ, ಜಿಸುತ್ತಿಹುದೂ, ಸುತ್ತಿಹುದೂ, ತ್ತಿಹುದೂ, ಹುದೂ, ದೂ ಬೇಸಗೇ" ಎಂದು ವೃತ್ತಿ ರಂಗಭೂಮಿಯ ಹಾಡುಗಳನ್ನ ಗೇಲಿ ಮಾಡಿದ ಭೂಪತಿ.

ಕೈಲಾಸಂ ನಾಟಕಗಳ ಬೆರಕೆ ಭಾಷೆಯನ್ನು ಕೇಳಿ ಮುಖ ಸಿಂಡರಿಸಿಕೊಂಡ ಮಡಿ ಪಂಡಿತ ರೆಷ್ಟೋ. ಅಂಥವರಿಂದಲೂ ಸೈ ಎನ್ನಿಸಿಕೊಂಡರು ಕೈ 'ಬಹಿಷ್ಕಾರ' ನಾಟಕ ನೋಡಿದ ಆ ಪಂಡಿತರು ಕೊನೆಗೆ, "ಭಾಷೆ ತಲೆ ಬೋಳಿಸ್ತು. ಭಾವ ನೋಡ್ಬಾರ್ದೇ ಭಾವ" ಅಂದು ಬಿಟ್ರು! ಯಾವ ದೃಷ್ಟಿಕೋನದಿಂದ ನೋಡಿದರೂ ಕನ್ನಡದ 'ಕೈ' ಅಪ್ರತಿಮ ಪ್ರತಿಭಾವಂತ ಎಂಬುದು ಸತ್ಯಸ್ಯ ಸತ್ಯ.

ಕೈಲಾಸಂ ಹಲವು ನೋವುಗಳನ್ನನುಭವಿಸಿ ೧೯೪೬ರಲ್ಲಿ ದೈವಾಧೀನರಾದರು.

ಈ ವರ್ಷ ಕೈಲಾಸಂ ಸವಿನೆನಪಿನ ಶತಮಾನೋತ್ಸವ ಆಚರಿಸುತ್ತಿದ್ದೇವೆ. ಸಭೆ ಸಮಾರಂಭಗಳಲ್ಲಿ ಭಾಷಣಗಳು ಪತ್ರಿಕಾ ಲೇಖನಗಳು ಇಷ್ಟರಿಂದಲೇ ಕನ್ನಡಿಗರು ಕೈಲಾಸಂ ಋಣವನ್ನ ತೀರಿಸಿದಂತಾಗುವುದಿಲ್ಲ. ಪ್ರತಿಭಾನ್ವಿತ ಕಲಾವಿದರು ಅನ್ನವನ್ನ ಬೇಡಿದರೆ ನಾವು ಕಲ್ಲುಗಳಿಂದ ಹೊಡೆಯುತ್ತೇವೆ, ಶಪಿಸುತ್ತೇವೆ. Genius asks for bread and receives stones and curses.

ಕೈಲಾಸಂ ಜೀವನ ಬದುಕಿದ್ದಾಗ ಮುಳ್ಳಿನ ಹಾಸಿಗೆ. ಬದುಕಿನ ಬಳಿಕ ಹೂವಿನ ಹಾಸಿಗೆ. ಜೀವನ ಪರ್ಯಂತ ಅವರು ತಿರಸ್ಕೃತನಂತೆ ಬಹಿಷ್ಕೃತನಂತೆ ಬಾಳಿದರು. ನಿಂತ ನೀರಿನಂತೆ ನಾರುತ್ತಿದ್ದ ಕನ್ನಡ ವೃತ್ತಿರಂಗಭೂಮಿಗೆ ಸಾಮಾಜಿಕ ನಾಟಕಗಳ ರಚನೆಯ ಮೂಲಕ ಹೊಸ ದಿಕ್ಕನ್ನ ತೋರಿದರು. ಆದರೂ ಅವರ ನಾಟಕಗಳು ಜನಪ್ರಿಯವಾಗಲಿಲ್ಲ. ಸಾಕಷ್ಟು ಸಂಖ್ಯೆಯಲ್ಲಿ ರಂಗದ ಮೇಲೂ ಬರಲಿಲ್ಲ. ಒಂದಾದರೂ ನಾಟಕ ಪಠ್ಯಪುಸ್ತಕವಾಗಲಿಲ್ಲ. ಇದರ ಕಾರಣ ಸುಸ್ಪಷ್ಟ. ಕೈಲಾಸಂ ಪ್ರತಿಭೆ ಅರ್ಥವಾಗೋದು ಮುಖ್ಯವಾಗಿ ಮೇಲ್ದರ್ಜೆಯ ವಿದ್ಯಾವಂತರಿಗೆ. ಅವರ ನಾಟಕಗಳು ಜನಸಾಮಾನ್ಯರನ್ನ ಸ್ಪಂದಿಸಲಿಲ್ಲ. 'ಹಾಸ್ಯಪ್ರಧಾನ' ನಾಟಕಗಳಾದರೂ ಕೈಲಾಸಂದು ಮೂರನೇ ದರ್ಜೆಯ ಅಶ್ಲೀಲ ಹಾಸ್ಯವಲ್ಲ. ಸುಸಂಸ್ಕೃತರಿಗೆ ಮಾತ್ರ ಮುದ ನೀಡುವ ಮೇಲ್ದರ್ಜೆಯ ಹಾಸ್ಯ.

ಕೈಲಾಸಂಗೆ ಪ್ರಸಿದ್ಧಿಯಾಗಲೀ ಪ್ರತಿಷ್ಠೆಯಾಗಲೀ ಬೇಕಾಗಿರಲಿಲ್ಲ. ತಾವಾಗಿಯೇ ನಾಟಕಗಳನ್ನು ಬರೆಯಲಿಲ್ಲ. ಪ್ರಕಟನೆಗೆ ಪ್ರಕಾಶಕರನ್ನ ಆಶ್ರಯಿಸಲಿಲ್ಲ. ಮಿತ್ರರೋ ಅಭಿಮಾನಿಗಳೊ ತಾವಾಗಿಯೆ ಮುಂದಾಗಿ ಬರೆದುಕೊಂಡ ನಾಟಕಗಳು ಮಾತ್ರ ಈಗ ಉಳಿದಿವೆ. ಅವುಗಳ ಸಂಖ್ಯೆ ಸುಮಾರು ೨೧. ಪ್ರಕಟವಾಗದಿರುವ ಕೃತಿಗಳ ಸಂಖ್ಯೆ ಸುಮಾರು ೪೭. ಪ್ರಕಟವಾಗಿರುವ ೨೧ ನಾಟಕಗಳನ್ನಾದರೂ ಕನ್ನಡ ಸಾಹಿತ್ಯ ಪರಿಷತ್ತು ಈಗ ಪುನರ್ ಮುದ್ರಣ ಮಾಡಿ ಕಡಿಮೆ ಬೆಲೆಗೆ ಮಾರಬೇಕು. ಅವರ ಟೊಳ್ಳುಗಟ್ಟಿ, ಪೋಲಿಕಿಟ್ಟಿ, ಬಂಡ್ವಾಳ್ವಿಲ್ಲದ ಬಡಾಯಿ, ಕೀಚಕ ಇಂಥ ಕೆಲವು ನಾಟಕಗಳನ್ನಾದರೂ ಹವ್ಯಾಸಿ ತಂಡಗಳು ಕರ್ನಾಟಕದಾದ್ಯಂತ ಪ್ರದರ್ಶಿಸಬೇಕು. ನಾಡಿನ ಎಲ್ಲ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪ್ರದರ್ಶಿತವಾಗಬೇಕು. ಪ್ರಮುಖ ನಗರಗಳಲ್ಲಿ ಕೈಲಾಸಂ ರಂಗಮಂದಿರ ನಿರ್ಮಾಣ ವಾಗಬೇಕು. ಕೈಲಾಸಂರವರ ಸಮಗ್ರ ನಾಟಕಗಳ ವಿದ್ವತ್ಪೂರ್ಣ ವಿಮರ್ಶೆ ಪುಸ್ತಕರೂಪದಲ್ಲಿ ಬರಬೇಕು. ಅವರ ಕೆಲವು ನಾಟಕಗಳಾದರೂ ಕಾಲೇಜು ವಿದ್ಯಾರ್ಥಿಗಳಿಗೆ ಪಠ್ಯವಾಗಬೇಕು.

ಕೈಲಾಸಂ ಶತಮಾನೋತ್ಸವದ ಅರ್ಥಪೂರ್ಣ ಮತ್ತು ಸಾರ್ಥಕ ಆಚರಣೆ ಇಂಥ ಕಾರ್ಯಗಳಿಂದ ಮಾತ್ರ ಸಫಲವಾಗುತ್ತದೆ. ◆

ಪಿಸ್ತೂಲು ಪ್ರಕರಣ– ತಿರುಗು ಬಾಣ

ದಿಲೀಪ್ ಬಾಬ್ ಹಾಗೂ ರಾಜು ಸಂತಾನಮ್

ಹೊಸ ವಿಷಯ ಕೆಂಪುಕೋಟೆ ಈಗ ಕೇವಲ ಪ್ರಮಾದ ಆಕರ್ಷಣೆಯಾಗಿ ಉಳಿದಿಲ್ಲ. ಅದರಿಂದಾಗ ರಹಸ್ಯ ನೆಲೆಯಲ್ಲಿ ತೀರ ಸೂಕ್ಷ್ಮವಾದ ಪ್ರಕರಣಗಳ ಜೊತೆ ಸಂಬಂಧಪಟ್ಟವರನ್ನು ಕೂಲಂಕಷವಾಗಿ ವಿಚಾರಿಸುವ ವಿಶೇಷ ಪ್ರಾಮುಖ್ಯತೆ ಪಡೆದುಕೊಂಡಿದೆ. ಆಗಸ್ಟ್ 24 ರಂದು ಇಂಡಿಯನ್ ಏರ್‌ಲೈನ್ಸ್‌ನ ಬೋಯಿಂಗನ್ನು ಲಾಹೋರ್‌ಗೆ ಅಪಹರಿಸಿ ಕೊಂಡೊಯ್ದ ಜನ ಸಿಖ್ ಉಗ್ರಗಾಮಿಗಳನ್ನು ಪತ್ತೆಹಚ್ಚಲು ಈ ನೆಲೆಯನ್ನು ಬಳಸಿಕೊಳ್ಳಲಾಯಿತು. ಈ ವಿಮಾನ ಅಪಹರಣ ಭಾರತ ಸರಕಾರದ ಪಾಲಿಗೆ ಬಹಳ ಪ್ರಮುಖ ರಾಜತಾಂತ್ರಿಕ ಲಾಭವಾಗಿ ಪರಿಣಮಿಸಲಿತ್ತು. ಈ ಕಾರಣದಿಂದ ಕೆಲವೇ ವ್ಯಕ್ತಿಗಳ ಅಂತರಂಗದಲ್ಲಿರುವ ಸೌತ್ ಬ್ಲಾಕ್‌ನಲ್ಲಿ ವಿದೇಶ ವ್ಯವಹಾರ ಸಚಿವಾಲಯ ಮತ್ತು ಪ್ರಧಾನಿಗಳ ಸಚಿವಾಲಯದ ಅಧಿಕಾರಿಗಳು ಮತ್ತು ಇತರ ಹಿರಿಯ ಅಧಿಕಾರಿಗಳಿಗೆ ಸಂತೋಷವನ್ನು ತಡೆದುಕೊಳ್ಳಲಾಗಲಿಲ್ಲ.

ಈ ಅಪಹರಣಕಾರರನ್ನು ಲಾಹೋರಿನ ಸರಕಾರ ಭಾರತ ಸರಕಾರದ ವಶಕ್ಕೆ ನೀಡಿತಷ್ಟೇ. ಹೀಗೆ ವಿಮಾನ ಅಪಹರಣಕಾರರನ್ನು ಅವರ ದೇಶಕ್ಕೆ ಮರಳಿ ಕಳಿಸಿದ್ದು ವಿಮಾನಾಪಹರಣದ ಇತಿಹಾಸದಲ್ಲಿ ಇದೇ ಮೊಟ್ಟಮೊದಲು. ಭಾರತದ ಜೊತೆಗೆ ಬಹಳ ಕಾಲದಿಂದ ನೆಲೆಯನ್ನು ಪಾಲಿಸುತ್ತಿದ್ದ ಸಿಖ್ ಭಯೋತ್ಪಾದಕರ ಪಾತ್ರಕ್ಕಿದು ಮೊದಲ ಅಪವಾದವಾಗಿ ಪರಿಣಮಿಸಿತು. ಜುಲೈ 5ರ ವಿಮಾನಾಪಹರಣಕಾರರ ವಿಚಾರಣೆ ಕ್ಷಿಪ್ರವಾಗಿ ನಡೆಯುವುದೆಂದು ಇಸ್ಲಾಮಾಬಾದಿನಿಂದ ಭರವಸೆ ದೊರೆಯು ಹಿಡಿದಿದ್ದ ಈ ಅಪಹರಣಕಾರರನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವುದರ ಮೂಲಕ ಭಾರತ ಪಾಕಿಸ್ತಾನದ ಮೇಲೆ ರಾಜತಾಂತ್ರಿಕ ವಿಜಯ ಸಾಧಿಸಲಾಯಿತು. ೧೯೮೦ರಿಂದೀಚೆಗೆ ಪಾಕಿಸ್ತಾನದಲ್ಲೇ ಇಳಿದ ಇಪ್ಪತ್ತೊಂದರಲ್ಲಿ ಒಟ್ಟು ೨೨ ಜನ ಅಪಹರಣಕಾರರನ್ನು ಇನ್ನೂ ತನ್ನ ದೇಶದಲ್ಲೇ ಇಟ್ಟುಕೊಂಡಿದ್ದ ಇಸ್ಲಾಮಾಬಾದಿನ ಅಧಿಕಾರಿಗಳು ಕೈಕೊಂಡ ಈ ಕ್ರಮದಿಂದಾಗಿ ಪಾಕಿಸ್ತಾನ ಮೆಚ್ಚುಗೆ ಗಳಿಸಿಕೊಂಡಿತು.

ಆಗಸ್ಟ್ ೨೪ರ ವಿಮಾನ ಅಪಹರಣಕ್ಕೆ ಬಳಸಲಾದ ಪಿಸ್ತೂಲು ಪಾಕಿಸ್ತಾನಕ್ಕೆ ಮಾರಕವಾದ ಪ್ರಸಂಗ ಕೂಡ ಭಾರತ ಆ ದೇಶದ ಮೇಲೆ ಸಾಧಿಸಿದ ರಾಜತಾಂತ್ರಿಕ ವಿಜಯದ ಮಹತ್ವ ಅಂತ. ಈ ಪಿಸ್ತೂಲನ್ನು ತನಗೆ ಲಾಹೋರ್ ವಿಮಾನ ನಿಲ್ದಾಣದಲ್ಲಿ ಪಾಕಿಸ್ತಾನಿ

(ಕೃಪೆ 'ಇಂಡಿಯಾ ಟುಡೆ')

ಅಧಿಕಾರಿಯೊಬ್ಬ ನೀಡಿದನೆಂಬುದಾಗಿ ಅಪಹರಣಕಾರರು ಒಪ್ಪಿಕೊಂಡರೆಂದು ಸಿ ಬಿ ಐ ಪತ್ತೇದಾರರು ಹೇಳಿದ್ದಾರೆ. ಈ ಹೇಳಿಕೆ ಇಬ್ಬರು ಬ್ರಿಟಿಷರೂ ಸೇರಿದಂತೆ ಅಪಹೃತ ವಿಮಾನದಲ್ಲಿನ ಪ್ರವಾಸಿಗಳ ಅಭಿಪ್ರಾಯವನ್ನು ದೃಢಪಡಿಸಿತು. ತಮ್ಮ ಮುಖಂಡ ಕಮಲಜಿತ ಸಂಧುವಿಗೆ ಪಾಕಿಸ್ತಾನಿ ಭದ್ರತಾ ಪಡೆಯ ಅಧಿಕಾರಿಯೊಬ್ಬನಿಂದ ಈ ಪಿಸ್ತೂಲು ಕೊಡಲ್ಪಟ್ಟಿತೆಂದು ಅಪಹರಣಕಾರರು ಹೇಳಿದರು.

ಇಸ್ಲಾಮಾಬಾದ ಭಾರತ ಈ ಪಿಸ್ತೂಲು ಪ್ರಕರಣವನ್ನು ರಾಜಕೀಯ ಅಸ್ತ್ರವನ್ನಾಗಿ ಬಳಸುತ್ತದೆಂದು ಭಾವಿಸಿತು. ಭಾರತ ಸರಕಾರ ಈ ಬಗ್ಗೆ ಸಾರ್ವಜನಿಕರಿಗೆ ತಿಳಿಸಬೇಕೆಂದು ನಿರ್ಧರಿಸುವ ಮೊದಲೇ ಪಾಕಿಸ್ತಾನ ಅವರಲ್ಲಿ ತನ್ನ ಕೈವಾಡವಿಲ್ಲವೆಂದು ಹೇಳಿಕೆಗಳನ್ನು ನೀಡಿಬಿಟ್ಟಿತ್ತು. ಅಪಹರಣ ನಡೆದ ಎರಡು ದಿನಗಳ ನಂತರ ಪಾಕಿಸ್ತಾನದ ವಿದೇಶಾಂಗ ಶಾಖೆಯ ವಕ್ತಾರನೊಬ್ಬ, ಈ ಪಿಸ್ತೂಲು ಅಪಹರಣಕಾರರಿಗೆ ಲಾಹೋರಿನಲ್ಲಿ ಕೊಡಲ್ಪಟ್ಟಿತೆಂಬ ಹೇಳಿಕೆಯನ್ನು ನಿರಾಕರಿಸಿದ. ಮರುದಿನ ಆ ದೇಶದ ಪ್ರಸಾರಾಂಗ ಶಾಖೆಯ ಕಾರ್ಯದರ್ಶಿ ಲೆ. ಜ. ಮುಜಿಬುರ್ ರೆಹಮಾನ ಪತ್ರಿಕಾ ಪ್ರತಿನಿಧಿಗಳೆದುರು ಮಾತನಾಡುತ್ತ, ಅಪಹರಣಕಾರರು ಕರಾಚಿಯ ನಿಯಂತ್ರಣಾಲಯದೊಂದಿಗೆ ತಾವು ಈ ಪಿಸ್ತೂಲನ್ನು ಚುಡೀಗಡ ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿಯೊಬ್ಬನಿಗೆ ಲಂಚಕೊಟ್ಟು ಪಡೆದುದಾಗಿ ತಿಳಿಸಿದರೆಂದು ಹೇಳಿದರು. ಮತ್ತೆ ಕೆಲದಿನಗಳ ನಂತರ ದಿಲ್ಲಿಯಲ್ಲಿರುವ ಪಾಕಿಸ್ತಾನ ರಾಯಭಾರ ಕಚೇರಿ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ದುಬಾಯಿ ಪೋಲೀಸ್ ವರಿಷ್ಠ ಕ. ದಹಿ ಖಲ್ಫಾನ್ ತಮೀಮರೊಂದಿಗೆ ನಡೆಸಿದ ಟಿ. ವಿ. ಸಂದರ್ಶನದ ಒಂದೆರಡು ಅಂಶಗಳನ್ನು ಒತ್ತಿ ಹೇಳಿತು. ಈ ಸಂದರ್ಶನದಲ್ಲಿ ತಮೀಮ್ ಅಪಹರಣಕಾರರು ಈ ಪಿಸ್ತೂಲು ತಮ್ಮ ಬಳಿ ವಿಮಾನಯಾನ ಪ್ರಾರಂಭಿಸುವಾಗಲೇ ಇತ್ತೆಂದು ಹೇಳಿದ್ದಾರೆ, ಎಂದಿದ್ದರು.

ಈ ಪ್ರಕರಣದಲ್ಲಿ ಭಾರತ ಪಾಕಿಸ್ತಾನದ ಮೇಲೆ ತಾನು ರಾಜತಾಂತ್ರಿಕ ವಿಜಯ ಸಾಧಿಸಿದೆನೆಂದು ಆನಂದಗೊಂಡರೂ ದುಬಾಯಿಯಲ್ಲಿ ರಾಜತಾಂತ್ರಿಕರ ನಡುವೆ ಕ್ಲಿಷ್ಟ 'ಲೇವಾದೇವಿ ವ್ಯವಹಾರ' ನಡೆದ ನಂತರವೇ ಅಪಹರಣಕಾರರನ್ನು ಮರಳಿ ಒಪ್ಪಿಸಲು ಒಪ್ಪಿಕೊಳ್ಳಲಾಯಿತೆಂಬುದು ಆ ಆನಂದವನ್ನು 'ಕರಗಿಸಿತು'. ಕೊಲ್ಲಿ ರಾಷ್ಟ್ರಗಳೊಂದಿಗಿನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಬಂಧದ ಉಪಯೋಗವನ್ನು ಪಡೆದ ಪಾಕಿಸ್ತಾನ ದುಬಾಯಿ ಸರಕಾರವನ್ನು 'ಇಸ್ಲಾಮಾಬಾದ ಪರ' ನಿಲುವು ತಾಳಲು ಆ ರಾಷ್ಟ್ರಗಳು ಒತ್ತಾಯಿಸುವಂತೆ ಹೇಳಿತು. ಅಪಹರಣಕಾರರು ಶರಣಾದ ಕೂಡಲೆ ಸಂಯುಕ್ತ ಅರಬ್ ರಾಷ್ಟ್ರಗಳಲ್ಲಿರುವ ಪಾಕ್ ರಾಯಭಾರಿ ಅಮೀರ್ ಗುಲಿಸ್ತಾಂ ಜಾಂಜುವಾ ಅವರು ಪಿಸ್ತೂಲನ್ನು ಅಪಹರಣಕಾರರು ಲಾಹೋರಿನಲ್ಲಿ ಪಡೆದರೆಂಬ ಸಂಗತಿಯನ್ನು ನಿರಾಕರಿಸುವಂತೆ ದುಬಾಯಿ ಅಧಿಕಾರಿಗಳ ಮೇಲೆ ರಾಜಕೀಯ ಒತ್ತಾಯ ತರುವ ಯತ್ನ ನಡೆಸಿದರು. ಅಲ್ಲದೆ ದುಬಾಯಿಯ ರಕ್ಷಣಾಮಂತ್ರಿ ಶೇಖ್ ಮೊಹಮ್ಮದ್ ಬಿನ್ ರಶೀದರನ್ನು ಅನೇಕ ಸಂದರ್ಭಗಳಲ್ಲಿ ಭೇಟಿಯಾಗಿ, "ಅಪಹರಣಕಾರರು ಅರಬ್ ರಾಷ್ಟ್ರಗಳಲ್ಲಿಯಾಗಲಿ ಇಲ್ಲವೆ ಅಮೇರಿಕದಲ್ಲಿಯಾಗಲಿ ಇರಲಿ— ಭಾರತಕ್ಕೆ ಅವರು ಹಿಂತಿರುಗುವುದು ಮುಸ್ಲಿಂ ಸೋದರ ರಾಷ್ಟ್ರವಾದ ಪಾಕಿಸ್ತಾನಕ್ಕೆ ಮುಖಭಂಗವಾದಂತೆ" ಎಂದು ಹೇಳಲು, ಅವರ ಮನವೊಲಿಸಲು ಯತ್ನಿಸಿದರು. ಕಾರಣಾಂತರಗಳಿಂದ ಈ ಯತ್ನದಲ್ಲಿ ಜಾಂಜುವಾ ವಿಫಲರಾದರೂ ಪಿಸ್ತೂಲು ಪ್ರಕರಣದಲ್ಲಿ ದುಬಾಯಿಯ ಬೆಂಬಲವನ್ನು ಪಾಕಿಸ್ತಾನಕ್ಕೆ ಪಡೆಯುವಲ್ಲಿ ಸಫಲರಾದರು. ದುಬಾಯಿಯ ಅಧಿಕಾರಿಗಳು ಅಪಹರಣಕಾರರಿಗೆ ಪಿಸ್ತೂಲು ಲಾಹೋರಿನಲ್ಲಿ ಕೊಡಲ್ಪಟ್ಟಿತೆಂಬ ಅಂಶ ಅವರ ವಿಚಾರಣೆಯ ಕಾಲಕ್ಕೆ ಹೊರಬಿತ್ತೆಂಬ ಭಾರತದ ವಾದವನ್ನು

ಸುಳ್ಳೆಂದುಬಿಟ್ಟರು. ಇವನ್ನೇ ದುಬಾಯಿಯ ಪೋಲೀಸ್ ವರಿಷ್ಠರು ದುಬಾಯಿಯ ದೂರದರ್ಶನದಲ್ಲಿ ನಡೆದ ಸಂದರ್ಶನದ ಸಮಯದಲ್ಲಿ ಪುನರುಚ್ಚರಿಸಿದರು. ಈ ಸಂದರ್ಶನ ಅಪಹರಣಕಾರರನ್ನು ಭಾರತಕ್ಕೆ ಕರೆತಂದ ರಾತ್ರಿ ಪ್ರಸಾರವಾಯಿತು. ಅಲ್ಲದೆ ಪಿಸ್ತೂಲು ಲಾಹೋರಿನಲ್ಲಿಯೇ ನೀಡಲ್ಪಟ್ಟಿತೆಂಬುದನ್ನು ದೃಢಪಡಿಸುವ ಆ ವಿಮಾನದ ಪ್ರಯಾಣಿಕರ ಸಂದರ್ಶನವನ್ನು ಪ್ರಕಟಿಸಿದ ಯು.ಎ.ಇ.ಯ ಏಕೈಕ ಆಂಗ್ಲ ದಿನಪತ್ರಿಕೆಯಿಂದ ಮುದ್ರಿತ ಕ್ಷಮಾಪತ್ರವನ್ನು ಪಡೆಯುವಂತೆ ಜಾಂಜುವಾ ಅವರು ಅಲ್ಲಿಯ ಸಮಾಚಾರ ಇಲಾಖೆಗೆ ದುಂಬಾಲು ಬಿದ್ದರು.

ದುಬಾಯಿಯಲ್ಲಿ ಮಾತುಕತೆ ನಡೆದ ಕಾಲಕ್ಕೆ ಪಾಕಿಸ್ತಾನ ಮಹತ್ವದ ಪಾತ್ರವಹಿಸಿದರೂ ಕೊನೆಗೆ ಅದಕ್ಕೇ ಮುಖಭಂಗ ಆಯಿತು. ಅಪಹರಣಕಾರರನ್ನು ಅಮೇರಿಕಕ್ಕೆ ಕಳಿಸಲು ಪಾಕಿಸ್ತಾನದ ಒತ್ತಾಯ, ಭಾರತದ ಮೊದಮೊದಲಿನ ನಿಧಾನಗತಿಯಿಂದಾಗಿ ಹೆಚ್ಚು ಪರಿಣಾಮಕರವಾಗುವಂತಾಯಿತು. "ಶೇಖ್ ಮೊಹಮ್ಮದರಿಗೆ ನಾವು ಅವರ ಮಾತನ್ನು ತೆಗೆದುಕೊಳ್ಳುವಂತೆ ಒತ್ತಾಯಿಸುವುದಿಲ್ಲ." ಎಂದು ಭಾರತದ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ರಮೇಶ್ ಭಂಡಾರಿ ಆ ದೇಶದ ರಾಜತಾಂತ್ರಿಕರೊಡನೆ ಮೊದಲ ಸುತ್ತಿನ ಮಾತುಕತೆಯಲ್ಲಿ ಹೇಳಿದರು. ಅಪಹರಣಕಾರರಿಗೆ ಅಮೇರಿಕದಲ್ಲೊಂದು ನೆಲೆ ಹುಡುಕಿ ಕೊಡುವ ಭರವಸೆ ನೀಡಿದ ಶೇಖರ ಮಾತನ್ನು ಪ್ರಸ್ತಾಪಿಸಿ ಭಂಡಾರಿ ಹೀಗೆ ಆಡಿದ್ದರು.

ಆದರೆ ಅಮೇರಿಕವು ಮೊದಲೇ ಭಾರತ ಹಾಗೂ ದುಬಾಯಿ ಸರಕಾರಗಳಿಗೆ ನಾಲ್ಕು ಶರ್ತುಗಳನ್ನು ಒಪ್ಪಿಕೊಂಡರೆ ಮಾತ್ರ ಅಪಹರಣಕಾರರಿಗೆ ತನ್ನಲ್ಲಿ ಆಶ್ರಯ ನೀಡುವುದಾಗಿ ಹೇಳಿತು. ಅವುಗಳಲ್ಲಿ "ಅಪಹರಣಕಾರರು ಅಮೇರಿಕದಲ್ಲಿಳಿಯುವಾಗ ಪ್ರಯಾಣಕ್ಕೆ ಅಧಿಕೃತ ಪ್ರಮಾಣ ಪತ್ರಗಳನ್ನು ಹೊಂದಿರಬೇಕು" ಎಂಬುದೂ ಒಂದು. ದುಬಾಯಿಯಿಂದ ಬಂದ ಒಂದು ವರದಿಯ ಪ್ರಕಾರ ಇಸ್ಲಾಮಾಬಾದ್ ಆ ಅಪಹರಣಕಾರರಿಗೆ ಪಾಕಿಸ್ತಾನದ ಪ್ರಮಾಣ ಪತ್ರಗಳನ್ನು ಒದಗಿಸಲು ಸಿದ್ಧವಿತ್ತು.

ಅಮೇರಿಕವು ಶರ್ತುಗಳನ್ನು ಒಡ್ಡುವವರೆಗೆ ಭಾರತ ಅಪಹರಣಕಾರರನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಾರದೆಂಬ ನಿಲುವು ತಾಳಿತು. ಇದಕ್ಕೆ ಬಲವಾದ ಕಾರಣವೂ ಇತ್ತು. ರಾಜತಾಂತ್ರಿಕ ಪ್ರಯೋಜನಗಳ ಹೊರತಾಗಿ, ಅಪಹರಣಕಾರರ ವಿಚಾರಣೆಯ ಪ್ರಚಾರದಿಂದ ಅವರು ಸಿಖ್ ಪ್ರಕರಣದಲ್ಲಿ ಹುತಾತ್ಮರಾಗುವ ಹಾಗೂ ತನ್ಮೂಲಕ ಪಂಜಾಬಿನಲ್ಲಿ ವಾತಾವರಣ ತಿಳಿಯಾಗಲು ವಿಳಂಬವಾದೀತೆಂಬ ಭಯ– ಭಾರತ ಸರಕಾರವು ಈ ರೀತಿ ಅಭಿಪ್ರಾಯ ತಳೆಯಲು ಕಾರಣವಾಗಿತ್ತು. ಅಮೇರಿಕ ಅಪಹರಣಕಾರರಿಗೆ ಆಶ್ರಯ ನೀಡುವ ಸಾಧ್ಯತೆಗಳು ಹೆಚ್ಚಾಗ ತೊಡಗಿದವೆಂದೆನಿಸಿದಾಗಲೇ ಭಾರತ ಅವರನ್ನು ತನ್ನ ವಶಕ್ಕೆ ಪಡೆಯುವ ಪ್ರಯತ್ನವನ್ನು ಚುರುಕುಗೊಳಿಸಲು ನಿರ್ಧರಿಸಿತು. ಅಪಹರಣಕಾರರಿಗೆ ಆಶ್ರಯ ನೀಡುವ ಕ್ರಮವು ತನ್ನೊಂದಿಗಿನ ಸ್ನೇಹ ಸಂಬಂಧಕ್ಕೆ ಬಗೆಯುವ ದ್ರೋಹವೆಂದು ತಾನು ಭಾವಿಸುವುದಾಗಿಯೂ ಉಭಯ ರಾಷ್ಟ್ರಗಳ ಸಂಬಂಧದ ಮೇಲೆ ಇದು ಗಂಭೀರ ಪರಿಣಾಮಗಳನ್ನು ಬೀರಬಹುದೆಂದೂ ಭಾರತವು ಅಮೇರಿಕಕ್ಕೆ ತಿಳಿಸಿತೆಂದು ದುಬಾಯಿ ರಾಜಕೀಯ ವಲಯಗಳು ಹೇಳುತ್ತವೆ.

ಆದರೆ ಶೇಖ್ ಮೊಹಮ್ಮದರು ತಮ್ಮ ಮಾತಿಗೆ ಮನ್ನಣೆ ದೊರೆಯಬೇಕೆಂಬ ಆತುರದಿಂದ ಅಪಹರಣಕಾರರನ್ನು ಅಮೇರಿಕಕ್ಕೆ [illegible] ನಿಲ್ದಾಣದ ಮೂಲಕ ಸಾಗಿಸುವ ಬಗ್ಗೆ ಯೋಜನೆಗಳನ್ನು ರೂಪಿಸಿಟ್ಟಿದ್ದರು. ಅಪಹರಣಕಾರರನ್ನು ತನ್ನ ವಶಕ್ಕೆ ಒಪ್ಪಿಸಬೇಕೆಂಬ ನಿಲುವನ್ನು ಭಾರತ ದೃಢಗೊಳಿಸುತ್ತ ಹೋದಹಾಗೆಲ್ಲ ಶೇಖ್ "ಮೊದಲು ಅವರನ್ನು ಅಮೇರಿಕಕ್ಕೆ ಕಳಿಸಿ. ಅವರು ಅಲ್ಲಿಳಿಯುತ್ತಲೇ ಅಲ್ಲಿಂದಲೇ ನೇರ

ವಾಗಿ ವಿಮಾನದಿಂದ ಭಾರತಕ್ಕೆ ಅವರನ್ನು ಕಳಿಸಿ," ಎಂದು ಸೂಚಿಸಿದರೆಂದೂ ವರದಿಯಾಗಿದೆ.

ಆಗಸ್ಟ್ ೩೦ ರಂದು ಅಮೇರಿಕದ ರಾಯಭಾರಿ ಜಾರ್ಜ್ ಕ್ವಿನ್ಸಿ ಲಾಮ್ಸ್ಡನ್ ರಜೆಯಿಂದ ಹಿಂದಕ್ಕೆ ಕರೆಸಲ್ಪಟ್ಟು ಅಮೇರಿಕದ ವಿಶೇಷ ರಾಜತಾಂತ್ರಿಕ ದೂತರಾದ ರಾಬರ್ಟ್ ಸ್ಟೈರೆ ಹಾಗೂ ಇನ್ನಿಬ್ಬರು ಕಾನೂನು ತಜ್ಞರೊಂದಿಗೆ ಬಂದರು. ಶೇಖರಿಗೆ ಲಾಮ್ಸ್ಡನ್ನರು ಅಮೇರಿಕವು ಅಪಹರಣಕಾರರನ್ನು ಕರೆಸಿಕೊಳ್ಳಲು ಸಿದ್ಧವಿಲ್ಲದೆಂಬುದನ್ನು ಸ್ಪಷ್ಟಪಡಿಸಿದರೆ. ಸ್ಟೈರೆ ಅವರು ವಾಷಿಂಗ್ಟನ್ ತನ್ನ ಮೊದಲಿನ ನಿರ್ಧಾರವನ್ನು ಬದಲಿಸಲು ಇದ್ದ ಕಾರಣಗಳನ್ನು ವಿವರಿಸಿದರು.

ತಮ್ಮ ಮನಸ್ಸಿನ ವಿರುದ್ಧ ನಡೆಯಬೇಕಾದುದಕ್ಕೆ ಶೇಖ್ ತಲೆಕೆಡಿಸಿಕೊಂಡರೂ ದುಬಾಯಿಯ ನಂಬಲರ್ಹ ವಲಯಗಳು ಹೇಳುವಂತೆ– ತದನಂತರದ ಮಾತುಕತೆಗಳಲ್ಲಿ ರಾಜತಾಂತ್ರಿಕವಾಗಿ ಅವರಿಗೆ ಅನುಕೂಲವೇ ಆಯಿತು. ದುಬಾಯಿ ಅಪಹರಣಕಾರರನ್ನು ಭಾರತದ ವಶಕ್ಕೆ ಒಪ್ಪಿಸುವುದರ ಜೊತೆಗೆ, ತಾನು ದುಬಾಯಿಗೆ ಸೀತಾರಾಮನ್ ಎಂಬುವನನ್ನು ಒಪ್ಪಿಸಬೇಕೆಂಬ ಶರತ್ತನ್ನು ಭಾರತ ಒಪ್ಪಿಕೊಂಡಿತು. ಸೀತಾರಾಮನ್ ದುಬಾಯಿ ಸರಕಾರದ ಪ್ರವಾಸೋದ್ಯಮ ಹಾಗೂ ನಾಗರಿಕ ವಿಮಾನಯಾನ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಭಾರತೀಯ ನೌಕರ. ಆತ ಇಲಾಖೆಯ ಎರಡು ಕೋಟಿ ಐವತ್ತು ಲಕ್ಷ ದಿರ್ಹಾಂ (೮.೪ ಲಕ್ಷ ರೂಪಾಯಿ)ಗಳನ್ನು ದುರುಪಯೋಗಪಡಿಸಿಕೊಂಡು ಭಾರತಕ್ಕೆ ಓಡಿ ಬಂದಿದ್ದ. ಅವನನ್ನು ಇಂಟರ್‌ಪೋಲ್‌ಗೆ ಒಪ್ಪಿಸಲು ಭಾರತ ಸರಕಾರ ಎಲ್ಲ ಕ್ರಮಗಳನ್ನು ಕೈಗೊಳ್ಳಲು ಪ್ರಾರಂಭಿಸಿದೆ ಎಂದು ರಾಜ ತಾಂತ್ರಿಕ ವಲಯಗಳು ಹೇಳುತ್ತವೆ. ಇಂಟರ್ ಪೋಲ್ ಆತನನ್ನು ದುಬಾಯಿಯ ನ್ಯಾಯಾಲಯದೆದುರು ಹಾಜರುಪಡಿಸಬೇಕಾಗುತ್ತದೆ. ವರ್ಷದ ಹಿಂದೆ ಭಾರತಕ್ಕೆ ಆತ ಓಡಿಬಂದ. ಅಂದಿನಿಂದಲೂ ಸಂಯುಕ್ತ ಅರಬ್ ಸರಕಾರ ಆತನನ್ನು ತಮ್ಮ ವಶಕ್ಕೆ ಒಪ್ಪಿಸುವಂತೆ ಭಾರತವನ್ನು ಒತ್ತಾಯಿಸುತ್ತಲೇ ಇದೆ.

ಆದರೆ ಅಪಹರಣಕಾರರ ಬಗೆಗಿನ ಮಾತುಕತೆಗಳು ಯಶಸ್ವಿಯಾಗಿ ಮುಗಿಯುವ ಹೊತ್ತಿಗೆ ಸ್ವಲ್ಪ ಎಚ್ಚರವಹಿಸಿದ್ದರೆ ತಪ್ಪಿಸಬಹುದಾಗಿದ್ದ ರಾಜತಾಂತ್ರಿಕ ತಪ್ಪೊಂದನ್ನು ಭಾರತ ಎಸಗಿತು. ಕೊಲ್ಲಿ ರಾಷ್ಟ್ರಗಳ ರಾಜಕೀಯ ಸೂಕ್ಷ್ಮವನ್ನು ಸರಿಯಾಗಿ ಅರಿಯದೆ ದಿಲ್ಲಿಯಿಂದ ಪ್ರಧಾನಿ ಇಂದಿರಾ ಅವರು ಬಿಕ್ಕಟ್ಟನ್ನು ಕೊನೆಗೊಳಿಸುವ ಯತ್ನದಲ್ಲಿ ವಿಜಯಿಯಾದ ಅರಬ್ ರಾಷ್ಟ್ರಗಳ ಅಧ್ಯಕ್ಷ ಶೇಖ್ ಝಾಯೇದರಿಗೆ ಕೃತಜ್ಞತೆ ವ್ಯಕ್ತಪಡಿಸಿ ಅಬುಧಾಬಿಗೆ ಎರಡು ಸಂದೇಶಗಳನ್ನು ಕಳುಹಿಸಿದರು. ಆದರೆ ಅದರಲ್ಲಿ ಶೇಖ್ ಮೊಹಮ್ಮದರು ವಹಿಸಿದ ಪ್ರಮುಖವಾದ ಪಾತ್ರವನ್ನು ಸ್ಮರಿಸಿರಲಿಲ್ಲ. ಅಲ್ಲದೆ ಈ ಮಾತುಕತೆಗಳ ಕಾಲಕ್ಕೆ ಶೇಖ್ ಝಾಯೇದರು ಆ ದೇಶದಲ್ಲೇ ಇರಲಿಲ್ಲ. ಪ್ರತಿ ಅರಬ್ ರಾಜ್ಯಕ್ಕೂ ಪ್ರತ್ಯೇಕ ಅಸ್ತಿತ್ವವಿರುವಾಗ, ಇಂಥ ಪ್ರಮಾದವೆಸಗಿದ್ದು ದುಬಾಯಿ ದೊರೆಯನ್ನು ಉದ್ದೇಶಪೂರ್ವಕವಾಗಿಯೇ ಅಪಮಾನಗೊಳಿಸುವ ತಂತ್ರವೆಂಬುದಾಗಿ ಅರ್ಥೈಸಲಾಯಿತು. ರಾಜತಾಂತ್ರಿಕ ಶಿಷ್ಟಾಚಾರಕ್ಕನುಗುಣವಾಗಿ ಇಂದಿರಾ ಗಾಂಧಿಯವರು ದುಬಾಯಿಯ ಪ್ರಭುಗಳೂ ಯುನೈಟೆಡ್ ಎಮಿರೇಟ್ಸ್‌ನ ಪ್ರಧಾನಿಗಳೂ ಆದ ಶೇಖ ರಷೀದರಿಗೆ ಕೃತಜ್ಞತೆಯ ಪತ್ರವನ್ನು ಬರೆದಿದ್ದರೆ ಇಂತಹ ಪ್ರಮೇಯವೇ ಬರುತ್ತಿರಲಿಲ್ಲ.

ದೇಶಭ್ರಷ್ಟರಾಗಿ ಬೇರೆ ಬೇರೆ ದೇಶಗಳಿಂದ ಓಡಿ ಬಂದವರು ಗುಂಪು ಕಟ್ಟಿಕೊಂಡದ್ದು ದುಬಾಯಿ ಸರಕಾರಕ್ಕೆ ತಲೆನೋವಾಗಿದೆ. ಇಂತಹದರಲ್ಲಿ ಸಿಖ್ ಉಗ್ರಗಾಮಿಗಳನ್ನು ತನ್ನ ದೇಶದಲ್ಲಿಟ್ಟುಕೊಳ್ಳುವುದು ಆಪತ್ತನ್ನು ಆಮಂತ್ರಿಸಿಕೊಂಡಂತೆಯೇ ಎಂದು ದುಬಾಯಿ ಭಾವಿಸಿದಲ್ಲಿ ಆಶ್ಚರ್ಯವಿಲ್ಲ. ಪಂಜಾಬಿನಲ್ಲಿ ಉಗ್ರಗಾಮಿಗಳ ಹಿಂಸೆ ಅತ್ಯುಗ್ರವಾದಾಗ ದುಬಾಯಿ ಸ

ಕಾರ ತನ್ನಲ್ಲಿ ಬೀಡುಬಿಟ್ಟು ಶಿಬಿರ ಕಟ್ಟಿಕೊಂಡಿದ್ದ ಗುರುದ್ವಾರವನ್ನು ಆಕ್ರಮಿಸಿ [illegible] ಕೆಡವಿಸಿತ್ತು. ಆಗಿನಿಂದ [illegible] ಬಲವ ಸಿಖ್ ಸಮುದಾಯ ಅರಬ್ ರಾಷ್ಟ್ರಗಳಲ್ಲಿ 'ತಲೆಯೆತ್ತಿದೆ' ಇದೆ.

ಇತ್ತ ದಿಲ್ಲಿಯಲ್ಲಿ, ಅಪಹರಣಕಾರರು ಈ ಅಪರಾಧಕ್ಕಾಗಿ ಜೀವಾವಧಿ ಸೆರೆಮನೆಯ ಶಿಕ್ಷೆ ಅನುಭವಿಸುವ ಪ್ರಸಂಗವನ್ನೆದುರಿಸುತ್ತಿದ್ದಾರೆ. ಅಪಹರಣಕಾರರು ದಿಲ್ಲಿಗೆ ಬಂದ ದಿನ ಗುಪ್ತವಾಗಿ ಅವರನ್ನು ಚಂಡಿಗಡಕ್ಕೆ ಸಾಗಿಸಲಾಯಿತು. ಅಲ್ಲಿ ವಿಮಾನ ನಿಲ್ದಾಣದ ಬಳಿ [illegible] ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರೊಬ್ಬರ [illegible] ನ್ಯಾಯಾಲಯ ಸೇರಿಸಿ ಅಪಹರಣಕಾರರನ್ನು, ೨೦ ದಿನಗಳ ಕಾಲ ಪೋಲೀಸರ ವಶ ಒಪ್ಪಿಸಿದರು. ಅವರ ವಿಚಾರಣೆ 'ಪಂಜಾಬ ಟೆರಿಟರೀಸ್ ಆರ್ಡಿನನ್ಸ್' ಪ್ರಕಾರ ನಡೆಯುತ್ತಿದೆ. ಈ ಸುಗ್ರೀವಾಜ್ಞೆಯ ಪ್ರಕಾರ ನ್ಯಾಯಾಲಯದ ಕ್ರಮವನ್ನು ಖಾಸಗಿಯಾಗಿ ನಡೆಸಬಹುದು.

ಕೆಂಪು ಕೋಟೆಯಲ್ಲಿ ೧೧ ಜನ ಸಿಬಿಐ ಅಧಿಕಾರಿಗಳ ವಿಶೇಷ ತಂಡವೊಂದು ಅಪಹರಣಕಾರರನ್ನು ಈ ಕುರಿತು ಪ್ರಶ್ನಿಸುತ್ತಿದೆ. ಎಡಿಷನಲ್ ಡೈರೆಕ್ಟರ್ ಜಿ. ಎಸ್. [illegible] ಹಾಗೂ ಓ. ಪಿ. ಶರ್ಮಾ, ಎಂ. ಎಲ್. ಶರ್ಮಾ ಈ ತಂಡದ ಮುಖ್ಯಸ್ಥರು. ಈ ವರೆಗೆ ಈ ತಂಡದ ಪ್ರಯತ್ನದಿಂದಾಗಿ ವಿಮಾನ ಅಪಹರಣದಂಥ ದುಷ್ಕೃತ್ಯಗಳನ್ನು ಯೋಜಿಸುವ ಭಯೋತ್ಪಾದಕರ ಬಗ್ಗೆ ಸಾಕಷ್ಟು ವಿವರಗಳು ದೊರೆತಿವೆ. ಸಪ್ಟೆಂಬರದಲ್ಲಿ ಮತ್ತೊಬ್ಬ ಉಗ್ರಗಾಮಿ ಅವತಾರ ಸಿಂಗನನ್ನು ಬಂಧಿಸಲಾಯಿತು. ಇದು ಕೂಡ ಈ ತಂಡವನ್ನು ಪ್ರಶ್ನಿಸಿದ್ದರಿಂದಲೇ ಸಾಧ್ಯವಾಯಿತು. ಅವತಾರಸಿಂಗ್ ಮೂಲತಃ ಜಮ್ಮುವಿನಲ್ಲಿದ್ದು ಕಾರ್ಯಾಚರಣೆಯಲ್ಲಿ ತೊಡಗಿದ್ದ ಕಾನೂನು ಬಾಹಿರವೆಂದು ಸಾರಲ್ಪಟ್ಟ ಅಖಿಲ ಭಾರತ ಸಿಖ್ ವಿದ್ಯಾರ್ಥಿ ಒಕ್ಕೂಟದ ಸದಸ್ಯ. ಈತನೇ ಆಗಸ್ಟ್ ೨೪ರ ವಿಮಾನ ಅಪಹರಣದ ಯೋಜನೆಯನ್ನು ರೂಪಿಸಿದಾತನೆಂದೂ. ಅನೇಕ ಸಲ ಪಾಕಿಸ್ತಾನಕ್ಕೆ ಗುಪ್ತವಾಗಿ ಹೋಗಿ ಬಂದಿರುವನೆಂದೂ ನಂಬಲಾಗಿದೆ. ಸಿಬಿಐ ಮೂಲಗಳು ಹೇಳುವಂತೆ ಈ ಒಕ್ಕೂಟದ [illegible] ಸದಸ್ಯರು ವಿಮಾನ ಅಪಹರಣಗಳನ್ನು ಯೋಜಿಸುತ್ತಾರಾದರೂ [illegible] ಪೂರ್ತಿ ಕಾರ್ಯಾಚರಣೆಯನ್ನು ಬೇರೆಯವರಿಂದ, ಅದರಲ್ಲೂ, ಅಖಿಲ ಭಾರತ ಸಿಖ್ ವಿದ್ಯಾರ್ಥಿ ಸಂಘದ ಉಗ್ರವಾದಿಗಳಿಂದ ಮಾಡಿಸುತ್ತಾರೆ. ಇದರಿಂದ ನಿಜವಾಗಿ ಈ ದುಷ್ಕೃತ್ಯಗಳ ಹಿಂದಿರುವವರು ಯಾರೆಂಬುದು ರಹಸ್ಯವಾಗಿಯೇ ಉಳಿಯುತ್ತದೆ. ಆಗಸ್ಟ್ ೨೪ರ ವಿಮಾನ ಅಪಹರಣದಲ್ಲಿ ಪಾಲ್ಗೊಂಡ ಏಳು ಜನರ ಪೈಕಿ [illegible] ಜಿತ್ ಸಂಧು ಎಂಬ [illegible] ಪಂಜಾಬದ– ಚಂಡೀಗಡ ವಿಶ್ವವಿದ್ಯಾಲಯದ ವಿದ್ಯಾರ್ಥಿ. [illegible] ಕೊಲೆಯ ಅಪಾದನೆಯೊಂದರ ಮೇಲೆ ಬಂಧಿಸಲ್ಪಟ್ಟ ಈತ ಕಳೆದ ಏಪ್ರೀಲಿನಲ್ಲಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿದ. ಉಳಿದವರಲ್ಲಿ ನಾಲ್ವರಾದ ಅಮರಿಂದರಸಿಂಗ್, [illegible]ಸಿಂಗ್. ಅವತಾರಸಿಂಗ್ ಮತ್ತು ತೇಜಿಂದರಸಿಂಗ್ ಕೂಡ ವಿದ್ಯಾರ್ಥಿ ಒಕ್ಕೂಟದ ಸದಸ್ಯರು. ಇನ್ನುಳಿದ [illegible]ಸಿಂಗ್ ಹಾಗೂ [illegible]ಸಿಂಗ್ [illegible] ಸಿಂಗ್ ಸಂಘದೊಡನೆ [illegible].


ಪಂಜಾಬಿನ ಅಶಾಂತಿಗೂ ಈ ವಿಮಾನಾಪಹರಣಕ್ಕೂ ಪಾಕಿಸ್ತಾನವೇ ಕಾರಣವೆ? ಎಂಬುದನ್ನು ರಾಜತಾಂತ್ರಿಕರ ವಲಯ ಲಕ್ಷ್ಯಗೊಟ್ಟು ಪರಿಶೀಲಿಸುತ್ತಿದೆ. ವಿಮಾನ ಅಪಹರಣಕಾರರ ವಿಚಾರಣೆಯಲ್ಲಿ ಹೊರಬಿದ್ದ ಅಂಶಗಳನ್ನು ಸರಕಾರವು ಸಾರ್ವಜನಿಕರಿಗೆ ತಿಳಿಸುತ್ತದೋ? ಅಥವಾ ಅವುಗಳನ್ನು ಮುಂದೆ ಪ್ರಸಂಗ ಬಂದಾಗ ರಾಜತಾಂತ್ರಿಕ ಅಸ್ತ್ರವನ್ನಾಗಿ ಬಳಸುವವರೆಗೆ ಗುಪ್ತವಾಗಿಡುತ್ತದೋ ಎಂಬುದನ್ನೀಗ ಕಾದು ನೋಡಬೇಕಾಗಿದೆ.

ಪಂಡಿತ ಮಾಹುಲಿಯವರು

ವಸಂತ ಕಲಕೋಟಿ

ಕಳೆದ ವರ್ಷದ ಸೆಪ್ಟೆಂಬರ್ ಮೂರರಂದು ಬೆಳಿಗ್ಗೆ ನನ್ನ ಮಿತ್ರರೊಬ್ಬರು, "ನಿನ್ನೆ ಗೋಪಾಲಾಚಾರ್ಯರು ತೀರಿಕೊಂಡರು" ಎಂದು ಹೇಳಿದಾಗ ತುಂಬಾ ಆಘಾತವಾಯಿತು. ಕಾರಣ ಕೇವಲ ಹತ್ತು ದಿನಗಳ ಹಿಂದೆ ಮಾತುಂಗಾದಲ್ಲಿ ಅವರ ಮನೆಗೆ ಹೋಗಿದ್ದೆ. ಅವರ ಆರೋಗ್ಯ ಸುಧಾರಿಸುತ್ತಿರುವ ವರದಿಯನ್ನು ಅವರ ಚಿರಂಜೀವರಾದ ವಿದ್ಯಾಸಿಂಹರು, ಜಯತೀರ್ಥರಿಂದ ಕೇಳಿದ್ದೆ. ಈ ವರುಷ ಕೊನೆಗೆ ಆಚಾರ್ಯರ ೭೫ನೆಯ ಹುಟ್ಟುಹಬ್ಬವನ್ನು ತುಂಬ ವಿಜೃಂಭಣೆಯಿಂದ ಆಚರಿಸುವದಾಗಿಯೂ ಅವಕ್ಕಾಗಿ 'ಸಂಯುಕ್ತ ಕರ್ನಾಟಕ'ದಲ್ಲಿ ಒಂದು ಲೇಖನ ಬರೆಯಲೂ ವಿದ್ಯಾಸಿಂಹರು ಹಾಗೂ ಜಯತೀರ್ಥ ಅಂದೇ ಕೇಳಿಕೊಂಡಿದ್ದರು. ಜುಲೈ ಒಂದರಂದು ದಾದರಿನಲ್ಲಿರುವ ಡಾ. ಶ್ರೀಖಂಡೆಯವರ ಆಸ್ಪತ್ರೆಯಲ್ಲಿ ಆಚಾರ್ಯರಿಗೆ ಯಕೃತ್ ನಳಿಕೆಯ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ಜರುಗಿತು. ಆಚಾರ್ಯರು ಸುಧಾರಿಸತೊಡಗಿದರು. ಅವರ ಆರೋಗ್ಯದ ಬಗ್ಗೆ ಚಿಂತಿಸಿದ ಉತ್ತರಾದಿ ಮಠದ ಶ್ರೀಗಳನ್ನು ಮೊದಲ್ಗೊಂಡು ಆಚಾರ್ಯರ ನೂರಾರು ಹಿರಿಕಿರಿಯ ಗೆಳೆಯರು, ವಿದ್ಯಾರ್ಥಿಗಳು, ಸಮಾಧಾನಗೊಂಡಿದ್ದರು. ಆದರೆ ೨–೯–೧೯೮೪ರ ಬೆಳಿಗ್ಗೆ ಹನ್ನೊಂದೂವರೆ ಗಂಟೆಗೆ, ಆಚಾರ್ಯರು ನಮ್ಮಿಂದ ದೂರವಾದರು.

ಶಿಷ್ಯರಿಗೆ ಪಾಠ ಹೇಳುತ್ತಿರುವಾಗಲೇ ಅವರ ಪ್ರಾಣಪಕ್ಷಿ ಹಾರಿದುದು ಅವರ ಜೀವನ ಉದ್ದೇಶದ ಸಂಕೇತ. ರವಿವಾರ ರಜೆಯ



ವಿಷಮವಾಗಿದ್ದರೂ, ಅವರ ನಿಧನದ ಸುದ್ದಿ ತಿಳಿದ ಕ್ಷಣ, ನೂರಾರು ಹಿತೈಷಿಗಳು ಆಚಾರ್ಯರ ಅಂತ್ಯದರ್ಶನಕ್ಕಾಗಿ ಬಂದಿದ್ದರು. ಸುಮಾರು ಆರಡಿ ಎತ್ತರ, ಗೋಧಿ ಬಣ್ಣ, ಗಾಂಭೀರ್ಯ, ವಿದ್ವತ್ತು ಉಕ್ಕುವ ಮುಖಚರ್ಯೆ, ಹಣೆಯಲ್ಲಿ ಅಕ್ಷಂತಿ, ಒಂದು ಧೋತರ ಉಟ್ಟು ಒಂದು ಧೋತರ ಹೊದ್ದು, ವಿದ್ವತ್ತಿನ ಖಣಿಯೆನಿಸಿದ್ದರೂ, ವಿನಯ, ಸರಳತೆ ಆಚಾರ್ಯರ ಈ ವ್ಯಕ್ತಿತ್ವ ನನ್ನ ಕಣ್ಣೆದುರು ಸುಳಿದಾಗ, ಕಣ್ಣುಗಳಲ್ಲಿ ಹನಿ ಮೂಡಿತು.

ಆಧುನಿಕತೆ, ವಿಜ್ಞಾನದ ಪ್ರಗತಿಗಳ ತಾತ್ವಿಕ ಮೌಲ್ಯಗಳಿಗೆ ಸವಾಲಾಗಿ ನಿಂತಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಪಂಡಿತ ವರಾಹುಲಿ ಗೋಪಾಲಾಚಾರ್ಯರು ತಮ್ಮ ನಾಲ್ವರು ಶಿಷ್ಯರನ್ನು ಮುಂಬಯಿಗೆ ಕರೆದುಕೊಂಡು ಬಂದು ಮಾತುಂಗಾದಲ್ಲಿ ವಾಣೀವಿಹಾರ ಸಂಸ್ಕೃತ ಮಹಾವಿದ್ಯಾಲಯವನ್ನು ೧೯೩೭ರಲ್ಲಿ ಆರಂಭಿಸಿದರು.

ಆಚಾರ್ಯರು ಎಂ. ಎ. ಪದವಿಯನ್ನು ಪಡೆದಿದ್ದು, ಉತ್ತರಾದಿ ಮಠದ ಶ್ರೀಗಳಾದ ಸತ್ಯಧ್ಯಾನತೀರ್ಥರ ಬಳಿ ವೇದಶಾಸ್ತ್ರ, ವ್ಯಾಕರಣ, ಮೀಮಾಂಸೆ ಅಭ್ಯಾಸ ಮಾಡಿ ಶ್ರೀಗಳ ಅತಿ ಮೆಚ್ಚುಗೆಯ ಶಿಷ್ಯರೆನಿಸಿದ್ದರು. ಶ್ರೀಗಳ ಆದೇಶದಂತೆಯೇ ಮುಂಬಯಿಯಲ್ಲಿ ನೆಲೆಸಿ ಇಲ್ಲಿಯ ಜನರಿಗೆ ವಿಶೇಷವಾಗಿ ಕರ್ನಾಟಕದಿಂದ ಇಲ್ಲಿಗೆ ಬಂದು ನೆಲೆಸಿದ ಕನ್ನಡಿಗರಿಗೆ–ನಮ್ಮ ಧರ್ಮ, ಆಚಾರ, ವಿಚಾರ, ಸಂಸ್ಕೃತಿ–ಸಂಪ್ರದಾಯಗಳ ಬಗೆಗೆ ತಿಳಿಹೇಳುವ ಉದ್ದೇಶದಿಂದ ವಾಣೀವಿಹಾರ ವಿದ್ಯಾಲಯ ಆರಂಭಿಸಿದರು. ಕನ್ನಡ, ಸಂಸ್ಕೃತ, ಇಂಗ್ಲೀಷ ಭಾಷೆಗಳಲ್ಲಿ ಅಪೂರ್ವ ವಿದ್ವತ್ತು ಪಡೆದಿದ್ದ ಆಚಾರ್ಯರು ೧೯೩೭ರಲ್ಲಿ ಸರಕಾರೀ ಸೇವೆ ಸೇರಿದ್ದರೆ ಒಬ್ಬ ರಾಷ್ಟ್ರದ ಉನ್ನತ ಅಧಿಕಾರಿಯಾಗಿಯೋ, ನ್ಯಾಯಮೂರ್ತಿಯಾಗಿಯೋ, ಪ್ರಾಧ್ಯಾಪಕ–ಪ್ರಾಚಾರ್ಯನಾಗಿಯೋ ಖ್ಯಾತಿ ಪಡೆಯುತ್ತಿದ್ದರು. ಆದರೆ ಆಚಾರ್ಯರ ಒಲವು ಧರ್ಮ–ಸಂಸ್ಕೃತಿ, ಸಂಪ್ರದಾಯ, ಆಚಾರ–ವಿಚಾರಗಳು ನಶಿಸುತ್ತಿರುವದನ್ನು ತಡೆದು, ಅವುಗಳನ್ನು ಉಳಿಸಿ ಜನರಲ್ಲಿ ಬೆಳೆಸುವಲ್ಲಿದ್ದಿತು. ಅಂತೆಯೇ ಉತ್ತರಾದಿಮಠದ ಪೀಠವನ್ನೇರುವ ಅವಕಾಶವನ್ನು ಅವರು ಬಿಟ್ಟುಕೊಟ್ಟರು. ವಾಣೀವಿಹಾರ ವಿದ್ಯಾಲಯದೊಂದಿಗೆ ಆಚಾರ್ಯರು ಆರಂಭದ ವರುಷಗಳಲ್ಲಿ ಪಟ್ಟ ಪರಿಶ್ರಮ, ಕಷ್ಟಗಳು ಹೇಳಲಸಾಧ್ಯ. ಮುಂಬಯಿಗೆ ಬಂದು ಒಂದು ವರುಷದಲ್ಲಿಯೇ ಪಂಢರಪುರ ಹತ್ತಿರ ಡೋಣಜ ಗ್ರಾಮದ ಶ್ರೀ ವಾಸುದೇವಾಚಾರ್ಯ ಪಾಚ್ಛಾಪುರ ಅವರ ದ್ವಿತೀಯ ಪುತ್ರಿ ವಿದ್ಯಾವತಿಯೊಂದಿಗೆ ವಿವಾಹ ಜರುಗಿ, ತಮ್ಮ ಕುಟುಂಬದ ಹೊಣೆ, ಶಿಷ್ಯರ ಹೊಣೆ ಮೈಮೇಲೆ ಬಿದ್ದಿತು. ತಂದೆ ರಾಮಾಚಾರ್ಯ ತಾಯಿ ಸೀತಾಬಾಯಿ ಅವರ ಕೃಪಾಕಟಾಕ್ಷ ಯಾವಾಗಲೂ ಗೋಪಾಲಾಚಾರ್ಯರ ಮೇಲಿದ್ದುದರಿಂದ, ಅವರ ವಿನಯ, ಧರ್ಮಾಚರಣೆ, ಶಿಸ್ತು, ಸಂಪ್ರದಾಯಪ್ರಿಯತೆಗಳು ಆಚಾರ್ಯರಲ್ಲಿ ಮೈಗೂಡಿದವು.

ವಾಣೀವಿಹಾರ ಮಹಾವಿದ್ಯಾಲಯದಲ್ಲಿ ಈಗ ಐವತ್ತು ವಿದ್ಯಾರ್ಥಿಗಳು ಹತ್ತು ಅಧ್ಯಾಪಕರ ಬಳಿ ಅಧ್ಯಯನ ನಡೆಸುತ್ತಿದ್ದಾರೆ. ಭಾರತೀಯ ಪುರಾತನ ಧರ್ಮ, ಸಂಸ್ಕೃತಿ ಸಾಹಿತ್ಯಗಳ ರಕ್ಷಣೆಯೊಂದಿಗೆ ಜನರಲ್ಲಿ ಸಾತ್ವಿಕ ಜಾಗೃತಿಯನ್ನುಂಟು ಮಾಡುವುದು, ಸದಾಚಾರಿಗಳನ್ನಾಗಿ ಮಾಡುವುದು ಮತ್ತು ಪುರಾತನ ಮೌಲ್ಯಗಳನ್ನು ಉಳಿಸಿಕೊಂಡು ಲೌಕಿಕ ವಿದ್ಯೆಗಳನ್ನು ಅಧ್ಯಯನ ಮಾಡುವುದು ಇತ್ಯಾದಿ ಉದ್ದೇಶಗಳೊಂದಿಗೆ ಆರಂಭವಾದ ಈ ಸಂಸ್ಕೃತ ಮಹಾವಿದ್ಯಾಲಯವು ಇಂದಿಗೂ ಗುರುಕುಲ ಪದ್ಧತಿಯಲ್ಲಿಯೇ ಶಿಕ್ಷಣ ನೀಡುತ್ತದೆ. ೧೯೩೭ರಿಂದ ೧೯೭೪ರ ವರೆಗೆ ಮಾತುಂಗಾದಲ್ಲಿದ್ದ ಈ ವಿದ್ಯಾಲಯವು ಈಗ ಮುಲುಂಡದ ಶ್ರೀ ಸತ್ಯಧ್ಯಾನ ವಿದ್ಯಾಪೀಠದ ವಿಶಾಲವಾದ ಕಟ್ಟಡದಲ್ಲಿ ಕಾರ್ಯಕ್ರಮ ನಡೆಸುತ್ತಿದೆ. ಇಲ್ಲಿಯ ವರೆಗೆ

ಸಾವಿರಾರು ಜನ ವಿದ್ವಾಂಸರು ಸಿದ್ಧರಾಗಿದ್ದಾರೆ.

ಗೋಪಾಲಾಚಾರ್ಯರಿಗೆ ಪಂಡಿತರಾಜ, ನ್ಯಾಯವೇತ್ತ ವಿದ್ವಾನ್. ಮಹಾಪ್ರಾಜ್ಞ, ಮಹಾ ಮಹೋಪಾಧ್ಯಾಯ ಹೀಗೆ ಪದವಿ ಉಪಾಧಿಗಳ ಸರಮಾಲೆಯೇ ಇದೆ. ಅವರ ವಿದ್ವತ್ತಿಗೆ ಆಕರ್ಷಿತರಾಗಿ ಅನೇಕ ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿದ್ವಾಂಸರು ಆಚಾರ್ಯರ ಬಳಿ ಅಧ್ಯಯನ ಮಾಡಿದ ಉದಾಹರಣೆಗಳಿವೆ.

ರಾಮಕೃಷ್ಣಾಶ್ರಮದ ಪ್ರಧಾನರಾದ ಗಂಗಾ ತೀರ್ಥಾನಂದರು ದೊಡ್ಡ ವಿದ್ವಾಂಸರು. ಅವರು ಸುಮಾರು ಆರು ವರ್ಷ ಆಚಾರ್ಯರ ಹತ್ತಿರ ಭಾಮತಿ, ಅದ್ವೈತ ಸಿದ್ಧಿ ಮೊದಲಾದ ಗ್ರಂಥಗಳನ್ನು ಅಧ್ಯಯನ ಮಾಡಿದರು. ಪ್ರಸಿದ್ಧ ನ್ಯಾಯವಾದಿಗಳು, ಪ್ರಾಧ್ಯಾಪಕರು, ಡಾಕ್ಟರರು, ಬುದ್ಧಿಜೀವಿಗಳು ರಾಜಕಾರಣಿಗಳು, ಉದ್ಯಮದಾರರು ಆಚಾರ್ಯರಲ್ಲಿ ಪಾಠಕ್ಕೆ ಬಂದು ಪ್ರವಚನಗಳನ್ನು ಆಲಿಸುತ್ತಿದ್ದರು. ದಾಮನಗರದಲ್ಲಿರುವ ಸ್ವಾಮಿ ನಾರಾಯಣ ಪಂಥದ ಸಂನ್ಯಾಸಿಗಳು ತಮ್ಮ ಮತ ಮತ್ತು ರಾಮಾನುಜ ಮತದ ಅಧ್ಯಯನ ಮಾಡಲು ಆಚಾರ್ಯರಲ್ಲಿ ಬರುತ್ತಿದ್ದರು. ಫ್ರಾನ್ಸ್, ಅಮೇರಿಕ, ಜರ್ಮನಿಯಿಂದ ಅನೇಕ ವಿದ್ವಾಂಸರು ವಿದ್ಯಾಲಯಕ್ಕೆ ಭೇಟ್ಟಿ ನೀಡಿ ಆಚಾರ್ಯರ ಪಾಂಡಿತ್ಯದ ಅನುಭವ ಪಡೆದಿದ್ದಾರೆ. ವಾಣೀವಿಹಾರ ಸಂಸ್ಕೃತ–ವಿದ್ಯಾಲಯವು ಅಂತಾರಾಷ್ಟ್ರೀಯ ತತ್ವಜ್ಞಾನದ ಕೇಂದ್ರವೆನಿಸಿದೆ.

ಭಾರತದಲ್ಲಿಯೇ ವೈಶಿಷ್ಟ್ಯಪೂರ್ಣವಾದದ್ದು ಈ ಮಹಾವಿದ್ಯಾಲಯದ ಗ್ರಂಥಾಲಯ. ಗೋಪಾಲಾಚಾರ್ಯರು ಸಮಗ್ರ ಸಂಪಾದನೆಯನ್ನು ಈ ಅಪೂರ್ವ ಗ್ರಂಥಾಲಯವನ್ನು ರೂಪಿಸುವಲ್ಲಿ ವಿನಿಯೋಗಿಸಿದ್ದಾರೆ. ತಾಮ್ರಪತ್ರ–ಹಸ್ತಲಿಖಿತ ಗ್ರಂಥಗಳು ಇಲ್ಲಿ ಪರಿಚಯವಾಗಿವೆ. ವೇದಾಂತ, ನ್ಯಾಯ, ವ್ಯಾಕರಣ, ಪುರಾಣ ಹಾಗೂ ಧರ್ಮಶಾಸ್ತ್ರಗಳ ಪ್ರಾಚೀನ ಹಸ್ತಲಿಖಿತ ಗ್ರಂಥಗಳನ್ನು ಸಂಗ್ರಹಿಸಿ, ಅವುಗಳನ್ನು ಸಂಶೋಧಿಸಿ, ಪರಿಷ್ಕರಿಸಿ ಪಂಡಿತರಿಂದ ಚೆನ್ನಾಗಿ ಬರೆಯಿಸಿಟ್ಟಿದ್ದಾರೆ. ಇಲ್ಲಿ ಸಂಗ್ರಹಿತವಾದ ಮುದ್ರಿತ ಗ್ರಂಥಗಳ ಸಂಖ್ಯೆಯೂ ಹಿರಿದು. ಎಲ್ಲ ಭಾಷೆಗಳಲ್ಲಿ ಪ್ರಕಟವಾದ ಮಧ್ವ ಮತದ ಗ್ರಂಥಗಳ ಸಂಗ್ರಹವೂ ಇಲ್ಲಿದೆ. ಅದ್ವೈತ, ವಿಶಿಷ್ಟಾದ್ವೈತ, ನಿಂಬಾರ್ಕ, ವಲ್ಲಭ, ರಾಮಾನಂದ, ಚೈತನ್ಯ ಮೊದಲಾದ ಎಲ್ಲ ವೈದಿಕ ವೇದಾಂತಗಳ ಸಮಗ್ರ ಗ್ರಂಥಗಳು ಇಲ್ಲಿವೆ. ಪ್ರತಿಯೊಂದು ವೇದಾಂತದ ಪರಿಪೂರ್ಣ ಜ್ಞಾನಕ್ಕೆ ಬೇಕಾದ ಎಲ್ಲ ಪುಸ್ತಕಗಳ ರಾಶಿಯೇ ಇಲ್ಲಿದೆ. ಜೈನ ಮತದ ಸಂಸ್ಕೃತ–ಪ್ರಾಕೃತ ಭಾಷೆಯ ಗ್ರಂಥಗಳೂ ಬೌದ್ಧ ಮತದ ಸಂಸ್ಕೃತ ಪಾಲೀ ಭಾಷೆಯ ಪುಸ್ತಕಗಳೂ ಹೇರಳವಾಗಿವೆ. ಸಂಸ್ಕೃತ ಭಾಷೆಯ ನಾಟಕ ಕಾವ್ಯ, ಅಲಂಕಾರ, ವಿಮರ್ಶೆ, ಇತಿಹಾಸ ಪ್ರಾಚೀನ ನ್ಯಾಯ, ನವೀನ ನ್ಯಾಯ ಹೀಗೆ ವಿವಿಧ ಪ್ರಕಾರದ ಗ್ರಂಥರಾಶಿ ಇಲ್ಲಿದೆ. ಗ್ರೀಸ್, ಜರ್ಮನ್, ಈಜಿಪ್ಟ್, ಜಪಾನ್, ಇಂಗ್ಲೆಂಡ ಮೊದಲಾದ ದೇಶಗಳಲ್ಲಿಯ ಎಲ್ಲ ತತ್ವಜ್ಞಾನಗಳ ಗ್ರಂಥ ಸಂಗ್ರಹವನ್ನು ಇಲ್ಲಿ ಕಾಣಬಹುದು. ಪಾಶ್ಚಾತ್ಯ ತತ್ವಜ್ಞಾನದ ಅಪೂರ್ವ ಹಾಗೂ ಸಮಗ್ರ ಪರಿಚಯವನ್ನು ಇಲ್ಲಿ ಮಾಡಿಕೊಳ್ಳಬಹುದು. ಜರ್ಮನ್ ಲ್ಯಾಟಿನ್ ದೊಂದಿಗೆ ಭಾರತದ ಬಹುತೇಕ ಭಾಷೆಗಳ ಎಲ್ಲ ವಿಷಯಗಳ ಶಬ್ದಕೋಶಗಳ ಸಂಗ್ರಹ ಇಲ್ಲಿಯ ವಿಶೇಷ. ಆಯುರ್ವೇದ, ಅಲೋಪಥಿ, ನೇಚರೋಪಥಿ, ಹೋಮಿಯೋಪಥಿ, ಮನೋವಿಜ್ಞಾನ, ಖಗೋಳಶಾಸ್ತ್ರ, ವಿಜ್ಞಾನ, ಬೀಜಗಣಿತ, ಪದಾರ್ಥವಿಜ್ಞಾನ ಜ್ಯೋತಿಷ್ಯ ಶಾಸ್ತ್ರ ಹೀಗೆ ಸಾವಿರಾರು ಪುಸ್ತಕಗಳ ಸಂಚಯವಿದೆ. ಹಿಂದಿ, ಮರಾಠಿ, ಭಾಷೆಗಳ ಧಾರ್ಮಿಕ ಸಾಹಿತ್ಯ, ಸಂತ ಸಾಹಿತ್ಯ, ಸಾಹಿತ್ಯಿಕ ಗ್ರಂಥಗಳು; ವಿಮರ್ಶೆ, ಕಾವ್ಯ, ನಾಟಕ ತುಳಸೀ, ಸೂರ ಸಾಹಿತ್ಯ ಕೃತಿಗಳು ಸಾಕಷ್ಟಿವೆ. ಕನ್ನಡವಂತೂ ವಿದ್ಯಾಲಯದ ಮಾತೃಭಾಷೆ. ಕನ್ನಡದ ಪ್ರಾಚೀನ ಸಾಹಿತ್ಯ, ನವೀನ ಸಾಹಿತ್ಯ

ವಚನ ಸಾಹಿತ್ಯ, ನಾಟಕ, ಕವಿತೆ, ಪ್ರಬಂಧ, ಆತ್ಮಚರಿತ್ರೆ, ಪಠ್ಯಾಸ, ವಿವರಣೆ, ಎಲ್ಲ ಪುಸ್ತಕಗಳ ವಿಪುಲ ರಾಶಿಯನ್ನೇ ನಾವು ಕಾಣಬಹುದು. ವೀರಶೈವ, ಜೈನ ಸಾಹಿತ್ಯ ದಾಸ ಸಾಹಿತ್ಯದ ಗ್ರಂಥಗಳು ಹೀಗೆ ಕನ್ನಡ ಗ್ರಂಥಗಳಿಗಾಗಿಯೇ ಹತ್ತು ಕಪಾಟುಗಳು ಮೀಸಲಾಗಿವೆ. ಐದು ಲಕ್ಷಕ್ಕೂ ಮಿಕ್ಕಿ ಗ್ರಂಥಗಳಿರುವ ಈ ಗ್ರಂಥಾಲಯದ ಬೆಲೆ ಇಂದು ಐವತ್ತು ಲಕ್ಷ ರೂಪಾಯಿಗಳಿಗೂ ಮಿಕ್ಕ ಬಹುದು.

೧೯೫೭ರಲ್ಲಿ ಗೋಪಾಲಾಚಾರ್ಯರು ತಮ್ಮ ಮುಖ್ಯ ಗುರುಗಳಾದ ಶ್ರೀ ಸತ್ಯಧ್ಯಾನರ ಸ್ಮಾರಕವಾಗಿ ಒಂದು ಸಾರ್ವಜನಿಕ ಸಂಸ್ಥೆ ಕಟ್ಟಲು ಯೋಚಿಸಿದರು. ವೈದಿಕ ಪರಂಪರೆ ಉಳಿಯಬೇಕು, ಪಂಡಿತರ ಪರಂಪರೆ ಬೆಳೆಯಬೇಕು. ವಿದ್ಯಾರ್ಥಿಗಳ ಪೋಷಣೆ ಆಗಬೇಕೆಂಬ ಅಪೇಕ್ಷೆ ಅವರಿಗೆ. ಈ ಯೋಜನೆಯನ್ನು ಮೆಚ್ಚಿಕೊಂಡು ಉತ್ತರಾದಿ ಮಠದ ಶ್ರೀಗಳು ಎರಡೂವರೆ ಲಕ್ಷ ರೂಪಾಯಿಗಳನ್ನು ದಯಪಾಲಿಸಿದರು. ಆಚಾರ್ಯರ ಕರ್ತೃತ್ವ ಶಕ್ತಿ ಧರ್ಮ ನಿಷ್ಠೆ ಸದ್ವಿಚಾರಗಳನ್ನು ಮೆಚ್ಚಿಕೊಂಡು ಅವರ ಅಭಿಮಾನಿಗಳು ಹಣ ಸಂಗ್ರಹಿಸಿ ಈ ಸಂಸ್ಥೆಯನ್ನು ಬಹು ದೊಡ್ಡದಾಗಿ ಕಟ್ಟಿ ಬೆಳೆಸಿದ್ದಾರೆ. ಸತ್ಯಧ್ಯಾನ ವಿದ್ಯಾಪೀಠದ ಕಟ್ಟಡಗಳ ವೆಚ್ಚ ಇಪ್ಪತ್ತು ಲಕ್ಷಕ್ಕೂ ಮಿಕ್ಕಿದೆ. ಮುಳುಂಡದಲ್ಲಿರುವ ಸತ್ಯಧ್ಯಾನ ವಿದ್ಯಾಪೀಠದಲ್ಲಿ ವಿಶಾಲವಾದ ಸಭಾಗೃಹ, ಅಮೃತ ಶಿಲೆಯ ಗೋಡೆಗಳು. ಅಮೃತ ಶಿಲೆಯಲ್ಲಿ ಐದು ವೃಂದಾವನ ಮಂದಿರಗಳೊಂದಿಗೆ ವಿಶಾಲವಾದ ಪಾಠಶಾಲೆ, ವಿದ್ಯಾರ್ಥಿ ವಸತಿಗೃಹ ವಿಶಾಲವಾದ ಪಾಣಿ ವಿಹಾರ ವಿದ್ಯಾಲಯದ ಗ್ರಂಥಾಲಯ "ಧ್ಯಾನತೀರ್ಥ"ವೆಂಬ ಸಿಹಿ ನೀರಿನ ಬಾವಿ, ತುಳಸೀವನ ಇವುಗಳು ಇಲ್ಲಿಯ ವಿಶೇಷಗಳು.

ಇಲ್ಲಿ ಮಧ್ವಮತದ ಮಹಾಜ್ಞಾನಿಗಳ ಗ್ರಂಥಕಾರರ ಮಹಾಪುರುಷರ ವೃಂದಾವನಗಳಿವೆ. ಗೋಪಾಲಾಚಾರ್ಯರ ವಿದ್ವತ್ತು, ವಿದ್ಯಾಪೀಠದ ಮಹತ್ವವನ್ನು ಗುರುತಿಸಿ ಮುಂಬಯಿ ಮಹಾನಗರ ಪಾಲಿಕೆಯು ಶ್ರೀ ನನಾಲಾಲ, ಮೆಹತಾ ಅವರು ಮೇಯರಾಗಿದ್ದ ಸಮಯದಲ್ಲಿ ವಿದ್ಯಾಪೀಠದ ಬೀದಿಗೆ ಸತ್ಯಧ್ಯಾನ ವಿದ್ಯಾಪೀಠ ಮಾರ್ಗ ಎಂದು ನಾಮಕರಣ ಮಾಡಲಾಯಿತು. ವಿದ್ಯಾಪೀಠದಲ್ಲಿ ೪೫ ವಿದ್ಯಾರ್ಥಿಗಳು ಧರ್ಮ ಸಿದ್ಧಾಂತಕ್ಕಾಗಿ ದೀಕ್ಷೆ ತೊಟ್ಟು ಜೀವನ ಮೀಸಲಿಡಿಸಿ ಇಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಗೋಪಾಲಾಚಾರ್ಯರು ವಿದ್ಯಾಪೀಠದ ಸಂಸ್ಥಾಪಕರು ಹಾಗೂ ಕುಲಪತಿಗಳು ಆಗಿದ್ದು ಅವರ ಪುತ್ರ ವಿದ್ಯಾಸಿಂಹರು ಉಪ ಕುಲಪತಿಗಳು. ವಿದ್ಯಾಪೀಠವು ಮಧ್ವ ಮತಕ್ಕೆ ಸಂಬಂಧಿಸಿದ ಸುಮಾರು ೩೦ ಅಪೂರ್ವ ಗ್ರಂಥಗಳನ್ನು ಪ್ರಕಟಿಸಿದೆ. ಬೆಳಗಾವಿಯಲ್ಲಿ ಸತ್ಯಧ್ಯಾನ ವಿದ್ಯಾ ಪೀಠದ ಒಂದು ಶಾಖೆ ಕೆಲಸ ಮಾಡುತ್ತಿದ್ದೆ. ಕಳೆದ ವರುಷ ಸತ್ಯಧ್ಯಾನ ವಿದ್ಯಾಪೀಠವು ತನ್ನ ಬೆಳ್ಳಿಹಬ್ಬ ಮಹೋತ್ಸವವನ್ನು ತುಂಬ ಸಡಗರದಿಂದ ಆಚರಿಸಿದೆ.


೧೯೦೯ರಲ್ಲಿ ಬೆಳಗಾವಿ ಜಿಲ್ಲೆಯ ಐನಾಪುರದಲ್ಲಿ ಗೋಪಾಲಾಚಾರ್ಯರು ಜನಿಸಿದರು. ಖ್ಯಾತ ಜ್ಯೋತಿಷಶಾಸ್ತ್ರ ಪಂಡಿತ ರಾಮಾಚಾರ್ಯ ಹಾಗೂ ಸೀತಾಬಾಯಿ ದಂಪತಿಗಳ ವರ ಪುತ್ರನಾಗಿ ಜನಿಸಿದ ಗೋಪಾಲಾಚಾರ್ಯರಿಗೆ ನಾಲ್ಕರು ಸಹೋದರರು, ನಾಲ್ವರು ಸಹೋದರಿಯರು. ಬಾಲ್ಯದಲ್ಲಿಯೇ ಹರಿಕಥೆ ಕೀರ್ತನೆ, ಪುರಾಣಗಳಲ್ಲಿ ವಿಶೇಷ ಆಸಕ್ತಿ. ಮ್ಯಾಟ್ರಿಕ್ ಪರೀಕ್ಷೆ ಪಾಸಾಗುವುದರೊಂದಿಗೆ ಸಾಹಿತ್ಯ, ವೇದಾಂತ, ವ್ಯಾಕರಣಗಳ ಅಧ್ಯಯನ ಮುಂದೆ ಸಾಂಗ್ಲಿಯಲ್ಲಿ ಕಾಲೇಜು ವ್ಯಾಸಂಗ. ತೀರ ಬಡತನದಲ್ಲಿಯೇ ಅವರು ಶಾಲೆ ಕಾಲೇಜುಗಳ ಅಭ್ಯಾಸವನ್ನು ಮುಂದುವರಿಸಿ ಬಿ. ಎ. ಪದವಿ ಪಡೆದರು. ಖ್ಯಾತ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ದೇವಧರ, ದ್ರವಿಡ ಅವರ ಮೆಚ್ಚುಗೆಯನ್ನು ಆಚಾರ್ಯರು ಗಳಿಸಿದರು. ಬಿ.ಎ. ಪದವಿ ಗಳಿಸಿ ಆಚಾರ್ಯರು ಉತ್ತರಾದಿ

ಮಠದಲ್ಲಿ ಸಂಸ್ಕೃತ ವೇದಾಧ್ಯಯನ, ವ್ಯಾಕರಣ ಮೀಮಾಂಸೆ, ನ್ಯಾಯಶಾಸ್ತ್ರಗಳಲ್ಲಿ ಅಧ್ಯಯನ ನಡೆಸಿ ಪಾರಂಗತರಾಗಿ ಶ್ರೀ ಸತ್ಯಧ್ಯಾನ ಶ್ರೀಗಳ ಅಚ್ಚುಮೆಚ್ಚಿನ ಶಿಷ್ಯರೆನಿಸಿದರು. ಮುಂದೆ ಸಂಸ್ಕೃತ ವಿಷಯದಲ್ಲಿ ಎಂ.ಎ. ಪದವಿಯನ್ನು ಸಹ ಪಡೆದರು. ಅವರು ಹಲವು ಗ್ರಂಥಗಳನ್ನು ಬರೆದು ಪ್ರಕಟಿಸಿದ್ದಾರೆ. ಅನೇಕ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಮಾರ್ಗದ ದಾದರಿನಲ್ಲಿ ಮೂವತ್ತು ವರುಷಗಳ ಹಿಂದೆ ಸ್ಥಾಪಿಸಿದ ಅಖಿಲ ಭಾರತ ಕೀರ್ತನೆ ಸಂಸ್ಥೆ, ಉತ್ತರಾದಿ ಮಠದ ದೀನ ಸಹಾಯ ನಿಧಿ, ಮುಂಬಯಿ ಕನ್ನಡ ಸಂಘ, ರಾಷ್ಟ್ರೀಯ ಕನ್ನಡ ಶಿಕ್ಷಣ ಶಾಖೆ, ಕರ್ನಾಟಕ ಪ್ರಾಗತಿಕ ಶಿಕ್ಷಣ ಸಂಸ್ಥೆ ಮುಂತಾದ ಸಂಸ್ಥೆಗಳು ಹುಟ್ಟಿ ಬೆಳೆಯಲು ಆಚಾರ್ಯರು ಕಾರಣರಾದರು. ದಿಲ್ಲಿ, ಬೆಂಗಳೂರು, ಕಲಕತ್ತಾ, ಹುಬ್ಬಳ್ಳಿ, ಪಂಢರಪುರ, ವಿಜಾಪುರ ಹೀಗೆ ಹಲವು ಸ್ಥಳಗಳಲ್ಲಿ ಜ್ಞಾನಸತ್ರಗಳನ್ನು ಜರುಗಿಸಿ ತಮ್ಮ ಜ್ಞಾನನಿಧಿಯನ್ನು ಜನ ಸಾಮಾನ್ಯರಿಗೆ ಕೊಡಮಾಡಿದ್ದಾರೆ. ಭಾರತೀಯ ಸಂವಿಧಾನದ ಹಿಂದು ಕೋಡ್ ಬಿಲ್ ತಯಾರಿಕೆಗೆ ಇವರು ಸದಸ್ಯರಾಗಿದ್ದರು.

ಮುಂಬಯಿಯ ಎಲ್ಲ ಕನ್ನಡ ಸಂಘ ಸಂಸ್ಥೆಗಳೊಂದಿಗೆ ಕನಿಷ್ಠ ಸಂಬಂಧವಿರಿಸಿ ಕೊಂಡಿದ್ದರು. ಆಚಾರ್ಯರ ಅಭಿಮಾನಿಗಳ ಬಳಗ ದೊಡ್ಡದು. ದಿ. ಬಳವಂತರಾವ ದಾತಾರ, ಎಸ್. ವಿ. ಕೃಷ್ಣಮೂರ್ತಿರಾವ್, ಹುಕ್ಕೇರಿಕರ ರಾಮರಾವ್, ಡಿ.ವಿ.ಗುಂಡಪ್ಪ ಅನಕೃ, ವೈಕುಂಠ ಬಾಳಿಗಾ, ನಿಜಲಿಂಗಪ್ಪ, ವೀರೇಂದ್ರ ಪಾಟೀಲ ರಂಗರಾವ್ ದಿವಾಕರ, ಮೋಹನಲಾಲ ಸುಖಾಡಿಯಾ, ಆಲೂರ ವೆಂಕಟರಾವ, ಮುಗಳಿ. ಗೋಕಾಕ, ಟಿ. ಎ. ಪೈ, ಮಾಸ್ತಿ, ಬೇಂದ್ರೆ ಧೀರೂಭಾಯಿ ಅಂಬಾನಿ, ಸೋಮಯ್ಯ, ಗಜಾಧರ ಸೋಮಾನಿ, ಮಲ್ಲರಾಜ ಅರಸ, ಲೋಕೂರು ನಾರಾಯಣರಾವ್, ಆರ್. ವಿ. ಜಾಗೀರದಾರ, ಗಂಗಾಧರರಾವ್ ದೇಶಪಾಂಡೆ, ಕೌಜಲಗಿ, ಜಯಚಾಮರಾಜ ಒಡೆಯರ್ ಆರ್. ಡಿ. ಚಾರ್, ಬಿ. ವಿ. ಎಸ್. ಅಯ್ಯಂಗಾರ, ಕೃಷ್ಣಸ್ವಾಮಿ ರಾಘವೇಂದ್ರರಾವ್, ಆರ್. ವಿ. ಮೂರ್ತಿ ಹೀಗೆ ವಿವಿಧ ಕ್ಷೇತ್ರಗಳಲ್ಲಿಯ ಖ್ಯಾತರು ಆಚಾರ್ಯರ ಹಿತೈಷಿಗಳು. ಸಿರಿವಂತಿಕೆ ಆಚಾರ್ಯರನ್ನು ಎಂದೂ ಮೋಹಿಸಲಿಲ್ಲ. ಹಿಂದೆ ದಿ. ಕಬ್ಬೂರರು ಆಚಾರ್ಯರಿಗೆ ಎರಡು ಲಕ್ಷ ರೂಪಾಯಿ ದಾನ ನೀಡಲು ಬಂದುದನ್ನು ಕಡು ಬಡತನದಲ್ಲಿದ್ದ ಆಚಾರ್ಯರು ನಿರಾಕರಿಸಿದರು. ಅಂತೆಯೇ, ವಿದ್ಯಾಪೀಠ ರಾಜ್ಯ ಸರಕಾರ ಕೇಂದ್ರ ಸರಕಾರ ವಿಶ್ವವಿದ್ಯಾಲಯ ಆರ್ಥಿಕ ನಿಯೋಗಗಳ ಧನ ಸಹಾಯವನ್ನು ಅವರು ಯಾಚಿಸಲಿಲ್ಲ. ಯಾವ ಶರತ್ತೂ ಇಲ್ಲದೆ ಸಾರ್ವಜನಿಕರಿಂದ ಬಂದ ಕಿರುಕಾಣಿಕೆಗಳಿಂದಲೇ ಆಚಾರ್ಯರು ಈ ಸಂಸ್ಥೆಯನ್ನು ಕಟ್ಟಿದರು, ಬೆಳೆಸಿದರು. ತಮ್ಮ ಕರ್ತೃತ್ವ ಶಕ್ತಿ ಕಾರ್ಯ ನಿಷ್ಠೆ, ಸರಳತೆ ಆದರ್ಶಗಳಿಂದ ಎಲ್ಲರಿಗೂ ಬೇಕಾದವರಾಗಿ ಆಚಾರ್ಯರು ಒಬ್ಬ ವ್ಯಕ್ತಿಯಲ್ಲ, ಸಂಸ್ಥೆಯಾಗಿ ಬೆಳೆದು ಬಂದರು. ಅವರ ಕೈಯಲ್ಲಿ ವಿದ್ಯೆ ಕಲಿತ ಅನೇಕ ವಿದ್ಯಾರ್ಥಿಗಳು ಇಂದು ದೇಶದಲ್ಲಿ ಖ್ಯಾತ ವಿದ್ವಾಂಸರಾಗಿದ್ದಾರೆ. ಆಚಾರ್ಯರ ನಿಧನವು ಮುಂಬಯಿಯ ಕನ್ನಡಿಗರಿಗೆ ವಿಶೇಷವಾಗಿ ಭಾರತೀಯ ಸಂಸ್ಕೃತಿ ಪರಂಪರೆಗಳಿಗೆ ತುಂಬಿ ಬಾರದ ಹಾನಿಯೆಂದರೆ ತಪ್ಪಾಗಲಾರದು.



ಕೆಲವರು ದೊಡ್ಡವರೆನಿಸಿಕೊಳ್ಳುತ್ತಾರಲ್ಲ- ಅದರ ಕಾರಣವೇನೆಂದರೆ ಅವರೊಂದಿಗಿರುವವರೆಲ್ಲ ಅವರಿಗಿಂತ ಚಿಕ್ಕವರಾಗಿರುವುದು. —ಡಾ. ಜಾನ್ಸನ್


ಬರುತಿಹುದು ಸಂಪತ್ಭರಿತ ಹೊಸ ವರ್ಷ
ತರುತಿಹುದು ನಿಮ್ಮೆಲ್ಲ
ಆಶಯಗಳಿಗೆ ಹರ್ಷ
KSL/278
5 ಮೊದಲನೆಯ
ಬಹುಮಾನಗಳು
ರೂ.1,00,000
ರೂ 38,70,000 ಮೊತ್ತದ
2,00,051 ನಗದು
ಬಹುಮಾನಗಳು
ರೂ. 20 ಲಕ್ಷಗಳು
ಡ್ರಾ
11-1-85
ಪ್ರತಿ
ಟಿಕೆಟ್ಟಿಗೆ
ರೂ. 2
ಹೊಸ ವರ್ಷದ ಬಂಪರ್ ಡ್ರಾ
ಕರ್ನಾಟಕ
ರಾಜ್ಯ ಲಾಟರಿ

ದಕ್ಷಿಣ ಕನ್ನಡ ಜಿಲ್ಲೆಯ ವಿಶಿಷ್ಟ ಸೇವೆ

ಗಿರಿಜನರ ಗೋಂದೋಳು

ಮೋಹನ ಸೋನ

ದಕ್ಷಿಣ ಕನ್ನಡದ ಗಿರಿಜನರೊಡನೆಸಿನ ಪುರಾತಿ ಮೂಲದ ವೃಥಕಾಯ ದುಡಿಮೆಗಾರರ ಬದುಕಿನೊಳಗೆ ಶಕ್ತಿಯ ಆರಾಧನೆಯಾಗಿ ಬೆಳೆದು ಬಂದ ಜನಪದ ಲವಲವಿಕೆಯುಳ್ಳ ನಂಬುಗೆಯೇ 'ಗೋಂದೋಳು.' ಗೋಂದೋಳು ಎಂಬುದು ಅಮ್ಮ, ತಾಯಿ, ಬಾಯಿ (ಮರಾಠಿಯಲ್ಲಿ) ದುರ್ಗೆ ಎಂಬುವೇ ಹೆಸರುಗಳಿಂದ ಗುರುತಿಸಲ್ಪಡುವ ಮಹಾಶಕ್ತಿಯ ಪ್ರತೀಕ.

ಉತ್ತರ ಕರ್ನಾಟಕದಲ್ಲಿ ಕಂಡುಬರುವ ವೃತ್ತಿ ಗಾಯಕರಾದ ಗೊಂದಲಿಗರಿಗೂ ಅವರ ಗೊಂದಲಿಗರ ಮೇಳಕ್ಕೂ ಅಲ್ಪ ಸ್ವಲ್ಪ ಸಂಬಂಧಗಳು ಕಂಡುಬಂದರೂ ಆರಾಧನೆಯಲ್ಲಿ ವ್ಯತಿರಿಕ್ತ ಅಂಶಗಳನ್ನು ಕಾಣಬಹುದಾದ್ದರಿಂದ ಗೊಂದಲವೆಬ್ಬಿಸುವ ಅವರ ಕ್ರಿಯೆಗಳನ್ನು ಗೋಂದೋಳಿನ ಜೊತೆ ಸರಿದೂಗಿಸಲಾಗುವುದಿಲ್ಲ. ಉತ್ತರ ಕನ್ನಡದ ಕಾಡಾಡಿಗಳಾದ 'ಗೊಂಡ'ರಲ್ಲಿ ಕಾಣುವ ಮಂಡಲ ಕುಣಿತಕ್ಕೂ ಗೋಂದೋಳಿನ ಮಂಡಲಕ್ಕೂ ಸಾಮ್ಯಗಳಿವೆ. ಇದೇ ಪ್ರಕಾರವನ್ನು ಗೋಂದೋಳು ಎಂದು ಗುರುತಿಸುವ ತಪ್ಪು ಗ್ರಹಿಕೆಗಳೂ ಇಲ್ಲದಿಲ್ಲ. ಈ ಮಂಡಲ ಪೂಜೆಯಲ್ಲಿ ಕಲಾವಿದರು ವೇಷ ಭೂಷಣಗಳನ್ನು ತೊಡುತ್ತಾರೆ. ದಕ್ಷಿಣ ಕನ್ನಡದಲ್ಲೇ ಯಕ್ಷಗಾನದ ಪ್ರಭಾವಕ್ಕೊಳಗಾಗಿ ಅತ್ತ ಗೋಂದೋಳು ಇತ್ತ ಮಂಡಲವೆನ್ನಲಾರದ ಪೂಜಾ ಕುಣಿತಗಳನ್ನು ಗೋಂದೋಳು ಎಂದು ಪತ್ರಿಕೆಗಳಿಂದ ಗುರುತಿಸಲ್ಪಟ್ಟದ್ದೂ ಇದೆ. ಆದರೆ ವಸ್ತುಸ್ಥಿತಿ ಹಾಗಲ್ಲ.

ಮಂಡ್ಯ ಜಿಲ್ಲೆಯೊಳಗೆ ಕಂಡು ಬರುವ 'ದೀವಟಿಗೆ ಸೇವೆ' ಯನ್ನು ಇಲ್ಲಿ ಹೇಳದೆ ಹೋದರೆ ಗೋಂದೋಳಿಗೆ ಅಪಚಾರವಾದೀತು. ತ್ರಿಶೂಲಾಕಾರದ ಪಂಜುಗಳನ್ನು ಉರಿಸಿ 'ತಿರುಪತಿ ವೆಂಕಟರಮಣನಿಗೆ ಗೋವಿಂದ' ಎನ್ನುವ ಅವರದ್ದು ಗಿರಿಜನ ವರ್ಗದ ಆರಾಧನೆಯಂತಲ್ಲ. ಗೋಂದೋಳಿಗೆ ಅವರದ್ದೇ ಆದ ಶೂದ್ರಕಲ್ಪನೆಗಳಿವೆ. ಆ ವರ್ಗಕ್ಕೆ ಅದು ಪವಿತ್ರತೆ, ವೈದಿಕ ಸಂಪ್ರದಾಯಗಳ ದುರ್ಗೆಯ ಕುಂಬಳ ಪೂಜೆಯನ್ನು ಆರಾಧನೆಯ ಹಿನ್ನೆಲೆಯಲ್ಲಿ ಅವರು ಹೀಗಳೆಯುತ್ತಾರೆ. ಕೊಡಗಿನಲ್ಲಿ ಅಪರೂಪಕ್ಕೆ ಕಂಡು ಬರುವ 'ವೀರಭದ್ರನ ಕುಣಿತ'ದಲ್ಲಿನ ಸೂರ್ಯ ಕಿರಣವನ್ನು ಹೋಲುವ ಪಂಜಿನಾಟವನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ಈ ಎಲ್ಲಾ ಮೂಲಗಳತ್ತ ದಿಟ್ಟ ದೀವಿಗೆ ಹಿಡಿದರೆ ಗಿರಿಜನರ ಗೋಂದೋಳಿನ ವೈಶಿಷ್ಟ್ಯಗಳ ಅರಿವಾಗಬಲ್ಲದು.

ಊರಿಗೆ ಮಾರಿ ಬಂದಾಗ ಕುಟುಂಬಕ್ಕೆ ದಾರಿದ್ರ್ಯವೆದುರಾದಾಗ 'ಹರಕೆಯು ರೂಪದಲ್ಲಿ 'ಗೊಂದೋಳು ಒಪ್ಪಿಸುತ್ತೇನೆ' ಎಂದು ಹಿರಿಯಾತ ಅಂದುಕೊಳ್ಳುತ್ತಾನೆ. ಹರಕೆಯುಲ್ಲಿ ಜೋಡು ಹಂದಿ ಇಲ್ಲವೆ ಜೋಡು ಕೋಳಿಗಳ ಬಲಿಯನ್ನು ಸಾರುತ್ತಾನೆ. ಈ ಜೋಡು ಪದ್ಧತಿಯಲ್ಲಿ 'ಗಂಡು-ಹೆಣ್ಣು' ಎಂಬ ಆಂತರಿಕ ಕಲ್ಪನೆಯೂ ಇರುತ್ತದೆ. ತೀರಾ ಬಡವರಾದರೆ 'ಗಂಡುಬಲಿ' ಯನ್ನಷ್ಟೇ ಕೊಟ್ಟು ತೃಪ್ತಿಪಡಿಸುತ್ತಾನೆ.

ಇದು ಗೋಂದೋಳಿಗೆ ಪೀಠಿಕೆಯಾದರೆ ಅದರ ಹಿನ್ನೆಲೆಯಲ್ಲಿ 'ಅಂಗರಪೂಜೆ' ಎಂಬ ಸಣ್ಣ ಮಟ್ಟಿನ ಕ್ರಿಯೆಯೂ ಇರುತ್ತದೆ. ಇದಕ್ಕಾದರೆ ಜೋಡು ಕೋಳಿ ಬಲಿ ಸಾಕಾಗುತ್ತದೆ. ಅದು ಹುಂಜ, ಹೇಂಟೆಯಾಗಿರಲೇಬೇಕು. ಹೀಗೆ ಮೊದಲ್ಗೊಂಡು ಪೀಠಿಕೆ ಗೊತ್ತಾದ ದಿನಕ್ಕೆ ವಸ್ತು ಜೋಡಣೆಯನ್ನು ಮಾಡತೊಡಗುತ್ತದೆ. ರಾತ್ರಿ ಗೋಂದೋಳು ಎಂದಾದರೆ ಕುಟುಂಬದ ಯಜಮಾನನ ಹೇಳಿಕೆಯಂತೆ ವಿಧಿವಿಧಾನಗಳಿಗಾಗಿ ಸಿದ್ಧ ಪೂಜಾರಿಗಳೂ ಸೇರಿದ ಹಾಗೆ ನೆಂಟರಿಷ್ಟರು ಹಿಂದಿನ ಮಧ್ಯಾಹ್ನದ ಹೊತ್ತಿಗೇ ನೆರೆಯುತ್ತಾರೆ. ಮಧ್ಯಾಹ್ನ, ಮುಖ್ಯ ಪೂಜಾರಿ (ಗಿರಿಜನ ವರ್ಗದವನೇ) ಉಳಿದ ನಾಲ್ವರಿಗೆ ನಡುಮನೆಯಲ್ಲಿ ಎಣ್ಣೆ ಕೊಡುತ್ತಾನೆ; ತಾನೂ ತೆಗೆದುಕೊಳ್ಳುತ್ತಾನೆ. (ಕೆಲವೆಡೆ ಕುಟುಂಬದ ಹಿರಿಯನೂ, ಪೂಜಾರಿಗಳಲ್ಲೊಬ್ಬನಾಗಿರುತ್ತಾನೆ.) ಸ್ನಾನ ಮುಗಿಸಿ ಬಂದು ಗದ್ದುಗೆ ನಿರ್ಮಿಸುತ್ತಾರೆ. ಗದ್ದುಗೆ ಎಂದರೆ 'ಮಂಡಲ' ಎಂದರ್ಥ. ಬಾಳೆ ಎಲೆಯ ತುದಿಯನ್ನು ಪೂರ್ವಕ್ಕಿಟ್ಟು ಅದರ ಮೇಲೆ ಐದು ಕುಡ್ತೆ ಅಕ್ಕಿ ಸುರುವಿ, ಎಲೆ ಅಡಿಕೆ ಇಟ್ಟು ನಡುವೆ ಹಾಲು, ಸಕ್ಕರೆ ಹಣ್ಣು ತುಂಬಿದ ಗಿಂಡಿಯಿಡುತ್ತಾರೆ. ಗಿಂಡಿಯ ಮೇಲೆ ತೆಂಗಿನಕಾಯಿ ಅದರ ಸುತ್ತ ಪಾಂದೋಳಿನಿಂದ (ತೆಂಗಿನ ದಂಟಿನ ನಾರು) ಕೇಪಳ, ಹಿಂಗಾರ ಇನ್ನಿತರ ಹೂಗಳಿಂದ ನೇಯ್ದ ಪ್ರಭಾವಳಿಯನ್ನು ಸಿದ್ಧಗೊಳಿಸಿ ಮೇಲ್ಗಡೆ ಬೆಳ್ಳಿ ಕಳಸವಿಡುತ್ತಾನೆ. ಕಳಶ ಮೂರು ಅಥವಾ ಐದು ಮುಗುಳಿನಿಂದಾದುದಾಗಿರಬೇಕು. ಗದ್ದುಗೆಯ ಸುತ್ತ ಅಕ್ಕಿಯಿಂದ ಏಳು ಸುತ್ತಿನ ಕೋಟೆ ಬರೆದು ಅದರೊಳಗೆ ಅಕ್ಕಿಯಿಂದಲೇ ತ್ರಿಶೂಲ, ಸರ್ಪ, ನಂದಿಯ ಚಿತ್ರವೂ ಬರೆಯಲ್ಪಡುತ್ತದೆ. ಇದು ಅಮ್ಮನವರ ಒಂದು ಕಲ್ಪನೆ.

ಇಷ್ಟಾದ ಬಳಿಕ ಆ ದಿನ ಬಲಿ ಕೊಡಬೇಕಾದ ಹಂದಿ ಕೋಳಿಗಳ ಕೈಕಾಲು ತೊಳೆದು, ಕುಂಕುಮ ಇಟ್ಟು ಹೂ ಹಾಕಿ, ಅವಕ್ಕೆ ಸಿದ್ಧಗೊಳಿಸಿದ ಊಟ ಉಣ ಬಡಿಸುತ್ತಾರೆ. ಇಲ್ಲಿಗೆ ಪೂರ್ವ ಸಿದ್ಧತೆ ಮುಗಿಯುತ್ತದೆಯಾದರೂ ನಂಬುಗೆಗಳ ನಿಜಾಂಶ ಇನ್ನು ಪ್ರಕಟವಾಗುತ್ತದೆ. ಮನೆಯೊಳಗೆ ಪ್ರವೇಶ ಪಡೆಯದ 'ಬೈರವ'ನ ಪೂಜೆಯಾದ ಬಳಿಕವೇ ಮುಂದಿನ ಕಾರ್ಯಕ್ರಮ.

ಬೈರವ ದೊಡ್ಡ ದಡಾರದ (ಸಿಡುಬು) ಸಂಕೇತ. ಆತನಿಗೆ ಹೊಸ್ತಿಲು ಪ್ರವೇಶವೂ ನಿಷಿದ್ಧ. ಅದಕ್ಕೇ ಹೊರಗಿನ ಬಯಲಲ್ಲಿ ಆತನ ಪ್ರತಿಷ್ಠಾಪನೆ. 'ತಾಯಿ' ಆತನ ಸತಿ; ಮಧ್ಯಮ ದಡಾರ (ನೀರು ಕೋಟ್ಲೆ), ಸಣ್ಣ ದಡಾರ (ಕೋರ) ಮಗುವಿಗೆ ಹೋಲಿಕೆ. ಇವರಾರ ತಕರಾರೂ ಬಾರದಿರಲಿ ಅಂತ ಗೊಂದೋಳು ಪ್ರಯೋಗ, ಬೆಂಕಿಯಲ್ಲಿ ಸುಟ್ಟು ಹೊಡೆದೋಡಿಸುವ ಪ್ರಯತ್ನ. ಆ ನಿಟ್ಟಿನಲ್ಲಿ ಬೈರವನಿಗೆ ಹಿರಿಯಸ್ಥಾನ. ಆತನಿಗೆ ಹುರುಳಿ, ಮೀನಿನ ಮುಷ್ಕಳ ಭೋಜನ. ಕೋಳಿ ಬಲಿ ಆದ ಬಳಿಕ ಪೂಜಾರಿಗಳು ಪಾಲ್ಗೊಂಡು ಇನ್ನಿತರರು ಮತ್ತೊಮ್ಮೆ ಸ್ನಾನ ಮುಗಿಸಿ ಗೋಂದೋಳಿಗೆ ಅಣಿಯಾಗುತ್ತಾರೆ.

ಮುಚ್ಚಂಜೆ ಕವಿಯತೊಡಗುತ್ತಿದ್ದಂತೆ ಪೂಜಾರಿಗಳು ಮತ್ತೆ ನಡುಮನೆ ಸೇರುತ್ತಾರೆ. ಬಿಡ್ಲ ಕರೆಯುತ್ತಾರೆ. (ಬಿಡ್ಲ-ಗುರುಹಿರಿಯರು) ದೀಪ, ಕೋಲ್ತಿರಿ (ಸಪೂರ ಕಡ್ಡಿಗೆ ಬಟ್ಟೆ ಸುತ್ತಿ ಎಣ್ಣೆ ಎರೆದು ಉರಿಸುವ ಬತ್ತಿ) ಉರಿಸಿ ಭಜನೆಗೆ ತೊಡಗುತ್ತಾರೆ. ಹಿರಿಯ ಪೂಜಾರಿ ಅಥವಾ ಇತರ ಪೂಜಾರಿಗಳು ಹಂದಿ ಕೋಳಿಗಳ ತಲೆ ಕೊಯ್ದು ಗದ್ದುಗೆಯಲ್ಲಿಡುತ್ತಾರೆ. ಹಂದಿಯ ಬಾಯಿಗೆ ಅದರ ಕಾಲೊಂದನ್ನು ಕಚ್ಚಿಸಿ ಇಟ್ಟರೆ ಕೋಳಿಯ ಬಾಯಲ್ಲಿ ತುಪ್ಪಳವಿರುತ್ತದೆ. ಶರೀರದ ಭಾಗ ಅಡಿಗೆ ಮನೆಗೆ ಸಾಗುತ್ತದೆ.

ಇತ್ತ ಸಿದ್ಧ ಪೂಜಾರಿಗಳೈವರು ಆಗಲೆ ಸಿದ್ಧಗೊಳಿಸಿದ ಪಂಜು ಉರಿಸಿ ಅಂಗಳಕ್ಕಿಳಿಯುತ್ತಾರೆ. ಬಿಗಿಯಾದ ನಡುಪಟ್ಟಿ ಸುತ್ತಿ ತೆರೆದೆದೆಯಲ್ಲಿ ತಾಳಲಯಬದ್ಧ ಪಂಜಿನ ಕುಣಿತ ಸಾಗುತ್ತದೆ. ಹಿರಿಯಾತ ಪಾಡ್ದನ ಹಾಡಿದರೆ ಉಳಿದವರು ಪಲ್ಲವಿ ಹಾಡುತ್ತಾರೆ.

ಲಾಗ್ಯೇಲೊ ಪನಿ ಲಾಗ್ಯೇಲಲೋ ||ಪ||
ಸಾತ್ ದರಿಯಾ ಬಯರ್ ಗೆಲೋ
ಸುಕೇಸುರ್ ದೈತ್ ||ಪ||
ದೈತಾಂಚೆ ಡೋಲೆಕಾಡ್ನ
ಕನ್ನ ಟಗೆರಿವುಲೇ ||ಪ||
ದಾಂತ್ ಕಾಡ್ನ ಪನಿಕೆರಿವುಲಾನಿ
ಪರಶುರಾಮನ್ ||ಪ||
ಅತುಕಾಡ್ನ ದೀಟಿಯ ಕೆರಿವುಲಾನಿ
ಪರಶುರಾಮನ್ ||ಪ||

ಹೀಗೆ ಮುಂದುವರಿಯುತ್ತದೆ. ಕಡಲ ತಡಿಯ ನಿರ್ಮಾತೃ ಪರಶುರಾಮ ಏಳು ಕೋಟಿ ಸುತ್ತಿ ದಾಟಿದಾಗ ದೈತ್ಯರೆದುರಾದರು. ಅವರನ್ನು ಸಂಹರಿಸಿ ಅವರೈದು ಬೆರಳುಗಳಿಂದ ದೊಂದಿ ಮಾಡಿದ (ದೊಂದಿ–ಪಂಜು). ಹಲ್ಲು ಮುರಿದು ಬಾಚಣಿಗೆ ಮಾಡಿದ. ರಕ್ತವನ್ನು ಎಣ್ಣೆಯಂತೆ ಬಳಸಿದ. ಕರುಳನ್ನು ಕಿತ್ತು ಹೂಮಾಲೆಯನ್ನಾಗಿಸಿದ. ಎಲಾ... ಪರಶು ಶಕ್ತಿಯೇ ಕಾಪಾಡು...ಲಾಗ್ಯೆಲೋ ಪನಿ ಲಾಗ್ಯಾಲಲೋ– ಅನ್ನುವ ಪಾಡ್ದನದ ತಿರುಳು ಇದು. ಹಾಡು, ಕುಣಿತ ವೃತ್ತಾಕಾರವಾಗಿ ಸುತ್ತು ಬಳಸುತ್ತಿದ್ದಂತೆ ಇತರ ಜನ್ನನಿಗರೂ ಕಾಲು ಹಾಕುವುದುಂಟು. ಅದು ಪರಾಶಕ್ತಿಯ ಪ್ರಭಾವ ಎಂಬ ನಂಬುಗೆಯೂ ಇದೆ. ಆವೇಶ ಭರಿತ ಕುಣಿತ ತಾರಕಕ್ಕೇರುತ್ತಿದ್ದಂತೆ ಮನೆಯೊಳಗೆ ನುಗ್ಗಿ ಪೂಜಾರಿ ನಲಿಯುತ್ತಾನೆ. ಕುಟುಂಬ ನೆಂಟರಿಷ್ಟರಿಂದ 'ಪೂವೆರಿ' ಯಾಗುತ್ತಾ,(ಹೂ–ಅಕ್ಕಿಗಳನ್ನು ಎಸೆಯುವುದು) ಆತ ಮೈ ತುಂಬಿ ನಡುಗುತ್ತಾ (ದರ್ಶನ ಬರುವುದು ಅನ್ನುತ್ತಾರೆ) ಹೊರಬರುತ್ತಾನೆ. ನೆರೆದವರಿಗೆ ಮನೆ ಮುಂದಿಗೆ ಅಭಯ ಹೇಳುತ್ತಾನೆ, ಸಾಂತ್ವನ ನುಡಿಯುತ್ತಾನೆ. ಆಗಲೇ ಬದುಕಿನ ನಂಬುಗೆಗಳಿಗೆ ಇಂಬು ದೊರೆತು ತೃಪ್ತಿಯ ಉಸಿರು ಹೊರಚೆಲ್ಲುತ್ತದೆ. ಎಲ್ಲರಿಗೂ ಸಮಾಧಾನವಾಗುತ್ತದೆ. ಕೆಲವೊಮ್ಮೆ ಮೈತುಂಬಿದ ಪೂಜಾರಿಗೆ ಕಟ್ಟು ಹೇಳಲಾಗದಿರುವುದರಿಂದ ಮತ್ತಿಬ್ಬರು ದರುಶನ ಹೊಂದಿ (ಬೆಸ ಸಂಖ್ಯೆಗೆ ಪ್ರಾಮುಖ್ಯ) ಮಾತು ಮುಂದುವರಿಸುತ್ತಾರೆ. ಮತ್ತೊಮ್ಮೆ ಪೂವೆರಿ ಬೀಳುತ್ತಾ ಆವೇಶ ಇಳಿಯುತ್ತದೆ. ಜನಮನಗಳಲ್ಲಿ ಬೆಳಗಿದ ಪಂಜು, ಕುಣಿತ, ರಂಜನೆಗಳು ಶಾಶ್ವತವಾಗುತ್ತವೆ. ಮಾರು ಮಾರು ಕುಪ್ಪಳಿಸುತ್ತಾ ಮಾರಿ ಎತ್ತಲೋ ಸಾಗಿರುತ್ತದೆ.

ಗೋಂದೋಳು ಮುಕ್ತಾಯಗೊಳ್ಳುತ್ತದೆ. ಹೂ ಕುಂಕುಮ ವಿತರಣೆ ಗಿಂಡಿ ತೀರ್ಥ ಪಂಚಿಕೆ ಬಳಿಕ ಹಂದಿ ಕೋಳಿ ಮಾಂಸದೂಟ ಸದ್ದಿನ ತೃಪ್ತಿ ಮೇಲ್ಮಂಚಕ್ಕೇರುತ್ತದೆ. ಗದ್ದಿಗೆ ಮೇಲೆ 'ಅಗಳು' ಹಾಕಿರುತ್ತದೆ. ಅಂಗಳದಲ್ಲಿ ಕುಣಿತವಾಗುತ್ತಿದ್ದಂತೆ ಸಿದ್ಧಗೊಳಿಸಿದ ಅಡುಗೆ ನಾಲ್ಕು ಎಲೆಯಲ್ಲಿ 'ಅಗಳು' ರೂಪದಲ್ಲಿ ಬಡಿಸಲ್ಪಟ್ಟು ಕೊನೆಗೆ ಅದನ್ನು ಸರ್ವರಿಗೆ ಹಂಚುತ್ತಾರೆ. ಊಟವಾಗುತ್ತದೆ. ಗದ್ದಿಗೆಯ ಅಕ್ಕಿ ಕಾಯಿ, ಹಂದಿ ತಲೆ, ಕೋಳಿ ತಲೆ, ಪೂಜಾರಿಗಳಿಗೆ ಸಲ್ಲುತ್ತದೆಯಾದರೂ ತಮ್ಮದೇ ಜಾತಿ ಬಾಂಧವರ ಮನೆಯಿಂದ ಅವರದನ್ನು ಕೊಂಡು ಹೋಗುವುದಿಲ್ಲ.

ಈ ರೀತಿ ಗೋದೋಳು ಇತರ ಶೂದ್ರ ಜನಾಂಗಗಳಲ್ಲೂ ಕಂಡುಬರುತ್ತವೆ. ಆದರೆ ಪೂಜಾರಿಗಳು ಗಿರಿಜನರೇ ಆಗಬೇಕು. ಹೀಗೆ ಗೋಂದೋಳು ಗೊಂದಲಿಗರಿಂದ, ಕಾಡು ಗೊಂಡರಿಂದ, ಮಾಂಡ್ಯದೊಕ್ಕಲಿಗರಿಂದ, ಕೊಡಗ [illegible] ದಕ್ಷಿಣ ಕನ್ನಡದ ಗಿರಿಜನರ [illegible] ಶಕ್ತಿಯ ಆರಾಧನೆಯಾಗಿ ಉಳಿದಿದೆ. ವಿಶಿಷ್ಟ ಜನಪದವಾಗಿದೆ.

ವಾಕ್ಯ ವಿಡಂಬನೆ

ಗೌರೀಶ ಕಾಯ್ಕಿಣಿ

ವಾಕ್ಯ ವಿಡಂಬನೆ ಹಲವು ಹಂತಗಳಲ್ಲಿ ಘಟಿಸಬಲ್ಲದು. ವಾಕ್ಯಗಳ ಶಬ್ದಸರಣಿಯಲ್ಲಿ ವಿಪರ್ಯಾಸವಾಗಬಹುದು. ವಾಕ್ಯದ ಅರ್ಥದಲ್ಲಿ ಸಂದಿಗ್ಧತೆ ಉಂಟಾಗಬಹುದು. ವಾಕ್ಯದ ಒಂದು ಭಾಗ, ಅದರ ಉತ್ತರಾರ್ಧ ಅಥವಾ ಪೂರಕ ವಾಕ್ಯಾಂಶ ಇಲ್ಲವೆ ಅಂಗವಾಕ್ಯ ಬಳಕೆಯಲ್ಲಿ ಬಾರದೆ ಹೇಗೋ ಎಂದೋ ಬಿಟ್ಟುಹೋಗಿರಬಹುದು. ಅದರಿಂದ ಎತ್ತಿ ಆಡಿದಾಗೆಲ್ಲ ತಪ್ಪು ಅರ್ಥವನ್ನೋ ಅಭಿಪ್ರಾಯವನ್ನೋ ಕೊಡುತ್ತ ಬಂದಿರಬಹುದು.

ಅಂಥ ಒಂದು ಉದಾಹರಣೆಯನ್ನು ಇಲ್ಲಿ ಗಮನಿಸಬಹುದು. ಕಾವ್ಯವೆಂದರೇನು? ಎಂಬ ಪ್ರಶ್ನೆಗೆ ಅನೇಕ ವಿದ್ವಾಂಸರೂ ವಿಮರ್ಶಕರೂ ತಮಗೆ ಸೂಕ್ತವೆನಿಸಿದ ವ್ಯಾಖ್ಯೆಗಳನ್ನು ಉತ್ತರವಾಗಿ ನೀಡಿದ್ದುಂಟು. ಅವುಗಳಲ್ಲಿ ಹಲವಾರು ಸಾಕಷ್ಟು ಜನಪ್ರಿಯವಾದದ್ದೂ ಉಂಟು. ಅಂಥವುಗಳಲ್ಲಿ ಹಿರಿಯ ಆಂಗ್ಲ ಕವಿ ವಿಲಿಯಂ ವರ್ಡ್ಸ್‌ವರ್ಥ್‌ನ ಒಂದು ವಾಕ್ಯಾಂಶವನ್ನು ಅಲ್ಲಲ್ಲಿ ಆಗಾಗ್ಗೆ ಉದ್ಧರಿಸಲಾಗುತ್ತದೆ.

ಕಾವ್ಯವೆಂದರೆ "Spontaneoues overflow of powerful feelings" ಎಂಬುದೇ ಆ ವಾಕ್ಯಾಂಶ. ೧೮೦೦ರಲ್ಲಿ ವರ್ಡ್ಸ್‌ವರ್ಥ್ ಮತ್ತು ಅವನ ಕವಿಮಿತ್ರ ಕೋಲ್‌ರಿಜ್ ಒಟ್ಟಾಗಿ 'ಲಿರಿಕಲ್ ಬ್ಯಾಲಡ್ಸ್' ಎಂಬ ಹೊಸ ಕಥನ ಕವನಗಳ ಸಂಕಲನವನ್ನು ಪ್ರಕಟಿಸಿ (ಅದು ೧೮೦೨ ರಲ್ಲಿ ಎರಡನೆಯ ಆವೃತ್ತಿಯನ್ನು ಕಂಡಿತು) ಇಂಗ್ಲಿಷ್ ಕಾವ್ಯಪ್ರಪಂಚದಲ್ಲಿ ರೋಮ್ಯಾಂಟಿಕ್ ಯುಗದ ಪ್ರವರ್ತಕರೆನಿಸಿಕೊಂಡರು. ಈ ಚಾರಿತ್ರಿಕ ಸಂಕಲನದ ಪ್ರಸ್ತಾವನೆಯಲ್ಲಿ ಮೇಲೆ ಉದಾಹರಿಸಿದ ವಾಕ್ಯ ಮೊದಲಿಗೆ ಬೆಳಕು ಕಂಡಿತು. ಕಾವ್ಯದ ವ್ಯಾಖ್ಯೆ, ಸ್ವರೂಪ, ಉದ್ದೇಶ, ವಿಮರ್ಶೆ ಇತ್ಯಾದಿಗಳ ಬಗೆಗೆ ಈ ಉಭಯ ಕವಿಗಳಲ್ಲಿ ಸೂಕ್ಷ್ಮ ಮತಭೇದಗಳಿದ್ದವು. ಅವುಗಳ ಧ್ವನಿ-ಪ್ರತಿಧ್ವನಿಗಳು ಈ ಸಂಕಲನದ ಪ್ರಸ್ತಾಪನೆಯಲ್ಲಿಯೂ ಪರಿಶಿಷ್ಟದಲ್ಲಿಯೂ ವ್ಯಕ್ತವಾಗಿವೆ. ವಾದ ವಿವಾದಕ್ಕೆ ಅವಕಾಶನಿತ್ತಿವೆ, ಆ ಮಾತು ಬೇರೆ.

ಆದರೆ ಕಾವ್ಯವೆಂದರೆ—ವರ್ಡ್ಸ್‌ವರ್ಥ್ ಕವಿಯೇ ಹೇಳಿಬಿಟ್ಟಿದ್ದಾನೆ: ಬಲಿಷ್ಠ ಭಾವನೆಗಳು ತಾನೇ ತಾನಾಗಿ ತುಂಬಿ ತುಳುಕಿ ಹೊರಚೆಲ್ಲುವಿಕೆ— ಎಂಬ ಒಂದು ಅಗ್ಗದ ಅಭಿಪ್ರಾಯ ಅಂದಿನಿಂದ ಜನಜನಿತವಾಯಿತು. ಇದರಿಂದಾಗಿ ಭಾವನೆಗಳ ಎಂಥ ಉದ್ರೇಕ ಉದ್ಗಾರಗಳೂ ಕಾವ್ಯ ಎಂಬ ತಪ್ಪು ತಿಳುವಳಿಕೆ ಸಲೀಸಾಗಿ ರೂಢವಾಯಿತು.

ಇದು ನಿಜವೇ? ಸರಿಯೇ? ಈ ವ್ಯಾಖ್ಯೆ ಸತ್ಯವಿದ್ದರೆ ಸಿಟ್ಟಿನ, ದುಃಖದ ಭರದಲ್ಲಿ ಪಿತ್ತ ಕೆರಳಿ, ತಲೆ ಕೆಟ್ಟು ಆಡಿದ ಎಂಥ ಮಾತೂ ಕಾವ್ಯವಾಗಬೇಕು. ಅಪ್ಪಟ ಬೈಗಳೆಲ್ಲ ಅಸಂಬದ್ಧ ಪ್ರಲಾಪಗಳೆಲ್ಲ ಕಾವ್ಯವೆನ್ನಬೇಕಾದೀತು. ಭಾವನೆ ಕೆರಳಿಕೊಂಡಾಗ ಕಲ್ಪನೆಯ ಕಾವೇರುತ್ತದೆ. ಬಣ್ಣ ರಾಚುತ್ತದೆ. ಅದರಿಂದ ಒಂದಲ್ಲದ ಒಂದು ಅತಿಶಯೋಕ್ತಿ, ವಕ್ರೋಕ್ತಿಗೆ ಸ್ಫೂರ್ತಿ ಸಿಗುತ್ತದೆ. ಆದರೆ ಇಂಥ ಆವೇಶದ 'ಬಣ್ಣದ ವೇಷ'ದ ಮಾತು ಅಷ್ಟರ ಮಟ್ಟಿಗೆ ಕಾವ್ಯವಾಗಲಾರದು. ಆದರೂ ಒಂದು ತೀರ ಸರಳ ವ್ಯಾಖ್ಯೆ ಕಾವ್ಯದ್ದಾಗಿಬಿಟ್ಟಿತು. ತಮ್ಮ ಅನುಕೂಲಕ್ಕೆ ತಕ್ಕಂತೆ ಕವಿ ವರ್ಡ್ಸ್‌ವರ್ಥನ ಆ ಮಹಾವಾಕ್ಯವನ್ನು ಉಪಯೋಗಿಸುವಂತೆ ಆದಂದಿನಿಂದ ಇದು ಕಾವ್ಯದ 'ಇತ್ಯರ್ಥ'ಕ್ಕೆ ತೀರ ಸಲೀಸಾದ ಸರಳೀಕರಣವಾಯಿತು.

ಆದರೆ ಇದು ವರ್ಡ್ಸ್‌ವರ್ಥನ ಮಾತಿಗೂ

ಮಾತಕ್ಕೂ ನಾವು ಬಗೆದ ಅನ್ಯಾಯ. "ಅರ್ಧ ಶ್ಲೋಕೇನ ವಕ್ಷ್ಯಾಮಿ" ಎಂಬಂತೆ ಇದು ಕಾವ್ಯದ, ವ್ಯಾಖ್ಯೆಯ ಸಾರಾಂಶವಲ್ಲ, ಅರ್ಧಾಂಶ. ವರ್ಡ್ಸ್‌ವರ್ಥನ ಅಭಿಪ್ರಾಯದ "ಅರ್ಧ ಸತ್ಯ" ವಿಧು-ಅಸತ್ಯಕ್ಕಿಂತಲೂ ಹೆಚ್ಚು ಅಪಾಯಕಾರಿ.

ಏಕೆಂದರೆ, ಈ ವಾಕ್ಯಕ್ಕೆ ಉತ್ತರಾರ್ಧವಿದೆ. ಆದರೆ ಅದನ್ನು ಹೆಚ್ಚಾಗಿ ಪಂಡಿತಮಾನ್ಯರಾರೂ ಉದ್ಧರಿಸುವ ವಾಡಿಕೆ ಇಲ್ಲ.

Poetry ಎಂಬುದು "Spontaneous overflow of powerful feelings" ಎಂದಿಷ್ಟೇ ಹೇಳಿ ವರ್ಡ್ಸ್‌ವರ್ಥ್ ವಿರಮಿಸಲಿಲ್ಲ. ಆತ ಈ ವಾಕ್ಯವನ್ನು ಹೀಗೆ ಮುಂದುವರಿಸಿದ್ದಾನೆ: "recapitulated in tranquility." ಪೂರ್ವಾರ್ಧದ ಅರ್ಥ ಪೂರ್ತಿ ಈ ಉತ್ತರಾರ್ಧದ ವ್ಯಾಕ್ಯಾಂಶದಲ್ಲಿಯೇ ಇದೆ.

ಇಲ್ಲಿ ಈ ವ್ಯಾಖ್ಯೆಯ ಚರ್ಚೆಗೆ ನಾನು ಇಳಿಯುವದಿಲ್ಲ. ವ್ಯಾಖ್ಯೆಯ ಯಥಾರ್ಥ ಅರ್ಥ ಗ್ರಹಣ ಇಲ್ಲಿ ಮುಖ್ಯ. ಬಲಿಷ್ಠ ಭಾವನೆಗಳು ತಾನೇ ತಾನಾಗಿ (Spontaneous) ಹೊರ ಹೊಮ್ಮುವದು ಕಾವ್ಯಕ್ಕೆ ಪ್ರೇರಣೆ ಅಥವಾ ಚಾಲನೆ. ಅದು ಉಗಮ. ಆದರೆ ಅಷ್ಟೇ ಕಾವ್ಯವಾಗಲು ಸಾಲದು. ಉಗಮವೇ ಹೆಸರಲ್ಲ. ಆ ಭಾವನೆಗಳು ಉಕ್ಕಿ ಹರಿಯು ಮಾತಾದ ಮೇಲೆ ಅವನ್ನು ಶಾಂತ, ಸ್ವಸ್ಥ ಚಿತ್ತದಲ್ಲಿ ಕವಿ ಮತ್ತೆ ನೆನೆದುಕೊಂಡು ನಿರೂಪಿಸಿದಾಗಲೇ ಅದು ಕಾವ್ಯರೂಪ ಹೊಂದುತ್ತದೆ. ಭಾವನೆಗಳು ಕೆರಳಿ ಉಕ್ಕಿ ಹೊಮ್ಮಿದರೆ ಸಾಲದು. ಅದು ಮೂಲದ್ರವ್ಯ. ಅವುಗಳ ಕದಡಿದ ಅವಸ್ಥೆ ತಿಳಿಯಾಗಿ ಆ ಸ್ಫುರಣಕ್ಕೆ ಸಂಸ್ಮರಣದ ಸಂಸ್ಕರಣ ಒದಗಿಸಬೇಕು. ಆಗಲೇ ಸರಿಯಾದ ಚಿನ್ನದ ಕಾವ್ಯ ಪಾಕಗೊಳ್ಳುತ್ತದೆ.

ಏಕೆಂದರೆ, ಕೆರಳಿದ ಭಾವನೆ, ಕಲ್ಪನೆಗಳು, ಕಾವ್ಯವಾಗಿ ಎರಕ ಹೊಯ್ಯಲು ಕೆಲವೊಂದು ಕಾಲಾವಧಿ ಅಗತ್ಯ. ಪ್ರೇರಣೆಯಿಂದ ಪಸ್ತುವಿನಿಂದ ಕೆಲವೊಂದು "aesthetic distance" (ಕಲಾ ಭವನದ ಅಂತರ) ಅವಶ್ಯ. ಅದು ಕವನ ಕ್ರಿಯೆಗೆ, ಆಶಯಕ್ಕೆ ರೂಪ ಕೊಡುವ, ಭಾವವನ್ನು ಭಾಷೆಯಲ್ಲಿ ಭಾಷೆಯನ್ನು ಛಂದೋಬಂಧದಲ್ಲಿ ಎರಕ ಹೊಯ್ಯುವ ಚಿಂತನೆಗೆ ಅಂಥ ಅವಕಾಶದ ಅವಧಿ ಅತ್ಯಗತ್ಯ.

ಬೇಟೆಯಾಡುತ್ತಿದ್ದ ಕ್ರೌಂಚ ಮಿಥುನದಲ್ಲಿ ಒಂದನ್ನು ಬೇಡನು ಕೊಂದುರುಳಿಸಿದ್ದು ಕಂಡು ವಾಲ್ಮೀಕಿಯ ಸಂತಾಪದ ಶಾಪವಾಣಿ ಉಕ್ಕಿ ಶ್ಲೋಕವಾಗಿ ಹೊಮ್ಮಿತು. ಆದರೆ ಅಲ್ಲಿಯೇ ಅಷ್ಟಕ್ಕೇ ಅದು ಕಾವ್ಯವಾಗಲಿಲ್ಲ. ಆವೇಶದ ಕಾವಿನಲ್ಲಿ ಉದ್ರೇಕದ ಒತ್ತಡದಲ್ಲಿ ಅದು ಒಂದು ಲಯಬದ್ಧ ಛಂದೋರೂಪ(ಅನುಷ್ಟುಪ್) ವನ್ನು ತಾಳಿತು. ಅನಂತರ ಆಶ್ರಮಕ್ಕೆ ಹೋಗಿ ತದೇಕಚಿತ್ತನಾಗಿ ಕುಳಿತು ಆತ ರಾಮಾಯಣವನ್ನು ರಚಿಸಿದನು. ಆ ಮೂಲದ 'ಮೂಡ'ನ್ನು ಮಹಾಕಾವ್ಯದ ಬೋಡಿಯಲ್ಲಿ ವಿಧಾನವಾಗಿ ಒಡಮೂಡಿಸಿದನು. ಅದು "recapitulated in tranqility."

ಈ ಮಹಾವಾಕ್ಯದಲ್ಲಿ ಕವಿ ವರ್ಡ್ಸ್‌ವರ್ಥ್ ತನ್ನ ಕಾಲದ ಅತ್ಯಂತ ಬಲಿಷ್ಠ ಸೃಜನಾತ್ಮಕ ಪ್ರೇರಣೆಯನ್ನು ಪ್ರತಿಪಾದಿಸಿದ್ದಾನೆ. ಅದೊಂದು ನಿಷ್ಪಕ್ಷ ನ್ಯಾಯ ನಿರ್ಣಯವಲ್ಲ. ಏಕೆಂದರೆ, ಅನೇಕ ಸಲ ಕಾವ್ಯದ ಪ್ರೇರಣೆ, ಭಾವನೆಗಳು ಅಷ್ಟೊಂದು ಬಲಿಷ್ಠ ಇಲ್ಲದೆ ಉತ್ ಸ್ಫೂರ್ತ (Spontaneous) ಉದ್ಭವಿಸಿರಲಿಕ್ಕಿಲ್ಲ.

ಅದೇನೇ ಇರಲಿ, ವಾಕ್ಯಾರ್ಥವನ್ನು ಉಚ್ಚರಿಸಿ, ಉದಾಹರಿಸಿ ನಾವು ವರ್ಡ್ಸ್‌ವರ್ಥ್‌ನಿಗೆ ಹಾಗೂ ಕಾವ್ಯದ ವ್ಯಾಖ್ಯೆಗೆ ಕೂಡಿಯೇ ದ್ರೋಹ ಮಾಡುವದು ಬೇಡ. "Recapitulated in tranquility" ಎಂಬ ಜೀವಾಳದ ವಾಕ್ಯಾಂಶವನ್ನು ಎತ್ತಿ, ಹೇಳದೆ ಬರಿ ಭಾವೋದ್ರೇಕವೇ ಕಾವ್ಯವೆಂಬಂತೆ ನಾವು ಭಾವಿಸುತ್ತೇವೆ. ಬೋಧಿಸುತ್ತೇವೆ. ವರ್ಡ್ಸ್‌ವರ್ಥನನ್ನೇ ಒತ್ತಿ ಇಟ್ಟು ಇದು. ಈ ಮಹಾಕವಿಯ word's worth ಲೆಕ್ಕಿಸಿದಂತೆ ಅಲ್ಲ, ಅವನನ್ನು ವ್ಯರ್ಥಗೊಳಿಸಿದಂತೆ.

ನಿರಾಸಕ್ತ

ಮೂಲ: **ಎಚ್. ಇ. ಬೇಟ್ಸ್**
ಕನ್ನಡಕ್ಕೆ: **ಜಿ. ನಾರಾಯಣ**

ಆತ ಆಕೆಯಿಂದ ದೂರವಾಗಿ ಮರಗಳೇ ಇರದ, ಪೊದೆಗಳು ತುಂಬಿದ ಬಯಲಿನತ್ತ ನೋಡುತ್ತ ನಿಂತ. ಆತನಿಗೆ ಆಕೆಯ ಮುಖವನ್ನು ನೋಡಬೇಕೆನಿಸಲಿಲ್ಲ. ಬದುವುಗಳ ಮೇಲೆ ಬರಡು ಬೇಸಿಗೆಯಲ್ಲಿ ಬಾಡಿ, ಬೂದು ಬಣ್ಣದ ಅಸ್ಥಿಪಂಜರ ಮಾತ್ರ ಉಳಿದ ಪ್ರಿಮ್‌ರೋಸ್ ಎಲೆಗಳನ್ನು ನೋಡುತ್ತಿದ್ದಾಗ ಮನಸ್ಸು ತುಂಬಿಬಂತು.

"ನೀನು ಆಗಾಗ ಬಂದು ನಮ್ಮನ್ನು ನೋಡಬಹುದು, ಮುಂದಿನವಾರ ಬಾ. ನಾವು ಒಂದು ದಿನ ಶೂಟಿಂಗಿಗೂ ಹೋಗಬಹುದು," ಆಕೆ ಅಂದಳು.

"ನಾನು ಶೂಟಿಂಗ್ ಮಾಡೋಲ್ಲ," ಅವನೆಂದ.

"ಬಂದಾದರೂ ಬರಬಹುದಲ್ಲ."

ಆತ ಮಾತನಾಡಲಿಲ್ಲ. ವಸಂತ ಋತುವಿನಲ್ಲಿ ಬಯಲಿನುದ್ದಕ್ಕೂ ಇರುವ ಇಷ್ಟೊಂದು ಪ್ರಿಮ್‌ರೋಸ್‌ಗಳು ಕೆನೆ ಬಣ್ಣದ ಹಾತೋರ್ನ್ ಗಿಡಗಳ ಕಮಾನಿನ ಕೆಳಗೆ ಎಷ್ಟು ಸುಂದರವಾಗಿ ಕಾಣಬಹುದು ಎಂದು ಆತ ಯೋಚಿಸುತ್ತಿದ್ದ.

"ನಮ್ಮ ಹುಡುಗರು ಅವರಪ್ಪನಿಗಿಂತ ಅದ್ಭುತವಾಗಿ ಶೂಟ್ ಮಾಡ್ತಾರೆ," ಆಕೆ ಅಂದಳು.

ಈಗ ಬಯಲಿನ ತುದಿಯ ಏರಿಯಿಂದ ನೋಡಿದಾಗ ಒಟ್ಟುಗೂಡಿಸಿಟ್ಟ ಕೆನೆ ಬಣ್ಣದ ಕಲ್ಲಿನ ಘನಾಕೃತಿಗಳು. ಹುಲ್ಲುಗಾವಲಿನ ತುದಿಯಲ್ಲಿ ಹಾಸಿಕೊಂಡ ಹುಲ್ಲು, ಅವುಗಳ ನಡುವೆ ಬೆಳೆದ ತಾಮ್ರವರ್ಣದ ಚೆಸ್ಟ್‌ನಟ್ ಮರಗಳು ಗೋಚರಿಸಿದುವು.

ಆತ ತನ್ನ ಕೈಗಡಿಯಾರದತ್ತ ನೋಡಿದ.

"ನೀನು ಈಗಲೇ ಹೋಗಕೂಡದು," ಆಕೆ ಅಂದಳು.

"ಇಲ್ಲ, ನಿಜವಾಗಿಯೂ ನಾನು ಹೋಗಲೇಬೇಕು."

"ನೀನು ನನ್ನ ನೋಡೋಕೆ ಅಂತ್ಲೇ

ಬರ್ತೀಯಾ, ನಾನು ಕಣ್ಣೆವೆ ಮಿಟಕೊಳ್ಳೋದ್ರೊಳ್ಗೆ ನೀನು ಹೊರಟುನಿಂತಾಗಿರುತ್ತೆ. ಇದು ಚೆನ್ನಾಗಿರೋಲ್ಲ. ಏನಾದ್ರೂ ಈ ಬಾರಿ..."

"ಏನಿಲ್ಲ, ಸುಮ್ನೆ ಒಂದು ಬಾರಿ ಬಂದ್ಹೋಗೋಣಾಂತ ಬಂದಿದ್ದೆ."

"ಇರಬಹುದು, ಆದ್ರೂ ಇದು ಚೆನ್ನಾಗಿರೋಲ್ಲ. ನಾನು ಹೇಳೋದೂಂದ್ರೆ..."

ಆಕೆ ಗೇಟಿನ ಹತ್ತಿರ ನಿಂತುಕೊಂಡಿದ್ದಳು. ಈಗ ತೋಳನ್ನು ಮೇಲಿನ ಪಟ್ಟಿಯ ಮೇಲೆ ತ್ರಿಕೋಣಾಕಾರವಾಗಿಟ್ಟು ಗೇಟಿನ ಮೇಲೆ ಒರಗಿದ್ದಳು.

ಆಕೆ ಮೊದಲಿಗಿಂತ ತುಂಬ ದಪ್ಪವಾಗಿದ್ದಳು. ಆಕೆಯ ಕತ್ತಿನ ಮಾಂಸಖಂಡಗಳು ಬಲಿಷ್ಠವಾಗಿದ್ದವು. ತೋಳುಗಳು ಮಾಗಿ ಬೂದು ಬಣ್ಣಕ್ಕೆ ತಿರುಗಿದ್ದುವು. ಸ್ತನಗಳು ಆಕೃತಿ ಕಳೆದುಕೊಂಡ ದಪ್ಪ ಕಂದು ಬಣ್ಣದ ಟ್ವೀಡ್ ಕೋಟಿನ ಹೊದಿಕೆಯಲ್ಲಿ ಉಬ್ಬಿಕೊಂಡಿದ್ದುವು. ಆದರೆ ಕಣ್ಣುಗಳಲ್ಲಿ ಮಾತ್ರ ಇನ್ನೂ ಅದೇ ಹೊಳಪು. ಅವು ನೀಲಿ ಬಣ್ಣದ, ಸ್ವಚ್ಛವಾದ ಮೊಟ್ಟೆಗಳನ್ನು ಈಗ ಮೊಟ್ಟಮೊದಲಬಾರಿಗೆ ಅವನು ನೋಡಿದ.

"ನೀನು ಹೋಗಲೇ ಬೇಕೆಂದಿದ್ದರೆ, ಮುಂದಿನ ವಾರ ಬಂದೇ ಬರುತ್ತೇನೆಂದು ನನಗೆ ಭಾಷೆ ಕೊಡು," ಆಕೆ ಎಂದಳು.

"ನಾನು ನಿಜವಾಗಿ ತಪ್ಪಿಸಿಕೊಳ್ಳ..."

"ನೀನು ಯಾವಾಗ್ಲೂ ಹಾಗೇನೇ. ಯಾವ್ದಾದ್ರೂ ಕೆಲ್ಸ ಆರಂಭಿಸ್ತೀಯಾ. ಅರ್ಧ ಆಗೋದ್ರಲ್ಲೇ ನಿಲ್ಸಿ ಬಿಡಬೇಕಂತೀಯಾ," ಆಕೆ ಎಂದಳು. ಆಕೆಯ ಮಾತು ಬಿರುಸಾಗಿಯೂ ಇರಲಿಲ್ಲ. ಮೃದುವಾಗಿಯೂ ಇರಲಿಲ್ಲ. ಅದಕ್ಕೆ ಏನು ಹೇಳುವುದೋ ಅವನಿಗೆ ತಿಳಿಯಲಿಲ್ಲ.

"ಹೌದು, ನೀನು ಏನನ್ನೂ ಹೇಳ್ತಿಲ್ಲ. ನಿಂಗೊತ್ತು ಇದು ನಿಜಾಂತ."

"ಸರಿ," ಆತ ಮುಗುಳ್ನಕ್ಕ.

"ಏನ್ ಸರಿ? ನಾನು ಹೇಳಿದ್ದು ನಿಜ ಅಂತಾನಾ? ನೀನು ಬರ್ತೀನಿ ಅಂತಾನಾ?" ಆಕೆ ಕೇಳಿದಳು. ಆತ ಗೇಟಿನ ಅಡ್ಡಗೋಲಿನ ಮೇಲೆ ಕೈಯಿಟ್ಟು ತೆರೆಯಲು ಸಿದ್ಧನಾದ. ಆದರೆ ಆಕೆ ತನ್ನ ದೇಹದ ಭಾರವನ್ನು ಅದಕ್ಕೆ ಹೇರಿ ಆತನಿಗೆ ತೆಗೆಯಲಾಗದಂತೆ [illegible] ಹಿಡಿದುಕೊಂಡಳು. ಆತನ ದೇಹ ತಟಕ್ಕನೆ ಆಕೆಯ ದೇಹಕ್ಕೆ ಒತ್ತಿ, ಆತನ ಕಾಲುಗಳು ಆಕೆಯ ತೊಡೆಗೆ ಬೆಸೆದುಕೊಂಡವು. ಒಂದು ಕೈ ಗೇಟಿನ ತಣ್ಣನೆಯ ಅಡ್ಡಗೋಲಿನ ಮೇಲಿದ್ದಂತೆ, ಮತ್ತೊಂದು ಆಕೆಯ ಬಿಸಿಯಾದ ಕತ್ತಿನ ಮೇಲೆ ಹೋಯಿತು. "ದೇವ್ರೇ," ಆಕೆ ಉದ್ಗರಿಸಿದಳು. ಈಗ ಆತ ಗೇಟನ್ನು ತೆರೆದಾಗ ಆಕೆ ವಿರೋಧಿಸಲಿಲ್ಲ. ಆತ ಸಂಭ್ರಾಂತಿಯಿಂದ ಬಯಲಿನಲ್ಲಿ ನಡೆದ. ಸಂಜೆಯ ಆಗಸದ ತುಂಬ ಚೆಲ್ಲಾಡಿದ ಹಾಲಿನಂತಿದ್ದ ಹೊಳಪಿನ ಮೋಡಗಳು ಕೆಳಗಿಳಿದ ಸೂರ್ಯನ ಕಿರಣಗಳನ್ನು ಮತ್ತಷ್ಟು ಪ್ರಖರಗೊಳಿಸಿದ್ದರಿಂದ ಬೆಂಕಿಯ ಝಳದಂತೆ ಅವು ಅವನ ಕಣ್ಣ[illegible] ಕುಕ್ಕುತ್ತಿದ್ದುವು. ಆತ ತನ್ನ ಕೈಗಳನ್[illegible] ಹಣೆಗೆ ಅಡ್ಡ ಹಿಡಿದ. ಆ ಕ್ಷಣವೇ ಪಕ್ಕದ ಹೊಲದಲ್ಲಿ ಧಡಾರನೆ ಬಂದೂಕು ಹಾರಿಸಿದ ಸದ್ದಾಯಿತು. ಅದು ಅವನನ್ನು [illegible] ಚಕಿತಗೊಳಿಸಿತೆಂದರೆ ಆತ ನಿಂತುಬಿಟ್ಟ.

"ಅಯ್ಯೋ ಅದೋ, ಮಕ್ಳು ಹಾರಿವಾಳ ಹೊಡೀತಿವೆ," ಆಕೆ ಅಂದಳು.

ಆಕೆಯೂ ನಿಂತಳು. ಮರುಕ್ಷಣ ಆತ ಹೊರಟಿದ್ದ. ಆದರೆ ಆತನನ್ನು ಆಕೆ ತೋಳು ಹಿಡಿದು ನಿಲ್ಲಿಸಿದಳು. ತನ್ನ ದೇಹ ಆತನಿ[illegible] ನೇರವಾಗಿ ಬರುವಂತೆ ಆತನನ್ನು ತಿರುಗಿಸಿದಳು.

ಹೊಲದ ಮೇಲಿಂದ ಬಂದೂಕು ಮತ್ತೊಮ್ಮೆ ಸಿಡಿದಾಗ ಆಕೆ ಅವನನ್ನು ಚುಂಬಿಸಲಾರಂಭಿಸಿದಳು. ಬಂದೂಕಿನ ಸದ್ದ[illegible]ವನ್ನು ಆಕೆ ಗಮನಿಸಿದಂತೆ ತೋರಲಿಲ್ಲ. ಆತನೂ ಅದರಿಂದ ಬೆಚ್ಚಲಿಲ್ಲ. ಆಕೆ ಅವ[illegible]ನನ್ನು ತಿನ್ನುವಂತೆ ಒಂದೇ ಸಮನೆ ಚುಂಬಿ[illegible]ಲಾರಂಭಿಸಿದಳು. ಆಕೆಯ ತುಟಿಗಳು ಬಿಗಿದ[illegible]

ಕೊಂಡವು. ಚುರುಕಾದವು, ಮರುಕ್ಷಣವೇ ಅವನ ಮುಖವನ್ನು ಹಸಿವಿನಿಂದ ಮೃದುವಾಗಿ ಸವರಿದವು. "ಪ್ರಿಯಾ, ಓ ದೇವರೇ." ಆಕೆ ಉದ್ಗರಿಸಿದಳು. ಆಕೆ ಇನ್ನೊಂದು ಕ್ಷಣ ಮುಂದುವರೆಸಲೆಂದು ಆತ ಮಾತನಾಡಲಿಲ್ಲ. "ಅವೆಲ್ಲ ಆಗೋಲ್ಲ; ಆಗೋಲ್ಲಾಂದ್ರೆ ಆಗೋಲ್ಲ," ಆಕೆ ನುಡಿದಳು. ಆತ ಮತ್ತೆ ತನ್ನ ಕೈಗಡಿಯಾರದತ್ತ ನೋಡಿದ. ಈ ಬಾರಿ ಆಕೆ ಪ್ರತಿಭಟಿಸಲಿಲ್ಲ. ಅವರು ಒಬ್ಬರಿಂದೊಬ್ಬರು ದೂರವಾಗಿ ಬಯಲಿನ ಗುಂಟ ನಡೆಯಲಾರಂಭಿಸಿದರು. "ಈ ಹುಲ್ಲುಗಾವಲುಗಳಲ್ಲಿ ವಸಂತ ಮಾಸದಲ್ಲಿ ಸೊಗಸಾದ ಕ್ಲಾಸಿಪ್ ಹೂಗಳಾಗುತ್ತವೆ. ನಿಂಗೆ ಅವು ತುಂಬಾ ಹಿಡಿಸ್ಬೋದು. ನೀನು ಯಾವಾಗ್ಲೂ ಹೂವು ಅಂದ್ರೆ ಜೀವಬಿಡ್ತಿದ್ದೆಯಲ್ಲ?" ಆಕೆ ಎಂದಳು. ನೂರು ಗಜದಷ್ಟು ದೂರದಲ್ಲಿ ಹುಡುಗರಿಬ್ಬರು ಹಿಂದಿನ ಬಯಲಿನಿಂದ ದಣಪೆಯನ್ನು ಹತ್ತಿ ದಾಟಿ ಬರುತ್ತಿದ್ದುದು ಆತನಿಗೆ ಕಾಣಿಸಿತು. ಆಕೆ ಕೈಗಳನ್ನು ಬೀಸಿದಳು. ಅವರು



ಅವಳತ್ತಲೇ ಬಂದರು. ಅವರು ಹ್ಯಾಟು ಹಾಕಿರಲಿಲ್ಲ ಕೂದಲುಗಳು ಸ್ವಲ್ಪ ಒರಟಾಗಿ, ಕಪ್ಪಾಗಿ, ಜಪ್ಪೆಯಾಗಿದ್ದವು. ಆ ಎಳೆ ಮೊಗಗಳಿಗೆ ತುಟಿಗಳು ತೀರ ಅಗಲವಾಗಿ, ಪ್ರೌಢವಾಗಿ ಕಾಣುತ್ತಿದ್ದುವು. ಅವರ ಕಣ್ಣುಗಳು ಕಪ್ಪಾಗಿ, ಆಳವಾಗಿ, ಅವನಿಗೆ ಕಾಣಿಸಿದುವು, ಅವು ಆಕೆಯ ಕಣ್ಣುಗಳಂತಿರಲಿಲ್ಲ.

ನಾಲ್ಕು ಜನರೂ ಸೇರಿ ಈಗ ಹೊಲದ ಕಡೆ ನಡೆಯಲಾರಂಭಿಸಿದರು. ಹುಡುಗರು ಬಂದೂಕುಗಳನ್ನು ಹಿಡಿದು ಸ್ವಲ್ಪ ದೂರದಲ್ಲಿ ಬಂದರು. ನೋಡುವುದಕ್ಕೆ ಒರಟಾಗಿ ಕಂಡರೂ, ಸುಸಂಸ್ಕೃತರಂತೆ ಅವನ ಜೊತೆ ಮಾತಾಡುವಾಗಲೆಲ್ಲ "ಸಾರ್ ಸಾರ್" ಎಂದೇ, ಕರೆದರು.

ಬಿಳಿ ಪಾರಿವಾಳಗಳು ಪಾಟ್ಯಸವಾಗಿ ತತ್ತರಿಸಿದ ಆ್ಯಶ್ ಮರಗಳಿಂದ ಉಕ್ಕಿನ ಬಣ್ಣದ ರೆಕ್ಕೆಯನ್ನು ಬಿಚ್ಚಿ ಹಾರಿದುವು. ತತ್ಕ್ಷಣ ಹುಡುಗರು ಅವುಗಳತ್ತ ಗುಂಡು ಹಾರಿಸಲಾರಂಭಿಸಿದರು. ಲೀಲಾಜಾಲವಾಗಿ ಈಡು ಮಾಡಿ ಆರಿಸಿ ಎರಡು ಪಕ್ಕಿಗಳನ್ನು ಹೊಡೆದರು. ಅವರು ಬಂದೂಕನ್ನು ಎತ್ತುವ ರೀತಿಯಲ್ಲಿ, ಗುಂಡು ಹಾರಿಸುವಲ್ಲಿ, ಬಂದೂಕನ್ನು ಮತ್ತೆ ತುಂಬಿಸುವಲ್ಲಿ, ಕೆಳಗೆ ಬಿದ್ದ ಹಕ್ಕಿಗಳನ್ನು ಎತ್ತಿಕೊಳ್ಳುವಲ್ಲಿ ಒಂದು ರೀತಿಯ ಪ್ರೌಢಿಮೆ ಇತ್ತು. ಇದಕ್ಕಾಗಿ ಆಕೆ ಹೆಮ್ಮೆಪಟ್ಟುಕೊಳ್ಳುವುದು ಅವನ ಗಮನಕ್ಕೆ ಬಂತು.

"ಓಡಿಹೋಗಿ ನ್ಯಾನ್ಸಿ ಹತ್ರ ಮಿ. ರಿಚರ್ಡ್ಸನ್ ರಾತ್ರಿಗೆ ಊಟಕ್ಕಿರ್ತಾರಂತೆ ಅಂತ ಹೇಳಿ," ಆಕೆ ಎಂದಳು. ಆತನಿಗೆ ಇದು ತಾನು ತಪ್ಪಿಸಿಕೊಂಡು ಹೋಗಬಾರದೆಂದು ಆಕೆ ಉದ್ದೇಶಪೂರ್ವಕವಾಗಿ ಹುಡುಗರ ಎದುರು ಒಡ್ಡಿದ ಬೋನು ಎನ್ನಿಸಿತು. "ಈ ಪಾರಿವಾಳಗಳು ಶೀತ, ರಾತ್ರಿ ಊಟಕ್ಕೆ ಥೆಸೆಂಟ್ ಹಕ್ಕಿಗಳಿರ್ತಾವೆ. ಉಪ್ಪು ಹಾಕಿ ಒಣಗಿಸಿದ ಹಂದಿ ತೊಡೆ ಇರುತ್ತೆ. ಈ ಹೊಲಮನೆಗಳಲ್ಲೂ ಅದೊಂದು ವೈಶಿಷ್ಟ್ಯ. ಇಲ್ಲಿ ಯಾವುದಕ್ಕೂ ಕೊರತೆ ಇಲ್ಲ."

"ಯಾವುದಕ್ಕೂ ಕೊರತೆ ಇಲ್ವಾ?" ಆತ ಕೇಳಿದ. ಮೊದಲಬಾರಿಗೆಂಬಂತೆ ಆಕೆ ಮೌನ ತಾಳಿದಳು. ಚೆಸ್ಟ್‌ನಟ್ ಮರಗಳ ಕೆಳಗೆ, ಹೊಲದ ಪಕ್ಕದಲ್ಲಿ ರಾಶಿ ಬಿದ್ದ ಒಣ ಎಲೆಗಳು ಹೊಲದ ಅಂಚಿನಲ್ಲಿದ್ದ ಕೊಳದ ಮೇಲಿಂದ ಬೀಸಿಬಂದ ಗಾಳಿಯಿಂದ ಉದುರಿ ಹಾರಾಡಿದುವು. ಅವು ಬೂದು ಬಣ್ಣದ ಪುಕ್ಕದ ಪಕ್ಕಿಗಳಂತೆ ಕಂಡುವು.

"ನಿಂಗೆ ಚೆಸ್ಟ್‌ನಟ್ ಮರಗಳು ವಸಂತ ಕಾಲದಲ್ಲಿ ತುಂಬಾ ಹಿಡಿಸಬಹುದು. ಒಂದು ನೇರಳೇ ಬಣ್ಣದ ಮರ ಕೂಡ ಇದೆ. ಇದೇ ಇರ್ಬೇಕು ಅನ್ಸುತ್ತೆ; ಇಲ್ನೋಡು, ಹಾಂ! ಇದೇ ಇದೇ ಅದು."

ಆತ ಆಕೆಯನ್ನು ಹಿಂಬಾಲಿಸಿ ಮನೆಯೊಳಗೆ ಹೋದ. ಹಳೆಗಾಲದ ಗಾಂಭೀರ್ಯದ ಹೊಲಮನೆಯ ಕೂರುವ ಕೋಣೆಯನ್ನು, ಭಾರವಾದ ಪೀಠೋಪಕರಣಗಳನ್ನು, ಕಂದು ಬಣ್ಣದ ಚರ್ಮದ ಕುರ್ಚಿಗಳನ್ನು, ಗೋಡೆಯ ಪಕ್ಕದಲ್ಲಿದ್ದ ದಟ್ಟವರ್ಣದ ಮಹಾಗನಿ ಕವಾಟುಗಳನ್ನು, ವಾರ್ನಿಶ್ ಹಚ್ಚಿದ ಬಾಗಿಲುಗಳನ್ನು, ಛಾವಣಿಗೆಯ ಕೆಳಗೆ ಗೋಡೆಯ ಸುತ್ತ ಹೊದಿಸಿದ ಹಲಗೆಯನ್ನು ನೋಡುತ್ತ ನಿಂತ. ಅದೇನೂ ಹೇಳಿಕೊಳ್ಳುವಂಥದಿರಲಿಲ್ಲ.

ಆಕೆ ಅವನ ಯೋಚನೆಯನ್ನು ಅರಿತಳೋ ಎಂಬಂತೆ ನುಡಿದಳು.

"ಕ್ಷಮಿಸು, ನಾನು ಅದಿಗೆ ಯೋಚ್ನೆ ಮಾಡ್ಬೇಕು." ಹಿರಿಯ ಹುಡುಗ ಇವನಿಗಾಗಿ ಒಂದು ಗ್ಲಾಸಿನಲ್ಲಿ ವೈನನ್ನು ತಂದಿದ್ದು ರೂಮಿನ ಮಧ್ಯದಲ್ಲಿ ಪೆಚ್ಚಾಗಿ ನಿಂತಿದ್ದ.

"ನೀವೂ ಶೂಟ್ ಮಾಡ್ತೀರಾ ಸಾರ್?" ಆತ ಕೇಳಿದ.

"ಇಲ್ಲಪ್ಪಾ."

ಹುಡುಗ ಸ್ವಲ್ಪ ಹೊತ್ತು ಗಂಭೀರವಾಗಿ ಸುಮ್ಮನೆ ನೋಡುತ್ತಿದ್ದ. ಆತನಿಗೆ [illegible] ಏನು ಮಾಡಬೇಕು. ಏನು ಮಾತಾಡಬೇಕು

ಎಂದು ತೋಚಲಿಲ್ಲ. ಅನಂತರ, "ನೀವು ಕುದುರೆ ಸವಾರೀನಾದ್ರೂ ಮಾಡ್ತೀರಿ ಅಂದ್ಕೊಂಡಿದೀನಿ. ಇಲ್ವಾ ಸಾರ್?" ಎಂದು ಪ್ರಶ್ನಿಸಿದ.

"ಇಲ್ಲ, ನಾನು ಸವಾರಿ ಕೂಡ ಮಾಡೋಲ್ಲ." ಆತನೆಂದ.

ಅವರಿಬ್ಬರ ಮಧ್ಯೆ ಮಾತಾಡಲು ಇನ್ನೇನೂ ಇರಲಿಲ್ಲ. ಒಂದು ಕ್ಷಣದಲ್ಲಿ ಆಕೆ ತಿರುಗಿ ಬಂದಳು.

"ನಿಂಗೆ ಆ ಮೇಲೆ ತಡವಾಗಬಹುದು. ನೋಡು, ಹಾಗಾಗಿ ಎಲ್ಲ ಅವಸರವಸರವಾಗಿ ಸಿದ್ಧಮಾಡಿದೆ. ನಾನು ಬಟ್ಟೆ ಬದಲಿಸದಿದ್ದರೆ ನೀನು ತಪ್ಪು ತಿಳಿಯೊಲ್ಲ ತಾನೆ?"

"ಇಲ್ಲ," ಆತನೆಂದ.

ಆಕೆ ಹುಡುಗನಲ್ಲಿ, "ಹೋಗು, ಕೈತೊಳೆದು-ಕೋ, ಆ ಮೇಲೆ ನಿಮ್ಮಪ್ಪನನ್ನು ಕೂಗಿ ಊಟಕ್ಕೆ ಸಿದ್ಧವಾಗಿದೆಯಂತೆ ಅನ್ನು. ರಾಬರ್ಟ್ಸನನ್ನೂ ಕರೆ. ಅವನಿಗೆ ತಿಕ್ಕಿ ತಿಕ್ಕಿ ಕೈ ತೊಳಕೊಳ್ಳೋಕೆ ಹೇಳು." ಎಂದಳು.

ಹುಡುಗ ಕೋಣೆಯಿಂದ ಹೊರಗೆ ಹೋದ.

"ಹೇಳಿದ ಹೊರತ್ತೂ ಅವ್ರು ಕೈತೊಳ್ಕೋ-ಳೋದೇ ಇಲ್ಲ," ಆಕೆ ನುಡಿದಳು.

ಆಕೆ ತಟಕ್ಕನೆ ಹೊಳೆಯುವ ಹಸಿರು ಕಣ್ಣುಗಳಿಂದ ಆತನನ್ನು ದಿಟ್ಟಿಸುತ್ತ ನಿಂತಳು. ಆಕೆ ಬಟ್ಟೆಗಳಲ್ಲಿ ಕೋಟನ್ನು ತೆಗೆದುಹಾಕಿದ್ದಳು. ಅವಳ ಪುಷ್ಟ ವೈಕಟ್ಟಿನಿಂದ ಬಿಗಿಯಾಗಿ ಉಬ್ಬಿದ ಅವಳ ರವಿಕೆಯು ತಿಳಿನೀಲಿ ಬಣ್ಣ. ಅವಳ ಕಣ್ಣಿನ ನೀಲಿಯನ್ನು ಮತ್ತಷ್ಟು [illegible]ದಂತೆ ತೋರುತ್ತಿತ್ತು.

"ದಯವಿಟ್ಟು ಮಂಗಳವಾರ ಬಾ... ಅಲ್ಲ ಬುಧವಾರ, ಇಲ್ಲಿ ಯಾರೂ ಇರುವುದಿಲ್ಲ."

"ನಾನು..."

"ಖಂಡಿತಾ ಬಾ, ದಯವಿಟ್ಟು," ಆಕೆ ಅವಸರದಿಂದ ಸುತ್ತ ನೋಡಿದಳು. ನಂತರ ಅವನ ಹಿಂಭಾಗಕ್ಕೆ ಬಂದು, ಒತ್ತಿ ನಿಂತು ಅವನ ಜಾಕೆಟ್‌ಅನ್ನು ಎರಡೂ ಕೈಗಳಿಂದ ಬಿಗಿಯಾಗಿ ಹಿಡಿದು, "ನಾವು ಇಲ್ಲಿ ನಿಲ್ಲದೀವೋ ಅಲ್ಲಿಂದ ಆರಂಭ ಮಾಡ್ಬೋದು," ಎಂದಳು.

ಅತ್ತಿತ್ತ ಅಲ್ಲಾಡದೆ ಮೌನವಾಗಿ ನಿಂತ ಆತನಿಗೆ ತಾನು ಹುಡುಗರ ಬರುವಿಕೆಯನ್ನೇ ಆಲಿಸುತ್ತ ನಿಂತಿದ್ದೇನೆನಿಸಿತು. ಆಕೆ ಅವನ ಮುಖಕ್ಕೆ ಬಾಯನ್ನೊಡ್ಡಿದ್ದಳು; ಆತನಿಗೆ ಆಕೆಯ ಸುಂದರ ತಲೆಯ ಹಿಂಭಾಗದಲ್ಲಿ ಒಂದು ರಾಶಿ ಚೆಸ್ಟ್‌ನಟ್ ಎಲೆಗಳು ಮರಗಳಿಂದ ಉದುರಿದ್ದು, ಒಂದು ಹಿಂಡು ಕಾಡು ಹಕ್ಕಿಗಳು ಕೊಳದ ಮೇಲಿಂದ ಹಾರಿದಂತೆ ಕಂಡಿತು.

"ನಿನ್ನನ್ನು ಮುತ್ತಿಟ್ಟರೆ ನೀನೇನೂ ತಪ್ಪು ತಿಳ್ಕೋಳಲ್ಲ ತಾನೇ?" ಆಕೆ ನುಡಿದಳು, "ನಾನು ಕೇಳ್ಲೇಬೇಕಾಗಿದೆ... ನಾನು ಕೇಳ್ಲೇ..."

ಆತ ತನ್ನ ಬಾಯನ್ನು ಆಕೆಯ ಬಾಯತ್ತ ಒಯ್ದ. ಆಗ, ಆ ಕ್ಷಣದಲ್ಲಿಯೇ, ಆತ ಆಕೆಯನ್ನು ಮುಟ್ಟುವುದಕ್ಕೇ ಮುಂಚೆಯೇ, ಹುಡುಗರ ಹೆಜ್ಜೆಯ ಸದ್ದು ಕಿವಿಗೆ ಬಿತ್ತು. ಆಕೆ ತತ್‌ಕ್ಷಣ ಅವನ ತೋಳಿನ ಮೇಲಿಂದ ಕೈ ಜಾರಿಸಿ, ಅವನ ಬೆರಳುಗಳನ್ನು ಹಿಚುಕಿದವಳೇ ಅವನಿಂದ ದೂರ ಸರಿದಳು.

"ಕೈ ತೊಳ್ಕೊಂಡ್ರೇನೋ?" ಆಕೆ ಕೇಳಿದಳು. ಹೊಳೆಯುವ ಟ್ರೇಯಲ್ಲಿ ಹಕ್ಕಿಯ ಮೊಟ್ಟೆಗಳನ್ನಿಟ್ಟುಕೊಂಡು ಬಿಲ್ಲಿ ರಾಬರ್ಟ್ಸ್ ಮೊದಲು ಬಂದ. ಹಿಂದಿದ್ದ ಹಿರಿಯ ಹುಡುಗ ಒಂದು ಕೈಯಿಂದ ಬಾಗಿಲನ್ನು ತೆರೆದು ಹಿಡಿದ.

"ಮಿ. ರಿಚರ್ಡ್ಸನ್ ನನ್ನ ಹಕ್ಕಿ ಮೊಟ್ಟೆಗಳನ್ನು ನೋಡೋದಕ್ಕೆ ಇಷ್ಟಪಡಬಹುದು ಅಂದ್ಕೊಂಡಿದೀನಿ," ಮುಗುಳ್ನಗುತ್ತಾ ಹುಡುಗನೆಂದ.

"ಅದೆಲ್ಲ ಆ ಮೇಲೆ [illegible]. ನೀನು ಕೈ ತೊಳಕೊಂಡಿದ್ದೀಯಾ?" ಆಕೆ ಕೇಳಿದಳು.

"ಹೂಂ."

"ಹಾಗಿದ್ರೆ [illegible], ನಿಮ್ಮಪ್ಪ [illegible]?"

"ಅವ್ರು [illegible] ಕೋಣೆಯಲ್ಲಿ

ದ್ದಾರೆ. ಬಿಸ್ಕೀಟ್ ಅಂದ್ರಿಷ್ಟ," ದೊಡ್ಡ ಹುಡುಗ ನುಡಿದ.

"ಹಕ್ಕಿ, ಮೊಟ್ಟೆಗಳನ್ನ ನೋಡೋಣ," ರಿಚರ್ಡ್ಸನ್ ನುಡಿದ. ಅದಕ್ಕೆ ಆಕೆ, "ಅಯ್ಯೋ. ಅವೆಲ್ಲ ತುಂಬಾ ಹಳೇವು. ಅವನ ಚಿಕ್ಕಪ್ಪ ಅವನಿಗೆ ಕೊಟ್ಟಿದ್ದು. ಎಲ್ಲೋ ಸ್ವಲ್ಪ ಇದ್ದಾವೆ. ಅದಿರ್ಲಿ. ನೀವಿನ್ನೂ ಇನ್ನೂ ಸ್ವಲ್ಪ ಶೆರ್ರಿ ತೊಗೋತೀರಾ?" ಎಂದು ವಿಚಾರಿಸಿಕೊಂಡಳು. ಆತ ತಲೆಯಾಡಿಸಿ ಆಕೆಯ ಮುಖವನ್ನು ನೋಡದೆ ಆಕೆ ಕೇಳಿದ್ದಕ್ಕೆ 'ಥ್ಯಾಂಕ್ಸ್' ಎಂದು ಮೊಟ್ಟೆಗಳನ್ನು ಹಿಡಿದು ನಿಂತಿದ್ದ ಹುಡುಗನತ್ತ ನಡೆದ. ಹುಡುಗ ಆತನ ಧಾವನೆಯನ್ನೂ ಪ್ರಶ್ನಿಸದೆ ಬಣ್ಣದ ತಿರುಗುವ ತಟ್ಟೆಯನ್ನು ಹಿಡಿದು ಸೇವಕನಂತೆ ನಿಂತಿದ್ದ.

"ಕೆಲವು ಹಳೆಯದು, ಕೆಲವು ಹೊಸವು ಇದಾವೆ. ಕೆಲವನ್ನ ನಾನೇ ಸಂಗ್ರಹಿಸಿದೀನಿ. ಇದು ಯಾವುದರದು ನಿಮಗೆ ಗೊತ್ತೇ?"

"ಇದು ಹೆರಾನ್ ಹಕ್ಕಿಯದ್ದಾ?"

"ನಾನೂ ಹಾಗೇ ಅಂದ್ಕೊಂಡಿದ್ದೆ. ನನಗೆ ಖಾತ್ರಿ ಇರಲಿಲ್ಲ."

ಒಳಭಾಗದಿಂದ ಆಕೆ ಅವನನ್ನು ಕರೆದಳು: "ಟಾ. ಒಳಗೆ ಹೋಗೋಕೆ ಮುಂಚೆ ಶೆರ್ರಿ ತೊಗೊಳ್ಳಿ."

"ಓ! ಅಲ್ಲವೇನಲ್ಲ, ಅದು ರಾತ್ರಿ ರಾತ್ರಿ ಹಕ್ಕಿಯದು, ಅದೊಳ್ಳೆ ಚೆನ್ನಾಗಿದೆ." ಆತ ನುಡಿದ.

"ಹೌದು, ನಾನೇ ಅದನ್ನ ಕಂಡಿದ್ದಾಕ್ಷಣ, ಅದು ಸರಿಯೇ..."

"ಬಿ ಅದನ್ನ ಈಗ ತೆಗೆಯಬೇಡ, ಆ ಹೆಂಗಸು ಹೇಳಿದ್ಲು." ಮೆಲ್ಲಗೆ ಗೊಣಗಿತ್ತು. ಅದಕ್ಕೆ ಅಮ್ಮನಿಗೆ ಇನ್ನೊಂದು ದಿನ ತೋರಿಸ್ತೀನಿ," ಅವನ ತಾಯಿ ಹೇಳಿದಳು. ಆ ಬಗ್ಗೆ ಹುಡುಗನಿಗೆ ಬೇಸರವಾಯಿತು. ಆದರೆ ಆಕೆ ಅದನ್ನ ಗಮನಿಸಲಿಲ್ಲ. ತಾನು ಹಿಡಿದ ಶೆರ್ರಿ ಗ್ಲಾಸಿನ ಮೂಲಕ ರಿಚರ್ಡ್ಸನ್ನನ ಕಣ್ಣುಗಳ ಸಂಧಿಸಿದ್ದಳು, ಏನೋ ಅಸ್ಪಷ್ಟ ಜಿಗುಟಾದ ಅನುಮಾನ, ಅನಿಶ್ಚಿತತೆಯ ಸುಳಿಯಲ್ಲಿ ಆಕೆ ಸಿಲುಕಿದಂತಿತ್ತು.

ಬಾಗಿಲಿನಲ್ಲಿದ್ದ ದೊಡ್ಡ ಹುಡುಗ ಕೂಗಿದ: "ಅಪ್ಪ ಇಲ್ಲಿದಾರೆ. ಈಗ ಬಂದ್ಬಿಟ್ರು." ಆತ ಆಕೆಯ ಕೈಯಲ್ಲಿದ್ದ ಶೆರ್ರಿ ಗ್ಲಾಸನ್ನು ತೆಗೆದುಕೊಂಡು ತಿರುಗಿದ. ಬಾಗಿಲಿನಲ್ಲಿ ನಿಂತ ಹಿರಿಯ ಹುಡುಗನೇ ಬೆಳೆದು ನಾಲ್ವತ್ತು ವರ್ಷದವನಾದಂತೆ ಕಾಣಿಸಿತು. ಬಲಿಷ್ಠ ದೇಹದ ಜಬರ್ದಸ್ತಾಗಿ ಬೆಳೆದ ಹುಡುಗನಂತಹುದೇ ಒರಟು ಕೂದಲಿನ ತಂದೆ ಬಾಗಿಲಿನಲ್ಲಿ ನಿಂತು ಕೂದಲು ತುಂಬಿದ ಕಂದು ಬಣ್ಣದ ತನ್ನ ಕೈಯುಜ್ಜುತ್ತಿದ್ದರು.

"ನೀವು ಸರಿಯಾದ ವೇಳೆಗೆ ಬಂದಿರಿ. ಇನ್ನು ಒಳಕ್ಕೆ ಹೋಗೋಣ." ಎಂದು ಆಕೆ ನುಡಿದಳು. ಆಕೆ ತುಂಬ ಗಲಿಬಿಲಿಗೊಂಡಿದ್ದಳು. ಪರಿಚಯ ಮಾಡಿಸಿಕೊಡುವುದನ್ನೂ ಮರೆತು [illegible] ಹೆಚ್ಚು ಹೆಚ್ಚಾಗಿ ಆಕೆ ಏನೋ ಮಾತಾಡಿದಳು.

"ಏನೂ ಬೇಕಿಲ್ಲ, ಏನೂ ಬೇಕಿಲ್ಲ. ಆ ಹಿಪ್ಪುಬಾಂಡನ್ನೆಲ್ಲಾ ನಾವು ತಿಂದ್ಕೋತೀವಿ." ಬಿಸ್ಕತ್ತು ಹುಡುಗನ ತಂದೆ ಅವನ ಕೈ ಕುಲುಕಿದರು. ಬಿಗಿಯಾದ ಬೆಚ್ಚನೆಯ ಬಲಿಷ್ಠ ಕೈಗಳು.

"ನೀವು ಯಾವ ಹಾದೀಲಿ ಹೋಗಿದ್ರಿ?" ಎಂದು ಆತ ಕೇಳಿದ್ದಕ್ಕೆ, "ಕ್ಲಿಫ್ ಗಿಡಗಳಿರೋ ಬಯಲಿನ ಮೂಲಕ ನಡೀತಾ ಹೋಗಿದ್ವಿ," ಎಂದು ಆಕೆಯೆಂದಳು.

"ಯಾವುದಾದ್ರೂ ಹಕ್ಕಿಗಳನ್ನ ಕಂಡ್ರಿ?"

"ಬೇರೆ ಏನೋ ರಾಬಿ, ಗಲ್ ಮೊಟ್ಟೆಗಳನ್ನ ಈಗ ತೆಗೆದುಬಿಟ್ಟಿದಾರೆ... ಇನ್ನ ಯಾವೂ ಅಲ್ಲಿ ಕಂಡಿಲ್ಲ," ಆಕೆ ನುಡಿದಳು.

"ಏನೋ ಕೆಮ್ಮುಗಾಳಿ; ಯಾರೋ ಥರ ಅನ್ನಿಸ್ತಿತ್ತು ಇದು."

ಹುಡುಗ ಮೊಟ್ಟೆಗಳಿದ್ದ ಆ ಬಟ್ಟಲನ್ನು ಮೇಜಿನ ಮೇಲಿಟ್ಟು ಸಂತಸ ಬರದೆ ಕೋಣೆಯಿಂದ ಹೊರಟು ಮಾನಸಿಕ ಮೌನಕ್ಕೆ ಹಿಂಭಾಗದಲ್ಲಿದ್ದ ಆಟದ ಕೋಣೆಯತ್ತ ಹೋದನು.

ಮನೆಯ ಪಕ್ಕದಲ್ಲಿದ್ದ ವಾಲ್‌ನಟ್ ಮರ ಇನ್ನೂ ಎಲೆ ತುಂಬಿಕೊಂಡೇ ಇದ್ದುದರಿಂದ ಅದರ ನೆರಳುಬಿದ್ದು ಅಡಿಗೆಮನೆ ಕೋಣೆಯಲ್ಲಿ ಮಬ್ಬುಗತ್ತಲೆ ಇತ್ತು. ಮುದುಗೇರಲ್ಲಿಯ ಮೇಜಿನ ಮೇಲಿದ್ದ ದೀಪ ಹಾಕಿದ. ಮೇಜಿನ ಮೇಲೆ ಕೆನ್ನೀರಳೆ ಬಣ್ಣದ ಪಾತ್ರೆಯಲ್ಲಿ ಬೇಯಿಸಿದ ಹಂದಿಯ ಕಾಲಿನ ಮಾಂಸ, ಅದರ ಪಕ್ಕದಲ್ಲಿ ತಣ್ಣನೆಯ ಫೆಸೆಂಟ್ ಪಕ್ಷಿಗಳು, ಬ್ರೆಡ್ ಮತ್ತು ಸಾಲಡ್, ಬಟರ್‌ನ ದೊಡ್ಡ ಚೂರುಗಳು ಮುಂತಾದವು; ಜೊತೆ ಬೀರ್ ಬಾಟಲಿಗಳೂ ಇದ್ದುವು.

ಆಕೆ ಮಾತನಾಡಲಿಲ್ಲ. ಅವರು ತಿನ್ನಲಾರಂಭಿಸಿದರು. ರಿಚರ್ಡ್‌ಸನ್. ಏನಾದರೂ ಹೇಳಬೇಕಲ್ಲ, ಎಂದು ಹವಾಮಾನದ ಬಗ್ಗೆ ಮಾತಾಡಿದ. ಅದಕ್ಕೆ, "ಅಪ್ಪ, ಬೇಸಿಗೆ ಎಷ್ಟು ಬಿಸಿಯಾಗಿ ನೆಲ ಒಣಗಿದೆ. ಮತ್ತು ಹಕ್ಕಿಗಳಿಗೆ ಇದು ಎಷ್ಟು ಹಾನಿಕರವಾಗಿದೆ." ಎಂದು ಮಾತಾಡಿದರು.

"ತುಂಬಾ ಕೆಟ್ಟೋಗಿದೆ," ಎಂದು [illegible] ಬಾರಿ ನುಡಿದರು; "ತುಂಬಾ ಭೀಕರವಾಗಿದೆ ಪಕ್ಕಿಗಳೇ ಇರೋಲ್ಲ."

ರಿಚರ್ಡ್‌ಸನ್‌ಗೆ ಏನನ್ನಬೇಕೋ ತಿಳಿಯಲಿಲ್ಲ. "ಆಹಾ, ಇದು ತೀರ ವಿಶೇಷ. ವಾರಿಡ್ಜ್? (ಒಂದು ಬಗೆಯ ಸಣ್ಣ ಹಕ್ಕಿ)ಗಳಾದರೂ ಸಿಗುತ್ತವಾ?"

"ಅಯ್ಯೋ, ಅವೂ ಬೆಂಕಿ, ಬೆಂಕಿ, ಊಹೆಗಳಾಗ್ಬಿಟ್ಟಿದ್ದಾವೆ; ಹತ್ರ ಹೋಗೋಕೆ ಆಗೋಲ್ಲ. ಏನೋ ಇದು ತುಂಬಾ ಭೀಕರ ಅನ್ಸುತ್ತೆ. ಏನೋ ನಾವು ಹ್ಯಾಗೆ ಬದುಕಬೇಕೋ ನಂಗೊಂದೂ ತೋಚ್ತಾ ಇಲ್ಲ."

ರಿಚರ್ಡ್‌ಸನ್ ಮಾತಾಡದೆ ಉಣ್ಣುತ್ತ, ಹೊಲಮನೆಯ ಅಂಗಳದಾಚೆ ಹಣ್ಣಾಗುತ್ತಿರುವ ಚೆಸ್ಟ್‌ನಟ್ ಎಲೆಗಳ ನಡುವೆ ಇಳಿಮುಖವಾಗುತ್ತಿದ್ದ ಗಾಳಿಯ ಸದ್ದನ್ನು ಆಲಿಸಿದ. ಸಂಜೆ ಸುಂದರವಾಗಿತ್ತು. ಪಚ್ಚೆ ವರ್ಣದ ವಾಲ್‌ನಟ್ ಎಲೆಗಳ ಕೆಳಗೆ ಆಗಸ ಕಂದು ನೀಲಿ ಬಣ್ಣ ತಾಳಿತ್ತು. ಎಲ್ಲೋ ಹೊಲಗಳಾಚೆ ಒಂದು ಏಕಾಕಿ ಫೆಸೆಂಟ್ ಪಕ್ಷಿ ಚೀತ್ಕರಿಸಿತು.

"ಮಾಂಸ ಹ್ಯಾಗಿದೆ ನಿಮಗೆ" ([illegible]) ಅಪ್ಪ ಒಂದು ದೊಡ್ಡ ಗುಟುಕು ಬೀರನ್ನು ಕುಡಿದು ಕೇಳಿದರು.

"ಸ್ವಾದಿಷ್ಟವಾಗಿದೆ, ತುಂಬಾ ಸೊಗಸಾಗಿದೆ," ಅಂದನು.

"ನಮ್ಮ ಸ್ವಂತದ್ದೇ ಕಡೆಯ ಪಕ್ಷ ಯಾವಾಗಲೂ ಇದಾದರೂ ಆಗಿರುತ್ತೆ. ಅಂತೂ ಬದುಕಿರ್ಬೋದು," ತಂದೆಯೆಂದರು.

"ನೋಡು, ನಾನು ಹೇಳಿದ್ನಲ್ಲ," ಆಕೆ ಮಾತಾಡಿದಳು. ರಿಚರ್ಡ್‌ಸನ್ ತೀಕ್ಷ್ಣವಾಗಿ ಆಕೆಯ ಧ್ವನಿ ಬಂದತ್ತ ಮೇಜಿನ ಆಚೆಯಿಂದ ತಿರುಗಿ ನೋಡಿದ. ಆಕೆ ಅವನತ್ತ ಪ್ರಶಾಂತ ದೃಷ್ಟಿಯಿಂದ ನೋಡಿದಳು. ಆದರೆ ಆ ನೋಟದಲ್ಲಿ ಜೀವವಿರಲಿಲ್ಲ. ಆಕೆಗೆ ಬಹಳ ಕಾಲ ಅವನನ್ನು ನೋಡಲಾಗಲಿಲ್ಲ.

ಆಕೆಯ ಕಣ್ಣುಗಳು ಭಾವಾವೇಶದಿಂದ, ಬಯಕೆಯಿಂದ, ತುಂಬಿಹೋಗಿದ್ದುವು. ಫೆಸೆಂಟ್ ಪಕ್ಷಿ ಮತ್ತೊಮ್ಮೆ ದೂರದ ಹೊಲದಿಂದ ಚೀತ್ಕರಿಸಿತು. ಒಂದು ಕ್ಷಣ ನೋಡಿದಾದ ಅವ ಮಿಡುಕಿದ. "ನೋಡು, ನಾನು ಹೇಳಿದ್ನಲ್ಲ, ನಮಗೆ ಇಲ್ಲಿ ಯಾವುದಕ್ಕೂ ಕೊರತೆಯಿಲ್ಲ. ನಮಗೆ ಏನು ಬೇಕೆನಿಸುತ್ತಿತ್ತೋ ಅವೆಲ್ಲ ಇವೆ," ಆಕೆ ನುಡಿದಳು.



ಏಪ್ರಿಲ್ ಹಸಿರು ವಿಶಾವೆಯನ್ನೆತ್ತಿ ಜಗತ್ತು ಮುಂದುವರಿಯಲು ಸಂಜ್ಞೆ ಮಾಡುತ್ತದೆ.

-ಕ್ರಿಸ್ಟೋಫರ್ ಮಾರ್ಲೆ

ಅನಿಸಿಕೆ

ಅನುಕಂಪಕ್ಕೂ ಅಭಾವವೆ?

ನಂಬರ್ ೧೬೭ನೇ ಬಸ್ಸು ಬೆಂಗಳೂರು ಬಸ್ ನಿಲ್ದಾಣದಿಂದ ಹೆಸರುಘಟ್ಟ ವೃತ್ತದವರೆಗೆ ಓಡಾಡುತ್ತದೆ. ಈ ಬಸ್ಸಿನಲ್ಲಿ ಬರುವ ಕೆಲವು ಪ್ರಯಾಣಿಕರು, ಇತರೆ ಬಸ್ಸುಗಳಲ್ಲಿ ಬರುವವರಿಗಿಂತ ತೀರಾ ಭಿನ್ನವಾಗಿರುತ್ತಾರೆ. ಏಕೆಂದರೆ ಈ ಬಸ್ಸು 'NIMHANS' ಮೂಲಕ ಹೋಗುತ್ತದೆ.

ಮಾನಸಿಕ ಅಸ್ವಸ್ಥತೆ ಇರುವ ವ್ಯಕ್ತಿಯು ಅನಿಸಿಕೆ, ಕ್ರಿಯೆಗಳು ನಮಗೆ ಹಾಸ್ಯಾಸ್ಪದವೆನಿಸಿದರೂ ಅವರಿಗೆ ಅದೇ ಸರಿಯೆಂದು ತೋರುತ್ತದಲ್ಲ! ಜೋರಾಗಿ, "ರೈಟ್", "ಹೋಲ್ಡ್ಯಾನ್" ಎಂದು ಕೂಗುವುದು, ಡ್ರೈವರ್ ಏನಾದರೂ ಕೆಳಗಿಳಿದು ಹೋಗಿದ್ದರೆ ತಾನೇ ಡ್ರೈವ್ ಮಾಡಲು ಹೋಗುವುದು, ಬಸ್ಸಿನಲ್ಲಿ ಬರೆದಿರುವ "ಹೆಂಗಸರಿಗೆ", "ಧೂಮಪಾನ ನಿಷೇಧಿಸಿದೆ", "ಚೀಟಿಯನ್ನು ಕೇಳಿ ಪಡೆಯಿರಿ" ಮುಂತಾದ ಸೂಚನೆಗಳನ್ನು ಜೋರಾಗಿ ಓದುವುದು, ಇವೆಲ್ಲಾ ತೀರಾ ಸಾಮಾನ್ಯ ಹುಚ್ಚಾಟಗಳು. ಇದು ಇತರೆ (ತಲೆ ಸರಿ ಇರುವ?) ಪ್ರಯಾಣಿಕರಲ್ಲಿ ನಗುವಲೆಗಳನ್ನೆಬ್ಬಿಸಿದರೂ, ಅಕ್ಕನೋ, ಅಣ್ಣನೋ ತಾಯಿಯೋ ಆಗಿರಬಹುದಾದ ಇಂಥಾ ರೋಗಿಗಳನ್ನು ಕರೆದು ಕೊಂಡು ಬಂದಿರುವವರಿಗೆ ಆಗುವ ಮಾನಸಿಕ ಹಿಂಸೆ ಅನುಭವಿಸಿದವರಿಗೆ ಮಾತ್ರ ಗೊತ್ತು.

ಇಡೀ ಬಸ್ಸಿನ ಎಲ್ಲರ ದೃಷ್ಟಿಯೂ ಇವರ ಮೇಲೆಯೇ. ರೋಗಿ ಕ್ಷಣಕ್ಕೊಂದು ಮಾಡುವ ಕೀಟಲೆಗಳಿಗೆ ಬಸ್ಸೆಲ್ಲಾ ಗೊಳ್ಳೆಂದು ನಗುತ್ತದೆ. ಈತನಿಗೋ ಜೀವ ಹಿಂಡಿ ಹೋಗುತ್ತದೆ ಇನ್ನು ರೋಗಿ ಯೇನಾದರೂ ಹದಿಹರೆಯದ ಹುಡುಗಿಯೋ ಹೆಂಗಸೋ ಆಗಿದ್ದು ಗಂಡಸೊಬ್ಬ ಅಂಥಾ ರೋಗಿಯನ್ನು ಕರೆದುಕೊಂಡು ಬಂದಿದ್ದ ರಂತೂ ಸೀರೆ ಸೆರಗನ್ನು ಸರಿಪಡಿಸುವುದರಿಂದ ಹಿಡಿದು ಎಲ್ಲಾ ರೀತಿಯ ಹಿಂಸೆಗೆ ಒಳಗಾಗಬೇಕು. ಇಷ್ಟೆಲ್ಲಾ ಅನುಭವಿಸಿ ಹುಚ್ಚಾಸ್ಪತ್ರೆಗೆ ಹೋದರೆ, ಅಲ್ಲಿಯ ಡಾಕ್ಟರ್, ನರ್ಸ್‌ಗಳ ಉಪಚಾರ ಜೊತೆಯಲ್ಲಿ ಇದ್ದವರಿಗೂ ಹುಚ್ಚು ಹಿಡಿಸದಿದ್ದರೆ ಅದೊಂದು ಆಶ್ಚರ್ಯವೇ ಸರಿ.

—ನಟರಾಜ್ ಎಸ್.

ನೀವು ಕಣ್ತೆರೆದು ನೋಡಿದರೆ
ಬಾನಗರ್ಭದಲ್ಲಿ ಏನು ಕಾಣುವಿರೆಂದು ಗೊತ್ತೆ?

ಇದು ಜನೆವರಿ ತಿಂಗಳ ಆಕಾಶ

ಜಿ. ಟಿ. ನಾರಾಯಣರಾವ್
ಚಿತ್ರ: ಕೆ. ಮುರಳೀಧರರಾವ್


ಮೈಸೂರು ನಗರದ ಒಂದು ಬಯಲಿನಲ್ಲಿ ನಿಂತು ಆಕಾಶ ನೋಡುತ್ತಿದ್ದೇನೆ. ಈ ನೆಲೆ ತುಸು ಎತ್ತರವಾಗಿದ್ದು ಆಕಾಶದ ಬಹುಭಾಗ ನನ್ನ ದೃಷ್ಟಿಸೀಮೆಯೊಳಗೆ ಬರುತ್ತಿದೆ. ಸೂರ್ಯಾಸ್ತವಾಗಿ ಕೆಲವೇ ನಿಮಿಷಗಳು ಸಂದಿವೆ. ಇಲ್ಲಿ ಆಸುಪಾಸಿನಲ್ಲೆಲ್ಲಿಯೂ ವಿದ್ಯುದ್ದೀಪಗಳ ಗಲಭೆ ಇಲ್ಲವಾದದ್ದರಿಂದ ಆಕಾಶದ ಮೂಕಗಾನವನ್ನು ಆಲಿಸುವುದು ಸುಲಭವಾಗಿದೆ.

ನಕ್ಷತ್ರಗಳು ಇನಿತೂ ಪೂರ್ವಸೂಚನೆ ಕೊಡದೆ ರಂಗ ಪ್ರವೇಶಿಸಿ ಇರುಳ ಬಾನಿಗೆ ಕುಂದಣ ಕೂರಿಸುತ್ತಿವೆ. ಆಕಾಶದ ಅಪಾರ ನೀಲಿಮೆಯಲ್ಲಿ ಎದ್ದು ತಿದ್ದಿ ಎರಚಿಹೋಗಿರುವ ಮಿನುಗುಗಳ ಮಂದಹಾಸ ನನ್ನನ್ನು ಕನಸಿನ ಲೋಕಕ್ಕೆ ಒಯ್ಯುತ್ತಿದೆ. ಕಲ್ಪನೆ ಅಕ್ಕಪಕ್ಕದ ಹಲವಾರು ಚುಕ್ಕಿಗಳನ್ನು ಸೇರಿಸಿ ಚಿತ್ರ ಕಾಣಿಸುತ್ತಿದೆ. ನನಗೆ ಈ ಗಳಿಗೆ ಯಾವ ಚಿತ್ರ ಕಾಣುತ್ತದೋ [illegible] ನಿಮಗೂ ಅದು ಸರಿಯಾಗಿ ಅದೇ ರೀತಿಯಲ್ಲಿ ಕಾಣುತ್ತದೆ. ನಿಮ್ಮ ಮತ್ತು [illegible] ಭೌತ ಅಂತರ ನಮ್ಮ ದೃಷ್ಟಿಯಿಂದ ಹೆಚ್ಚಾಗಿದ್ದರೂ ನಮ್ಮಿಂದ ನಕ್ಷತ್ರಗಳ ದೂರ ಅಗಾಧವಾಗಿರುವುದೇ ಇದರ ಕಾರಣ.

ನಾನೀಗ ಪಶ್ಚಿಮಾಭಿಮುಖಿಯಾಗಿ ನಿಂತಿದ್ದೇನೆ. ಹಾರಿಜನನಿಂದ (horizon = ಕ್ಷಿತಿಜ; ಆಕಾಶವನ್ನೂ ಭೂಮಿಯನ್ನೂ ಪ್ರತ್ಯೇಕಿಸುವ ಕಾಲ್ಪನಿಕವೃತ್ತ) ಮೇಲಕ್ಕೆ ದೃಷ್ಟಿಹರಿಸಿದಂತೆ ನನ್ನ ನಡೆಯನ್ನು ಬೆಳಕಿನ ಒಂದು ಉಂಡೆ ತಡೆದು ನಿಲ್ಲಿಸುತ್ತದೆ. ಇದರ ಬಳಿ ಬೆಳಕು ತುಂಡಾಗದೆ ಹರಿಯುತ್ತಿದೆ. ಇದು ಶುಕ್ರ. ಇದರ ಜೊತೆಗೆ ತುಸು ದಕ್ಷಿಣಕ್ಕಿರುವ ಕೆಂಪುಬಣ್ಣದ ಬೆಳಕಿನ ಬೊಟ್ಟು ಕುಜ.

ಶುಕ್ರ ಮತ್ತು ಕುಜ ಎರಡೂ ಗ್ರಹಗಳು — ಭೂಮಿಯಂತೆ. ಇವುಗಳಿಗೆ ಸ್ವತಂತ್ರ ಪ್ರಕಾಶವಿಲ್ಲ. ಸೂರ್ಯನ ಪ್ರಕಾಶವನ್ನು ಪ್ರತಿಫಲಿಸಿ ಬೆಳಗುತ್ತವೆ — ಚಂದ್ರನಂತೆ. ಆದರೆ ಚಂದ್ರ ಮಾತ್ರ ಗ್ರಹವಲ್ಲ, ಉಪಗ್ರಹ. ಗ್ರಹಗಳು ಸೂರ್ಯನ ಸುತ್ತ ಪರಿಭ್ರಮಿಸುತ್ತವೆ — ಭಕ್ತರು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕುವಂತೆ. ಉಪಗ್ರಹ ಅದರ ಮಾತೃಗ್ರಹದ ಸುತ್ತ ಪರಿಭ್ರಮಿಸುತ್ತದೆ— ಪತಂಗ ಭಕ್ತನ ಸುತ್ತುವಂತೆ. ಚಂದ್ರ ನಮ್ಮ ಅಂದರೆ ಭೂಮಿಯ ಏಕೈಕ ನೈಸರ್ಗಿಕ ಉಪಗ್ರಹ.

ಶುಕ್ರ, ಭೂಮಿ, ಕುಜ ಅಲ್ಲದೆ ಇನ್ನೂ ಮೂರು ದೃಗ್ಗೋಚರ ಗ್ರಹಗಳಿವೆ: ಬುಧ, ಗುರು, ಶನಿ. ಈ ಮೈಕ ಬರಿ ಮತ್ತು


ಧ್ರುವನಕ್ಷತ್ರದೆಡೆಗೆ
ಕ್ರತು
ಪುಲಹ
ಅತ್ರಿ
ಅಂಗೀರಸ್ಸು
ವಸಿಷ್ಠ
ಪುಲಸ್ತ್ಯ
ಸಪ್ತರ್ಷಿಮಂಡಲ
ಸಹದೇವಹಂಚಮು
ಸಹದೇವ
ಸ್ವಾತೀ
ಉತ್ತರಾ
ಕನ್ಯಾದ್ವಿತೀಯ
ಕನ್ಯಾ
ಚಿತ್ರಾ
ಹಸ್ತಾ

ಗುರು ಈಗ ಸೂರ್ಯನ ದಿಶೆಯಲ್ಲಿಯೇ ಇರುವುದರಿಂದ ನಮಗೆ ಕಾಣುವುದಿಲ್ಲ. ಶನಿಯನ್ನು ಮುಂಜಾನೆಯ ಮೂಡಲ ಬಾನಿನಲ್ಲಿ ನೇಸರು ಮೂಡುವ ಮೊದಲು ನೋಡಬಹುದು. ಶನಿಯ ಮನೆ ಈಗ ವೃಶ್ಚಿಕ ರಾಶಿ (Scorpius). ಇದರಲ್ಲಿರುವ ಕೆಂಪು ನಕ್ಷತ್ರ ಜ್ಯೇಷ್ಠಾ (Antares).

ಆಕಾಶವೊಂದು ನಕ್ಷತ್ರಾಂಕಿತ ಗೋಳ. ಇದನ್ನು ಅಲಂಕರಿಸಿರುವ ನಕ್ಷತ್ರ ಚಿತ್ರಗಳು ಕಾಲದಿಂದ ಮಾಸುವುದಿಲ್ಲ. ಇವುಗಳ ಸಾಪೇಕ್ಷ ಸ್ಥಾನಗಳು ಕೂಡ ಹಾಗೆಯೇ — ರೇಲ್ವೆ ಬಂಡಿ ಚಲಿಸಿದರೂ ಅದರ ಒಳಗಿನ ಸ್ಥಿರ ಆಸನಗಳ ಸಾಪೇಕ್ಷ ಸ್ಥಾನಗಳು ಹೇಗೆ ಬದಲಾಗುವುದಿಲ್ಲವೋ ಹಾಗೆ.

ಆಕಾಶಗೋಳ ನಮ್ಮ ಸುತ್ತ ಸ್ಥಿರ ವೇಗದಿಂದ ಪೂರ್ವ ಪಶ್ಚಿಮ ದಿಶೆಯಲ್ಲಿ ಆವರ್ತಿಸುತ್ತಿರುವಂತೆ ಭಾಸವಾಗುತ್ತದೆ. ನಕ್ಷತ್ರಚಿತ್ರಗಳೆಲ್ಲವೂ ಪೂರ್ವದಿಂದ ಪಶ್ಚಿಮಕ್ಕೆ ಸದಾ ಮೆರವಣಿಗೆಯಲ್ಲಿ ಸಾಗುತ್ತಿರುವ ದೃಶ್ಯ ನಮ್ಮೆಲ್ಲರಿಗೂ ಸುಪರಿಚಿತಾನುಭವ.

ಚಂದ್ರ ಮತ್ತು ಗ್ರಹಗಳು ನಕ್ಷತ್ರ ಪರದೆಯ ಮುನ್ನೆಲೆಯಲ್ಲಿ ಸ್ವತಂತ್ರವಾಗಿ ಚಲಿಸುವ ಕಾರ್ಯಗಳು — ನಾಟಕ ರಂಗದಲ್ಲಿಯ ನಟರಂತೆ. ಚಂದ್ರನ ದೈನಂದಿನ ಚಲನೆಯನ್ನು ಬಲು ಸುಲಭವಾಗಿ ಗುರುತಿಸಬಹುದು. ಈ ತಿಂಗಳ ಮೊದಲ ಕೆಲ ದಿನಗಳಲ್ಲಿ ಚಂದ್ರನ ಸ್ಥಾನಗಳು ಬದಲಾಗುವ ಪರಿ ಹೀಗಿದೆ.

೧-೧-೮೫	ಮಂಗಳವಾರ ಮೇಷರಾಶಿ ಅಶ್ವಿನೀ ನಕ್ಷತ್ರ
೩-೧-೮೫	ಗುರುವಾರ ಕೃತ್ತಿಕಾ ನಕ್ಷತ್ರ ವೃಷಭರಾಶಿ
೪-೧-೮೫	ಶುಕ್ರವಾರ ರೋಹಿಣಿ ನಕ್ಷತ್ರ
೬-೧-೮೫	ಆದಿತ್ಯವಾರ ಆರ್ದ್ರಾ ನಕ್ಷತ್ರ
೭-೧-೮೫	ಸೋಮವಾರ ಮಿಥುನರಾಶಿ
೧೫-೧-೮೫	ಮಂಗಳವಾರ ಸ್ವಾತಿ ನಕ್ಷತ್ರ

ಇವನ್ನು ಗುರುತಿಸುವ ಬಗೆಯನ್ನು ಈಗ ವಿವರಿಸುತ್ತೇನೆ.

ಸೂರ್ಯಾಸ್ತವಾಗಿ ಕೆಲವು ನಿಮಿಷಗಳು ಸಂದಿವ, ನಮ್ಮ ನೆತ್ತಿಯ ಮೇಲೆ ಈಗ ಮಂದ ಪ್ರಕಾಶದ ನಾಲ್ಕು ನಕ್ಷತ್ರಗಳು ರಚಿಸುವ ದೊಡ್ಡ ಚೌಕ ನಿಂತಿದೆ. ಇದು ನಕುಲ (Pegasus). ಇದರಿಂದ ಪೂರ್ವ — ಉತ್ತರಕ್ಕೆ ಮೂರು ಬಿಡಿ ನಕ್ಷತ್ರಗಳು ಹರಡಿದ್ದು ಇವೊಂದು ವಿಶಾಲಕೋನವನ್ನು ರಚಿಸುತ್ತವೆ. ಇದೇ ಮೇಷರಾಶಿ.

ಕೃತ್ತಿಕೆ (Pleaides) ಒಂದು ನಕ್ಷತ್ರವಲ್ಲ, ಅಸಂಖ್ಯ ನಕ್ಷತ್ರಗಳ ನಿಬಿಡ ಒಕ್ಕೂಟ. ಬರಿಗಣ್ಣಿನಿಂದ ಇದರಲ್ಲಿ ಆರು ಬಿಡಿ ನಕ್ಷತ್ರಗಳನ್ನು ಎಣಿಸಬಹುದು. ತೀಕ್ಷ್ಣ ದೃಷ್ಟಿ ಇರುವವರು ಏಳರ ವರೆಗೆ ಗುರುತಿಸುವುದುಂಟು.

ಇದೇ ವಲಯದಲ್ಲಿ ಐದು ನಕ್ಷತ್ರಗಳು ರಚಿಸುವ V-ಆಕಾರ ಎದ್ದು ಕಾಣುತ್ತದೆ. ಇದು ವೃಷಭರಾಶಿ. ಇದರ ಕೋನಶೃಂಗ ಪಶ್ಚಿಮಾಭಿಮುಖವಾಗಿದೆ. ದಕ್ಷಿಣ ಬಾಹುವಿನ ತುದಿ ನಕ್ಷತ್ರದ ಬಣ್ಣ ಮಾಣಿಕ್ಯ ಕೆಂಪು. ಇದು ರೋಹಿಣಿ (Aldebaran). ಕೃತ್ತಿಕೆಯು ನೆಲೆ ರೋಹಿಣಿಯಿಂದ ತುಸು ಪಡುವಲಿಗಿದೆ.

ಮಿಥುನರಾಶಿ ಮೂಡಲು ಸ್ವಲ್ಪ ಹೊತ್ತು ಕಾಯಬೇಕಾಗುತ್ತದೆ. ಎರಡು ಉಜ್ವಲ ತಾರೆಗಳು ಇಲ್ಲಿಯ ಪ್ರಮುಖ ಆಕರ್ಷಣೆ — ಪುನರ್ವಸು ಪ್ರಥಮ (Castor) ಮತ್ತು ಪುನರ್ವಸು ದ್ವಿತೀಯ (Pollux). ಇವು ಪೂರ್ವಾಕಾಶದಲ್ಲಿರುವಾಗ ಎಡನಡೆಯದು (ಉತ್ತರ) ಪುನರ್ವಸು ಪ್ರಥಮ, ಬಲಗಡೆಯದು (ದಕ್ಷಿಣ) ಪುನರ್ವಸು ದ್ವಿತೀಯ.

ಮಧ್ಯರಾತ್ರಿಯ ಹೊತ್ತಿಗೆ ಆಕಾಶದ ಪೂರ್ವ—ಉತ್ತರ ವಲಯದಲ್ಲಿ ಸಪ್ತರ್ಷಿ ಮಂಡಲ ಉದಯಿಸಿರುತ್ತದೆ. ಸಮ ಅಂತರಗಳಲ್ಲಿ ಹರಡಿರುವ ಸಮ ಪ್ರಕಾಶದ ಈ ಏಳು ನಕ್ಷತ್ರಗಳು ಬೃಹತ್ಪ್ರಶ್ನಾರ್ಥಕ


ವಿಜಯಸಾರಥಿ
ಮಿಥುನ
ಮಹಾವ್ಯಾಧ
ಮಹಾಶ್ವಾನ

ಚಿಹ್ನೆಗಳನ್ನು ರೂಪಿಸುತ್ತವೆ: ಏನು ಜೀವ ಸರ್ಪ ಎಂಬಂತೆ! ಇವುಗಳ ಹೆಸರು ಕೆಳಗಿನಿಂದ ಮೇಲಕ್ಕೆ (ಬಲಗಡೆಯಿಂದ ಎಡಕ್ಕೆ) ಮರೀಚಿ, ವಸಿಷ್ಠ, ಅಂಗೀರಸ್ಸು, ಅತ್ರಿ, ಪುಲಸ್ತ್ಯ, ಪುಲಹ, ಕ್ರತು. ವಸಿಷ್ಠ ನಕ್ಷತ್ರದ ಒತ್ತಿಗೆ ಕೆಳಕ್ಕೆ (ಉತ್ತರ) ಇರುವ ಮಂದ ಮಿನುಗಿನ ಹುಡಿ ಅರುಂಧತಿ (Alcor). ತುಂಬ ಏಕಾಗ್ರತೆಯಿಂದ ನೋಡಿದಾಗ ಮಾತ್ರ ಇದನ್ನು ಗುರುತಿಸಬಹುದು, ಅಷ್ಟೆ.

ಪುಲಹ ಕ್ರತು ರೇಖೆಯನ್ನು ಅಂದಾಜು ಇದರ ಐದರಷ್ಟು ಮಾನದಷ್ಟು ದೂರ ಉತ್ತರದ ತಗ್ಗಿಗೆ ವೃದ್ಧಿಸಿದಾಗ ಮೊದಲು ಎದುರಾಗುವ ಕ್ಷೀಣ ಪ್ರಕಾಶದ ಒಂಟಿ ನಕ್ಷತ್ರ ಧ್ರುವ ನಕ್ಷತ್ರ. ಇದು ಮೂಡದು, ಹರದು, ಇಳಿಯದು, ಕಂತದು. ಇದರ ಸ್ಥಾನ ಸದಾ ಅಚಲ. ರಾತ್ರಿಯ ಯಾವ ಸಮಯದಲ್ಲೇ ನೋಡಿದರೂ, ಇತರ ಎಲ್ಲ ನಕ್ಷತ್ರಗಳ ಸ್ಥಾನಗಳು ಮಾತ್ರ ಬದಲಾಗಿದ್ದರೂ, ಧ್ರುವ ನಕ್ಷತ್ರ ಮಾತ್ರ ಚಲಿಸದೆ ಕದಲದೇ ಅಲ್ಲಿಯೇ ನೆಲಸಿದ್ದು ದರಹಾಸ ಪಸರಿಸುತ್ತಿರುವುದು.


ಸಪ್ತರ್ಷಿ ಮಂಡಲದ ವಕ್ರರೇಖೆಯನ್ನು ಮುಕ್ತವಾಗಿ ಮುಂದುವರಿಸಿದಾಗ ಅಂದರೆ ಕ್ರತು— ಪುಲಹ — ಪುಲಸ್ತ್ಯ — ಅತ್ರಿ— ಅಂಗೀರಸ್ಸು—ವಸಿಷ್ಠ—ಮರೀಚಿ ದಿಶೆಯಲ್ಲಿ ವೃದ್ಧಿಸಿದಾಗ ನಮ್ಮ ಗಮನವನ್ನು ಒಂದು ಮಿಂಚುಳ್ಳಿ ತಡೆದು ನಿಲ್ಲಿಸುತ್ತದೆ. ಕೆಂಪು ಹಳದಿ ನೀಲಿ ಮಿನುಗುಗಳನ್ನು ಅನು ಕ್ಷಣಾರ್ಧದಲ್ಲಿ ಪಳಪಳಿಸುತ್ತದೆ. ಅದೇ ಸ್ವಾತೀ ನಕ್ಷತ್ರ (Arcturus).

ಈಗ ಗಂಟೆ ಎಂಟಾಗಿದೆ. ಉತ್ತರಾಭಿಮುಖಿಯಾಗಿ ನಿಂತಿದ್ದೇನೆ. ಐದು ನಕ್ಷತ್ರಗಳು ರಚಿಸುವ M- ಆಕಾರ ಎದ್ದುಕಾಣುತ್ತದೆ. ಇದು ಕುಂತೀಪುಂಜ (Cassiopeia). ಇದರ ಶೃಂಗಗಳು ದಕ್ಷಿಣಕ್ಕಿವೆ. ಈ ಪುಂಜದ ಎರಡು ಕೋನಗಳ ಪೈಕಿ ಬಲ (ಪೂರ್ವ) ಕೋನದ ಸಮದ್ವಿಭಾಜಕ ನೇರ ಧ್ರುವ ನಕ್ಷತ್ರವನ್ನು ಪ್ರವೇಶಿಸುತ್ತದೆ.

ಬಲಕ್ಕೆ ತಿರುಗಿದ್ದೇನೆ. ಪೂರ್ವಾಕಾಶದ ಭವ್ಯ ವಕ್ಷತಲ ನನ್ನೆದುರು ಮೈಚೆಲ್ಲಿಕೊಂಡಿದೆ. ಇದನ್ನು ಲಗ್ಗೆ ಹತ್ತಿ ಬಂದಿರುವ ಮಹಾವ್ಯಾಧ ಪುಂಜದ (Orion) ದೈವಿಕ ಸೌಂದರ್ಯದಿಂದ ಮಂತ್ರಮುಗ್ಧನಾಗಿದ್ದೇನೆ. ತ್ರಾಪಿಜ್ಯದ(trapezium) ಆಕಾರದಲ್ಲಿರುವ ಇದರ ನಾಲ್ಕು ಮೂಲ ನಕ್ಷತ್ರಗಳಿವು: ಕೆಳ ಎಡ (ಪೂರ್ವ—ಉತ್ತರ) ಆರ್ದ್ರಾ (Betelgeuse), ಕೆಳಬಲ (ಪೂರ್ವ—ದಕ್ಷಿಣ) ವ್ಯಾಧಜಂಘಾ (Saiph), ಮೇಲೆ ಬಲ (ಪಶ್ಚಿಮ—ಉತ್ತರ) ವ್ಯಾಧ ಪೃಷ್ಠ (Rigel), ಮೇಲೆ ಎಡ (ಪಶ್ಚಿಮ—ಉತ್ತರ) ವ್ಯಾಧ ಭುಜ (Bellatrix). [illegible]— ಆರ್ದ್ರಾ ರೇಖೆ ಪಶ್ಚಿಮ—ಪೂರ್ವ ದಿಸೆಯಲ್ಲಿ ಚಾಚಿಕೊಂಡಿದೆ. ರೋಹಿಣಿ, ಆರ್ದ್ರಾ ಇವೆರಡೂ ಕೆಂಪು ನತ್ರಗಳು—ರೇಖೆಯ ಮೇಲಿರುವ ಮಂದ ಮಿನುಗುಗಳ ಹಸಿ ಮೃಗಶಿರಾ ನಕ್ಷತ್ರ. ಇದು ಆರ್ದ್ರಾ—ವ್ಯಾಧಭುಜ ರೇಖೆಯ ಎಡಕ್ಕೆ (ಉತ್ತರ) ಇದೆ.

ಮಹಾವ್ಯಾಧಪುಂಜದ ಒಳಗೆ ಏಕರೇಖಸ್ಥವಾಗಿರುವ ಮತ್ತು ಸಮ ಅಂತರಗಳಲ್ಲಿ ಹರಡಿರುವ ಮೂರು ಉಜ್ವಲ ನಕ್ಷತ್ರಗಳಿವೆ. ಇವು ತ್ರಾಪಿಜ್ಯದ ಕರ್ಣದ ನೇರ ಇಲ್ಲದಿರುವುದೊಂದು ಕೊರತೆ ಎನ್ನಿಸುತ್ತದೆ. ಇವುಗಳಿಗೆ ಒಟ್ಟಾಗಿ ವ್ಯಾಧನ ನಡುಪಟ್ಟಿಯೆಂದೂ (belt of the Orion) ಇದರ ದಕ್ಷಿಣಕ್ಕೆ ತ್ರಾಪಿಜ್ಯದ ಒಳಗೆ ಹರಡಿರುವ ಬೆಳಕಿನ ಹುಡಿಗಳಿಗೆ ವ್ಯಾಧನ [illegible] (sword of the Orion) ಹೆಸರು.

ನಡುಪಟ್ಟಿಯ ಗೆರೆಯನ್ನು ಪೂರ್ವ—ದಕ್ಷಿಣಕ್ಕೆ ವಿಸ್ತರಿಸುತ್ತೇನೆ. ಈ ಗೆರೆಯಿಂದ ತುಸು ಮೇಲಕ್ಕೆ (ಪಶ್ಚಿಮ) ಗಾಢ ನೀಲವರ್ಣದಿಂದ ಥಳಥಳಿಸುತ್ತಿರುವ ವಕ್ರಾಂತಿ ಕಾಣುತ್ತೇನೆ. ಉಜ್ವಲತೆಯಲ್ಲಿ ಇದನ್ನು ಮೀರುವ



ಇನ್ನೊಂದು ನಕ್ಷತ್ರ ಇಡೀ ಆಕಾಶರಂಗದಲ್ಲಿಲ್ಲ. ಸಕಲ ನಕ್ಷತ್ರಗಳ ಸಂಯುಕ್ತಕಾಂತಿ ಇದರಲ್ಲಿ ಘನೀಭವಿಸಿದೆಯೋ ಎಂಬ ಆಕರ್ಷಣೆ. ಇದು ಲುಬ್ಧಕ (Sirius). ಮಹಾಶ್ವಾನ ಪುಂಜದ (Canis Major) ಪ್ರಥಮ ತಾರೆ.

ಲುಬ್ಧಕದಿಂದ ನೇರ ಬಲಕ್ಕೆ (ದಕ್ಷಿಣಕ್ಕೆ) ಕಲ್ಪನೆಯ ಎಳೆಯನ್ನು ನೇಯುತ್ತೇವೆ. ಆಶ್ಚರ್ಯ! ಲುಬ್ಧಕದ ಅವಳಿಯೋ ಎಂಬಂತೆ ಇನ್ನೊಂದು ಸಮ ಉಜ್ವಲತೆಯ ನಕ್ಷತ್ರ ಪ್ರತ್ಯಕ್ಷವಾಗುತ್ತದೆ. ಇದು ಅಗಸ್ತ್ಯ (Canopus). ಉಜ್ವಲತೆಯ ಮಾನಕದಲ್ಲಿ ಲುಬ್ಧಕಕ್ಕೆ ಮೊದಲ ಮಣೆ, ಅಗಸ್ತ್ಯಕ್ಕೆ ಎರಡನೆಯ ಮಣೆ, ಸ್ವಾತೀಗೆ ನಾಲ್ಕನೆಯ ಮಣೆ, ಬ್ರಹ್ಮಹೃದಯಕ್ಕೆ ಆರನೆಯ ಮಣೆ ಮತ್ತು ವ್ಯಾಧ ಪೃಷ್ಠಕ್ಕೆ ಏಳನೆಯ ಮಣೆ ಸಲ್ಲುತ್ತವೆ.

ಬ್ರಹ್ಮಹೃದಯ (Capella) ಎಲ್ಲಿದೆ? ಇದು ವಿಜಯಸಾರಥಿ ಪುಂಜದ (Auriga) ಪ್ರಥಮ ತಾರೆ. ಮಹಾವ್ಯಾಧನ ಪರಮ ಸೌಂದರ್ಯವಿಲ್ಲದಿದ್ದರೆ ಇದರ ಉತ್ತರಕ್ಕೆ (ಈಗ ಉತ್ತರಾಭಿಮುಖಿ ಆಗಿರುವ ನಮ್ಮ ಎದುರಿಗೆ) ಅಂಕಿತವಾಗಿರುವ ವಿಜಯಸಾರಥಿ ನಮ್ಮ ಗಮನ ಮೊದಲು ಸೆಳೆಯುತ್ತಿತ್ತು. ಸುಂದರವಾಗಿ ಹರಡಿಹೋಗಿರುವ ಎಂಟು ಬಿಡಿ ತಾರೆಗಳನ್ನು ಇದರಲ್ಲಿ ಎಣಿಸಬಹುದು. ಇವನ್ನು ಕಲ್ಪನೆಯ ದಾರದಿಂದ ಕೋದರೆ ಬೆಳ್ಳಿ ಮಾಪಿನ ಪಕ್ಷಿಯ ಚಿತ್ರ ಮೂಡುತ್ತದೆ. ಆದರೆ ಮೊದಲ ನೋಟಕ್ಕೆ ಇಲ್ಲಿ ಎದ್ದು ಕಾಣುವುದು ಲಂಬಕೋನಯುತ ತ್ರಾಪಿಜ್ಯ.

ಆಕಾಶದ ಅಸೀಮ ಸೌಂದರ್ಯವನ್ನು ಆಸ್ವಾದಿಸಿ ನಿತ್ಯ ಯೌವನ ತಳೆಯಲು, ನಾವು ಕೆಲಸಮಾಡುತ್ತಿರುವ ವಿವಿಧ ರಂಗಗಳಲ್ಲಿ ನೂತನ ಭಾವನೆಗಳನ್ನು ಆವಾಹಿಸಲು ಮತ್ತು ಸದಾ ಊರ್ಧ್ವಗಾಮಿಯಾಗಿರುವ ನಮ್ಮ ಅಹಂಕಾರವನ್ನು ಹತ್ತಿಕ್ಕಿ ವಿನಯ ಕಲಿಯಲು ನಕ್ಷತ್ರ ವೀಕ್ಷಣೆಯಂತಹ ಉತ್ತಮ ಹವ್ಯಾಸ ಇನ್ನೊಂದಿಲ್ಲ. ಎಂದೇ ಇಂಗ್ಲಿಷಿನಲ್ಲಿ hitch thy wagon to a star ಎಂಬ ಸೂಕ್ತಿ— ನಿನ್ನ ಬಾಳಬಂಡಿ ನಕ್ಷತ್ರಗಾಮಿಯಾಗಿರಲಿ!

ನವೋನ್ಮೇಷದಲಿ ಭುವನ ನಾಟ್ಯವಾಡುತಿರೆ
ನವಭಾವ ನವರೂಪ ನವನಾಮಮುದಮುತೆ
ವಿಸ್ಮೃತಿಗೆಂದದನು ನೀಂ ಪಿಡಿವ ಮುನ್ನಮೆ ವಸ್ತು
ನವನಿವರ್ತಿತವಿಹುದೆ ಮುಕುಳ ಮುಖಿಯು

ಸರ್ಕಸ್ಸು – ಜೇಲು

ಸ್ವಾತಂತ್ರ್ಯ ಆಂದೋಲನದಲ್ಲಿ ಧುಮುಕಿದ್ದ ವಿನೋಬಾರನ್ನು ಆಂಗ್ಲರು ಬಂಧಿಸಿ ನಾಗಪುರದ ಜೈಲಿನಲ್ಲಿರಿಸಿದ್ದ ಸಮಯ. ಅವರನ್ನು ಕಾಣಲು ಅವರ ಗೆಳೆಯ ಗೋಪಾಲರಾವ್ ಕಾಳೆಯವರ ಪತ್ನಿ ಶಾಂತಾ ಬಂದಿದ್ದರು. ಮಾತುಕತೆಯಾಗಿ ಹೊರಡುವಾಗ ಶಾಂತಾ, "ಬಂದೀಖಾನೆವಾಸ ಹೇಗನಿಸುತ್ತದೆ?" ಎಂದು ವಿನೋಬಾರನ್ನು ಪ್ರಶ್ನಿಸಿದರು. "ಇದೊಂದು ಸರ್ಕಸ್ಸಿನ ಹಾಗಿದೆ," ಎಂದು ವಿನೋಬಾ ನಗುತ್ತಾ ಉತ್ತರಿಸಿದರು. "ಎಲ್ಲರಿಗೂ ಇದು ಕಠಿಣವಾಗಿರುವಾಗ ನಿಮಗೇನಾದರೂ ಮನೋರಂಜನೆ ಒದಗಿದೆಯೇ?" ಎಂದು ಆಕೆ ಪುನಃ ಕೇಳಿದರು. "ಸರ್ಕಸ್ಸಿನಲ್ಲಿ ಮನುಷ್ಯ ಮೃಗಗಳ ಮೇಲೆ ಅಧಿಕಾರ ನಡೆಸುತ್ತಾನೆ. ಆದರೆ ಜೈಲಿನಲ್ಲಿ ಮೃಗಗಳೇ ಮಾನವರ ಮೇಲೆ ಅಧಿಕಾರ ಚಲಾಯಿಸುತ್ತವೆ," ಎಂದರು ವಿನೋಬಾ.

ಸಂಗ್ರಹ: ನವಡಿ ಎಂ. ಗಣಪತಿ ಅಡಿಗ

ಬೇಂದ್ರೆ ಸತ್ತ ಸುಳ್ಳು ಸುದ್ದಿ?

ಈತ ಹೂತ ಹುಣಸೀ ಮರಾ
ಚಿವುಟಿದಷ್ಟೂ ಚಿಗುರೊಡವ ಮುಗುಳು
ಕಚ್ಚಿದರೆ ಮೈ ಜುಮ್ಮೆನುವ ಹುಳಿ
ಎಲೆಗೊಂದು ಹೂ ಬಿಡುವ ಏಕಮಾತ್ರ ಕಳಿ!
ಎಲೆಗಳೆಣಿಕೆಗೆ ಬೆರಳು ಕುಣಿಸಿದರೆ
ಪಕ್ಕನೆ ಶಾಕು ಹೊಡೆದಂತೆ ಮೈಯೆಲ್ಲ ಹೂವು
ಕೊನೆಗೂ ಲೆಕ್ಕ ಹತ್ತುವುದಿಲ್ಲ
ಎಲೆಗಳೆಷ್ಟು? ಇದರ ಹೂಗಳೆಷ್ಟು?
ಕೈಗೆ-ಕಣ್ಣಿಗೆ ಎಟುಕಿದಷ್ಟೇ ಕಳಿತರೂ
ತೊಟ್ಟು ಕಳಚದ ಹಣ್ಣು!
ಮಿರ ಮಿರ ಮಿಂಚುವಿದರ ಬಣ್ಣ
ಬಯಲಿಗೆಳೆಯುವದಕ್ಕೆ ಬೇಕು, ಮಿಂಚುಗಣ್ಣು!
‘ಇದು ಬರಿ ಬೆಳಗಲ್ಲೊ ಅಣ್ಣಾ —’
ಕತ್ತಲು-ಕಾಣದಿದ್ದರೆ ಇದರ ಆಳ
ಇದೊಂದು ಮಹಾ ಆಲ
ಒಳಗಿನಷ್ಟೇ ಹೊರಗೆ
ಮೈ ತುಂಬ ಬೇರುಗಳು; ಇರಬಹುದು
ಒಂದೆರಡು ಜನಿವಾರ ಪನಿವಾರಗಳ ಟಿಸಿಲು
ಅದೇ ಅಲ್ಲ ಅಸಲು
ಅದರ ಒಳಗೂ ಬೆಳಗು; ನಿತ್ಯ ಮುತ್ತಿನೆರಕ
ಕುಣಿಯ ಬಲ್ಲವಗೆ ನೆಲವೆಲ್ಲ ಸಮ
ನೆಗಡಿ ಆಗಿರದಿದ್ದರೆ ಗಮಗಮಾಗಮಾ!
ತುತ್ತಾನ ತುದಿಯಲ್ಲಿ ಕಾಲನ ಹಕ್ಕಿಯ ರೆಕ್ಕೆ ಬಡಿತ
ಟೊಂಗೆ ಟೊಂಗೆಗಳಲ್ಲಿ ಅಂಚೆ ಕೊಂಚೆಗಳ ಗೂಡು
ಕೆಳಗೆ ಹುತ್ತದೊಳಗೆ ಅಂಬಿಕಾತನಯದತ್ತ
ಓಣಿ ಓಣಿಯೊಳಗೆ ಡೋಲು ಡಮರುಗ
ಹಿಡುದು ಬಡಿದು ಜೀವನಾಡಿಯ ಮಿಡಿದು
ನಾದದೋಕುಳಿಯಾಡಿ; ಭೂಮಿಗ್ರಹ ತಾರೆಗಳಿಗು
ಕುಣಿತದ ಅಮಲೇರಿಸುವ ಬೇಂದ್ರೆ
ಸತ್ತಿದ್ದಾನೆ ಎಂಬ ಸುಳ್ಳು ಸುದ್ದಿ
ಯಾರು ನಂಬುತ್ತಾರೆ ಹೇಳಿ.

—ಬಸವರಾಜ ನಕ್ಕುಂದ

ಚಿನ್ನದ ನೆಕ್ಲೇಸ್

ಇಂಗ್ಲಿಷ್ ಮೂಲ: **ಅನಿತಾ ಸಾಗರ**
ಅನುವಾದ: **ಸುಶೀಲಾ ಸೂರ್ಯನಾರಾಯಣ**

ವೈಧವ್ಯ ಬರಸಿಡಿಲಿನಂತೆರಗಿತ್ತು ನನಗೆ. ನನ್ನವರನ್ನು ಕಳೆದುಕೊಂಡು ಬಾಳನ್ನು ನೂಕುವುದರ ಜೊತೆಗೆ ನಮ್ಮ ಸಮಾಜ ವಿಧವೆಯರನ್ನು ಕಾಣುವ ನಿಕೃಷ್ಟ ರೀತಿ ನನ್ನನ್ನು ಮತ್ತಷ್ಟು ಅಧೀರಳನ್ನಾಗಿಸಿತು. ಹಿಂದೂ ಕುಟುಂಬಗಳಲ್ಲಂತೂ ದುಡಿಯುವ ಕುಟುಂಬದ ಹಿರಿಯ ಸತ್ತರೆ ಮುಗಿದಂತೆಯೆ ಆ ಕುಟುಂಬದ ಕಥೆ. ಮದುವೆಯಾದಂದಿನಿಂದ ಅವರ ಜೊತೆ ಕಳೆದ ಮಧುರ ಕ್ಷಣಗಳು, ಒಬ್ಬರನ್ನೊಬ್ಬರು ಅರಿತು ಬಾಳಿದ ದಿನಗಳು ಕುಳಿತಲ್ಲಿ ನಿಂತಲ್ಲಿ ಕಣ್ಣ ಮುಂದೆ ಬಂದು ಅವರಿಲ್ಲದೆ ಬಾಳುವುದು ದುಸ್ತರವೆನಿಸಿತು. ಆದರೆ ನಮ್ಮ ಎರಡು ಮಕ್ಕಳಿಗಾಗಿ ಬದುಕನ್ನು ಎದುರಿಸಲೇಬೇಕಾಗಿತ್ತು. ತಂದೆಯನ್ನು ಕಳೆದುಕೊಂಡು ಪ್ರೌಢನಂತೆ ವರ್ತಿಸುತ್ತಿದ್ದ ಎಂಟು ವರ್ಷದ ಮಗ ಸುನೀಲ ಹಾಗೂ ನನ್ನ ಕೊರಳು ತಬ್ಬಿ, "ಅಮ್ಮ ಅಳಬೇಡ. ಅಪ್ಪನ್ನ ವಾಪಸ್ಸು ಕರೆದುಕೊಂಡು ಬರುತ್ತೀನಿ," ಎನ್ನುವ ಆರು ವರ್ಷದ ಪೋರಿ ರೇಣುವನ್ನು ನೋಡಿದರೆ ಗಂಟಲುಬ್ಬಿಬರುತ್ತಿತ್ತು. ಇಬ್ಬರನ್ನೂ ಕಡೆಗಣಿಸುವಂತಿರಲಿಲ್ಲ. ಆ ಮಕ್ಕಳಿಗೆ ಏನನ್ನಿಸುತ್ತಿತ್ತೋ, ಒಮ್ಮೆ ರೇಣು ನನ್ನನ್ನು ತಬ್ಬಿ ಕಿವಿಯಲ್ಲಿ, "ಅಮ್ಮ, ನಾನು, ಸುನೀಲ ಹೇಗೆ ಶಾಲೆಗೆ ಹೋಗುವುದು? ದುಡ್ಡು ಯಾರು ಕೊಡ್ತಾರೆ?" ಎಂದು ಪಿಸುಗುಟ್ಟಿದಳು.

ಅವಳನ್ನು ಇನ್ನೂ ಹತ್ತಿರಕ್ಕೆ ಎಳೆದು, "ಯಾಕಮ್ಮ, ನಾನಿಲ್ವ?" ಎಂದೆ.

"ನಿನಗೆ ಎಲ್ಲಿ ಸಿಗುತ್ತೆ ದುಡ್ಡು?" ಅದು ಅವಳ ಪ್ರಶ್ನೆ.

ಸರಿ, ಮತ್ತೆ ನಾನು ನನ್ನ ಶಿಕ್ಷಕ ವೃತ್ತಿಗೆ ವಾಪಸ್ಸಾಗಬೇಕಾಯಿತು. ಆದರೂ ಆರ್ಥಿಕ ಮುಗ್ಗಟ್ಟು. ದಿಢೀರನೆ ತಂದೆಯನ್ನು ಕಳೆದುಕೊಂಡು ಮಕ್ಕಳು ಆರ್ಥಿಕವಾಗಿ ಅಸ್ಥಿರವಾದಾಗ ಎಷ್ಟು ಮಾನಸಿಕವಾಗಿ ತೊಳಲಾಡುತ್ತಾರೆ ಎಂದು ನಾನು ಊಹಿಸದಾದೆ. ಒಮ್ಮೆ ರೇಣುಗೆ ಶಾಲೆಯಿಂದ ಬರುವ ವೇಳೆಗೆ ಜ್ವರ. ಅವಳ ಮನಸ್ಸಿನಲ್ಲಿ ಏನೋ ಕಳವಳ, ಏನನ್ನೂ ಹೇಳಲಾರಳು. ಮಾರುದಿನ ಅವಳ ಆರೈಕೆಗೆ

ರೀಡರ್ಸ್ ಡೈಜೆಸ್ಟ್‌ನಿಂದ ಸಾಭಾರ

ಮನೆಯಲ್ಲೆ ಉಳಿದಾಗ, "ಅಮ್ಮ, ಈಗ ಅಪ್ಪ ಇಲ್ವಲ್ಲ; ನಾವು ಬಡವರಾಗೇ ಇರ್ತೀವಲ್ಲ. ಏನಾದರೂ ಆದರೆ ಏನು ಮಾಡೋದಮ್ಮ?" ಎಂದು ಬಡಬಡಿಸತೊಡಗಿದಳು.

ಅವಳಲ್ಲಿ ತುಂಬಿದ್ದ ಅವ್ಯಕ್ತ ಭಯ, ಆತಂಕ ಅಂದು ನನಗೆ ಸ್ಪಷ್ಟವಾಗಿ ಗೋಚರವಾಯಿತು. ಇದನ್ನು ಹೇಗಾದರೂ ಹೊಡೆದೋಡಿಸಲೇ ಬೇಕೆಂದು ನಿರ್ಧರಿಸಿದೆ.

ಎರಡು ದಿನ ಕಳೆದು ರೇಣುವನ್ನು ನನ್ನ ಜೊತೆಗೆ ಕರೆದೊಯ್ದು ಬ್ಯಾಂಕಿನ ಸೇಫ್ಟೀ ಲಾಕರ್‌ನಲ್ಲಿದ್ದ ಮೃದುವಾದ ಸಣ್ಣ ಪೆಟ್ಟಿಗೆ ಕೊಟ್ಟು ಒಳಗೇನಿದೆಯೆಂದು ನೋಡಲು ಹೇಳಿದೆ. ಥಳ ಥಳ ಹೊಳೆಯುವ ದೊಡ್ಡ ಚಿನ್ನದ ನೆಕ್‌ಲೇಸ್ ನೋಡಿ ಅವಳ ಕಣ್ಣು ಇಷ್ಟಗಲವಾಯಿತು. "ಅಮ್ಮ, ಎಷ್ಟು ಚೆನ್ನಾಗಿದೆ! ನಿನ್ನದಾ?" ಎಂದಳು. ಅವಳ ಕೊರಳಿಗೆ ಅದನ್ನು ಹಾಕಿದೆ. ಮಾಲೆ ಮಾಲೆಯಾಗಿ ಹರಳಿನಿಂದ ಆವೃತ್ತವಾದ ಸರಪಳಿಗಳು ಅವಳ ಸೊಂಟದ ವರೆಗೂ ಬಂದು ನಿಂತಿತು. "ಈಗ ಇದು ನಿಮ್ಮಿಬ್ಬರದು ನೋಡು. ರೇಣು, ನಮ್ಮ



ಬಳಿ ಇಷ್ಟು ಬೆಲೆ ಬಾಳುವ ನೆಕ್‌ಲೇಸ್ ಇರುವಾಗ ನಾವ್ಯಾಕೆ ಬಡವರಾಗ್ತೀವಿ?" ಎಂದೆ. ಅವಳಲ್ಲಿ ಹುದುಗಿದ್ದ ಭಯ ಮಿಂಚಿನಂತೆ ಮಾಯವಾಗಿತ್ತು. ಆಪತ್ತಿಗೆ ಒದಗಬಹುದಾದದ್ದು ನಮ್ಮಲ್ಲಿದೆ ಎಂಬ ವಿಶ್ವಾಸ ಅವಳಲ್ಲುಂಟಾಯಿತು. ರಾತ್ರಿ ಊಟದ ವೇಳೆಯಲ್ಲಿ ಅವಳು ಸುನೀಲನಿಗೂ ಅದನ್ನು ಹೇಳಿದಾಗ, "ಅದನ್ನು ನನಗೂ ತೋರಿಸ್ಬಾರ್ದಾ?" ಎಂದ. ಕೂಡಲೇ ರೇಣು, "ನಿಂಗ್ಯಾಕೋ? ನೀನು ಹುಡುಗ. ನಾನಾದ್ರೆ ಹುಡುಗಿ. ದೊಡ್ಡವಳಾದ್ಮೇಲೆ ಅಮ್ಮ ಅದನ್ನ ನನಗೇ ಕೊಡ್ತಾರೆ. ಅಲ್ವೇನಮ್ಮ?" ಎಂದಳು. "ಸುನೀಲನಿಗೆ ಬೇಕಾದರೆ ಅವನಿಗೂ ಅರ್ಧ ಪಾಲು ಇದೆ," ಎಂದೆ.

ಸುನೀಲ ಎರಡು ನಿಮಿಷ ತೀವ್ರವಾಗಿ ಯೋಚಿಸಿ, "ಇಲ್ಲಮ್ಮ, ಅದನ್ನು ರೇಣು ಮದುವೇಲಿ ಅವಳಿಗೇ ಕೊಡೋಣ," ಎಂದ. ಹತ್ತು ವರ್ಷದ ನನ್ನ ಮಗ ದೊಡ್ಡವನಂತೆ ಮಾತನಾಡಿದ್ದ. ರಜದಲ್ಲಿ ಊರಿಗೆ ಹೋದಾಗ ತಾತ ಅಜ್ಜಿಗೂ ಮಕ್ಕಳು ಹೇಳಿರಬೇಕು. ನನ್ನ ಅತ್ತೆ, "ಇಂದೂ, ಅಷ್ಟು ಬೆಲೆ ಬಾಳುವ ನೆಕ್‌ಲೇಸ್ ಇದೆ ಎಂದು ಕೇಳಿ ನಮಗೆ ನಿಶ್ಚಿಂತೆಯಾಯಿತಮ್ಮ," ಎಂದಿದ್ದರು.

ಹೀಗೇ ದಿನಗಳೆದಂತೆ ರೇಣು ದೊಡ್ಡವಳಾದಾಗ ಸಂಗೀತ ನೃತ್ಯ ತರಗತಿಗಳಿಗೆ ಸೇರಬೇಕೆಂದಳು. 'ಅಮ್ಮನ ಬಳಿ ಅಂಥ ನೆಕ್‌ಲೇಸ್ ಇರುವಾಗ ನಮಗೇನು ಕಡಿಮೆ?' ಎಂದು ಅವಳ ವಾದ ಸರಣಿ.

ಖರ್ಚು ಹೆಚ್ಚಾಯಿತೆಂದು ಮನೆ ಪಾತ್ರಗಳನ್ನಿಟ್ಟುಕೊಂಡು ಆದಾಯ ಸಮತೂಗಿಸಬೇಕಾಯಿತು.

ಮತ್ತೊಂದು ದಿನ ಸುನೀಲ ಇಪತ್ತು ವರ್ಷದವನಿರುವಾಗ ಅತಿ ಉತ್ಸಾಹದಿಂದ ಮನೆಗೆ ಬಂದವನೆ, "ಅಮ್ಮ, ನನ್ನ ಗೆಳೆಯನ ತಂದೆಗೆ ದೊಡ್ಡ ಬಿಲ್ಡಿಂಗ್ ಕಾಂಟ್ರಾಕ್ಟ್ ಸಿಕ್ಕಿದೆ. ಅವರಲ್ಲಿ ನಮಗೂ ಒಂದು ಸಣ್ಣ ಫ್ಲಾಟ್ ಕೊಡ

ಮಾರ್ಪಾಟು

ಬೆಳಗೆನ್ನದೆ ಬೈಗೆನ್ನದೆ
ಮಳೆಯೆನ್ನದೆ ಬಿಸಿಲೆನ್ನದೆ
ಕರ್ತವ್ಯ ಪಥ ನಡೆದೆ!

ಹಸಿವೆನ್ನದೆ ಉಸುರ್ ಎನ್ನದೆ
ಪೈಸೆ ಎನ್ನದೆ ರೂಪಾಯೆನ್ನದೆ
ವರುಷ ವರುಷ ದುಡಿದೆ;

ನೋವು ನಲಿವಿನ ನಿಧಿ ಕರೆಯಿತು
ಶ್ರುತಿ ಲಯಗಳ ಸ್ವರ ಬೆರೆಯಿತು

ಚುಟುಕು ಚುಟುಕು ಕವಿತಾ
ಶಹರ ನೆರೆಯಿತು

ಬವಣೆ ಬದುಕಿನ ಸಹರಾದೊಳು
ನಂದನ ಮೊಳೆಯಿತು

ಮುತುಗಳುರುಳಿ
ಭಾವಸುಮಗಳರಳಿ
ಹಗಲು ಇರುಳ ಬೀಗುದಿಯಲ್ಲಿ
ಇಂಪಾದ ಗಾಳಿ ಗೀತ
ಚಿಮ್ಮಿ ಹೊಮ್ಮಿ ಹರಿಯಿತು

ಹೃದಯ ತೋಟದಲ್ಲಿ
ಆನಂದ ಕಲ್ಪತರು ಹಿಗ್ಗಿನಲ್ಲಿ
ಲಲ್ಲೆ ಮಾತ ತೂಗಿ ತೊನೆಯಿತು

ಅತ್ತ ಇತ್ತ ತೂಗಿ ತೊನೆದ
ಪಲುಕು ಪಲುಕಿನಲ್ಲೂ ಕೂಡ
ಕಾವ್ಯ ಮಿಂಚು ಹೊಳೆಯಿತು
ರಸಿಕ ಮನವ ಸೆಳೆಯಿತು!

–ದೊಡ್ಡರಂಗೇಗೌಡ



ಬಹುದೆನ್ನುತ್ತಾರೆ. ಈಗ ಹದಿನೈದು ಸಾವಿರ ಕೊಟ್ಟು ವಿಕ್ಕಿದ್ದು ಕಂತಿನಲ್ಲಿ, "ಏನೂ ಕಷ್ಟ ವಾಗಲ್ಲಮ್ಮ. ತಿಂಗಳೂ ತಿಂಗಳೂ ಮನೆ ಬಾಡಿಗೆ ಕೊಡೋದು ತಪ್ಪುತ್ತೆ," ಎಂದ.

ನನ್ನ ಉತ್ತರಕ್ಕೆ ಅವನ ಪ್ರತ್ಯುತ್ತರ ಗೊತ್ತಿದ್ದೂ ಹೇಳಿದೆ, "ಅಷ್ಟೊಂದು ದುಡ್ಡು ಎಲ್ಲಿದೆ ಈಗ?"

"ಯಾಕಮ್ಮ, ಆ ನೆಕ್‌ಲೇಸ್ ಇದೆಯಲ್ಲ. ಇಂಥ ಸಮಯದಲ್ಲಲ್ಲದೆ ಅದು ಇದ್ದಾದರೂ ಏನು ಪ್ರಯೋಜನ?" ಎಂದ. ರೇಣುಗೂ ಇದು ಸಂತಸದ ವಿಷಯವೇ. ನಾನು ಎರಡು ದಿನ ಆಲೋಚಿಸಿ ಹೇಳುವುದಾಗಿ ಹೇಳಿದೆ. ದಿನಗಳೆದಂತೆ ಮಕ್ಕಳೂ ಅದನ್ನು ಮರೆತರು.

ನೆಕ್‌ಲೇಸ್ ಬ್ಯಾಂಕಿನಲ್ಲೆ ಉಳಿಯುವಂತಾದರೂ ಅದು ಅಲ್ಲಿರುವ ಭದ್ರತೆಯ ಮೇಲೆ ಎಷ್ಟೋ ವಿಷಯಗಳು ಬಂದುಹೋದವು.

ವರುಷಗಳುರುಳಿದವು. ರೇಣು ಯೌವನ ತುಂಬಿದ ಚೆಲುವೆಯಾಗಿದ್ದಳು. ತನ್ನ ಸಹಪಾಠಿ ಸತೀಶನನ್ನು ಮನೆಗೆ ಕರೆತರುತ್ತಿದ್ದಳು. ಅವನೂ ತನ್ನ ಒಳ್ಳೆಯ ನಡತೆಯಿಂದ ನಮ್ಮೆಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದ. ಅವರ ಮದುವೆಗೆ ಮುಂಚೆ ನೆಕ್‌ಲೇಸ್ ಪ್ರಸ್ತಾಪ ಬಂದಾಗ ರೇಣು, "ಅಮ್ಮ, ಅದು ಸುನೀಲನ ಹೆಂಡತಿಗೇ ಇರಲಿ. ನಾನು ಅಮ್ಮನಿಂದ ಏನೂ ತೆಗೆದುಕೊಳ್ಳುವುದಿಲ್ಲವೆಂದು ಸತೀಶನಿಗೆ ಮಾತು ಕೊಟ್ಟಿದ್ದೇನೆ," ಎಂದಳು. ಆಗ ಬಡತನಕ್ಕಾಗಿ ಬಡತನದ ಬಾಳಿಗಾಗಿ ಹೆದರಿದ್ದಳು. ನೆಕ್‌ಲೇಸ್ ಹಾಕಿಕೊಂಡು ತನ್ನ ಚೆಲುವಿಗೆ ತಾನೇ ಮನ ಸೋತಿದ್ದಳು. ಈಗ ಅವಳ ಬಾಯಿಂದಲೇ ಇಂಥ ಮಾತು! ನನ್ನ ಕಣ್ಣಲ್ಲಿ ಹನಿಯಾಡಿತು.

ರೇಣುವಿನ ಜವಾಬ್ದಾರಿ ಕಳೆದು ಸುನೀಲನ ಮದುವೆಯ ಯೋಚನೆಯೂ ಬಂತು. ಅವನು ಪರಿಚಯಿಸಿದ ಹುಡುಗಿ ಸರಿತ ಯಾವ ತಾಯಿಯಾದರೂ ತನ್ನ ಮಗನಿಗೆ ಇಷ್ಟಪಡಬಹುದಾದ ಹುಡುಗಿ. ಮದುವೆಯ ಹಿಂದಿನ ದಿನ ಸರಿತಳನ್ನು ನನ್ನ ಜೊತೆಗೆ ಕರೆದೊಯ್ದೆ. ಬ್ಯಾಂಕಿನಲ್ಲಿ ಪೆಟ್ಟಿಗೆಯೊಳಗಿದ್ದ ನೆಕ್‌ಲೇಸ್ ನೋಡಿ ನಿಬ್ಬೆರಗಾಗಿ ನಿಂತುಬಿಟ್ಟಳು. ಕೊಂಚ ನಿಧಾನಿಸಿ ಹೇಳಿದೆ:

"ನೋಡಮ್ಮ, ಹಲವಾರು ವರುಷಗಳ ಹಿಂದೆ ತಂದೆಯನ್ನು ಕಳೆದುಕೊಂಡ ಮಕ್ಕಳಿಗೆ ಬಡತನ ರೌದ್ರಾಕಾರವಾಗಿತ್ತು. ರೇಣುಗೆ ಇದನ್ನು ನೋಡಿ ಆಪತ್ತಿನಲ್ಲಿ ಒದಗಬಹುದಾಗಿದ್ದ ತಾಯಿ ಬಳಿ ಇದೆ ಎಂದು ಎಷ್ಟೋ ಧೈರ್ಯ ಬಂದಿತು. ಆಗ ನಾನು ಇದನ್ನು ಕೇವಲ ಇನ್ನೂರು ರೂಪಾಯಿ ಕೊಟ್ಟು ಖರೀದಿಸಿ ತಂದಿಲ್ಲಿರಿಸಿದೆ. ಅವರ ಉದ್ದೇಶ ಪೂರೈಕೆಯಾಯ್ತು. ಈಗದರ ಅವಶ್ಯಕತೆ ಇಲ್ಲ. ಆದರೂ ಇದು ಇಲ್ಲೇ ಇದೆ," ಎಂದೆ. ಸರಿತಳಿಗೆ ಇದೆಲ್ಲಾ ಹೇಳಿದಾಗ ದೊಡ್ಡ ಭಾರ ಇಳಿದಂತಾಯ್ತು ನನಗೆ. ಏನನ್ನೋ ಸಾಧಿಸಿದ್ದೇನೆಂಬ ಹೆಮ್ಮೆಯೂ ಉಂಟಾಯಿತು. ಸರಿತ ಒಂದು ಕ್ಷಣ ಅದನ್ನು ನೋಡಿ, "ಇದು ಇಲ್ಲೇ ಇರಲಿ, ನನ್ನ ಮಗಳಿಗೆ ಉಪಯೋಗವಾಗಬಹುದು," ಎಂದಳು. ಪುನಃ ನೆಕ್‌ಲೇಸ್ ಸೇಫ್ಟೀಲಾಕರ್ ಸೇರಿತು.

ಕಪ್ಪೆಗಳಲ್ಲಿ ಪ್ರಣಯಾರಾಧನೆ

ಪ್ರೊ. ವ್ಹಿ. ಎ ಕುಲಕರ್ಣಿ

ಕಪ್ಪೆಯನ್ನು ಕಂಡು ಅಸಹ್ಯಪಡುವ ಜನಗಳೇ ಬಹಳ. ಕಾಲಲ್ಲಿ ಕಪ್ಪೆ ಕಂಡಾಕ್ಷಣ ಜಿಗಿಯುವವರನ್ನು ನೋಡಿದಾಗ ಸ್ವಭಾವತಃ ಕುಪ್ಪಳಿಸುವ ಪ್ರಾಣಿ ಕಪ್ಪೆಯೋ ಅಥವಾ ಮಾನವನೋ ಎಂದು ಅರೆಕ್ಷಣವಾದರೂ ಶಂಕೆ ಬಾರದಿರದು! ನಿಜ ಹೇಳಬೇಕೆಂದರೆ ಕಪ್ಪೆಯನ್ನು ಕಂಡವರು ವಿರಳ. ಇದು ಆಶ್ಚರ್ಯವೆನಿಸಿದರೂ ನಂಬಲೇಬೇಕು. ಬಚ್ಚಲು ಮನೆಯಲ್ಲಿ, ಹಿತ್ತಲಲ್ಲಿ, ದಾರಿಯಲ್ಲಿ ಆಕಸ್ಮಾತ್ತಾಗಿ ಕಣ್ಣಿಗೆ ಬೀಳುವ ಕಪ್ಪೆಯಂತಹ ಪ್ರಾಣಿ ನಿಜವಾದ ಕಪ್ಪೆಯಲ್ಲ; ಅದು ನೆಲಗಪ್ಪೆ. ಆಂಗ್ಲ ಭಾಷೆಯಲ್ಲಿ ಅದಕ್ಕೆ 'ಟೋಡ್' ಎಂದು ಹೆಸರು. ನಿಜವಾದ ಕಪ್ಪೆ ನೀರಗಪ್ಪೆ. ಇಂಗ್ಲೀಷಿನಲ್ಲಿ ಇದಕ್ಕೆ 'ಬುಲ್‌ಫ್ರಾಗ್' ಎನ್ನುವರು. ಇದು ಸಿಹಿನೀರಿನ ಜಲಾಶಯಗಳ ಬಳಿ ವಾಸಿಸುವುದು. ನೆಲಗಪ್ಪೆಯಂತೆ ಇದರ ಮೈ ಒರಟಲ್ಲ, ನುಣುಪು. ನೆಲಗಪ್ಪೆ ಹಲ್ಲಿಲ್ಲದ 'ಮುದುಕ'; ನೀರಗಪ್ಪೆಗೆ ಮೇಲ್ದವಡೆಯಲ್ಲಿ ಮಾತ್ರ ಹಲ್ಲುಗಳುಂಟು. ಅಲ್ಲದೆ ಇದರ ಹಿಂಗಾಲು ಬೆರಳುಗಳ ಮಧ್ಯದಲ್ಲಿರುವ ಜಾಲಪಾದ ನೆಲಗಪ್ಪೆಗೆ ಇರುವುದಿಲ್ಲ.

ಈ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಾದರೆ ನಿಜವಾದ ಕಪ್ಪೆ ಯಾವುದು ಎಂದು ಹೇಳಲು ಬಂದೀತು. ನಮ್ಮ ದೇಶದಲ್ಲಿ ಕಪ್ಪೆ ಜಾತಿಯ ಪ್ರಭೇದಗಳು ನೂರಕ್ಕೂ ಹೆಚ್ಚು. ಇವು ಉಭಯ ಜೀವಿ ಎಂಬ ಚಿತ್ತಾಕರ್ಷಕ ವರ್ಗಕ್ಕೆ ಸೇರಿದ ದ್ವಿಚರಗಳು.

ಕಪ್ಪೆ ಒಂದು ಸಾಧು ಪ್ರಾಣಿ. ಪುಕ್ಕಲು ಜೀವಿ. ಇನ್ನೊಂದು ಪ್ರಾಣಿಯನ್ನು ಹೆದರಿಸುವಂತಹ ದೈಹಿಕ ಶಕ್ತಿಯೂ ಇಲ್ಲ, ಆಕ್ರಮಣಕಾರೀ ಅಸ್ತ್ರವೂ ಇಲ್ಲ. ಹೀಗಾಗಿ ನೆಲ-ಜಲಗಳ ಮಧ್ಯದ ಇಕ್ಕಟ್ಟಿನಲ್ಲಿ ವಾಸಿಸುವುದೊಂದೇ ಅದಕ್ಕಿರುವ ಸಂರಕ್ಷಣೆ. ಭೂಮಿಯ ಮೇಲೆ ವೈರಿ ಕಂಡಿತೋ ನೀರಿನಲ್ಲಿ ನೆಗೆಯುತ್ತದೆ. ನೀರಿನಲ್ಲಿ ಶತ್ರು ಎದುರಾಯಿತೋ ಟಣ್ಣನೆ ಭೂಮಿಗೆ ಜಿಗಿಯುತ್ತದೆ.

ಕಪ್ಪೆಗೆ ಮಾನವ ಚಿರಋಣಿಯಾಗಿರಬೇಕು. ಕಪ್ಪೆಯ ಕಾಲುಗಳ ರುಚಿಗಾಗಿ ಅಲ್ಲ; ಪ್ರಥಮ ಭೂಸ್ಪರ್ಶದ ಸಾಹಸಕ್ಕಾಗಿ. ಭೂಚರ ಯೋಗ್ಯವಾದ ಕಾಲುಗಳನ್ನು ಹುಟ್ಟಿಸಿಕೊಳ್ಳುವ ಕೆಚ್ಚನ್ನು ಅದು ತೋರಿರದಿದ್ದರೆ ನಾವು ಇನ್ನೂ ಜಲಚರ ರೂಪದಲ್ಲಿಯೇ ಇರುತ್ತಿದ್ದೆವೇನೊ. ಭೂಮಿಯ ಮೇಲೆ ವಾಸಿಸುವ ಪ್ರಾಣಿಗಳ ಉಗಮಕ್ಕೆ ಕಪ್ಪೆ ಕಾರಣವಾಯಿತೆಂಬುದೇನೋ ನಿಜ. ಆದರೆ ತಾನೇ ಸೋತು ನೀರಿಗೆ ಮರಳಿತೆಂಬುದೂ ಅಷ್ಟೇ ಸತ್ಯ. ಇದನ್ನೇ ರೋಮರ್ ಎಂಬ ನಿಷ್ಣಾತ ಜೀವಶಾಸ್ತ್ರಜ್ಞನು ಪರೋಭಾ

ಭಾಸ ಶಬ್ದಗಳಲ್ಲಿ ತುಂಬ ಮಾರ್ಮಿಕವಾಗಿ ಹೇಳಿದ್ದಾನೆ: "ಕಪ್ಪೆಗೆ ಕೈಕಾಲು ಹುಟ್ಟಿಕೊಂಡಿರುವುದು ಅದನ್ನು ಭೂಚರವನ್ನಾಗಿ ಮಾಡಲಿಕ್ಕಲ್ಲ; ಪುನಃ ನೀರಿನೆಡೆಗೆ ಕರೆದೊಯ್ಯಲು," ಎಂದು. ಪ್ರಕೃತಿಗೆ ಬೇಕಾದುದು ಸಂತಾನಾಭಿವೃದ್ಧಿ ತಾನೇ! ಅದಕ್ಕೇ ಶಣೊಂದ ಕಪ್ಪೆ ನೀರಿಗೆ ತೆವಳುವುದು ಅನಿವಾರ್ಯವಾಯಿತು.

ಕಪ್ಪೆಗೂ ಮಳೆಗೂ ಎಲ್ಲಿಲ್ಲದ ನಂಟು. ರೋಹಿಣಿ ಮಳೆಯ ಮೊದಲು ಕಪ್ಪೆಯ ಸುಳಿವು ಕೂಡ ಇರುವುದಿಲ್ಲ. ವರುಷದ ಮೊದಲ ಹನಿ ಆಕಾಶದಿಂದ ಬೀಳುತ್ತಲೇ ಕಪ್ಪೆಯ ವಟರ್ ಗುಟ್ಟುವ ಧ್ವನಿ ಕೇಳಲಾರಂಭಿಸುವುದು. ಆ ವರೆಗೆ ಎಲ್ಲಿಯೂ ಕಾಣದಿದ್ದ ಕಪ್ಪೆ ಒಮ್ಮೆಲೇ ಕಂಡಾಗ ಅದು ಮಳೆ ಹನಿಯುಗುಂಟ ಕೆಳಗಿಳಿದಿರಬೇಕೆಂದು ನಂಬುವವರೂ ಇದ್ದಾರೆ. ಆದರೆ ನಿಜಸ್ಥಿತಿ ಬೇರೆಯಾಗಿರುತ್ತದೆ. ಭೂಮಿಯ ಆಳದಲ್ಲಿ ಶಿಶಿರ ನಿದ್ದೆಗೊಳಗಾದ ಕಪ್ಪೆಗಳು ಮಾನ್ಸೂನ್ ಮಳೆಯೊಂದಿಗೆ ಹೊರಬರುತ್ತವೆ, ಹೀಗೆ ಮೇ–ಜೂನ್ ತಿಂಗಳುಗಳಲ್ಲಿ ಹೊರಬಂದ ಕಪ್ಪೆಗಳು ಪುನಃ ಭೂಗರ್ಭ ಸೇರಿ ಶಿಶಿರ ನಿದ್ರೆಗೆ ಒಳಗಾಗುವುದು ನವೆಂಬರ್ ಡಿಸೆಂಬರ್ ತಿಂಗಳುಗಳಲ್ಲಿ. ಈ ಮಧ್ಯಂತರ ಅವಧಿಯಲ್ಲಿ ಅವು ಮಾಡುವ ಕಾರ್ಯಗಳು ಎರಡೇ ಎರಡು: ಪುನರುತ್ಪಾದನೆ ಹಾಗೂ ಆಹಾರಾನ್ವೇಷಣೆ. ಹೀಗೆ ಅಜ್ಜಿಯ ಕಥೆಗಳಲ್ಲಿಯ ರಾಕ್ಷಸರಂತೆ ಅವುಗಳ ಜೀವನ ಚಕ್ರ ಆರು ತಿಂಗಳು ನಿದ್ರೆ, ಇನ್ನಾರು ತಿಂಗಳು ಎಚ್ಚರ ಬದುಕಿಗಾಗಿ ಹೋರಾಟ.

ಮಳೆಯೊಂದಿಗೆ ಹೊರಬಂದ ಕಪ್ಪೆಗಳ ಮೊದಲ ಕೆಲಸವೆಂದರೆ ವಟರ್‌ಗುಟ್ಟುವುದು. ರಪ್‌ರಪ್ ಎಂದು ಮಳೆಹನಿ ಆಕಾಶದಿಂದ ಕೆಳಕ್ಕೆ ಬೀಳುತ್ತಿರುವಾಗ ಕಪ್ಪೆಗಳ 'ವಟರ್ ವಟರ್' ಧ್ವನಿ ಭೂಮಿಯಿಂದ ಗಗನಕ್ಕೆ ಏರುತ್ತಿರುತ್ತದೆ. ಹೀಗೆ ಕಿರಿಚಿಕೊಳ್ಳುವುದು ಗಂಡು ಕಪ್ಪೆ ಮಾತ್ರ. ಅವುಗಳ ಕೂಗಾಟ ಸಹನಾತೀತವಾದುದು– ಸ್ಟಂಟ್ ಸಿನೆಮಾ ಹೀರೋಗಳ ಕೇಕೆಯಂತೆ. ಒಂದೇ ಎರಡೇ ನೂರಾರು ಕಪ್ಪೆಗಳು ಏಕಪ್ರಕಾರವಾಗಿ ತಾರಕ ಸ್ವರದಲ್ಲಿ ಕಂಠಶೋಷಣೆ ಮಾಡಿಕೊಳ್ಳುವುದು ಕೇವಲ ಹೆಣ್ಣಿನ ವಶೀಕರಣಕ್ಕಾಗಿ. ಹೆಣ್ಣು ಕಪ್ಪೆಗೂ ಕೂಗಲು ಬರುವುದಿಲ್ಲವೆಂತಲ್ಲ, ಅದಕ್ಕೂ ಧ್ವನಿಪೆಟ್ಟಿಗೆಯುಂಟು. ಆದರೆ ಗಂಡಿನಂತಹ ಧ್ವನಿ ವರ್ಧಕಗಳು ಅವಕ್ಕಿಲ್ಲ. ಧ್ವನಿಪೆಟ್ಟಿಗೆಗೆ ಹೊಂದಿಕೊಂಡಂತೆ ಕೆಳದವಡೆಯ ಬುಡದಲ್ಲಿ



ಗಂಡು ಕಪ್ಪೆಗೆ ಎರಡು ಧ್ವನಿಕೋಶಗಳಿವೆ. ಈ ಚೀಲಗಳು ಹವೆಯನ್ನು ಒಳಕ್ಕೆಳೆದು ಉಬ್ಬಿದಾಗ ಟೇಬಲ್‌ಟೆನಿಸ್ ಚೆಂಡಿನಷ್ಟು ದೊಡ್ಡದಾಗುವುದುಂಟು. ಅವುಗಳ ಆಕುಂಚನ ಪ್ರಸರಣದಿಂದ ಧ್ವನಿಕಂಪನಗಳು ವರ್ಧಿಸುತ್ತವೆ. ಹೆಣ್ಣು ಕಪ್ಪೆಯಲ್ಲಿ ಇಂಥ ರಚನೆ ಇಲ್ಲ. ಅದರ ಈ ಬಂಗಾರದಂಥ ಗುಣವು ಹಾಗೆಯೇ ಉತ್ಕ್ರಾಂತಿಯ ದಾರಿಗುಂಟ ಸಾಗಿ ಮಾನವನವರೆಗೂ ಬಂದಿದ್ದರೆ...

ಗಂಡು ಕಪ್ಪೆಗಳ ಕೂಗು ಬಹು ದೂರದವರೆಗೆ ಕೇಳುವುದುಂಟು. ಕೆಲವರಿಗೆ ಇದು ಕರ್ಕಶವಾಗಿ ಕೇಳಿಬಂದರೆ ಇನ್ನು ಕೆಲವರಿಗೆ ಪುಕ್ಕಟೆ ಸಂಗೀತ. ಪ್ರಾಣಿಶಾಸ್ತ್ರ ಕಲಿಸುತ್ತಿದ್ದ ನನ್ನ ಓರ್ವ ಗುರುವಿಗೆ ಇದು ಭೈರವೀ ಆಲಾಪದಂತೆನಿಸಿ ನಿದ್ದೆ ಬರುತ್ತಿತ್ತಂತೆ. ನಾನು ಮಾತ್ರ ವಿನೋದದಿಂದ ಈ ರಾಗವನ್ನು 'ಮಂಡೂಕ ಮೇಘ-ಮಲ್ಹಾರ' ಎಂದು ಕರೆಯುತ್ತೇನೆ. ನನ್ನ ಮಿತ್ರನೊಬ್ಬನಿಗೆ ಇದರ ಧ್ವನಿ, "ಯು ಆರ್ ಡ್ರಂಕ್, ಯು ಆರ್ ಡ್ರಂಕ್" ಎಂದಂತೆಯೂ ನನ್ನ ಅತ್ತೆಯ ಕಿವಿಗೆ, "ಪ್ಯಾಟ್ರಿಕ್ ಸ್ಟುಡಂಟ್, ಪ್ಯಾಟ್ರಿಕ್ ಸ್ಟುಡಂಟ್ ಎಂದಂತೆಯೂ ಕೇಳಿಸುತ್ತದಂತೆ. ಒಬ್ಬೊಬ್ಬರಿಗೆ ಒಂದೊಂದು ತೆರನಾಗಿ ಕೇಳುತ್ತಿರಬಹುದು. ಆದರೆ ಒಂದು ಮಾತಂತೂ ನಿಜ; ಇವುಗಳ ಸಾಮೂಹಿಕ ಗಾಯನ ಉಚಿತವಷ್ಟೇ ಅಲ್ಲ, ಈ ಕರ್ಣಕಠೋರ ಸಂಗೀತದಿಂದ ತಪ್ಪಿಸಿಕೊಳ್ಳಲೂ ಸಾಧ್ಯವಿಲ್ಲ-- ಕಿವುಡರ ಹೊರತಾಗಿ. ಆದರೆ ಅದು ನಮಗೆ ಅಪ್ರಿಯವಾದರೂ ಗಂಡು ಕಪ್ಪೆಗೆ ಇದು ಪ್ರಣಯಾರಾಧನೆಯ ಮಂತ್ರ. ಅದಕ್ಕೆ ಹೊಟ್ಟೆಯ ಹಸಿವೆಗಿಂತಲೂ ಪ್ರಣಯದ ಚಿಂತೆ ಹೆಚ್ಚು. ಈ ಪ್ರಣಯಚೇಷ್ಟೆಗೆ ಗಂಡುಕಪ್ಪೆಯ ಆಯುಷ್ಯ ಇಷ್ಟೇ ಇರಬೇಕೆಂಬ ನಿಯಮವೇನೂ ಇಲ್ಲ. ಹಗಲು ರಾತ್ರಿಗಳೆಂಬ ವೇಳೆಯ ನಿರ್ಬಂಧವೂ ಇಲ್ಲ. ವಾನಪ್ರಸ್ಥಾಶ್ರಮ ಎಂಬುದು ಅವರ ಜೀವನದಲ್ಲಿ ಇದ್ದರೆ ತಾನೆ! ಗಂಡು ಆಯುಷ್ಯದುದ್ದಕ್ಕೂ ಫಲೋತ್ಪಾದಕವಾದದ್ದೆ.

ಶಿಶಿರ ನಿದ್ರೆಯಿಂದ ಎಚ್ಚೆತ್ತು ಮೃಗ ಮಳೆಗೆ ಮೈಯೊಡ್ಡಿ ಹೊರಬರುವ ಕಪ್ಪೆಗಳ ಮೈಬಣ್ಣ ರಾಳದ ಹಳದಿ ಬಣ್ಣದ್ದಾಗಿರುತ್ತದೆ. ಗಂಡು ಕಪ್ಪೆ ತನ್ನ ಕೂಗಿನ ಅಬ್ಬರವನ್ನು ಹೆಚ್ಚಿಸಿದಂತೆ ಹೆಚ್ಚು ಉದ್ರೇಕಗೊಳ್ಳುತ್ತದೆ. ಹೀಗೆ ಭಾವೋದ್ರೇಕಕ್ಕೆ ಒಳಗಾದ ಕಪ್ಪೆಯ ಮುಂಗಾಲುಗಳ ಪ್ರಥಮ ಬೆರಳಿನ* ಒಳಭಾಗ ನಿಧಾನವಾಗಿ ಉಬ್ಬಿಕೊಳ್ಳುತ್ತ ಮೆತ್ತೆದಿಂಬಿನಂತಾಗುತ್ತದೆ. ಈ ರೀತಿ ಮೈಮೇಲೆ ಹಳದೀ ಬಣ್ಣದ 'ಸೂಟ್ ಕೇಸು' ಬೆರಳುಗಳಲ್ಲಿ ಮೆತ್ತೆದಿಂಬಿನ ಕುಶನುಟ್ಟ ಆಚ್ಛಾದಿತ ಕವಚ, ಕಂಠದಲ್ಲಿ ಏಕಪ್ರಕಾರವಾದ 'ಸಂಗೀತ ನಾದ' – ಇವುಗಳಿಂದೊಡಗೂಡಿದ 'ಮದುವಣಿಗ' ತನ್ನ ಸಂಗಾತಿಯನ್ನು ಕೂಡಿಕೊಳ್ಳಲು ಸಿದ್ಧವಾಗುತ್ತದೆ. ಹೆಣ್ಣುಕಪ್ಪೆಯು ಮೈದೊಗಲೂ ಹಳದೀ ವರ್ಣದ್ದಾಗಿರುತ್ತದೆ ಆದರೆ ಇನ್ನುಳಿದ ಬದಲಾವಣೆಗಳು ಅಲ್ಲಿ ಕಾಣವು.

ಮೇ, ಜೂನ್ ಹಾಗೂ ಜುಲೈ ತಿಂಗಳುಗಳಲ್ಲಿ ಗಂಡುಕಪ್ಪೆ ತನ್ನ 'ಸಖಿ'ಯನ್ನು ಶೋಧಿಸಿ



* ಕಪ್ಪೆಯ ಮುಂಗಾಲಿನಲ್ಲಿ ನಾಲ್ಕೇ ಬೆರಳು, ಹೆಬ್ಬೆರಳು ಇರುವುದಿಲ್ಲ.

ಸಂತಾನಾಭಿವೃದ್ಧಿಯಲ್ಲಿ ತೊಡಗುತ್ತದೆ. ಅವರ ಪ್ರಥಮ ಅಂತಃಸ್ಫೂರ್ತಿ ಹೆಣ್ಣುಕಪ್ಪೆಯನ್ನು ಸಂಧಿಸುವುದು. ಬಿಲದಿಂದ ಹೊರಬಂದ ಮೂರು ನಾಲ್ಕು ದಿನಗಳವರೆಗೆ ಸುತ್ತಲಿನ ಹವಾಮಾನಕ್ಕನುಸಾರವಾಗಿ ಗಂಟಲು ಹರಿದುಕೊಳ್ಳುವಂತೆ ವಟಗುಟ್ಟುವುದೊಂದೇ ಗಂಡು ಕಪ್ಪೆಯ ಕೆಲಸ. ಹೆಣ್ಣು ಕಪ್ಪೆ ಬದಿಯಲ್ಲಿಯೇ ಇದ್ದರೂ ಗಮನ ಕೊಡದೆ ಮೊದ್ದು ಗಂಡು ಹುಚ್ಚನಂತೆ ಬರೀ ಅಬ್ಬರಿಸುತ್ತಲೇ ಇರುತ್ತದೆ. ಅದರ ಚೀತ್ಕಾರ, ಅರ್ಭಟ, ಕರ್ಕಶ ಕೂಗಾಟಕ್ಕೆ ಬೆದರಿದ 'ಮೌನ ಗೌರಿ' ಸನಿಹಕ್ಕೆ ಸರಿಯುತ್ತಾಳೆ. ಹೆಣ್ಣಿನ ಸಾನ್ನಿಧ್ಯವನ್ನು ಗುರುತಿಸಿದ ಗಂಡು ಕಪ್ಪೆ ಮೊದಮೊದಲು 'ನಾಚಿಕೆ'ಯಿಂದಲೋ ಏನೋ, ತುಸು ವಿಚಲಿತವಾದಂತೆ ತೋರುತ್ತದೆ. ಕೂಡಲೇ ಸನಿಹದಲ್ಲಿ ಇನ್ನೊಂದು ಗಂಡು ಕಪ್ಪೆಯನ್ನು ಕಂಡ ಮೊದಲಿನ ಗಂಡು ಉಗ್ರನರಸಿಂಹನ ಅವತಾರ ತಾಳುತ್ತದೆ. ಕೇಳುವುದೇನು, ಹೆಣ್ಣಿನ ವಶೀಕರಣಕ್ಕಾಗಿ ಗಂಡುಗಳಲ್ಲಿ ಹೋರಾಟ ಪ್ರಾರಂಭ. ಮುಂಗೈ ಜೋರಿನ ಯಾವುದೊಂದು ಗಂಡು ಕೂಡಲೇ ಸಂಧಿ ಸಾಧಿಸಿ ಹೆಣ್ಣು ಕಪ್ಪೆಯ ಹಿಂಬದಿಯಿಂದ ಸರಿದು 'ಸಖಿ'ಯನ್ನು ಅವಚಿ ಹಿಡಿದುಕೊಳ್ಳುತ್ತದೆ. ಇಂಥ ಅಪ್ಪುಗೆಗೆ ಬೆರಳಿನ ಮೆತ್ತೆದಿಂಬು ಸಹಾಯಕ. ಹೆಣ್ಣಿನ ಮೇಲೆ ಸವಾರಿ ಮಾಡಿದ ಗಂಡು ಕಪ್ಪೆಯನ್ನು ಕೆಳಗಿಳಿಸುವ ಮಾತ್ಸರ ಪ್ರತಿಸ್ಪರ್ಧಿ ಗಂಡುಗಳಿಗೆ. ಆಗ ನೋಡಬೇಕು ವಿಜಯೀ ಗಂಡಿನ ರುದ್ರಾವತಾರ! ತನ್ನ ಕೈಕಾಲುಗಳನ್ನು ಲಾಠಿಯಂತೆ ಮೈಸುತ್ತಲೂ ಬೀಸುತ್ತ ಪ್ರತಿಸ್ಪರ್ಧಿಗಳನ್ನು ಆಚೀಚೆ ಒದೆಯುತ್ತ ಹೆಣ್ಣು ಕಪ್ಪೆಯನ್ನು ಮುಂದೆ ಮುಂದೆ ತಳ್ಳುತ್ತ ಸಾಗುತ್ತದೆ. ಇಂಥ ಉದ್ರೇಕಕಾರಿ ಹೋರಾಟದಲ್ಲಿ ಒಂದೊಂದು ಬಾರಿ ಗಂಡು ಕಪ್ಪೆ ಸಲಿಂಗ ಜೀವಿಯನ್ನೇ ಅವಚಿಕೊಳ್ಳುವುದುಂಟು. ಆಗ ಆಕ್ರಮಣಕ್ಕೊಳಗಾದ ಗಂಡುಕಪ್ಪೆ ಉಗ್ರವಾಗಿ ಪ್ರತಿಭಟಿಸುತ್ತದೆ. ಎಚ್ಚರಗೊಂಡ ಸವಾರಿಕಪ್ಪೆ ತಪ್ಪೊಪ್ಪಿಕೊಂಡು ಮುಂಗೈ ಹಿಡಿತವನ್ನು ಸಡಿಲಗೊಳಿಸ[...]ತ್ತದೆ.

ಈಗ ಗಂಡಿನ ಕೂಗು ಗಕ್ಕನೆ ನಿಲ್ಲುತ್ತದ[...] ಗಂಡು ಕಪ್ಪೆಯನ್ನು ಬೆನ್ನಮೇಲೆ ಹೊತ್ತು[...]ಕೊಂಡು ಹೆಣ್ಣು ನಿಧಾನವಾಗಿ ಸನಿಹದ ಯಾವ[...]ದೊಂದು ಸಿಹಿನೀರಿನ ಜಲಾಶಯದತ್ತ ತೆವಳ[...]ತ್ತದೆ. ಆ ಸಮಯದಲ್ಲಿ ಗಂಡಿನ ಕಪಿಮುಷ್ಟಿ[...] ಎಷ್ಟು ಪ್ರಬಲವಾಗಿರುತ್ತದೆಂದರೆ ಅದರ ತ[...]ಯನ್ನು ದೇಹದಿಂದ ಬೇರ್ಪಡಿಸಿದಾಗಲೂ[...] ಮುಂಗೈ ಹಿಡಿತ ಅಷ್ಟು ಸಡಿಲವಾಗುವುದಿಲ್ಲ.

ಜಲಾಶಯದ ಅಂಚನ್ನು ತಲುಪಿದಾಗ ಗಂಡ[...] ಕಪ್ಪೆ ಹೆಣ್ಣಿನ ಬೆನ್ನನ್ನು ಮುಂಗೈಗಳಿಂದ ಮೆಲ್ಲ[...] ಉಜ್ಜುತ್ತದೆ. ಆಗ ಮಾತ್ರ ಉತ್ತೇಜಿತವಾದ[...] ಹೆಣ್ಣುಕಪ್ಪೆ ಬಹುಸಂಖ್ಯೆಯಲ್ಲಿ ಮೊಟ್ಟೆಗಳನ್ನು[...] ಹೊರಹಾಕುತ್ತದೆ. ಕೂಡಲೇ ಮೇಲೆ ಕುಳಿ[...] ಗಂಡು ಕಪ್ಪೆ ವೀರ್ಯಾಣುಗಳನ್ನು ಹೊರಚೆಲ್ಲು[...]ತ್ತದೆ. ಹೀಗೆ ದೇಹದ ಹೊರಗೆ ನೀರಿನಲ್ಲಿ[...] ಪ್ರಜನನ ಜೀವಕೋಶಗಳು ಕಲೆತು ಗರ್ಭಧಾರಣೆ[...]ಯಾಗುತ್ತದೆ. ತಾವು ಸಂಧಿಸಿದ್ದೇ ಇಲ್ಲವೋ[...] ಎನ್ನುವಂತೆ ಹೆಣ್ಣು ಗಂಡು ಕಪ್ಪೆಗಳ[...] ಬೇರ್ಪಟ್ಟು, ಹೊಟ್ಟೆಯ ಹಸಿವಿನ ಕರೆ[...]ಗೋಗೊಟ್ಟು ಆಹಾರಾನ್ವೇಷಣೆಗಾಗಿ ಸುತ್ತ[...] ತೊಡಗುತ್ತವೆ. ಆಗ ಅವುಗಳ ಬಣ್ಣ ನಿಧಾನ[...]ವಾಗಿ ಕಂದುವರ್ಣಕ್ಕೆ ಬದಲಾಯಿಸುತ್ತದ[...] ಗಂಡಿನ ಕೈಬೆರಳ ಮೆತ್ತೆದಿಂಬುಗಳೂ ಮಾಯ[...]ವಾಗುತ್ತದೆ.

ಸಾಕಷ್ಟು ಆಹಾರ ಸಂಗ್ರಹಿಸಿ, ಅದನ್ನು[...] ಸ್ನಿಗ್ಧಾಂಗಗಳಲ್ಲಿ ಶೇಖರಿಸಿ ನವೆಂಬರ್-ಡಿಸೆಂಬರ[...] ತಿಂಗಳುಗಳ ಚಳಿ ಆರಂಭವಾಗುತ್ತಲೇ ಭೂಮಿ[...]ಯೊಳಗೆ ಬಿಲಗಳನ್ನು ತೋಡಿಕೊಂಡು ಬೆಚ್ಚಗಾ[...] ಒಳಸೇರುತ್ತವೆ. ಪುನಃ ಆರು ತಿಂಗಳು ಕಾ[...] ಅವುಗಳಿಗೆ ಶಿಶಿರ ನಿದ್ರೆ ಯಾವ 'ಟೈಂಪಿ[...] ಬೋರ್-ಮೀ' ರಾಗಗಳಿಲ್ಲದೆ ನಮಗೂ ಸು[...]ನಿದ್ರೆ.

ಅಣುಬಾಂಬಿನಿ

ಕನ್ನಡಕ್ಕೆ : ಎಸ್. ಎಲ್. ಶರ್ಮ

ಕ್ರಿಸ್ತ ಶಕ ೧೯೪೫ರ ಜುಲೈ ೧೬, ಭೂಲೋಕದ ಇತಿಹಾಸದಲ್ಲಿ ಪರ್ವದಿನ. ಅಂದು ಪ್ರಾತಃಕಾಲ ೫-೩೦ ಗಂಟೆಗೆ, ಅಮೆರಿಕದ ನ್ಯೂ ಮೆಕ್ಸಿಕೋ ಪ್ರಾಂತದ ಅಲ್ಮಗರ್ಡೋ ಮರುಭೂಮಿಯಲ್ಲಿ ಪ್ರಪ್ರಥಮ ಅಣುಬಾಂಬಿನ ಆಸ್ಫೋಟನವಾಯಿತು. ಈ ಬೃಹತ್ ಘಟನೆಯ ಶಿಲ್ಪಿಗಳಾದ ಅಮೇರಿಕನ್ನರು ಇದಕ್ಕೆ "ಟ್ರಿನಿಟಿ" (ತ್ರಿಮೂರ್ತಿ) ಎಂದು ನಾಮಕರಣಮಾಡಿದರು. ಮೃತ್ಯುದೇವತೆಯನ್ನು ಜೀವದಾತ ಎಂದು ಕರೆದಂತೆ, ಅಂದಿನಿಂದ ಪ್ರತಿ ಜುಲೈ ೧೬ನೆಯ ದಿನ ಇದರ ಸ್ಮರಣೆ. ಮಾನವನ ಬುದ್ಧಿಶಕ್ತಿ ಎಷ್ಟು ಮುಂದುವರೆದಿದೆ, ಅವನ ಕೊಲೆಗಡುಕತನ ಪ್ರಪಂಚದ ಅಂತ್ಯವನ್ನು ಎಷ್ಟು ಕ್ಷಿಪ್ರಕ್ಕೆ ತಂದಿದೆ ಎಂಬುದರ ಪರಿಶೀಲನೆ ಬಹಳ ಅಗತ್ಯ. ಸುಭಿಕ್ಷದಲ್ಲಿ ಸಹಿತ ಪ್ರಾಪಂಚಿಕ ಜೀವನ ಮಾನವನಿಗೆ ಅತ್ಯಂತ ಕಠಿಣವಾದ ಸಮಸ್ಯೆ. ಮಹಾಕವಿ ಭರ್ತೃಹರಿ ಇದನ್ನು "ಅಸಿಧಾರಾ ವ್ರತ" (ಕತ್ತಿಯ ಮೇಲೆ ಸಾಮು) ಎನ್ನುತ್ತಾನೆ. ಹಾಗಿರುವಲ್ಲಿ ಮಾನವನ ಇಂತಹ ಸರ್ವನಾಶಕರವಾದ ಪ್ರವೃತ್ತಿಯನ್ನು ತಡೆಗಟ್ಟುವುದು ಅತ್ಯವಶ್ಯ. ಅದೃಷ್ಟವಶಾತ್ ಮುಂಬರುವ ಘಟನೆಗಳು ತಮ್ಮ ನೆರಳನ್ನು ಮುಂಚಿತವಾಗಿಯೇ ಚೆಲ್ಲುತ್ತವೆ. ಕವಿಗಳೂ ತಜ್ಞರೂ ಇತಿಹಾಸಕಾರರೂ ಸೂಕ್ಷ್ಮದೃಷ್ಟಿಯುಳ್ಳ ಜ್ಞಾನಿಗಳೂ ಈ ನೆರಳನ್ನು ಪರೀಕ್ಷಿಸಿ, ಅನಾಗತದ ಹಾದಿಕೊಂಡು, ಮುಂಬರುವ ಆಗುಹೋಗುಗಳನ್ನು ತಮ್ಮ ಬರಹಗಳ ಮೂಲಕ ಸ್ಪಷ್ಟೀಕರಿಸುತ್ತಾರೆ. ಇಂತಹ ಬರವಣಿಗೆಗಳನ್ನು ವಿಶ್ವಕಲ್ಯಾಣದ ದೃಷ್ಟಿಯಿಂದ ಪರಿಶೀಲಿಸುವುದು ಅಗತ್ಯ.

ಹೆಚ್. ಜಿ. ವೆಲ್ಸ್ ೭೦ ವರ್ಷಗಳ ಹಿಂದೆಯೇ ತನ್ನ ಟೈಮ್ ಮೆಷೀನ್, ದ ವಾರ್ ಆಫ್ ವರ್ಲ್ಡ್ಸ್ ಮತ್ತು ವರ್ಲ್ಡ್ ಸೆಟ್ ಫ್ರೀ ಎಂಬ ಕಾದಂಬರಿಗಳಲ್ಲಿ ಪ್ರಪಂಚದಲ್ಲಿ ಮುಂಬರಲಿರುವ ಘಟನೆಗಳನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾನೆ. ಈ ಮೂರೂ ಕಾದಂಬರಿಗಳು ಪ್ರಪಂಚದ ಮಹಾಯುದ್ಧಕ್ಕೆ (೧೯೧೪-೧೯೧೮) ಮುಂಚಿತವಾಗಿಯೇ ಬರೆಯಲ್ಪಟ್ಟವು. ಅಂದಿನಿಂದ ಇಂದಿನವರೆಗೆ ವೈಜ್ಞಾನಿಕ ಘಟನೆಗಳನ್ನು ಪರಿಶೀಲಿಸಿದಲ್ಲಿ, ಅವನು ಸುಮಾರು ೭೦ ವರ್ಷಗಳ ಹಿಂದೆಯೇ ಎಂತಹ ಬೃಹತ್ತರವಾದ ಸತ್ಯವನ್ನು ಪ್ರಪಂಚದ ದೃಷ್ಟಿಗೆ ತಂದಿದ್ದಾನೆ ಎಂಬುದು ಸಾಮಾನ್ಯ ಓದುಗರಿಗೆ ಸಹಿತ ಹೊಳೆಯದಿರಲಾರದು. ೧೯೧೧ರಲ್ಲಿ ಅರ್ನೆಸ್ಟ್ ರುದರ್‌ಫೋರ್ಡ್ ಎಂಬ ಆಂಗ್ಲ ಭೌತಶಾಸ್ತ್ರಜ್ಞನು ಅಣುವಿನ ಮಹತ್ವವನ್ನು ಕಂಡುಹಿಡಿದ. ಈ ಅಣುವಿನಲ್ಲಿ ಎಂತಹ ಶಕ್ತಿ ಅಡಗಿದೆ ಎಂಬುದನ್ನು ಬಹಿರಂಗಗೊಳಿಸಿದ. ೧೯೩೨ರಲ್ಲಿ ಚಾಡ್ವಿಕ್ ಎಂಬ ಭೌತಶಾಸ್ತ್ರಜ್ಞನು ಅಣುವಿನಲ್ಲಿ ಅಡಗಿ

('ಹಿಂದು' ಪತ್ರಿಕೆಯಿಂದ ಸಾಭಾರ)

ರುವ ಬೃಹತ್ ಶಕ್ತಿಯನ್ನು ಯಾಂತ್ರಿಕ, ತಾಂತ್ರಿಕೋಪಕರಣಗಳಿಂದ ಹೊರಗೆಡುಹುವ ಸಾಧ್ಯತೆ ಇದೆಯೆಂದೂ ಹಾಗಾದ ಪಕ್ಷದಲ್ಲಿ ಈ ಭೂಲೋಕದ ಅಂತ್ಯವನ್ನು ಸೃಷ್ಟಿಕರ್ತನಾದ ದೇವರಿಂದಲ್ಲದೆ ಇನ್ನಾರಿಂದಲೂ ತಡೆಯುವುದು ಅಸಾಧ್ಯವೆಂದೂ ಸಾರಿದೆ.

ಈ ಬರಹಗಳಲ್ಲಿ ಬಹಳ ಗಮನಾರ್ಹವೆಂದರೆ ವೆಲ್ಸನದು. ಆಟಮ್ ಬಾಂಬ್ ಎಂಬ ನಾಮಕರಣವನ್ನು ಪ್ರಪ್ರಥಮವಾಗಿ ಮಾಡಿದವನು ಆತನೆ. ೧೯೩೦ರಲ್ಲಿ ಅಣುಶಕ್ತಿಯ ಆಸ್ಫೋಟನವೂ ಸಾಧ್ಯವೆಂದೂ ಕರೋಲಿನಂ (ಯುರೇನಿಯಂನ ಹಾಗೆ) ಎಂಬ ವಸ್ತು ಆಸ್ಫೋಟನದಲ್ಲಿ ಉಪಯೋಗಿಸಲ್ಪಡುವುದೆಂದೂ ವಿಜ್ಞಾನಿಗಳ ತಂತ್ರಜ್ಞರ ಹಾಗೂ ಸೈನಿಕರ ಸಹಕಾರ ಪ್ರಯತ್ನಗಳಿಂದ ಅಣುಬಾಂಬು ತಯಾರಿಸಲ್ಪಡುವುದೆಂದೂ ೧೯೪೦ರ ಒಳಹೊರಗೆ ನಡೆಯಲಿರುವ ಪ್ರಪಂಚದ ಯುದ್ಧದಲ್ಲಿ ಈ ಅಣುಬಾಂಬನ್ನು ಉಪಯೋಗಿಸಲಾಗುವುದೆಂದೂ ಇದರ ಪರಿಣಾಮವಾಗಿ ಭೂಗೋಳದ ಪ್ರಸಿದ್ಧ ರಾಜ್ಯಗಳೂ ಪಟ್ಟಣಗಳೂ ಅಳಿಯುವವೆಂದೂ ಉಳಿದ ಅಲ್ಪಸಂಖ್ಯೆಯ ಜನ ಮಾನವನ ಧಾರ್ಷ್ಟ್ಯದಿಂದ ನಡೆದ ಸರ್ವನಾಶವನ್ನು ಅವಗಾಹನೆಮಾಡಿಕೊಂಡು, ಉಳಿದ ಅತ್ಯಂತ ಸ್ವಲ್ಪವಾದ ಭೂಭಾಗವನ್ನು ಪೂರ್ಣನಾಶದಿಂದ ತಡೆಗಟ್ಟಿ ಅಂತಾರಾಷ್ಟ್ರೀಯ ಹಾಗೂ ಅಂತರ್ಜಾತೀಯ ಸೌಹಾರ್ದವನ್ನು ಸ್ಥಾಪಿಸಿ ಈ ಅಣುಶಕ್ತಿಯನ್ನು ವಿಶ್ವಕಲ್ಯಾಣಕ್ಕೆ ಉಪಯೋಗಿಸುವರೆಂದೂ ತನ್ನ ಕಾದಂಬರಿಗಳಲ್ಲಿ ಊಹಿಸಿದ್ದಾನೆ. ನಂತರ ನಡೆದ, ಈಗ ನಡೆಯುತ್ತಿರುವ, ೧೯೪೫ರಲ್ಲಿ ಅಮೇರಿಕವು ಜಪಾನಿನ ಮೇಲೆ ನಡೆಸಿದ ಅಣುದಾಳಿ, ಜಲಜನಕ ಬಾಂಬಿನ ಉತ್ಪಾದನೆ ಹಾಗೂ ರಾಷ್ಟ್ರ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಅಣುಶಸ್ತ್ರ ಸಂಚಯನ ಘಟನೆಗಳನ್ನು ಕಂಡಾಗ ಈತನ ಕಲ್ಪಿತ ಊಹೆಗಳ ಔಚಿತ್ಯವು ಅತ್ಯಾಶ್ಚರ್ಯಕರವೆನಿಸುವಂತಿವೆ.

೧೯೩೨ ರಲ್ಲಿ ನಡೆದ ಕೆಲ ಘಟನೆಗಳಿಂದ ಪರಮಾಣುಯುಗಕ್ಕೆ ನಾಂದಿ ಹಾಡಿದಂತಾಯಿತು. ಹಂಗೆರಿಯಲ್ಲಿ ಜನ್ಮ ತಾಳಿದ ಲಿಯೋ ಜಲಾರ್ಡ್ ಎಂಬ ವಿಜ್ಞಾನಿಯು ಆಗ ಬರ್ಲಿನ್ ನಗರದಲ್ಲಿದ್ದ. ಮೇಲೆ ಸೂಚಿಸಿದ ಹೆಚ್. ಜಿ. ವೆಲ್ಸನ ಕೃತಿಗಳನ್ನು ಓದಿದ. ಆ ಸಮಯದಲ್ಲಿ ಸುಪ್ರಸಿದ್ಧ ಐನ್‌ಸ್ಟೈನನು ಬರ್ಲಿನ್‌ನಲ್ಲೇ ಇದ್ದ. ವೆಲ್ಸನ ಅಣುಜಿಜ್ಞಾಸೆಯನ್ನು ಓದಿದ ನಂತರ ಜಲಾರ್ಡನು ಐನ್‌ಸ್ಟೈನನನ್ನು ಭೇಟಿಯಾದ. ಇಬ್ಬರೂ ಪರಮಾಣು ಶಕ್ತಿಯ ಪ್ರಭಾವವನ್ನು ಗುರುತಿಸಿ ಇದನ್ನು ವಿಶ್ವನಾಶಕ್ಕೂ ವಿಶ್ವಕಲ್ಯಾಣಕ್ಕೂ ಉಪಯೋಗಿಸುವ ಸಾಧ್ಯತೆಯನ್ನರಿತರು. ಆದರೆ ೧೯೩೨ ರಲ್ಲಿ ಹಿಟ್ಲರನ ಏಳಿಗೆಯು ಜಲಾರ್ಡನನ್ನು ಲಂಡನ್ನಿಗೆ ಅಟ್ಟಿತು. ಇಷ್ಟರಲ್ಲಿ ಜೇಮ್ಸ್ ಚಾಡ್ವಿಕ್ ಎಂಬ ವಿಜ್ಞಾನಿ ಪರಮಾಣುವಿಗೆ ಸಂಬಂಧಿಸಿದ ಅತಿ ಮುಖ್ಯವಾದ ನ್ಯೂಟ್ರಾನನ್ನು ಕಂಡುಹಿಡಿದ. ಇದನ್ನು ಕೇಳಿದೊಡನೆಯೇ ಸೂಕ್ಷ್ಮಗ್ರಾಹಿಯಾದ ಜಲಾರ್ಡ್ ಈ ನ್ಯೂಟ್ರಾನ್ ಒದೆತದಿಂದ ಪರಮಾಣು ಗರ್ಭವು ಒಡೆದು ಅನೇಕ ನ್ಯೂಟ್ರಾನುಗಳು ಉಂಟಾಗಿ ಇವು ಇತರ ಪರಮಾಣುಗಳನ್ನು ಆ ಸ್ಫೋಟಿಸುವ ಸರಪಳಿಯ ಘಟನೆಯಿಂದಾಗಿ ಎಂಥ ಕರಾಳ ಶಕ್ತಿ ಹೊರಹೊಮ್ಮುತ್ತದೆ ಎಂಬುದನ್ನು ಗುರುತಿಸಿದ. ಥೋರಿಯಂ, ಯುರೇನಿಯಮ್ ಎಂಬ ಧಾತುಗಳು ಈ ಸರಪಳಿಯ ಘಟನೆಗೆ ಅತಿ ಉಪಯುಕ್ತವಾಗಬಲ್ಲವು ಎಂಬುದನ್ನು ಕಂಡುಕೊಂಡು ಮುಂದೆ ಈ ಎರಡು ವಸ್ತುಗಳಿಂದಾಗಬಹುದಾದ ಉಪಯೋಗಗಳಿಗೆ, ಸ್ವಂತ ಹಕ್ಕನ್ನು ಸ್ಥಾಪಿಸಲು (ಪೇಟೆಂಟ್) ಅರ್ಜಿಯನ್ನು ದಾಖಲು ಮಾಡಿದನಂತೆ. ೧೯೩೮ ರಲ್ಲಿ ಲೈಸ್ ಮೆಟ್ನರ್ ಒಟೋಫಿಶ್, ಒಟೋಹ್ಯಾನ್ ಮತ್ತು ಫ್ರಿಟ್ಜ್ ಸ್ಟ್ರಾಸ್‌ಮನ್ ಎಂಬ ವಿಜ್ಞಾನಿಗಳು ಪರಮಾಣುವನ್ನು ಭೇದಿಸುವ ಪ್ರಯೋಗಗಳಲ್ಲಿ ಬಹಳ ಮಟ್ಟಿಗೆ ಯಶಸ್ವಿಯಾದರು. ೧೯೩೯ರ ಫೆಬ್ರುವರಿ ೨೫ ರಂದು ನೊಯೆಲ್ ಬೋರ್ ಹಾಗೂ ಎನ್ರಿಕೋ ಫರ್ಮಿ ಎಂಬ ವಿಜ್ಞಾನಿಗಳು ಅಮೇರಿಕದ ಭೌತಶಾಸ್ತ್ರ ಸಂಸ್ಥೆಯ ಅಧಿವೇಶನದಲ್ಲಿ ಯುರೇನಿಯಂ ಅಣುವಿನ ವಿಭಜನೆಯನ್ನು

ನ್ಯೂಟ್ರಾನಿನಿಂದ ಸಾಧಿಸುವ ಬಗೆಯನ್ನು ಬಗ್ಗೆ ಸಿದರು. ಆ ಸಮಯದಲ್ಲಿ ಜಲಾರ್ಡ್ ಮತ್ತು ಐನ್‌ಸ್ಟೈನರು ಅಮೇರಿಕದಲ್ಲೇ ಇದ್ದರು. ವಿಶ್ವ ವ್ಯಾಪಕವಾಗಬಲ್ಲ ಎರಡನೇ ಮಹಾಯುದ್ಧವು ಕೇವಲ ಆರು ತಿಂಗಳ ದೂರದಲ್ಲಿರುವುದನ್ನು ಯಾರೂ ಗುರುತಿಸದಿದ್ದರೂ ದೂರ ದೃಷ್ಟಿ ಯುಳ್ಳ ಜಲಾರ್ಡನು ಪರಮಾಣು ಅಸ್ಫೋಟ ದಿಂದುಂಟಾಗುವ ಶಕ್ತಿಯನ್ನು ಯುದ್ಧದ ಲ್ಲಿಯೂ, ಶಾಂತಿ ಸಮಯದಲ್ಲಿಯೂ ರಚನಾ ತ್ಮಕ ಕಾರ್ಯಗಳಲ್ಲಿಯೂ ಎಷ್ಟು ಮಹತ್ತರ ಉಪಯೋಗಕಾರಿಯಾಗಿ ಬಳಸಬಹುದೆಂಬ ಅಂಶವನ್ನು ಅಮೇರಿಕದ ಆಗಿನ ಅಧ್ಯಕ್ಷ ರೂಸ್‌ವೆಲ್ಟರ ಗಮನಕ್ಕೆ ತರಬೇಕೆಂದು ಐನ್‌ಸ್ಟೈನನ್ನು ಒತ್ತಾಯಪಡಿಸಿದ. ಇದರಂತೆ ಐನ್‌ಸ್ಟೈನ್ ಈ ವಿಚಾರವಾಗಿ ಅಕ್ಟೋಬರ್ ತಿಂಗಳಲ್ಲಿ ರೂಸ್‌ವೆಲ್ಟ ರಿಗೆ ಪತ್ರ ಬರೆದ. ಇದಕ್ಕೆ ಮುಂಚಿತವಾಗಿಯೇ ಸೆಪ್ಟೆಂಬರ್ ತಿಂಗಳಲ್ಲಿ ನವರಂಗಪತ್ರಿಕೆಗಳಾಗಿ ಪಾಂಡಿಚೇರಿಯಲ್ಲಿ ನೆಲೆಸಿದ್ದ ಶ್ರೀ ಅರವಿಂದರು ದೇವರು ಕೊಗಿ ನೀಡಬೇಕೆಂಬಷ್ಟರಲ್ಲೇ ವಿಜ್ಞಾನಿಯು ಪರಮಾಣುವಿನೊಂದಿಗೆ ಚೆಲ್ಲಾಟವಾಡಿ ಅದಕ್ಕೆ ಬಲಿಯಾದ ಎಂದು ತಮ್ಮ ಕವನದಲ್ಲಿ ಹಾಡಿದರು.

ಈ ವಿಷಯ ತನ್ನ ಗಮನಕ್ಕೆ ಬಂದ ಕೂಡಲೆ ರೂಸ್‌ವೆಲ್ಟ್ ಅಣುಸ್ಫೋಟದ ಉದ್ಯಮವನ್ನು ಮ್ಯಾನ್‌ಹ್ಯಾಟನ್ ಪ್ರಾಜೆಕ್ಟ್ ಎಂಬ ಹೆಸರಿನಲ್ಲಿ ಕೂಡಲೇ ಸ್ಥಾಪಿಸಲು ಅಜ್ಞೆಯನ್ನಿತ್ತ. ಈ ಕರಾಳ ಉದ್ಯಮದಲ್ಲಿ ೪೩೦೦೦ ಜನರನ್ನು ನಿಯೋಜಿಸಲಾಯಿತು. ಇದಕ್ಕಾಗಿ ವ್ಯಯಿಸಲಾಗಿಟ್ಟ ಹಣ ೨೨೦೦೦ ಕೋಟಿ. ೧೯೪೨ ರಲ್ಲಿ ಎನ್ರಿಕೋ ಫರ್ಮಿ ಅಣುವನ್ನು ಸ್ಫೋಟಿಸುವುದರಲ್ಲಿ ಯಶಸ್ವಿಯಾದ. ಎರಡೂವರೆ ವರ್ಷಗಳ ನಂತರ ೧೯೪೫ರಲ್ಲಿ ಅಣುಬಾಂಬಿನಿಯು ಉದ್ಭವವಾಯಿತು. ಇದನ್ನು ಹೆನ್ರಿ ಸ್ಟಿಮ್‌ಸನ್ ಎಂಬಾತ ಪ್ರಪಂಚದ ಇತಿಹಾಸದಲ್ಲಿ ವಿಜ್ಞಾನ ಅರ್ಥ-ಶಾಸ್ತ್ರ ಮತ್ತು ನಿರಂತರ ಶ್ರಮಗಳ ಸಹಕಾರೋದ್ಯಮ; ಅತ್ಯದ್ಭುತ ಸಾಧನೆ ಎಂದಿದ್ದಾನೆ, ಇದೆಲ್ಲವೂ ಬಹಳ ರಹಸ್ಯವಾಗಿ ನಡೆಯಿತು.

ಇದರಲ್ಲಿ ನಿಯೋಜಿತರಾದ ೪೩೦೦೦ ಮಂದಿ ಯಾರು ಯಾವ ವಿಭಾಗದಲ್ಲಿ ಏನು ಕೆಲಸ ಮಾಡುತ್ತಿದ್ದಾರೆ ಎಂಬುದು ಪರಸ್ಪರ ಯಾರಿಗೂ ತಿಳಿಯದು. ಇದರಲ್ಲಿ ನಿಯೋಜಿತರಾದ ಭೌತ ಶಾಸ್ತ್ರಜ್ಞರಾರೆಂಬುದು ಕೂಡ ಗುಟ್ಟಾಗಿ ಇತ್ತು. ಎಲ್ಲಾ ಹೆಸರುಗಳೂ ಉದ್ಯಮಗಳೂ ಗುಪ್ತ ಸಂಕೇತಗಳಿಂದ ವ್ಯವಹರಿಸಲ್ಪಟ್ಟವು. ಈ ಉದ್ಯಮದ ಗುರಿ ಏನೆಂಬುದು ಬಹಳ ಮೇಲ್ಮಟ್ಟದಲ್ಲಿರುವ ಕೆಲ ಅಧಿಕಾರಿಗಳಿಗೆ ಬಿಟ್ಟು ಅಮೇರಿಕನ್ ಕಾಂಗ್ರೆಸ್ಸಿಗಾಗಲಿ ಪತ್ರಿಕೋದ್ಯಮಿಗಳಿಗಾಗಲಿ, ಯುದ್ಧದಲ್ಲಿ ತಮ್ಮನ್ನು ಕೂಡಿದ ಮಿತ್ರ ರಾಷ್ಟ್ರಗಳಿಗಾಗಲಿ ಎಳ್ಳಷ್ಟು ತಿಳಿದಿರ ಲಿಲ್ಲ. ವಿಜ್ಞಾನಿಗಳು ಸಹ ಅವರವರಿಗೆ ಕೊಟ್ಟ ವಿಷಯವನ್ನುಳಿದು ಮತ್ತೊಬ್ಬರ ವಿಷಯ, ಅವರು ಮಾಡುತ್ತಿರುವ ಪ್ರಯೋಗಗಳು, ಅವುಗಳ ಫಲಿತಾಂಶಗಳು ಇನ್ನೊಬ್ಬರಿಗೆ ಅಲ್ಪಾಂಶವೂ ತಿಳಿಯದಷ್ಟು ಗೂಢವಾಗಿರಿಸಲಾಯಿತು. ಈ ಕರಾಳ ಶಕ್ತಿಯನ್ನು ಬಾಂಬನ್ನಾಗಿ ರೂಪುಗೊಳಿಸುವ ಪ್ರಯತ್ನದಲ್ಲಿ ಅದರ ನಿರ್ದೇಶಕರು ಕೈಗೊಂಡ ಮುಂಜಾಗ್ರತೆ ವರ್ಣನಾತೀತ.

ಬಾಂಬು ತಯಾರಾಗುವ ಹೊತ್ತಿಗೆ ಹಿಟ್ಲರನು ಮೃತನಾಗಿದ್ದ. ಜರ್ಮನಿಯ ಯುದ್ಧವೂ ಕೊನೆಗೊಂಡಿತ್ತು. ಜಪಾನ್ ಇನ್ನೂ ಹೋರಾಡುತ್ತಿತ್ತು. ಜುಲೈ ೧೬ರಂದು ಉಷಃಕಾಲ ೫.೩೦ ಗಂಟೆಗೆ ಪ್ರಪ್ರಥಮ ಅಣುಬಾಂಬಿನಿಯು ಸ್ಫೋಟವಾಯಿತು. ಈ ಸ್ಫೋಟದಿಂದುಂಟಾದ ಭಯಂಕರ ಶಬ್ದ ೮೦ ಕಿಲೋಮೀಟರ್ ಆಚೆಗೆ ಕೇಳಿಸಿತಂತೆ. ಇದರಿಂದುಂಟಾದ ಬೆಳಕು ೪೦೦ ಕಿಲೋಮೀಟರ್ ಆಚೆಗೆ ಕಂಡುಬಂತಂತೆ. ೨೦೦೦೦ ಟನ್ನುಗಳಷ್ಟು ಟಿ.ಎನ್. ಟಿ. (ಸಿಡಿ ಮದ್ದು) ಶಕ್ತಿಯನ್ನು ಹೊರಚೆಮ್ಮಿತಂತೆ. ಈ ದೃಶ್ಯವನ್ನು ನೋಡಿದ ಜನರಲ್ ಜೇಮ್ಸ್ ಫ್ಯಾರೆಲ್ ಎಂಬ ಸೈನ್ಯಾಧಿಕಾರಿ ಕವಿತಾತ್ಮಕವಾಗಿ ಈ ರೀತಿ ಚಿತ್ರಿಸಿದ್ದಾನೆ: "ಈ ಅಸ್ಫೋಟನೆಯಿಂದಾಗಿ ಉದ್ಭವಿಸಿದ ಬೆಳಕು, ಮಧ್ಯದಿಂದ ಮಧ್ಯಾಹ್ನದ ಮಾರ್ತಾಂಡನ ತೇಜಸ್ಸಿಗಿಂತಲೂ

ಅನೇಕ ಪಾಲು ಹೆಚ್ಚಾಗಿದ್ದಿತು. ಸುವರ್ಣ ಕಾಂತಿ, ಕೆಂಪು, ಊದು, ನೀಲ ವರ್ಣಗಳಿಂದ ಜ್ವಾಜ್ವಲ್ಯಮಾನವಾಗಿ ಸುತ್ತಲಿರುವ ಬೆಟ್ಟಗಳ ಶಿಖರಗಳನ್ನು, ಸುರಂಗಗಳನ್ನು, ದಿಬ್ಬಗಳನ್ನು ವರ್ಣಿಸಲಸಾಧ್ಯವಾದ ಕಾಂತಿಯಿಂದ ಬೆಳಗಿತು. ಈ ತೇಜೋರಾಶಿದೃಶ್ಯ ನೋಡಿ ಅನುಭವಿಸ ಬೇಕಾದ್ದಲ್ಲದೆ ಊಹಾತೀತ. ಇದರಿಂದುಂಟಾದ ವಾಯು ವೇಗ ಕರ್ಣಕಠೋರವಾದ ಶಬ್ದಗಳು ಇಂತಹ ಅಸ್ಫೋಟಗಳಿಂದ ಆಗಬಲ್ಲ ಪ್ರಳಯ ವನ್ನು ಮುಕ್ತಕಂಠದಿಂದ ಸಾರಿದವು. ಅಲ್ಲದೇ ಇಂತಹ ಕರಾಳಶಕ್ತಿ ಮತ್ತು ತೇಜಸ್ಸು ದೈವಿಕ ವಾದುವೇ ವಿನಾ ಹುಲುಮಾನವನು ಇವರ ಮುಂದೆ ನಿರ್ವೀರ್ಯನಲ್ಲದೇ ಇದರಿಂದ ಹೊರ ಡುವ ಫಲಿತಾಂಶ ಪ್ರಪಂಚದ ಅಳಿವು ಎಂಬುದು ನಿಸ್ಸಂದೇಹ ಎಂಬುದನ್ನು ತೋರಿಸಿತು. ಈ ದೃಶ್ಯವನ್ನು ನೋಡಿದ ಕೆನೆತ್ ಬೈಯಿನ್‌ಬ್ರಿಜ್ ಎಂಬಾತನು ಸಿಟ್ಟಿನಿಂದಲೂ ಬೇಸರದಿಂದಲೂ "ನಾವೆಲ್ಲರೂ ಹಾದರದ ಮಕ್ಕಳು" ಎಂದು ಬಿಟ್ಟನಂತೆ. ಈ ರಾಕ್ಷಸಕೃತ್ಯವನ್ನು ಸಾಧಿಸಲು ನೆರೆವಾದ ತಜ್ಞರಲ್ಲಿ ಬಹುಮುಖ್ಯನಾದ ಓಪೆನ್‌ಹೈಮರ್ ತನ್ನ ಪ್ರಯತ್ನದ ಫಲದಿಂದಾಗಿ ಉಂಟಾದ ಆಸುರೀಶಕ್ತಿಯನ್ನೂ ಇದರಿಂದುಂಟಾಗಬಲ್ಲ ಸರ್ವನಾಶವನ್ನೂ ಗುರು ತಿಸಿದ. ತಾನು ಮಾಡಿದ ಪಾಪಕೃತ್ಯವು ಭೂತಾ ಕಾರ ತಾಳಿ ಆತನ ಮನಸ್ಸಿನಲ್ಲಿ ನೆಲಿಸಿ ಅವನ ಮನಶ್ಶಾಂತಿಯನ್ನು ಆಜೀವ ಪರ್ಯಂತ ಹಾಳು ಮಾಡಿತಂತೆ.

ಹೌದು; ಟ್ರಿನಿಟೀ ರೂಪುಗೊಂಡಿತು. ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟ್ ಕಾಲವಾಗಿದ್ದ. ಟ್ರೂಮನ್ನನು ಅಧ್ಯಕ್ಷನಾಗಿದ್ದ. ಶತ್ರುದೇಶಗಳ ಮೇಲೆ ಈ ಬಾಂಬನ್ನು ಪ್ರಯೋಗಿಸಲು ಅತ್ಯಂತ ಕಾತುರರಾಗಿದ್ದ ಆತನ ಅನುಯಾಯಿ ಗಳು ಆಗ ಹೋರಾಡುತ್ತಿದ್ದ ಜಪಾನಿನ ಮೇಲೆ ಈ ಬಾಂಬನ್ನು ಪ್ರಯೋಗಿಸಲು ಟ್ರೂಮನನ್ನನ ಅನುಮತಿಯನ್ನು ಪಡೆದರು. "ಅಷ್ಟೊತ್ತಿಗೆ ಜಪಾನ್ ಆಗಲೇ ಸೋಲನ್ನು ಒಪ್ಪಿಕೊಂಡಿತ್ತು. ಆದರೆ ಇದನ್ನು ಸಾಧಿಸಿದ ವಿಜ್ಞಾನಿಗಳು ಪರ

ಮಾಣು ಬಾಂಬಿನ ಪ್ರಯೋಗದಿಂದಾಗಬಲ್ಲ ನಾಶವನ್ನು ಪ್ರತ್ಯಕ್ಷವಾಗಿ ಅಳೆಯಲೂ ತವಕಿಸು ತ್ತಿದ್ದರು. ಇದಕ್ಕಾಗಿ ಖರ್ಚಾದ ೨೨೦೦೦ ಕೋಟಿ ಯಾವ ಪುರುಷಾರ್ಥಕ್ಕೆ ಎಂದು ಅಮೇರಿಕನ್ ಕಾಂಗ್ರೆಸ್ ಸದಸ್ಯರು ಖಂಡಿತ ವಾಗಿಯೂ ಕೇಳುತ್ತಾರೆ. ಅವರಿಗೆ ತೃಪ್ತಿಕರ ವಾದ ಜವಾಬು ನೀಡಲು ಈ ಬಾಂಬನ್ನು ಪ್ರಯೋಗಿಸಿ ಅದರಿಂದುಂಟಾದ ಬೃಹತ್ ನಾಶ ವನ್ನು ಅವರ ಗಮನಕ್ಕೆ ತರುವುದೊಂದೇ ದಾರಿ," ಎಂದು ಟ್ರೂಮನ್ ಮತ್ತು ಅವನ ಆಪ್ತ ಅಧಿಕಾರಿಗಳು ಈ ದುರಾಲೋಚನೆಗೆ ಒಪ್ಪಿಗೆ ಯನ್ನಿತ್ತರು. ಇದರಂತೆ ೧೯೪೫ ಅಗಸ್ಟ ೬ರಂದು ಜಪಾನಿನ ಹಿರೋಷಿಮೊ ನಗರದ ಮೇಲೆಯೂ ಮೂರು ದಿವಸಗಳ ನಂತರ ನಾಗಾಸಾಕಿಯ ಮೇಲೆಯೂ ಪರಮಾಣು ಬಾಂಬಿನ ಪ್ರಯೋಗ ವಾಯಿತು ಎಂದು ಈ ಉದ್ಯಮಕ್ಕೆ ನಿಯೋಜಿತ ನಾದ ಜನರಲ್ ಗ್ರೋವ್ಸ್ ಹೇಳಿಕೆಯನ್ನಿತ್ತ. "ಈ ಬಾಂಬಿನ ಪ್ರಯೋಗದಿಂದಾಗಿ ಘನ ನಾಗರಿಕರು ಎನಿಸಿಕೊಂಡ ನಾವು ಸೃಷ್ಟ್ಯಾದಿ ಯಲ್ಲಿನ ಕಾಡು ಮನುಷ್ಯರಿಗಿಂತಲೂ ಅತ್ಯಂತ ಹೀನದರ್ಜೆಯವರಾದೆವು" ಎಂದು ಲೀಹಿ ಎಂಬಾ ತನು ನುಡಿದ. ಈ ಪರಮಾಣು ಬಾಂಬಿನ ಅವತಾರಕ್ಕೆ ಕಾರಣೀಭೂತರಾದ ೪೭ ವಿಜ್ಞಾನಿ ಗಳು–ಇದರಲ್ಲಿ ೧೮ಜನ ನೋಬೆಲ್ ಪಾರಿತೋಷ ವನ್ನು ಪಡೆದವರು–ಪ್ರಪಂಚದ ಪ್ರಳಯದ ಘಟಿಯನ್ನು ರಚಿಸಿದರು. ಈ ಗಡಿಯಾರ ಮಧ್ಯರಾತ್ರಿ ೧೨ ಗಂಟೆ ಸೂಚಿಸಿದಲ್ಲಿ ಅಂತ ರಾಷ್ಟ್ರೀಯ ಹೋರಾಟದಲ್ಲಿ ಪರಮಾಣು ಬಾಂಬುಗಳ ಪ್ರಯೋಗದಿಂದಾಗಿ ಪ್ರಪಂಚದ ನಾಶವಾಗುವುದು ಖಂಡಿತ. ೧೯೪೭ ರಲ್ಲಿ ಈ ವಿನಾಶಕಾಲ ೧೨ ಗಂಟೆಗೆ ೭ ನಿಮಿಷಗಳಷ್ಟು ಹಿಂದುಳಿಯಿತು. ೧೯೫೩ ರಲ್ಲಿ ಕಂಡುಹಿಡಿ ಜಲಜನಕ ಬಾಂಬಿನಿಂದಾಗಿ ಈ ಘಟಿಯ ಮುಳ್ಳು ಮತ್ತಷ್ಟು ಮುಂದಕ್ಕೆ ಸರಿದು ೧೨ ಗಂಟೆಗೆ ೩ ನಿಮಿಷಗಳಷ್ಟು ಉಳಿಯಿತು. ೧೯೭೨ ರಲ್ಲಿ ರಷಿಯ ಮತ್ತು ಅಮೇರಿಕದ ನಡುವೆ ನಡೆದ ಸೌಹಾರ್ದಯುತ ಚಟುವಟಿಕೆ

ಫಲವಾಗಿ ೧೨ ನಿಮಿಷಗಳಷ್ಟು ಹಿಂದೆ ಸರಿಯಿತು. ಆದರೆ ರೀಗನ್ ಅಧ್ಯಕ್ಷರಾದ ನಂತರ ಅಮೇರಿಕ ರಶಿಯಾಗಳ ಸಂಬಂಧ ವಿಷಮಿಸಿ ಈ ಘಟಿಯ ಮುಳ್ಳು ಮತ್ತೆ ೮ ನಿಮಿಷಗಳು ಮುಂದೆ ಸರಿದು ಭೂಲೋಕದ ಅಂತ್ಯ ೪ ನಿಮಿಷಗಳಷ್ಟು ಉಳಿಯಿತು. ೧೯೮೩ರಲ್ಲಿ ಜಿನೀವಾದಲ್ಲಿ ಅಮೇರಿಕ ರಶಿಯಾಗಳ ನಡುವೆ ಪರಮಾಣು ಶಸ್ತ್ರಸಂನ್ಯಾಸದ ಬಗ್ಗೆ ನಡೆದ ಮಾತುಕತೆಗಳು ಕುಸಿದು, ಈ ಮುಳ್ಳು ಮತ್ತೊಂದು ನಿಮಿಷ ಮುಂದೆ ಸರಿದಿದೆ. ಅಂದರೆ ಪರಮಾಣು ಬಾಂಬಿನಿಂದಾಗತಕ್ಕ ಪ್ರಳಯ ಇನ್ನು ಮೂರೇ ನಿಮಿಷಗಳಷ್ಟು ಹಿಂದಿದೆ. ಇಂದಿನ ಪರಿಸ್ಥಿತಿ? ಕಾಲರೂಪಿಯಾದ ಆ ಪರಮಾತ್ಮನೇ ಬಲ್ಲ.

ಈ ಕರಾಳ ಘಟನೆಗಳನ್ನು ತನ್ನ ಕಾದಂಬರಿಗಳಲ್ಲಿ ಸೂಚಿಸಿದ ವೆಲ್ಸ್ ಎರಡು ಪ್ರಪಂಚ ಯುದ್ಧಗಳ ನಂತರ ೧೯೪೬ರಲ್ಲಿ ನಿಧನನಾದ. ಜಪಾನಿನ ಮೇಲೆ ನಡೆದ ಅಣುಬಾಂಬಿನ ಪ್ರಯೋಗದಿಂದಾದ ಕೇಡು ಆತನ ಬರಹಗಳನ್ನು ರುಜುವಾತು ಪಡಿಸಿತು. ಈತನು ಕಾಲವಾದ ನಂತರ ಕಳೆದ ೩೮ ವರ್ಷಗಳಲ್ಲಿ ಅಣುಬಾಂಬಿನ ತಾಂತ್ರಜ್ಞಾನವು ತೀವ್ರತೆಯಿಂದ ಮುಂದುವರೆದಿದೆ. ಅಮೇರಿಕನ್ನರೂ ರಶಿಯನ್ನರೂ ಅಣುಶಸ್ತ್ರ ಸಂಚಯನದಲ್ಲಿ ಒಬ್ಬರನ್ನೊಬ್ಬರು ಮೀರಿಸಿದ್ದಾರೆ. ಇಷ್ಟಲ್ಲದೇ ಪಾಶ್ಚಾತ್ಯ ದೇಶಗಳಲ್ಲಿ ಫ್ರಾನ್ಸ್, ಜರ್ಮನಿ, ಬ್ರಿಟನ್, ಇಟಲಿ ಮುಂತಾದವೂ ಪ್ರಾಚ್ಯದಲ್ಲಿ ಚೈನಾದೇಶ ಈ ಪ್ರಯತ್ನದಲ್ಲಿ ಮುಂದುವರೆಯುತ್ತಿದೆ. ಅಣುಶಸ್ತ್ರ ಸಂಚಯನದಲ್ಲಿ ಅಂತಾರಾಷ್ಟ್ರೀಯ ಪೈಪೋಟಿ, ತತ್ಫಲವಾಗಿ ಈ ಶಸ್ತ್ರಗಳ ನಿರಾತಂಕ ಬೆಳವಣಿಗೆ, ಇವರಿವರಲ್ಲಿ ದಿನೇ ದಿನೇ ಬೆಳೆಯುತ್ತಿರುವ ವೈಮನಸ್ಯ, ಅಪನಂಬಿಕೆಗಳ ಫಲವಾಗಿ, ವಿಶ್ವಶಾಂತಿಸ್ಥಾಪನೆಯಾಗುವ ಸಾಧ್ಯತೆ ಬಹಳ ಹಿಂದಕ್ಕೆ ಸರಿದಿದೆ. ಈವರೆಗೆ ತಯಾರಾದ ಅಣುಬಾಂಬುಗಳ ಬಾಹುಳ್ಯವೆಷ್ಟೆಂದರೆ ಇವುಗಳಿಂದ ೩೦ ಭೂಲೋಕಗಳನ್ನು ಸಂಪೂರ್ಣವಾಗಿ ನಾಶಗೊಳಿಸಬಹುದು, ಹಾಗೂ ಭೂಲೋಕದಲ್ಲಿ ವಾಸಿಸುತ್ತಿರುವ ಪ್ರತಿ ಪ್ರಾಣಿಯ ಮೇಲೂ ನಾಲ್ಕು ಟನ್ ಟಿ. ಎನ್. ಟಿ. ಸಿಡಿಮದ್ದು ಪ್ರಯೋಗಿಸತಕ್ಕಷ್ಟು. ದುರಾದೃಷ್ಟವಶಾತ್ ಏನಾದರೂ ಪ್ರಮಾದ ಸಂಭವಿಸಿ ಈ ಶಸ್ತ್ರಗಳು ಸಿಡಿದಲ್ಲಿ ಪ್ರಪಂಚವು ಖಂಡಿತವಾಗಿ ಉಳಿಯುವದಿಲ್ಲ. ಇದರ ನಿವಾರಣೋಪಾಯವಾಗಲಿ ಇದರಿಂದಾಗುವ ನಾಶವನ್ನು ತಡೆಗಟ್ಟುವ ಉಪಾಯವನ್ನಾಗಲಿ ಯೋಚಿಸುವಷ್ಟು ವ್ಯವಧಾನ ಕೂಡ ದೊರೆಯುವುದಿಲ್ಲ. ಈ ನಗ್ನ ಸತ್ಯ ಇದರಿಂದಾಟವಾಡುತ್ತಿರುವ ರಾಷ್ಟ್ರಗಳಿಗೆ ತಿಳಿಯದ ಅಂಶವಲ್ಲ. ಈಗಿರುವ ಅಂತಾರಾಷ್ಟ್ರೀಯ ಅಪನಂಬುಗೆ, ಅಸೂಯೆ, ಮಾತ್ಸರ್ಯಗಳಿಂದಾಗಿ ಯಾವ ನಿಮಿಷದಲ್ಲಾದರೂ ಈ ಕರಾಳ ಬಾಂಬಿಗೆ ಇಡೀ ಭೂಗೋಲದ ಜೀವರಾಶಿ ಬಲಿಯಾಗುವ ಸಾಧ್ಯತೆಯಲ್ಲಿ ಯಾವ ಸಂದೇಹವೂ ಇಲ್ಲ. ೧೯೧೪ರಲ್ಲೇ ವೆಲ್ಸನು ತನ್ನ ಬರವಣಿಗೆಗಳ ಮೂಲಕ ಇದರಿಂದಾಗಬಹುದಾದ ಸರ್ವನಾಶವನ್ನು ಪ್ರಪಂಚಕ್ಕೆ ಸಾರಿದ. ಈಚಿನ ರಚಯಿತರು ಸಹಿತ ಈ ಅಮಾನುಷ ಕೃತ್ಯವನ್ನೂ ತತ್ಫಲಿತವನ್ನೂ ಮನಮುಟ್ಟಿ ಚಿತ್ರಿಸಿದ್ದಾರೆ. ಆಲ್ಮಗರಾಡೋ, ನಾಗಾಸಾಕಿ, ಹೀರೋಷಿಮಾ ಘಟನೆಗಳ ೧೨ ವರ್ಷ ನಂತರ ನೆವಿಲ್ ಷೂಟ್ ಎಂಬ ಸಾಹಿತಿ ರಚಿಸಿದ 'ಆನ್ ದಿ ಬೀಚ್' ಎಂಬ ಕಾದಂಬರಿಯಲ್ಲಿ ಈ ರೀತಿ ಚಿತ್ರಿಸಿದ್ದಾನೆ. "೧೯೬೦ರ ಪರಿಸರದಲ್ಲಿ ಇಸ್ರೇಲ್ ಅರಬ್‌ದೇಶಗಳ ನಡುವೆ ಬೆಳೆದಿರುವ ಅತಿ ತೀವ್ರ ವಿನಾಶಕಾರಿ ಘರ್ಷವಾಗಿ ಬೆಳೆದು, ನ್ಯಾಟೋ ರಾಷ್ಟ್ರಗಳ ನಡುವೆ ಯುದ್ಧವಾಗುವುದು. ಇದರಲ್ಲಿ ಚೀನಾ ಸಹ ಪಾಲ್ಗೊಳ್ಳುತ್ತದೆ. ಈ ಯುದ್ಧದಲ್ಲಿ ಅಣುಶಸ್ತ್ರ ಪ್ರಯೋಗವೂ ಅನಿವಾರ್ಯ. ಇದರಿಂದಾಗಿ ಯುರೋಪ್, ಏಶಿಯಾ, ಉತ್ತರ ಅಮೇರಿಕಗಳನ್ನೊಳಗೊಂಡ ಭೂಗೋಳದ ಉತ್ತರಾರ್ಧವೂ ನಾಶವಾಗುವುದು. ಯುದ್ಧವು ಆರಂಭವಾದ ೩೭ನೆಯ ದಿವಸ ಈ ಪ್ರಮಾದವೂ ಸಂಭವಿಸುವುದು. ಈ ಖಂಡಗಳಲ್ಲಿ ಜೀವ, ಸಸ್ಯ ರಾಶಿಗಳು ಸಂಪೂರ್ಣವಾಗಿ ಅಳಿಯುತ್ತವೆ.

ಈ ಬೃಹತ್‌ನಾಶ, ದಕ್ಷಿಣದಲ್ಲಿ ಆಸ್ಟ್ರೇಲಿಯಾ ಖಂಡದ ಮೆಲ್ಬೋರ್ನ್ ಈ ಕಾದಂಬರಿಯ ಸನ್ನಿವೇಶಗಳ ಬೀಡುನಗರದವರೆಗೂ ವ್ಯಾಪಿಸುವುದು. ಉತ್ತರದಲ್ಲಿ ಕೆಲ ಅಯೋಗ್ಯ ಪುಂಗಡಗಳು ತಂತಮ್ಮ ವೈಮನಸ್ಸುಗಳಿಂದ ತಮ್ಮ ನೆಲೆಗಳಿಗೆ ಕಿಚ್ಚಿಟ್ಟುಕೊಂಡು ಈ ಬೆಂಕಿ ದಕ್ಷಿಣದಲ್ಲಿರುವ ನಿರಪರಾಧಿಗಳಿಗೆ ವ್ಯಾಪಿಸುವುದು ಯಾವ ನ್ಯಾಯ?" ಇದಕ್ಕೆ ಉತ್ತರ ಈ ಕಾದಂಬರಿಯಲ್ಲಿನ ಎರಡು ಪಾತ್ರಗಳ ನಡುವೆ ನಡೆದ ಸಂಭಾಷಣೆಯಲ್ಲಿ ದೊರೆಯುತ್ತದೆ. ಮೋಯಿರಾ ಎಂಬಾಕೆ ಡ್ವೈಟ್ ಎಂಬವನನ್ನು ದಕ್ಷಿಣ ದೇಶಗಳ ಮೇಲೆ ಎಂಥ ಬಾಂಬಿನ ಪ್ರಯೋಗವು ನಡೆಯಲಿಲ್ಲ ಹಾಗಿರುವಲ್ಲಿ ನಿರಪರಾಧಿಗಳಾದ ದಕ್ಷಿಣದೇಶಿಗರು ಇದರ ದುಷ್ಪರಿಣಾಮವನ್ನು ಅನುಭವಿಸುವದು ಯಾವ ನ್ಯಾಯ? ಎಂದು ಖತಿಗೊಂಡು ಪ್ರಶ್ನಿಸುತ್ತಾಳೆ. ಇದಕ್ಕೆ ಡ್ವೈಟನ ಉತ್ತರ, ಅಣುವಿನ ಸ್ಫೋಟದಿಂದಾಗುವ ಶಕ್ತಿಯು ವ್ಯಾಪಕ ಗಾಳಿಯಿಂದ ಹರಡುತ್ತದೆ. ಗಾಳಿಯನ್ನು ತಡೆಗಟ್ಟಲೂ ಯಾರಿಗೆ ಸಾಧ್ಯ? ರಾಜಾಜಿಯವರು ಅಣು ಸ್ಫೋಟ ಶಕ್ತಿಯ ವಿಕಿರಣ ಯಾರಿಗೂ ಕಾಯುವದಿಲ್ಲ. ಯಾರಿಂದಲೂ ತಡೆಗಟ್ಟಲಾಗುವದಿಲ್ಲ ಎಂದಿದ್ದಾರಲ್ಲವೇ? ದಕ್ಷಿಣಾಂತ್ಯದಲ್ಲಿರುವ ನಮ್ಮ ಮೆಲ್‌ಬೋರ್ನಿನ ಉಳಿವು ಸಹಿತ ಕೇವಲ ಕೆಲ ದಿನಗಳಷ್ಟೆ, ತಿಂಗಳಾದರೂ ಆಗಬಹುದು. ಕೇವಲ ಕೆಲ ದಿನಗಳಾದರೂ ಆಗಬಹುದು. ಇನ್ನೂ ಬೇಗನೆ ಎಂದರೆ ಕೆಲವೆ ಗಂಟೆಗಳಾಗಬಹುದು. ಮೋಯಿರಾ ಡ್ವೈಟ್ ಈ ಸತ್ಯವನ್ನು ಅರಿತೂ, ಪಕ್ಕದಲ್ಲಿರುವ ಮೇರಿ ಹೊಮ್‌ಸಳು ಬಹಳ ಶ್ರದ್ಧೆಯಿಂದ ತರಕಾರಿ ತೋಟವನ್ನು ಮಾಡುತ್ತಿದ್ದಾಳೆ. ಎಂತಹ ಆತ್ಮವಂಚನೆ! ಈ ತರಕಾರಿ ಬೆಳೆಯುವ ಆರು ತಿಂಗಳ ಹೊತ್ತಿಗೆ ಅವಳೂ ಇರುವುದಿಲ್ಲ, ನಾನೂ ಇರುವುದಿಲ್ಲ. ನೀನು ಸಹ. ಆರು ತಿಂಗಳ ನಂತರ ಅವಳಿಗೆ ತರಕಾರಿಯ ಅಗತ್ಯವಾದರೂ ಏನು?

ಇದೇ ಕಾದಂಬರಿಯಲ್ಲಿ ಇನ್ನೊಂದು ಪಾತ್ರ ಪೀಟರ್ ಎಂಬುವನು ದೇಶಪರ್ಯಟನೆಗೆ ಹೊರಡುವ ಮುನ್ನ ಹೆಂಡತಿ ಮೇರಿಗೆ ಹೇಳುತ್ತಾನೆ: "ನಾನಿಲ್ಲದಾಗ ಅಣುಶಕ್ತಿಯ ಪ್ರಯೋಗವು ನಡೆದ ಪಕ್ಷದಲ್ಲಿ ನೀನು ಒಂದು ಸಯನೈಡ್ (ತಾತ್ರ ಪಾಷಾಣ) ಗುಳಿಗೆಯನ್ನು ನುಂಗಿಬಿಡು. ಈ ಗುಳಿಗೆಗಳನ್ನು ಸರ್ಕಾರದವರೇ ಹಂಚುತ್ತಿದ್ದಾರೆ. ಹಾಗೂ ಇದೇ ಮದ್ದನ್ನು ಮಗು ಜೆನಿಫರಗೆ ಚುಚ್ಚಿಬಿಡು. ಅಣುಶಕ್ತಿಯ ಕರಾಳ ಬಿಸಿಗೆ ಸಿಲುಕಿ ಸಾಯುವುದಕ್ಕಿಂತ ಈ ಗುಳಿಗೆಯಿಂದ ಉಂಟಾಗುವ ಅಂತ್ಯ ಎಷ್ಟೋ ಹಿತಕರ." ಎಂತಹ ಹೃದಯ ವಿದ್ರಾವಕವಾದ ಸ್ಥಿತಿ! ಅಣುಬಾಂಬಿನಿಯ ಮಹತ್ವವೆಂದರೆ ಸ್ವರ್ಗಕ್ಕೂ ಭೂಮಿಗೂ ಅಂತರ, ತಂತು ಪಾಷಾಣದ ಗುಳಿಗೆ ಹಾಗೂ ಒಂದು ಮದ್ದಿನ ಸೂಜಿಯ ತಿವಿತ.

ನೆವಿಲ್ ಶೂಟಿಯ ಕಾದಂಬರಿಯನ್ನು ಓದಿದ ಫಲವಾಗಿ ಆಸ್ಟ್ರೇಲಿಯಾದಲ್ಲಿ ಜನ್ಮತಾಳಿದ ಹೆಲನ್ ಕಾಲ್ಡಿಕಾಟ್ ಎಂಬಾಕೆ ಅಂತಾರಾಷ್ಟ್ರೀಯ ಅಣು ಶಸ್ತ್ರ ಸಂನ್ಯಾಸಕ್ಕೆ ಹೋರಾಟವನ್ನು ಆರಂಭಿಸಿದ್ದಾಳೆ. ಅಮೇರಿಕದಲ್ಲಿ ಸಾಮಾಜಿಕ ಜವಾಬ್ದಾರಿಯ ವೈದ್ಯರು Physicans for social responsibility ಎಂಬ ಹೆಸರಿನಲ್ಲಿ ಇದಕ್ಕಾಗಿ ಒಂದು ಸಂಘವನ್ನು ಸ್ಥಾಪಿಸಿ ಅದಕ್ಕೆ ಅಧ್ಯಕ್ಷೆಯಾಗಿದ್ದಾಳೆ. ಶೂಟಿಯ ಕಾದಂಬರಿಯಲ್ಲಿ ಮೇಲೆ ಹೇಳಿರುವಂತೆ ಪರಮಾಣು ವಿಕಿರಣಕ್ಕೆ ತುತ್ತಾಗಿ ಅತ್ಯಂತ ಹಿಂಸೆಯಿಂದ ಸಾಯುವುದಕ್ಕಿಂತ ವಿಷದಿಂದ ಆತ್ಮಹತ್ಯೆಯನ್ನು ಮಾಡಿಕೊಳ್ಳುವದು ಎಷ್ಟೋ ಲೇಸು ಎಂಬುವುದು ಕೇವಲ ಲೇಖಕನ ಮಾತಲ್ಲ; ಇದರಲ್ಲಿ ಬಹುಜನಕ್ಕೆ ನಂಬುಗೆಯುಂಟು ಎಂಬುದನ್ನು ನಿರೂಪಿಸುವಂತೆ, ೧೯೮೩ರ ಡಿಸೆಂಬರ ೨೫ರಂದು ಬ್ರಿಷ್ಟಲ್ ಬಳಿ ಇರುವ ಕಾಂಗ್ರೆಸಬರೀ ಎಂಬಲ್ಲಿ ಡಾ. ರಿಚರ್ಡ ಲಾಸನ್ ಎಂಬ ವೈದ್ಯ ಬರಿ ಕಾಂಗ್ರೆಸ್‌ಬರಿಯಲ್ಲಿರುವ ಹದಿನೈದುನೂರು ಜನರಿಗೆ ಅಣುಬಾಂಬಿನ ಹಾವಳಿಯಿಂದ ಪಾರಾಗಲೂ ಆತ್ಮಹತ್ಯೆ ಮಾಡಿಕೊಳ್ಳುವದಕ್ಕೆ ಸಾಕಷ್ಟು ಮಾರ್ಫಿನ್ ಪಾಷಾಣವನ್ನು ಎಲ್ಲರಿಗೂ ಹಂಚಬೇಕೆಂಬ ನಿರ್ಣಯವನ್ನು ಒಂದು ಸಾರ್ವಜನಿಕ

ಸಭೆಯಲ್ಲಿ ತಂದನೆಂದು. ಅದನ್ನು ಸಾರ್ವಜನಿಕರು ಅನುಮೋದಿಸಿದರು ಎಂದು ವರದಿಯಾಗಿದೆ. ತಮ್ಮ ಸಾವನ್ನು ತಾವೇ ಕೋರುವ ಈ ಸಾರ್ವಜನಿಕ ಮನೋಧೈರ್ಯವನ್ನು ನೋಡಿ ನನ್ನ ಮನಶ್ಶಾಂತಿ ಪೂರ್ಣವಾಗಿ ನುಚ್ಚಾಯಿತು ಎಂದು ಈ ಡಾಕ್ಟರನೇ ಹಲುಬಿದನಂತೆ.

ಅಣುಬಾಂಬಿನ ಭಯ ಇನ್ನೂ ತೊಗಲಗಿಲ್ಲ. ನಿಜ ಹೇಳಬೇಕೆಂದರೆ ಇದರ ಕರಾಳ ನೃತ್ಯ ಯಾವ ಕ್ಷಣದಲ್ಲಾದರೂ ನಡೆಯುವ ಸಾಧ್ಯತೆ ಇದೆ. ಪ್ರಪಂಚವೇ ಪ್ರಳಯದಂಚಿನಲ್ಲಿ ನಿಂತಿದೆ. ಯಾವ ನಿಮಿಷದಲ್ಲಾದರೂ ಮಡುವಿಗೆ ಹಾರಿ ಮಡಿಯಬಹುದು. ಕಳೆದ ೨೦ ವರ್ಷಗಳ ಹಿಂದೆಯೇ ಕ್ಯೂಬಾ ವಿಚಾರದಲ್ಲಿ ರಶಿಯ ಅಮೇರಿಕಗಳ ನಡುವೆ ಉಂಟಾದ ಖತಿಯಲ್ಲಿ ಪ್ರಪಂಚವು ಅಣು ಬಾಂಬಿಗೆ ತುತ್ತಾಗಲು ಅದರ ಬಾಯಿಯವರೆಗೂ ಎಟುಕಿತ್ತು. ದೈವವಶಾತ್ ಬೇ ಆಫ್ ಪಿಗ್ಸ್ ಎಂಬಲ್ಲಿ ನಡೆದ ಘಟನೆಯಿಂದ ಬಚಾವಾಯಿತು. ರಶಿಯ ಅಮೇರಿಕಗಳು ಶಸ್ತ್ರಸಂಚಯನಕ್ಕಾಗಿ ವೆಚ್ಚ ಮಾಡುವ ಹಣವನ್ನು ವರ್ಷದಿಂದ ವರ್ಷಕ್ಕೆ ಹೆಚ್ಚಿಸುತ್ತಿದೆ. ಪಾಕಿಸ್ತಾನ ಭಾರತಕ್ಕಿಂತ ಬಹಳ ಸಣ್ಣ ರಾಷ್ಟ್ರವಾದರೂ ಸೈನ್ಯಸಿದ್ಧತೆಗಾಗಿ ಕಳೆದ ವರ್ಷ ೨೮೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದಾಗಿ ವರದಿ ಹಾಗೂ ಚೀನದ ಸಹಾಯದಿಂದ ಅಣುಬಾಂಬಿನ ತಯಾರಿಕೆಗೆ ಕೈ ಹಾಕಿದೆ ಎಂಬ ಪ್ರತೀತಿಯೂ ಇದೆ. ಇಂತಹ ಪರಿಸ್ಥಿತಿಯಲ್ಲಿ ಸಹಿತ ಕೆಲ ವಿಶ್ವ ನೇತಾರರು ತಕ್ಕುದಾದ ರಕ್ಷಣಾ ಕ್ರಮಗಳನ್ನು ಕೈಗೊಂಡಲ್ಲಿ ಅಲ್ಪ ಪ್ರಮಾಣದಲ್ಲಿ ಅಣುಯುದ್ಧ ಅಷ್ಟು ಹಾನಿಕರವಾಗಲಾರದೆಂದು ಹೇಳುತ್ತಾರೆ. ಉದಾಹರಣೆಗೆ ಇಂದಿನ ಅಮೇರಿಕದ ಉಪಾಧ್ಯಕ್ಷ ಬುಷ್ ಅಣುಬಾಂಬಿನ ಪ್ರಯೋಗದಿಂದಾಗಬಹುದಾದ ಪರ್ಯಾವಸಾನದ ವಿಚಾರವಾಗಿ ಬಹಳ ಚಮತ್ಕಾರವಾದ ಅಭಿಪ್ರಾಯ ಸೂಚಿಸಿದ್ದಾರೆ: "ನಮ್ಮಲ್ಲಿ ಅಣುಯುದ್ಧದ ತೀವ್ರತೆಯಿಂದ ಪಾರಾಗುವ ಉಪಾಯವಿದೆ. ಈ ಬೃಹತ್ ಶಕ್ತಿಯನ್ನು ತಡೆಗಟ್ಟುವ ಕುಶಲತೆ ಇದೆ.

"ಅಣುಯುದ್ಧವಾದ ಪ್ರಸಂಗದಲ್ಲಿ ನಾವು ನಮ್ಮ ಜನರನ್ನು ರಕ್ಷಿಸಿಕೊಂಡು ಶತ್ರು ಸೈನ್ಯ



ಗಳನ್ನು ನಾಶಗೊಳಿಸತಕ್ಕ ತಂತ್ರ ನಮ್ಮಲ್ಲಿದೆ." ಅಂದರೆ ಶೇಕಡಾ ಇಬ್ಬರು ಅಥವಾ ಐದು ಜನ ಅಣುಬಾಂಬಿನ ಹಾವಳಿಯಿಂದ ಪಾರಾಗಬಹುದೇ? ಎಂಬ ಪ್ರಶ್ನೆಗೆ ಆತನ ಉತ್ತರವಿದು. ಈಗ ಶೇಖರವಾಗಿರುವ ಎಲ್ಲಾ ಅಣುಬಾಂಬಿನ ಪ್ರಯೋಗವಾದರೂ ಶೇಕಡಾ ಐದರಕ್ಕಿಂತ ಹೆಚ್ಚಾಗಿ ಅಂದರೆ ಶೇಕಡಾ ೭ ಅಥವಾ ೧೦ ಜನ ಉಳಿಯಬಹುದು. ಬಾಕಿ ೯೦ ಜನ ಸತ್ತಂತೆಯೇ. ಈತ ಹೇಳಿದಂತೆ ಶೇಕಡಾ ೧೦ರಷ್ಟು ಜನ ಉಳಿದರೂ ಬಹಳ ಭಯಾನಕವಾದ, ದುಃಖಕರವಾದ ಫಲವೇ ಸರಿ. ಈ ವಿಷಯದಲ್ಲಿ ಇತ್ತೀಚೆಗೆ ನಡೆದ ಅತಿ ಭಯೋತ್ಪಾದಕವಾದ ಘಟನೆಯೆಂದರೆ ಅಮೇರಿಕ ತಯಾರಿಸಿದ ಪೆರಿಷಿಂಗ್ ಮಿಸೈಲ್ಸ್ ಎಂಬ ಅಣುಬಾಂಬಿನ ರವಾನೆಯ ಶಸ್ತ್ರಗಳನ್ನು ಯುರೋಪಿನ ನ್ಯಾಟೋ ರಾಷ್ಟ್ರಗಳಿಗೆ ರವಾನೆ ಮಾಡಲಾಗಿದೆ. ರಶಿಯ ಸಹಿತ ಈ ವಿಚಾರದಲ್ಲಿ ತಕ್ಕ ಜಾಗರೂಕತೆಗಳನ್ನು ಕೈಗೊಳ್ಳುತ್ತಿದೆಯಂತೆ. ಸ್ವೀಡನ್ನು ಅಣುಯುದ್ಧದ ಹಾವಳಿಯಿಂದ ಬಚಾವಾಗುವುದಕ್ಕಾಗಿ ಭೂಗರ್ಭದಲ್ಲಿ ರಕ್ಷಣಾ-ಶ್ರಯಗಳನ್ನು ನಿರ್ಮಿಸುತ್ತಿದೆ ಎಂದು ವರದಿ. ಯುರೋಪಿನಲ್ಲಿ ಹಲವಾರು ರಾಷ್ಟ್ರಗಳು ಅಣು ಯುದ್ಧವನ್ನು ತಡೆಗಟ್ಟಲು ವಿಶ್ವ ಪ್ರಯತ್ನ ಮಾಡುತ್ತಿವೆ. ಆಸ್ಟ್ರೇಲಿಯಾದಲ್ಲಿ ಅನೇಕ ನಗರಗಳಿಂದ ಯುದ್ಧವನ್ನು ಬಹಿಷ್ಕರಿಸಲು ಪ್ರಯತ್ನಿಸುತ್ತಿರುವ ಹಲವಾರು ಸಂಸ್ಥೆಗಳು ಧಾವಿಸಿ ಅಲ್ಲಿ ೧೨೫೦೦೦ ಜನರ ಒಂದು ದೊಡ್ಡ ಸಭೆಯನ್ನು ಮಾಡಿ ಸಿಡ್ನಿ ನಗರಕ್ಕೆ ಅಣು ಯುದ್ಧಕ್ಕೆ ತಮ್ಮ ಧಿಕ್ಕಾರವನ್ನು ಏಕಮತದಿಂದ ಸೂಚಿಸಿದರು. ಈ ಸಭೆಗೆ ಅಧ್ಯಕ್ಷೆ ಹೆಲೆನ್ ಕಾಲ್ಡೀಕಾಟ್ಟಳು, ಅಣುಬಾಂಬಿನ ಸರ್ವನಾಶಕರವಾದ ಶಕ್ತಿಯು ಎಲ್ಲರಿಗೂ ತಿಳಿದದ್ದೇ. ಕೆಲ ರಾಷ್ಟ್ರಗಳು ಈ ಶಸ್ತ್ರಗಳನ್ನು ಅಧಿಕ ಪ್ರಮಾಣದಲ್ಲಿ ಶೇಖರಿಸುತ್ತಿವೆ. ಈ ಬಾಂಬನ್ನು ಪ್ರಯೋಗಿಸುವ ಸಾಧ್ಯತೆ ಅವಕಾಶಗಳು ದಿನೇ ದಿನೇ ಹೆಚ್ಚುತ್ತಿವೆ. ಈಗಿರುವ ಅಂತಾರಾಷ್ಟ್ರೀಯ ಮತ್ಸರ್ಯದ ಜ್ವಾಲೆಯು ಶಿಖೆ ಯಾವ ಕ್ಷಣದಲ್ಲಾದರೂ ಇದನ್ನು ತಾಕಿ ಆಸ್ಫೋಟಿಸಬಹುದು. ಹೀಗಿರುವಲ್ಲಿ ಅಂಥಾ ವಿಪತ್ತಿಗೆ ಅವಕಾಶವಿಲ್ಲ. ಇದರಿಂದ ನಾವು ಊಹಿಸುವಷ್ಟು ಕೆಡಕಾಗಲಾರದು" (ಅಮೇರಿಕದ ಬುಷ್‌ನ ಹೇಳಿಕೆಯಂತೆ) ಎಂಬ ನಂಬುಗೆಯಿಂದ ನಾವು ಆತ್ಮವಂಚಿತರಾಗುತ್ತಿದ್ದೇವೆ. ಈ ಸ್ತಬ್ಧತೆಯಿಂದ ಈ ಸುಷುಪ್ತಿಯಿಂದ ನಾವು ಜಾಗೃತಗೊಳ್ಳುವುದು ಅತ್ಯವಶ್ಯ" ಎಂದು ಈ ಬೃಹತ್ ಸಭೆಯಲ್ಲಿ ಘೋಷಿಸಿದಳು.

ಈಚೆಗೆ ಪ್ರದರ್ಶಿಸಲ್ಪಟ್ಟದ **ಡೇ ಆಫ್ಟರ್** ಎಂಬ ಚಿತ್ರಪಟದಲ್ಲಿ ಅಣುಬಾಂಬಿನಿಂದಾಗಬಲ್ಲ ಭೀಕರ ದೃಶ್ಯವು ಹೃದಯಂಗಮವಾಗಿ ಚಿತ್ರಿಸಲ್ಪಟ್ಟಿದೆ. ಅನೇಕ ಶತಾಬ್ದಿಗಳಿಂದ ಸೃಷ್ಟಿಯಾಗಿ ರೂಪುಗೊಂಡ ಭೂಗೋಳವೂ ಕೊಲೆಗೇಡಿಯಾದ ಒಂದು ಗಂಟೆಯಲ್ಲಿ ನಾಶವಾಗುತ್ತದೆ- ಕುಂಬಾರನಿಗೆ ವರ್ಷ, ದೊಣ್ಣೆಗೆ ಒಂದು ನಿಮಿಷ ಎಂಬ ಹಾಗೆ. ಈ ಚಿತ್ರಪಟಕ್ಕಿಂತಲೂ ಹೆಚ್ಚಿನ ವರ್ಣನೆ ಎಂದರೆ ಅಮೇರಿಕದ ಬರ್ನಾರ್ಡ್ ಮಲಾಮುಡ್ ಎಂಬ ಬರಹಗಾರ ತನ್ನ ಗಾಡ್ಸ್ ಗ್ರೇಸ್ ಎಂಬ ಕಾದಂಬರಿಯಲ್ಲಿ ಮಾಡಿರುವ ವರ್ಣನೆ. ಈ ಕಾದಂಬರಿಯಲ್ಲಿ ಜಾನೆಕ್ಸ್ ಹಾಗೂ ಡ್ರುಕೀಜ್ ಪಂಗಡಗಳ ಮಧ್ಯೆ ನಡೆದ ಯುದ್ಧದಲ್ಲಿ ಅಣುಬಾಂಬಿನ ಪ್ರಯೋಗವಾಗಿ ಪ್ರಪಂಚದಲ್ಲಿರುವ (ಒಬ್ಬನನ್ನು ಬಿಟ್ಟು) ಸರ್ವಜೀವರಾಶಿಯೂ ನಾಶವಾಗುತ್ತೆ. ಕಾಲ್ವಿನ್ ಕೋಹೆನ್ ಎಂಬ ಒಬ್ಬ ದೊಡ್ಡ ಶಾಸ್ತ್ರಜ್ಞ, ಎರಡು ಚಿಂಪಾಂಜಿಗಳು ಮಾತ್ರ ಉಳಿಯುತ್ತವೆ. ಕೋಹೆನ್‌ನು ಒಂದು ಮುರುಕು ಹಡಗಿನಲ್ಲಿ ಸಮುದ್ರದಲ್ಲಿ ಯಾನ ಮಾಡುತ್ತಾ, ಈ ಚಿಂಪಾಂಜಿಗಳನ್ನಿಟ್ಟುಕೊಂಡು ಸಾತ್ವಿಕ, ನೈತಿಕ ಹಾಗೂ ನಾಗರಿಕವಾದ ಮನುಷ್ಯನನ್ನು ಸೃಷ್ಟಿಸಲೂ ಸಂಶೋಧನೆಗಳನ್ನು ನಡೆಸುತ್ತಿರುತ್ತಾನೆ. ಕೊನೆಗೆ ಅಣುಬಾಂಬಿನ ಸಿಡಿತದಿಂದುಂಟಾದ ಶಕ್ತಿಯ ವ್ಯಾಪನೆಗೆ, ಆತನೂ ಆ ಎರಡು ಮಂಗಗಳೂ ಬಲಿಯಾಗುತ್ತವೆ.

ಜಹೋವ ಹೇಳುತ್ತಾನೆ: ಸೃಷ್ಟಿಕರ್ತನಾದ ಭಗವಂತನಿಗೆ ಮಾನವನ ಚೆಲ್ಲಾಟವು ಸಹಿಸಲಸಾಧ್ಯವಾಗಿದೆ. ಅವನ ಮೂರ್ಖತನ, ಅವನ ಅಹಂಕಾರ, ಅಂತ್ಯವಿಲ್ಲದ ವಂಚಕಭಾವನೆ. ಒಳ್ಳೆ

ಯುದರಲ್ಲಿ ದ್ವೇಷಭಾವನೆ ಮತ್ತು ನಾಶ ಗೊಳಿಸುವುದರಲ್ಲಿ ಆತ್ಮನಾಶದಲ್ಲಿ ಅವನಿಗಿರತಕ್ಕ ಹಂಬಲ ಇವುಗಳೆಲ್ಲವನ್ನು ನೋಡಿ, ಆ ಭಗವಂತನಿಗೆ ಮನುಷ್ಯನನ್ನು ಸೃಷ್ಟಿಮಾಡುವುದರಲ್ಲಿ ತಾನು ಮಾಡಿದ ದೊಡ್ಡ ತಪ್ಪು ಮನವರಿಕೆಯಾಯಿತು. ಆ ದಯಾಮಯನಾದ ಸೃಷ್ಟಿಕರ್ತನು ಹೇಗೆಂದು ಹಲುಬುತ್ತಾನೆ. ನನ್ನ ಸೃಷ್ಟಿಯೆಲ್ಲವನ್ನೂ ಈ ಹಾಳಾದವನು ನಾಶಗೊಳಿಸಿದ. ಅವನ ಉಳಿವಿಗಾಗಿ ನಾನು ನಿರ್ಮಿಸಿದ ನಿರ್ಮಲವಾದ ಗಾಳಿ, ಶುದ್ಧವಾದ ತಿಳಿಯಾದ ನೀರು, ಬಹಳ ಫಲವತ್ತಾದ ಭೂಮಿ, ಜೀವಿಸುವುದಕ್ಕೆ ಅಗತ್ಯವಾದ ಹವೆ ಮಳೆ, ನಿಜ ಹೇಳಬೇಕೆಂದರೆ ಪಂಚಭೂತಗಳನ್ನೂ ನಾಶಗೊಳಿಸಿ ತಾನೂ ನಾಶವಾದ. ಇನ್ನೆಷ್ಟೆಂದು ಇವನ ದುಷ್ಟತನವನ್ನು ಸಹಿಸಲಿ ? ಅವನು ಸ್ವಚ್ಛಂದನಾಗಿರಬೇಕೆಂದು ಬಯಸಿದೆ. ಬೇಕಾದುದೆಲ್ಲವನ್ನೂ ಇದಕ್ಕಾಗಿ ಅರ್ಪಣೆ ಮಾಡಿದೆ. ಆದರೆ ಈ ಸ್ವೇಚ್ಛೆಯನ್ನು ನಾಶಗೊಳಿಸಿಕೊಂಡಿದ್ದಲ್ಲದೆ ತನ್ನ ಕೊಲೆಗೇಡಿತನದಿಂದ ತನ್ನಲ್ಲಿರುವ ಶತ್ರುಗಳ ಪ್ರೇರಣೆಯಿಂದ, ತಾನೂ ಹಾಳಾದನಲ್ಲದೆ ಲೋಕಹಿತಕ್ಕಾಗಿ ಸೃಷ್ಟಿಸಿದ ಎಲ್ಲವನ್ನೂ ನಾಶಗೊಳಿಸಿದ.

ಮೇಲೆ ಚಿತ್ರಿಸಿದ ಘಟನೆಗಳು, ವಿವರಗಳು ಎಲ್ಲವೂ ಅಹಂಕಾರ ಮಮಕಾರ, ಮಾತ್ಸರ್ಯಗಳಿಗೆ ಬಲಿಯಾಗುತ್ತಿರುವ ಮಾನವನಿಗೆ ಒಂದು ದೊಡ್ಡ ಎಚ್ಚರಿಕೆ. ಈಗಿನ ವಾತಾವರಣದಲ್ಲಿ ಪ್ರಳಯವು ಅತ್ಯಂತ ಹತ್ತಿರದಲ್ಲಿದೆ ಎಂಬುದು ಖಚಿತ. ಈಗಲಾದರೂ ಮಾನವನು ಎಚ್ಚೆತ್ತಲ್ಲಿ ಈ ಸರ್ವನಾಶದ ಪ್ರಗತಿಯನ್ನು ತಡೆದು ಪ್ರಪಂಚವೂ ಉಳಿಯುತಕ್ಕ ಸಾಧ್ಯತೆಯಿದೆ. ಉಳಿದಿರುವುದು ಎರಡೇ ದಾರಿ: ಈಗಿನ ಅವನ ಕರಾಳತೆಯನ್ನು ತ್ಯಜಿಸಿ ವಿಶ್ವಕಲ್ಯಾಣಕ್ಕೆ ಜೀವನನ್ನು ಮೀಸಲಾಗಿಟ್ಟು ಅದಕ್ಕಾಗಿ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡು ವಿಶ್ವವನ್ನುಳಿಸುವುದು. ಎರಡು, ವಿಶ್ವವನ್ನು ನಾಶಗೊಳಿಸಿ ತಾನೂ ಹಾಳಾಗುವುದು. ೬೦ ವರ್ಷಗಳ ಹಿಂದೆಯೇ ವೆಲ್ಸನು ಅಣುಬಾಂಬಿನಿಂದಾಗಬಹುದಾದ ಸರ್ವನಾಶದ ಸತ್ಯವನ್ನು ಸುವರ್ಣಾಕ್ಷರಗಳಿಂದ ಲಿಖಿಸಿದ್ದಾನೆ. ಇದನ್ನು ಸಾರುವ ಘಟನೆಗಳು ಈಗಾಗಲೇ ಎಷ್ಟೋ ನಡೆದು ಹೋಗಿವೆ. ಅಣುಬಾಂಬಿನಿಂದಾಗುವ ನಾಶ ಶೇಕಡಾ ನೂರರಷ್ಟು ದಿಟ. ಜಾರ್ಜ್ ಬುಶ್ ಮತ್ತು ಅವರಂತೆ ಧರ್ಮಾಂಧರುಗಳ ಹುಸಿ ಹೇಳಿಕೆಗೆ, ನಂಬುಗೆಗಳಿಗೆ ಗಮನ ಕೊಡುವುದು ತಪ್ಪು ಮೂರ್ಖತನ.

ಜೋನಾಥನ್ ಶೆಲ್ ಹೇಳಿದಂತೆ ಇಂದಿನ ಮಾನವತೆ ಅವರ ಅಭಿಪ್ರಾಯಗಳು ನಂಬುಗೆಗಳು. ಇಂದಿನ ಆವಿಷ್ಕರಿಸಲ್ಪಟ್ಟ ಅಸ್ತ್ರಗಳೂ ಎಲ್ಲವೂ ಚರಿತ್ರದ ಕಸ. ಇವು ಪ್ರಪಂಚಕ್ಕೆ ಹಿತಕರವಲ್ಲ. ಈ ಸರ್ವನಾಶಕರವಾದ ಕಸವನ್ನು ತಿಪ್ಪೆಗೆ ಎಸೆಯಬೇಕು. ಇಂದು ಅಣ್ವಸ್ತ್ರಗಳಿಂದ ಪ್ರಾರಂಭವಾಗಬಹುದಾದ ಯುದ್ಧದಲ್ಲಿ ಜಯಶಾಲಿಗಳಾರೂ ಇರುವುದಿಲ್ಲ. ಎಲ್ಲರೂ ಸೋತಂತೆಯೇ. ಎಲ್ಲರ ನಾಶವೂ ದಿಟವಾದಲ್ಲಿ ಸೋತವರು ಯಾರು? ಗೆದ್ದವರು ಯಾರು? ಯಾವುದೇ ಪ್ರಯೋಜನವಿಲ್ಲದ ಹುಚ್ಚಾಟದಿಂದ ನಾಶ. ಆದ್ದರಿಂದ ಅಣುಯುದ್ಧವನ್ನು ತ್ಯಜಿಸುವುದು, ಅಣ್ವಸ್ತ್ರಗಳನ್ನು ನಾಶಗೊಳಿಸುವುದು ವಿಶ್ವ ಕಲ್ಯಾಣದ ದೃಷ್ಟಿಯಿಂದ ಅತ್ಯಗತ್ಯ. ಭಗವಂತನ ಸೃಷ್ಟಿಯಲ್ಲಿ ಪ್ರತಿಮಾನವನೂ ಲೋಕಕಲ್ಯಾಣಕ್ಕೆ ತನ್ನ ಜೀವಿತವನ್ನು ಮೀಸಲಾಗಿಡಲೂ ಪ್ರತಿಜ್ಞೆಯನ್ನು ಕೈಗೊಳ್ಳಬೇಕು. ಭಿನ್ನ ಭಿನ್ನ ರಾಷ್ಟ್ರಗಳು ತಮ್ಮ ಸ್ವಾರ್ಥ ಭಾವನೆ ಮಹತ್ವಾಕಾಂಕ್ಷೆಗಳನ್ನು ತ್ಯಜಿಸಿ ಪ್ರಪಂಚದ ಏಳಿಗೆಗೆ ಕಾರಣೀಭೂತವಾಗಬಲ್ಲ ಸಂಸ್ಥೆಗಳನ್ನು ಸ್ಥಾಪಿಸಿ ವಿಶ್ವಕಲ್ಯಾಣಕ್ಕೆ ಅಗತ್ಯವಾದ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಬೇಕು. ಅಂದೇ ಪ್ರಪಂಚವೂ ಪ್ರಳಯದ ದವಡೆಯಿಂದ ಪಾರಾಗಿ ಉಳಿದು ಸುಖ ಶಾಂತಿಗಳಿಂದ ಬಾಳಬಲ್ಲದು.



ಮೂಲ ಮರಾಠಿ : **ರಣಜಿತ ದೇಸಾಯಿ**
ಕನ್ನಡಕ್ಕೆ : **ಜನಾರ್ದನ ಕುಲಕರ್ಣಿ**

ಆಗಸದಲ್ಲಿಯ ಕತ್ತಲನ್ನು ಸೀಳಿಕೊಂಡು ಬೆಳ್ಳಿ ಚುಕ್ಕಿ ಮೂಡಿತ್ತು. ದಿಲ್ಲಿಯ ಮೀರ್ ಮೊಹಲ್ಲಾ ಅರುಣೋದಯವನ್ನು ಎದುರು ನೋಡುತ್ತಿರುವಂತೆ ತೋರುತ್ತಿತ್ತು. ರಫ್ತಖಾನನೂ ಬಹಾದ್ದೂರಖಾನನೂ ನಮಾಜು ಮುಗಿಸಿ ಬೈಠಕಿನ ಮೇಲೆ ಬಂದು ಕುಳಿತಿದ್ದಾರೆ. ಮಾಹಡಿಯ ಮೇಲಿನಿಂದ ತಬಲಾ ನಾದ ನಸುಕಿನ ಪ್ರಶಾಂತತೆಯಲ್ಲಿ ಕೇಳುಗರ ಕರ್ಣಗಳನ್ನೇ ಅರಸಿ ಬಂದು ಗಂಭೀರ ಮಾಧುರ್ಯದ ರುಚಿ ತೋರುತ್ತಿತ್ತು. ಇದು ರಫ್ತಖಾನನ ಮಗ ದಾವೂದನ ನಿತ್ಯದ ರಿಯಾಝ್. ಬಹಾದ್ದೂರಖಾನನು ರಫ್ತಖಾನನ ಬೀಗ.

“ರಫ್ತ, ನಿನ್ನ ಈ ಮಗ ಖಾಡಿತ ಹೆಸರ
ವಾಸಿಯಾಗುತ್ತಾನೆ ನೋಡು,” ಎಂದ ಬಹ
ದ್ದೂರ್.

ರಫ್ತಖಾನನ ಮುಖದಲ್ಲಿ ಮಂದಸ್ಮಿತ ಅ
ಳಿತು. “ಬಹಾದ್ದೂರ್, ನಿನ್ನ ಹೇಳಿಕೆಯ
ತಥ್ಯವಿದೆ. ಹಾಗಾಗಲೆಂದೇ ನನ್ನ ಇಚ್ಛೆಯ
ಇದೆ. ಅಂತೆಯೇ ಕಳೆದ ಹನ್ನೆರಡು ವರ್ಷಗಳಿಂ
ಅವನಿಗೆ ತಾಲೀಮು ಕೊಡುತ್ತಿದ್ದೇನೆ. ಅವನ
ನಮ್ಮ ಘರಾಣೆಯ ತಬಲಾ ಕಲೆಯನ್ನು ಆ
ಸಾತ್ ಮಾಡಿಕೊಂಡಿದ್ದಾನೆ. ಆದರೆ...” ಅವ
ಮಾತು ಶೂನ್ಯದಲ್ಲಿ ಏನೋ ಹುಡುಕುತ್ತಿ
ವಂತೆ ಮೌನದಲ್ಲಿ ಲೀನವಾಯಿತು.

"ಆದರೆ? ಆದರೆ ಏನು?" ಬಹಾದ್ದೂರ ತುಸು ಆತಂಕದಿಂದಲೇ ಕೇಳಿದ.

"ನಮ್ಮದು *ತಬಲಜೀ ಘರಾಣೆ. ಬಾಜಾರದಲ್ಲೇನೋ ಅವಕ್ಕೆ ಸಾಕಷ್ಟು ಬೆಲೆಯೂ ಇದೆ. ಆದರೆ ನಮ್ಮ ಮನೆತನದಲ್ಲಿ ಇದುವರೆಗೆ ಯಾರೂ 'ತಬಲಾನವಾಜ್ ಖಲೀಫಾ' ಆಗಲಿಲ್ಲವಲ್ಲ! ಈಗ ಖಲೀಫಾ ಅಂದರೆ ಶೌಕತ್‌ಅಲಿ ಒಬ್ಬರೇ."

ಬಹಾದ್ದೂರಖಾನ್ ಈ ಮಾತಿಗೆ ಪ್ರತಿ ಹೇಳಲಿಲ್ಲ. ಮೌನ ಮತ್ತೆ ಮೆರೆಯಿತು. ಇಬ್ಬರೂ ಗುಡಗುಡಿ ಎಳೆಯುತ್ತ ಯಾವುದೋ ಯೋಚನೆಯಲ್ಲಿ ಮಗ್ನರಾಗಿರುವಂತೆ ತೋರುತ್ತಿತ್ತು.

ಸೂರ್ಯ ತನ್ನ ಉದಯವನ್ನು ಸಾರುತ್ತಿದ್ದಂತೆ ದಾವೂದ ಮೆಟ್ಟಿಲುಗಳನ್ನಿಳಿಯುತ್ತ ಕೆಳಕ್ಕೆ ಬಂದ – ದಣಿದ ಬೆರಳುಗಳನ್ನು ಅಂಗೈಯಲ್ಲಿ ಸವರುತ್ತ.

"ಬೇಟಾ, ರಿಯಾಝ್ ಮುಗಿಯಿತೇ?" ಅವನನ್ನು ನೋಡುತ್ತ ಬಹಾದ್ದೂರ್ ವಿಚಾರಿಸಿದ.

"ಜೀ."

ವಾಸ್ತವಿಕವಾಗಿ ಈ ಮಾತು ಮುಗಿದ ಮೇಲೆ ದಾವೂದ ಹೊರಟು ಹೋಗಬಹುದಿತ್ತು. ಆದರೆ ಅವನು ಹಾಗೆಯೇ ನಿಂತುದನ್ನು ಕಂಡು ಬಹಾದ್ದೂರನೇ ಕೇಳಿದ, "ಏನು ಮಗು?"

"ಮಾಮಾಜಿ, ನಾನು ಹನ್ನೆರಡು ವರ್ಷದಿಂದ ತಬಲಾ ರಿಯಾಝ್ ಮಾಡುತ್ತಲೇ ಇದ್ದೇನೆ."

"ಹೌದು, ಹೌದು."

"ಜಸ್ಮಿನ್ ಮೊಹಲ್ಲಾದಲ್ಲಿ ಸಂಗೀತ ಸಭೆ ಕೂಡಲಿದೆ. ನನಗೂ ಆಮಂತ್ರಣ ಬಂದಿದೆ. ಮೈಫಲಿಗೆ ಹೋಗಲು ಅನುಮತಿ ಕೊಟ್ಟರೆ ನಾನು ಹೋಗಬಯಸುತ್ತೇನೆ," ದಾವೂದ ತಲೆ ತಗ್ಗಿಸಿ ನುಡಿದ.

"ಬೇಟಾ, ಅಷ್ಟೊಂದು ತಯಾರಿ ಇದೆಯೆ? ನೀನು ಕಛೇರಿಯನ್ನು ಗೆಲ್ಲಬಲ್ಲೆಯಾ?" ಬಹಾ



ದ್ದೂರ್‌ಖಾನ ಕೇಳಿದ.

"ಯಾಕಾಗಲಿಕ್ಕಿಲ್ಲ? ಹನ್ನೆರಡು ವರ್ಷ ನಾನೇನು ಪರೋಟಾ ಮಾಡಿದೆನೆ? ನಿಶ್ಚಯವಾಗಿಯೂ ಕಚೇರಿ ಗೆಲ್ಲುತ್ತೇನೆ."

ಇದುವರೆಗೆ ಇವರಿಬ್ಬರ ಸಂಭಾಷಣೆಯನ್ನು ಕೇಳುತ್ತಿದ್ದ ರಫ್ತುಖಾನ ಗುಡಗುಡಿಯ ನಳಿಗೆಯನ್ನು ಬದಿಗೆ ಸರಿಸಿ ಮಧ್ಯೆ ಪ್ರವೇಶಿಸಿದ, "ಬೇಟಾ, ನೀನು ಜರೂರ ಮೈಫಿಲಿಗೆ ಹೋಗು. ಆದರೆ ಅದಕ್ಕಿಂತ ಮುಂಚೆ ನೀನೊಂದು ಕೆಲಸ ಮಾಡಬೇಕು. ಜಹಾಂಗೀರ್ ಮೊಹಲ್ಲಾದಲ್ಲಿ ಶೌಕತ್ ಅಲೀಖಾನ್‌ಸಾಹೇಬರಿದ್ದಾರೆ. ಅವರು ತಬಲಾ ನವಾಜಿನ್ ಖಲೀಫಾ ಎಂದು ನಿನಗೆ ಗೊತ್ತಿರಬೇಕು. ಅವರ ಬಳಿ ಹೋಗಿ ನೀನು ತಬಲಾ ಬಾರಿಸಿ ತೋರಿಸು. ಅವರು ಅಪ್ಪಣೆ ಕೊಟ್ಟರೆ ಸಂಗೀತ ಸಭೆಯಲ್ಲಿ ಅವಶ್ಯ ಭಾಗವಹಿಸು. ಆಗ ನಾನು ಅಡ್ಡಬರುವುದು ಶಕ್ಯವೇ ಇಲ್ಲ."

ತಂದೆಯ ಅನುಮತಿಯಿಂದ ದಾವೂದನಲ್ಲಿಯ ಉತ್ಸಾಹ ಇನ್ನೂ ಹೆಚ್ಚಿತು. ಮರುದಿನ ಕೊರಳ ಸುತ್ತ ಕಸೂತಿ ಹಾಕಿದ ಅಂಗಿಯನ್ನು ತೊಟ್ಟು ಕಾಲಿಗೆ ಬಿಗಿಯಾದ ಚೂಡಿದಾರ್ ಏರಿಸಿ, ತಲೆಗೆ ಶುಭ್ರ ಕಲಾವತಿ ಟೊಪ್ಪಿಗೆ ಧರಿಸಿದನು. ತನ್ನ ತಬಲಾ, ಡಗ್ಗಾಗಳೊಂದಿಗೆ ಟಾಂಗಾದಲ್ಲಿ ಕುಳಿತು ಜಹಾಂಗೀರ್ ಮೊಹಲ್ಲಾಕ್ಕೆ ನಡೆದಾಗ ಅವನು ಆತ್ಮವಿಶ್ವಾಸವೇ ಮೈದಳೆದಂತೆ ತೋರುತ್ತಿದ್ದ. ಶೌಕತ್ ಅಲೀಖಾನಸಾಹೇಬರ ಹವೇಲಿಯ ಎದುರು ಟಾಂಗಾ ಬಂದು ನಿಂತಿತು. ತನ್ನ ಚರ್ಮವಾದ್ಯಗಳೊಂದಿಗೆ ಇಳಿದು ಮನೆಯ ಕಟ್ಟೆಯ ಬಳಿ ಬಂದಾಗ ಶೌಕತ್ ಅಲೀಖಾನಸಾಹೇಬರ ಶಿಷ್ಯ ಕರೀಮ ಸ್ವಾಗತಿಸಲು ಮುಂದಾಗಿ ಬಂದ.

"ಅಬ್ಬಾಜಾನ್ ಹೇಗಿದ್ದಾರೆ?" ದಾವೂದ ಲೋಕಾಭಿರಾಮರಾಗಿ ಕೇಳಿದ.

"ಅಲ್ಲಾ ಪರವರ್ದಿಗಾರ್."

"ಹೋಗಿ ಅವರಿಗೆ ಹೇಳು ರಫ್ತುಖಾನರ ಮಗ ತಬಲಾ ಬಾರಿಸಿತೋರಿಸಲು ಬಂದಿದ್ದಾನೆಂದು," ದಾವೂದ್ ಎದೆ ಸೆಟೆಸಿ ಹೇಳಿದ.

ಕರೀಮನಿಗೆ ಆಶ್ಚರ್ಯವಾಗಿರಬೇಕು, "ಏನೆಂದಿರಿ!" ಎಂದು ಕೇಳಿದ.

"ತಿಳಿಯಲಿಲ್ಲವೆ! ರಫ್ತುಖಾನರ ಮಗ ತಬಲಾ ಬಾರಿಸಿ ತೋರಿಸಲು ಬಂದಿದ್ದಾನೆಂದು ಹೇಳು. ಮತ್ತೆ ಬಿಡಿಸಿ ಹೇಳಬೇಕೆ?"

ಈ ಮಾತಿನಿಂದ ಕ್ಷಣಕಾಲ ಗಲಿಬಿಲಿಗೊಂಡಂತಾದರೂ ಕರೀಮ ಮರುನಿಮಿಷವೇ ಸುಧಾರಿಸಿಕೊಂಡು ಒಳಕ್ಕೆ ಹೋದ. ಅವನು ಬಂದ ರೀತಿಯನ್ನು ಕಂಡು ಶೌಕತ್ ಅಲೀಖಾನ್ ಸಾಹೇಬರು ತಾವೇ ಕೇಳಿದರು "ಏನು?" ಎಂದು.

"ರಫ್ತುಖಾನರ ಮಗ ಬಂದಿದ್ದಾರೆ. ತಮ್ಮೆದುರು ತಬಲಾ ಬಾರಿಸಿ ತೋರಿಸುವುದಿದೆಯಂತೆ."

ಅರೆನಿಮಿಷ ಯೋಚಿಸಿ ಶೌಕತ್ ಅಲಿ ಹೇಳಿದರು, "ಕಟ್ಟೆಯ ಮೇಲೆ ನಮ್ಮ ಜೋಡುಗಳಿವೆ. ಅವುಗಳನ್ನು ತಲೆಯ ಮೇಲಿಟ್ಟುಕೊಂಡು, ತಲೆಬಾಗಿ ಬಾರೆಂದು ಹೇಳು."

ಇದನ್ನು ಕೇಳಿ ಕರೀಮ ದಿಗ್ಭ್ರಮೆಗೊಂಡವನಂತೆ ... ಮುತ್ತಪ್ಪುಗೊಂಡಲಕ್ಕೀಡಾದ. ಆದರೆ ಒಡೆಯನ ಅಪ್ಪಣೆಯನ್ನು ಪಾಲಿಸಬೇಕಲ್ಲವೆ? ತನ್ನ ಶಕ್ತಿಯನ್ನೆಲ್ಲ ಒಗ್ಗೂಡಿಸಿಕೊಂಡು ಹೊರಕ್ಕೆ ಬಂದನು. ತನ್ನ ವಾದ್ಯಗಳೊಂದಿಗೆ ಕಟ್ಟೆಯ ಕೆಳಗಡೆ ನಿಂತಿದ್ದ ದಾವೂದ ಪ್ರಶ್ನಾರ್ಥಕವಾಗಿ ಕರೀಮನ ಮುಖ ನೋಡಿದ.

ಕರೀಮ ಉತ್ತರವೀಯಲು ತುಟಿ ಎರಡು ಮಾಡಿದಾಗ ಅವನು ತಡವರಿಸುತ್ತಿದ್ದುದು ಸ್ಪಷ್ಟವಿತ್ತು. "ಕ್ಷಮಿಸಬೇಕು, ಉಸ್ತಾದರ ಅಪ್ಪಣೆ ಹೀಗಿದೆ: ಕಟ್ಟೆಯ ಮೇಲಿರುವ ಅವರ ಜೋಡುಗಳನ್ನು ತಾವು ತಲೆಯ ಮೇಲಿಟ್ಟುಕೊಂಡು ತಲೆಬಾಗಿ ಒಳಗೆ ಬರಬೇಕಂತೆ..."

ಈ ಮಾತು ಕೇಳಿ ದಾವೂದ್ ಕೋಪದಿಂದ ಉರಿದುಹೋದ. ಆದರೆ ತನ್ನ ತಂದೆ ಮಾಮಂದಿರು ಶೌಕತ್‌ಅಲಿಯವರ ಬಗ್ಗೆ ಇಟ್ಟಿರುವ ಪೂಜ್ಯ ಭಾವನೆಯನ್ನು ಅವನು ಮರೆಯದಾಗಿದ್ದ. "ಸರಿ, ಜೋಡುಗಳನ್ನು ತಾ."

ಕರೀಮನು ತಂದಿತ್ತ ಪಾದರಕ್ಷೆಗಳನ್ನು ತನ್ನ ತಲೆಯಮೇಲಿರಿಸಿಕೊಂಡು, ಕೈಗಳಲ್ಲಿ ತಬಲಾ, ಡಗ್ಗಾಗಳನ್ನು ಸಾವರಿಸಿಕೊಳ್ಳುತ್ತ ಜೋಲಿ ತಪ್ಪದಂತೆ ಪ್ರಯಾಸಪಡುತ್ತ ದಾವೂದ್ ಮೆಟ್ಟಿಲೇರಿ ಒಳಕ್ಕೆ ನಡೆದ. ಶುಭ್ರ ಬಿಳಿ ಬೈಠಕಿನ ಮೇಲೆ ಲೋಡಿಗೆ ಆತುಕೊಂಡು ಶೌಕತ್ ಅಲಿಸಾಹೇಬರು ಕುಳಿತಿದ್ದರು. ಮುಪ್ಪು ತನ್ನ ಛಾಯೆಯನ್ನು ಆವರಿಸತೊಡಗಿದ್ದು ಅವರ ಮುಖದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಗಂಭೀರ ಮುಖಮುದ್ರೆಯ ಅವರ ಮೈಯಲ್ಲಿ ಶುಭ್ರ ಬಿಳಿ ಕುರತಾ ಮತ್ತು ಹಸಿರು ಜಾಕೀಟು. ಮಸ್ತಕದಲ್ಲಿ ಜೋಡು ಧರಿಸಿ ಎರಡೂ ಕೈಗಳಲ್ಲಿ ತಬಲಾ ಡಗ್ಗಾ ಹಿಡಿದುಕೊಂಡು ನಿಂತ ಈ ಯುವಕನನ್ನು ನೋಡಿ ಅವರು, "ಮಗು, ದೇವರು ನಿನಗೆ ಒಳ್ಳೆಯದನ್ನು ಮಾಡಲಿ. ತಬಲಾ ಕೇಳಿಸಬೇಕೆಂದು ಬಂದಿದ್ದೀಯಾ?" ಎಂದು ವಿಚಾರಿಸಿದರು.

"ಜೀ ಹುಜೂರ್! ಆದರೆ ತಮ್ಮ ಪಾದರಕ್ಷೆಗಳು ನನ್ನ ತಲೆಯ ಮೇಲಿರುವುದರಿಂದ ರಟಿ ಬಾಗಲು ನನಗಾಗದಾಗಿದೆ. ಈ ಅವಿನಯವನ್ನು ದಯವಿಟ್ಟು ಕ್ಷಮಿಸಬೇಕು," ದಾವೂದ್ ನಿಂತಲ್ಲಿಂದಲೇ ಉತ್ತರಿಸಿದ.

ಈ ಮಾತಿನಿಂದ ಖಾನ್‌ಸಾಹೇಬರು ಎಚ್ಚೆತ್ತು ಗಡಿಬಿಡಿಯಿಂದ ಎದ್ದು ದಾವೂದನ ತಲೆಯ ಮೇಲಿನ ಜೋಡುಗಳನ್ನು ಎತ್ತಿ ಕೆಳಗಿಟ್ಟರು.

"ಮಗು, ಈಗ ನಿನ್ನ ತಬಲಾ ಕೇಳೋಣ ಬಾರಿಸು," ಎಂದರು ಗಾಂಭೀರ್ಯದಿಂದ.

ಶೌಕತ್ ಅಲೀಖಾನರೆದುರು ಶಿಸ್ತಿನಿಂದ ಕುಳಿತು ದಾವೂದ್ ಅಂಗಿಯ ತೋಳುಗಳನ್ನೆತ್ತಿ ತಬಲಾ ಮೇಲೆ ಬೆರಳೋಡಿಸತೊಡಗಿದ. ಒಮ್ಮೆ ಪ್ರಾರಂಭವಾದ ವಾದನ ನಿರಂತರವಾಗಿ ಹರಿಯುವ ನದಿಯಂತೆ ಬಯಲು ನಾಡಿನಲ್ಲಿ ಶಾಂತವಾಗಿ, ಕೊರಕಲಿನಲ್ಲಿ ರಭಸದಿಂದ, ಗುಡ್ಡಗಳನ್ನಿಳಿಯುವಾಗ ಪ್ರಪಾತದಂತೆ ವಿವಿಧ ಭಂಗಿಗಳಲ್ಲಿ ದಾವೂದ್ ಎರಡೂವರೆ ಗಂಟೆ ಕಾಲ ಗತ್ತು ಬಾರಿಸಿದ. ಆದರೆ ಖಾನಸಾಹೇಬರೋ ನಿರ್ವಿಕಾರ ಚಿತ್ರದಂತೆ ನಿಶ್ಚಲವಾಗಿ ಕುಳಿತಿದ್ದರು. ಅವರ ಮುಖಭಾವಗಳು ಯಾವುದೇ ಭಾವನೆಗಳಿಂದ ಮುಕ್ತವಾಗಿದ್ದಂತೆ ಭಾಸವಾಗುತ್ತಿತ್ತು. ಆದರೆ ಈ ಎರಡೂವರೆ ಗಂಟೆಗಳಲ್ಲಿ ಒಮ್ಮೆ ಕೂಡ ಅವರಿಗೆ ತಾಂಬೂಲದ ನೆನಪಾಗಲಿ ಗುಡಗುಡಿಯ ಕಡೆಗೆ ಗಮನವಾಗಲಿ ಹರಿಯಲಿಲ್ಲ.

ತನ್ನ ವಾದನ ಮುಗಿದ ನಂತರ ದಾವೂದ್ ಹಣೆಯ ಮೇಲಿನ ಬೆವರನ್ನು ಒಮ್ಮೆ ಒರೆಸಿಕೊಂಡು, "ಹುಜೂರ್, ಅಪ್ಪಣೆ" ಎಂದು ಖಾನ್ ಸಾಹೇಬರತ್ತ ಪ್ರಶ್ನಾರ್ಥಕವಾಗಿ ನೋಡಿದ.

ಖಾನ್‌ಸಾಹೇಬರ ಮುಖದಲ್ಲಿ ನಗೆ ಅರಳಿತು. "ಮಗು, ನನ್ನ ಅಭಿಪ್ರಾಯವನ್ನು ನಿನ್ನ ಮಾವ ಮತ್ತು ತಂದೆ ಇಬ್ಬರಿಗೂ ಚಾಚೂ ತಪ್ಪದಂತೆ ಹೇಳು. ಹುಡುಗನಿಗೆ ಡೊಳ್ಳು ಬಾರಿಸಲು ಚೆನ್ನಾಗಿ ಕಲಿಸಿದ್ದೀರಿ ಎಂದು ಹೇಳಿದರು. ಇನ್ನೊಂದು ಮಾತು ನಾನು ಕರೆದಿದ್ದೇನೆಂದು ನಿನ್ನ ತಂದೆಯವರಿಗೆ ಹೇಳು."

ಮುದುಕನ ಈ ಮಾತಿನಿಂದ ದಾವೂದನಿಗೆ ಆಶಾಭಂಗ ಮಾತ್ರವಲ್ಲ, ಸಂತಾಪದ ಜ್ವಾಲೆಗಳಿಂದ ಅವನ ಮೈಯೆಲ್ಲ ದಹಿಸತೊಡಗಿತು. ಅಂಥ ಮನಸ್ಥಿತಿಯಲ್ಲೇ ಮನೆಗೆ ಮರಳಿದ ಮಗನನ್ನು ತಂದೆ, "ರಫ್ತುಖಾನ್ ಏನಾಯಿತು?" ಎಂದು ಕೇಳಿದ.

ದಾವೂದನಿಗೆ ತಡೆಯಲಾಗದ ಕೋಪದ ಕಟ್ಟೆಯೊಡೆದು ಒಮ್ಮೆಲೆ ಸಿಡಿಯಿತು. "ಆ ಮುದುಕ ತಮ್ಮ ಬಗ್ಗೆ ಏನು ತಿಳಿದಿದ್ದಾರೆ! ಕರುಳು ಹರಿಯುವಂತೆ ಬಾರಿಸಿದರೆ ನಾನು ಬಾರಿಸಿದಾದರ ಹುಡುಗನಿಗೆ ಡೊಳ್ಳು ಬಾರಿಸಲು ಚೆನ್ನಾಗಿ ಕಲಿಸಿದ್ದೀರೆಂದು ನಿಮಗೆ ತಿಳಿಸಲು ಹೇಳಿದರು."

ಇದನ್ನು ಕೇಳುತ್ತಲೇ ರಫ್ತುಖಾನ್ ಕೂತಲ್ಲಿಂದಲೇ ಚಿಗನೆದ್ದ. "ಖಾನ್‌ಸಾಹೇಬರು ಹೀಗೆಯೇ ಹೇಳಿದರೆ?" ಅವನು ಕೂಗಿದ.

"ಹೌದು."

ಅದರಿಂದ ಸಂತಪ್ತನಾದ ರಫ್ತುಖಾನ ಮಗನ ಕಪಾಳಕ್ಕೆ ತಟ್ಟನೆ ಹೊಡೆದುಬಿಟ್ಟ. "ಈಗ– ಲಾದರೂ ತಿಳಿಯಿತೆ, ನಿನಗೆ ತಬಲಾ ಬರುವದಿಲ್ಲ ಅಂತ. ಅದಕ್ಕೇ ನಿನ್ನನ್ನು ಖಾನ್‌ಸಾಹೇಬರ ಬಳಿ ಕಳಿಸಿದ್ದು. ಇಂದಿನಿಂದಲೇ ಮತ್ತೆ ರಿಯಾಝ್

ಶುರುವಾಗಲಿ. ಅವರ ಆಜ್ಞೆಯಂತೆ ನಾಳೆಗೆ ಅವರನ್ನು ಕಾಣಲು ಹೋಗುತ್ತೇನೆ. ಶಿಷ್ಯತ್ವ ವಹಿಸದೇ ಕಲೆ ಯಾರಿಗೂ ಅವಗತವಾಗುವುದಿಲ್ಲ ವೆಂದು ನಿನಗೆ ತಿಳಿಯಬೇಕು." ರಫ್ತಖಾನ್ ರೊಚ್ಚಿಗೆದ್ದವನಂತೆ ಮಾತಾಡುತ್ತಿದ್ದ. "ಹೌದು, ನಮ್ಮದು ತಬಲಜೀ ಘರಾಣೆ. ತಲೆತಲಾಂತರ ದಿಂದ ರಿಯಾಝ್ ಮಾಡುತ್ತಲೇ ಬಂದೆವು. ಮೆಹನತ್ ಮಾಡಿದೆವು. ಆದರೆ ಆ ಶೌಕತ್ ಅಲೀಖಾನರ ಘರಾಣೆಯ ಘನತೆಯನ್ನು ಮೀರುವುದಿರಲಿ, ಸರಿಗಟ್ಟುವುದು ಕೂಡ ಈ ವರೆಗೆ ಸಾಧ್ಯವಾಗಿಲ್ಲ. ಈ ಪರಾಭವ ನಮ್ಮ ಮನೆತನಕ್ಕೆ ಅಂಟಿಕೊಂಡ ಶಾಪವಾಗಿ ಬಿಟ್ಟಿದೆ. ಆದರೆ ಅವರ ಮಾತನ್ನು ಮಾತ್ರ ನಾವು ಯಾರೂ ಅಲ್ಲಗಳೆಯಲಾರೆವು. ಈ ಸೋಲಿನ ಕಲಂಕವನ್ನು ಎಂದಾದರೊಮ್ಮೆ ನೀನು ತೊಳೆದು ಹಾಕುತ್ತೀಯೆಂದು ನಾನು ಆಶಾಗೋಪುರ ಕಟ್ಟಿಕೊಂಡಿದ್ದೆ!"

ಮಾರುದಿನ ರಫ್ತಖಾನನು ಶೌಕತ್ ಅಲೀಖಾನರ ಹವೇಲಿಗೆ ಹೋದ.

"ನಿನಗೆ ಸಿಟ್ಟು ಬಂದಿರಬೇಕಲ್ಲ?" ಖಾನ್ ಸಾಹೇಬರು ಮೆಲ್ಲಗೆ ಕೇಳಿದರು.

"ಯಾತರ ಬಗ್ಗೆ ಖಾನ್‌ಸಾಹೇಬರೆ?"

"ದಾವೂದ್ ನಿನ್ನೆ ಇಲ್ಲಿ ಬಂದು ತಬಲಾ ಬಾರಿಸಿದ. ಅವನಿಗೆ ಹೇಳಿಕಳಿಸಿದ ಮಾತು ನಿನಗೆ ಮುಟ್ಟಲಿಲ್ಲವೆ?"

"ಮುಟ್ಟಿದೆ."

"ನಿನ್ನ ಮಗ ಉತ್ತಮವಾಗಿ ತಬಲಾ ಬಾರಿಸುತ್ತಾನೆ. ನೀನು ನಿನ್ನ ಘರಾಣೆಯ ಎಲ್ಲ ಗೌರವವನ್ನು ಅವನಿಗೆ ಕೊಟ್ಟಿರುವಿ. ಆದರೆ ಈ ವಾದ್ಯದಲ್ಲಿಯ ಜೀವಾಳವಿನ್ನೂ ಅವನಿಗೆ ಅರ್ಥವಾಗಿಲ್ಲ. ಚರ್ಮವಾದ್ಯವಾದ ತಬಲಾ ಬಾರಿಸಿದರೆ ಗೆಜ್ಜೆಯನ್ನು ಕುಣಿಸಿದಂತಾಗಬೇಕು. ಆದರೆ ಕಲೆಯ ಆ ಅಂತಸ್ತನ್ನು ತಲಪುವುದು ಸುಲಭ ಸಾಧ್ಯವಲ್ಲ. ಕೇವಲ ಬಾರಿಸುವ ಗತಿಯಿದ್ದರೆ ಸಾಕಾಗುವುದಿಲ್ಲ. ಈ ವಾದ್ಯದಲ್ಲಿ ಪ್ರಾಣಪ್ರತಿಷ್ಠಾಪನೆ ಮಾಡಬೇಕಾಗುತ್ತದೆ. ಅದರ ಮಹತ್ವವನ್ನು, ಕಲೆಯ ಈ ಅಂಶವನ್ನು ಅವಗತ ಮಾಡಿಕೊಂಡರೆ ಸಾಕು, ಅವನು ಮಹಾ ತಬಲಾ ವಾದಕರ ಶ್ರೇಣಿಯಲ್ಲಿ ಸೇರಿಬಿಡುತ್ತಾನೆ."

ಶೌಕತ್‌ಅಲಿಖಾನರ ಮಾತುಗಳನ್ನು ರಫ್ತಖಾನ್ ಕಿವಿಗೊಟ್ಟು ಕೇಳುತ್ತಿದ್ದನಾದರೂ ಅವನಿಗೆ ತನ್ನೊಳಗೇ ಆಶ್ಚರ್ಯವಾಗತೊಡಗಿತ್ತು. ಅವರು ತನ್ನನ್ನು ಇಲ್ಲಿ ಬರಹೇಳಿದ್ದೇತಕ್ಕಿರಬೇಕು? ಆದರೂ ಅವರು ಈಗ ಹೇಳುತ್ತಿದ್ದುದಕ್ಕೂ ತನ್ನನ್ನು ಕರೆಕಳಿಸಿದ ಉದ್ದೇಶಕ್ಕೂ ಏನಾದರೂ ಸಂಬಂಧವಿರಬಹುದೇ?......ಅವನು ವಿಚಾರ ತುಮುಲದಲ್ಲಿದ್ದಾಗಲೆ ಶೌಕತ್ ಅಲಿ ಮತ್ತೆ ಹೇಳಿದರು: "ರಫ್ತ, ದಾವೂದ್ ಒಳ್ಳೆಯ ಹುಡುಗ. ಮೆಹನತ್ ಮಾಡಲು ಅವನಿಗೆ ಜರೂರ್ ಅವಕಾಶಕೊಡು, ಆದರೆ ಮೆಹನತ್ತಿನಲ್ಲಿಯ ನಜಾಕತ್ ಅವನಿಗಿನ್ನೂ ಗೊತ್ತಿಲ್ಲ. ಅವನು ನನಗೆ ತುಂಬಾ ಹಿಡಿಸಿದ್ದಾನೆ. ನನ್ನ ಮಗಳು ಹಸೀನಾ



ಳನ್ನು ಅವನಿಗೆ ಕೊಡಬೇಕೆಂದು ನನಗೆ ಮನಸ್ಸಾಗುತ್ತಿದೆ. ಈ ದಾರಿ ನಿನಗೆ ಒಪ್ಪಿತವಿದ್ದರೆ ಈ ಸಂಬಂಧವನ್ನು ಪಕ್ಕಾಮಾಡುತ್ತೇನೆ."

ಹಸೀನಾಳನ್ನು ಚಿಕ್ಕಂದಿನಿಂದ ವಯಸ್ಸಿಗೆ ಬರುವರೆಗೂ ನೋಡುತ್ತ ಬಂದಿದ್ದ ರಫ್ತಖಾನನ ಕಣ್ಣೆದುರು ಆ ಹಾಳೆಯ ಚಿತ್ರ ತಟ್ಟನೆ ಸುಳಿದು ಹೋಯಿತು. ತಾಯಿ ತಂದೆಗಳಿಬ್ಬರ ಸೌಂದರ್ಯವನ್ನು ರೂಪದಲ್ಲಿ ಹಂಚಿಕೊಂಡ ಆಕೆಯನ್ನು ತನ್ನ ಸೊಸೆಯಾಗಿ ತಂದುಕೊಳ್ಳುವ ಯೋಚನೆ ಅವನಿಗೆ ತಟ್ಟನೆ ಹಿಡಿಸಿತು. ಆದರೆ ಮತ್ತೇನೋ ವಿಚಾರ ಹೊಳೆದಂತಾಗಿ ತನ್ನ ಸರ್ವಶಕ್ತಿಯನ್ನೂ ಬಾಯಲ್ಲೆ ಒಗ್ಗೂಡಿಸಿಕೊಂಡು ಕೇಳಿದ: "ವರದಕ್ಷಿಣೆ ಏನಾಗಬಹುದು?"

"ವರದಕ್ಷಿಣೆ!" ಶೌಕತ್ ಅಲೀಖಾನ್ ಚಕಿತರಾಗಿ ಉದ್ಗರಿಸಿದರು.

"ಹೌದು, ವರದಕ್ಷಿಣೆ."

ರಫ್ತಖಾನನಿಂದ ಈ ಬಗೆಯ ಪ್ರತಿಕ್ರಿಯೆಯನ್ನು ಖಾನ್‌ಸಾಹೇಬರು ನಿರೀಕ್ಷಿಸಿರಲಿಲ್ಲ. ಅಲ್ಲದೆ ಪ್ರೇಮ, ಅಭಿಮಾನಗಳ ಕೊಂಡಿಯೆನಿಸಬೇಕೆಂದು ತಾವು ಆಶಿಸಿದ್ದ ಈ ಸಂಬಂಧ ವ್ಯವಹಾರವಾಯಿತಲ್ಲ ಎಂದು ಅವರಿಗೆ ಬೇಸರವಾಯಿತು.

"ಹೌದು, ನನಗೆ ವರದಕ್ಷಿಣೆ ಬೇಕೇ ಬೇಕು," ರಫ್ತ ಪುನರುಚ್ಚರಿಸಿದ.

"ಹೇಳು, ಎಷ್ಟು ಬೇಕು ಹೇಳು."

ಹೀಗೆ ನುಡಿಯುವಾಗ ಖಾನ್‌ಸಾಹೇಬರ ಮುಖ ಸಂತಾಪದಿಂದ ಕೆಂಪಾದುದು ರಫ್ತನ ಗಮನಕ್ಕೂ ಬಂದಿತ್ತು.

"ಖಾನ್‌ಸಾಹೇಬ್, ನನ್ನ ಬೇಡಿಕೆಯಿಂದ ದಯವಿಟ್ಟು ಸಿಟ್ಟಾಗಬೇಡಿ. ನನಗೆ ಹಣ ಬೇಕಿಲ್ಲ. ನನಗೆ ವರದಕ್ಷಿಣೆಯೆಂದು ಬೇಕಾದದ್ದು ನಿಮ್ಮ ಘರಾಣೆಯ ತಬಲಾವಾದನ ಕಲೆ ಮಾತ್ರ. ಅದು ದೊರೆಯುವದಾದರೆ ಈ ಹುಡುಗ ಇಂದೇ ನಿಮ್ಮವನಾದ."

ಈ ಬೇಡಿಕೆಯಿಂದ ಶೌಕತ್ ಅಲೀಖಾನರು ಪ್ರಸನ್ನರಾದರು. ಈಗವರು ಮಂದಸ್ಮಿತರಾಗಿ ನುಡಿದರು, "ಇಂಥ ಶಿಷ್ಯನನ್ನು ಪಡೆಯುವುದೇ ಒಂದು ಭಾಗ್ಯ. ಅವನ ಮೋಹನತ್ವನ್ನೂ, ಮನಸ್ಸನ್ನೂ ನಾನು ನೋಡಿದ್ದೇನೆ. ಇಂಥ ಒಬ್ಬ ಶಿಷ್ಯನಿರಬೇಕೆಂದು ಆಗಲೇ ನನ್ನ ಮನಸ್ಸಿಗೆ ಅನಿಸಿಬಿಟ್ಟಿತು. ರಫ್ತ, ಅವನನ್ನು ನನ್ನ ಅಳಿಯನೆಂದಷ್ಟೇ ಅಲ್ಲ, ಮಗನೆಂದೂ ಸಂಭಾಳಿಸುತ್ತೇನೆ. ನನ್ನಲ್ಲಿದ್ದ ವಿದ್ಯೆಯನ್ನೆಲ್ಲ ಅವನಿಗೆ ಧಾರೆಯೆರೆದು ಕೊಡುತ್ತೇನೆ. ಆಯಿತಲ್ಲವೆ?"

ಅಲ್ಲಿಂದ ಬೀಳ್ಕೊಂಡು ಏಳುವಾಗ ರಫ್ತಖಾನ್ ಸಂತಸವೇ ವ್ಯೆವೆತ್ತಂತಿದ್ದ.

ಒಂದು ಸುಮುಹೂರ್ತದಲ್ಲಿ ದಾವೂದನಿಗೆ ಗಂಡಾ ಕಟ್ಟಿ ಶೌಕತ್ ಅಲೀಖಾನ್‌ಸಾಹೇಬರು ಅವನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ಅವನು ಶೌಕತ್ ಅಲೀಖಾನರ ಮನೆಯಲ್ಲಿಯೇ ತಬಲಾ ಕಲಿಯತೊಡಗಿದ. ಒಂದು ಒಳ್ಳೆಯ ದಿನ ದಾವೂದ್ – ಹಸೀನಾ ವಿವಾಹಬಂಧಿತರಾದರು. ಖಾನ್‌ಸಾಹೇಬರು ಅಳಿಯನಿಗೆ ನಿತ್ಯ ತಾಲೀಮು ಕೊಡತೊಡಗಿದರು. ಆದರೆ ಅವನ ರಿಯಾಝಿಗೆ ಮುಂಚೆ ಮಗಳಿಗೆ ಒಂದು ಮಾತನ್ನು ಹೇಳಲು ಅವರು ಮರೆಯಲಿಲ್ಲ. "ರಿಯಾಝ್ ಮಾಡುವಾಗ ನೀನು ಅವನೆದುರು ಕೂಡುತ್ತಿರು. ತಾಲ, ಲಯಗಳನ್ನು ಅವನಿಗೆ ಸೂಚಿಸುವಂತೆ ಕೈಯಿಂದ ತಾಲ ಹಿಡಿದು ಅವನಿಗೆ ಸಾಥ ಕೊಡುತ್ತ ಹೋಗು."

"ನಾನು?!" ಹಸೀನಾಳಿಗೆ ಆಶ್ಚರ್ಯವೇ ಆಗಿರಬೇಕು.


"ಹಾಂ. ನೀನು. ಮಗಳೇ, ತಬಲಾದ ಜ್ಞಾನವೆಲ್ಲ ಅವನಿಗಿದೆ, ಆದರೆ ಅದರ ಲಜ್ಜತ್ ಗೊತ್ತಿಲ್ಲ. ನೀನು ಅವನೆದುರು ಕುಳಿತುಕೊಂಡು ತಾಲ, ಲಯಗಳಿಗೆ ಸಾಥ್ ಕೊಡತೊಡಗಿದೆಯೆಂದರೆ ನಿನ್ನ ರೂಪದೆಡೆ ನೋಡುತ್ತಲೇ ಅವನಿಗೆ ಸರಿಯಾದ ಹಿಡಿತ ಸಹಜವಾಗಿ ಪ್ರಾಪ್ತವಾಗುವುದು. ಜೀವನದಲ್ಲಿ ಬರಿ ಜ್ಞಾನವಿದ್ದು ಪ್ರಯೋಜನವಿಲ್ಲ. ಆ ಜ್ಞಾನಕ್ಕೆ ಮಾಧುರ್ಯವಿರಬೇಕು. ಈ ಮಾಧುರ್ಯ ಸಂಪಾದನವನ್ನು ನಿನ್ನ ರೂಪ ಖಂಡಿತ ಸಾಧಿಸಬಹುದು. ಅದು ಸಿಕ್ಕಾಗ ಮುಂದೆ ಅವನು ಏನೆಲ್ಲವನ್ನೂ ಗೆಲ್ಲುತ್ತಾನೆ."

ರಾತ್ರಿಯ ಪ್ರಯಾಣ ತ್ರಿಂಗಾಲದಲ್ಲಿ ತನ್ನನ್ನೇ ಮರೆಯುತ್ತಿದ್ದ ದಾವೂದ್ ಬೇಗ್ಗೆ ಬೇಗನೆನ್ನು ಲಯಾಂಭಗೆ ತಿರುಗುತ್ತಿದ್ದ. ರೂಪಸಂಪನ್ನೆ ಯುವತಿ ಆಗಲ್ಲ ಅವನೆದುರೇ ಕುಳಿತು ತಾಲ ಲಯಗಳನ್ನು ಕೈಯಿಂದಲೇ ಹಿಡಿಯುತ್ತಿದ್ದಳು. ಇವುಗಳನ್ನು ನೋಡುತ್ತ ಅನುಕರಿಸುತ್ತಿದ್ದ ತಾಲ ಲಯಗಳನ್ನು ಅಂಬಸಿ ತಬಲಾ ಅಭ್ಯಾಸವನ್ನು ನಡೆಸುತ್ತಿದ್ದ ದಾವೂದ್. ಈ ಕ್ರಿಯೆಯಲ್ಲಿ ಸಮಯ ಸರಿದುದರ ಪರಿವೆಯೇ ಅವನಿಗಿರುತ್ತಿರಲಿಲ್ಲ.

ಒಮ್ಮೆ ಖಾನ್‌ಸಾಹೇಬರ ಸನ್ನಿಧಿಯಲ್ಲಿ ದಾವೂದನ ಅಭ್ಯಾಸ ನಡೆದಾಗ ಅವರು ನಗುತ್ತಲೇ ಹೇಳಿದರು: "ಬೇಟಾ, ದಿಲ್ಲಿಯ ಬಾಜ್ ಕಾನೂನು ನಿನಗೆ ಗೊತ್ತಿರಲಿಕ್ಕಿಲ್ಲ. ಕೇವಲ ಎರಡೇ ಕೈಬೆರಳುಗಳ ತುದಿಯ ಗಣಿಕೆಗಳನ್ನು ಮಾತ್ರ ಬಳಸಿ ತಬಲಾದ ದಂಡೆಯ ಮೇಲೆ ಮಾತ್ರ ಬಾರಿಸಬೇಕು, ಮೂರನೆಯ ಬೆರಳು ತಪ್ಪಿ ತಾಕಿದರೂ ಚೂರಿ ತಂದು ಬೆರಳನ್ನು ಕತ್ತರಿಸಿ ಹಾಕು," ಅನ್ನುತ್ತಿದ್ದರು. "ಈ ಮಾತಿನ ಮರ್ಮ ದಾವೂದನಿಗೆ ಹೊಳೆಯದೇ ಹೋಗಲಿಲ್ಲ.

ಶೌಕತ್ ಅಲೀಖಾನ್‌ಸಾಹೇಬರು ತಬಲಾ ಬಾರಿಸಲೆಂದು ಕೂಡುವ ಪದ್ಧತಿಯೂ ವಿಶಿಷ್ಟವಾದುದೇ ಆಗಿತ್ತು. ತಬಲಾದೆದುರು ಕುಳಿತರೆಂದರೆ ಅವರ ಸುಂದರ ಮುಖ ಇನ್ನಷ್ಟು ಕಳೆ ತುಂಬಿ ಬೆಳಗುತ್ತಿತ್ತು. ತಬಲಾ ಕೈಗೆತ್ತಿಕೊಳ್ಳುವ ಮುನ್ನ ಬಿಡು ಬೆಳ್ಳಿಯ ಪಾತ್ರೆಯಲ್ಲಿ, ಗೋಮೇಧ್ಯ ಸುಟ್ಟು ಮಾಡಿದ ಬೂದಿಯನ್ನು ಮಲ್‌ಮಲ್ ಬಟ್ಟೆಯನ್ನು ನಾಲ್ಕು ಮಡಚಿ, ಅದರಲ್ಲಿ ಸೋಸಿ ಇಟ್ಟುಕೊಳ್ಳುತ್ತಿದ್ದರು. ನಂತರ ಬಜರಂಗಾಸನ ಹಾಕಿ ದಾಸ್ತಗಳಿಗೆ ತಮ್ಮ ಬೆರಳುಗಳ ರುಚಿ ತೋರಿಸಲಾರಂಭಿಸುತ್ತಿದ್ದರು. ಚಲಿಸುವ ಅವಯವಗಳೆಂದರೆ ಅವರೆರಡು ತೋಳುಗಳು ಮತ್ತು ಮುಂಗೈಗಳು ಮಾತ್ರ. ವಾದನವೊಮ್ಮೆ ಪ್ರಾರಂಭವಾಯಿತೆಂದರೆ ಮುಖ ನಿರ್ವಿಕಾರ ಮೂರ್ತಿಯಂತೆ ಉಳಿಯುತ್ತಿತ್ತು. ಎಷ್ಟೇ ತೀವ್ರ ಲಯವಿದ್ದಾಗಲೂ ದೇಹ ಮಾತ್ರ ಕೊಂಚವೂ ಅಲುಗಾಡುತ್ತಿರಲಿಲ್ಲ. ತಬಲಾ, ಡಗ್ಗಾಗಳ ಮೇಲೆ ಖಾನ್‌ಸಾಹೇಬರ ಬೆರಳುಗಳು ಆಡುವುದೇ ಕಣ್ಣಿಗೆ ಹಬ್ಬವುಂಟುಮಾಡುವಂತಹ ನೋಟವಾಗಿರುತ್ತಿತ್ತು. ಡಗ್ಗಾದ ಮೇಲೆ ಆಡುವ ಬೆರಳುಗಳ ಚಲನವಲನವನ್ನು ನೋಡಿದರೆ ಮಂದಗತಿಯಲ್ಲಿ ಬಾರಿಸುತ್ತಿರುವ ಸಿತಾರ್‌ವಾದಕನ ನೆನಪು ಬರುತ್ತಿತ್ತು. ತಬಲಾ ನುಡಿಸುವ ಬೆರಳುಗಳನ್ನು ನೋಡಿದರೆ ಚತುರ ನರ್ತಕಿಯ ಪದನ್ಯಾಸದ ಭಾಸವಾಗುತ್ತಿತ್ತು. ಅಲ್ಲಿಂದ ಹೊರಡುವ ನಾದ ಕೇಳುಗರನ್ನು ಸೆರೆ ಹಿಡಿದು ಮೈಮರೆಸಿ ಬಿಡುತ್ತಿತ್ತು.

ಈ ಹಿರಿ ಕಲಾವಿದನ ಸಾಮರ್ಥ್ಯವನ್ನು ಕಂಡು ದಾವೂದನ ಅಹಂಕಾರವೆಲ್ಲ ಕರಗಿ ನೀರಾಗಿ ಹೋಯಿತು. ಮೊದಮೊದಲು ಬಿಸಿಲುಗುದುರೆಯಂತೆ ಅವರ ಬೆನ್ನಟ್ಟುತ್ತಿದ್ದ ದಾವೂದನಲ್ಲಿ ಈಗೀಗ ತನಗೂ ಒಂದಿಲ್ಲೊಂದು ದಿನ ಈ ಮಟ್ಟ ಸಾಧ್ಯವಾದೀತೆಂಬ ಆತ್ಮವಿಶ್ವಾಸ



ಮೂಡತೊಡಗಿತ್ತು. ಹಗಲು – ರಾತ್ರಿಗಳಲ್ಲಿ ಭೇದವೆಣಿಸದೆಯೇ ಅವನ ಮಹಸತ್ತು ಮುಂದುವರಿಯಿತು.

ಒಂದು ದಿನ ರಫ್ತುಖಾನನನ್ನು ಮನೆಗೆ ಕರೆಸಿಕೊಂಡು ಖಾನ್‌ಸಾಹೇಬ್ ಒಂದು ಮಾತು ಹೇಳಿದರು: "ರಫ್ತು, ನಾಳೆ ರಾತ್ರಿ ನಮ್ಮಲ್ಲಿ ಔತಣವಿದೆ. ನೀನೂ ದಾವೂದನೂ ತಪ್ಪದೆ ಬರಬೇಕು."

"ಅಪ್ಪಣೆ ಸ್ವಾಮಿ, ಖಂಡಿತ ಬರುತ್ತೇನೆ. ಆದರೆ ಆಮಂತ್ರಣ ಯಾತಕ್ಕೆಂದು ತಿಳಿಯಲಿಲ್ಲ," ಎಂದ ರಫ್ತುಖಾನ್.

ಅಜಾನುಬಾಹುವಾಗಿದ್ದ ಖಾನ್‌ಸಾಹೇಬರು ಮಮತೆಯಿಂದ ರಫ್ತುಖಾನನ ಹೆಗಲ ಮೇಲೆ ಕೈಯಿಡುತ್ತ ಹೇಳತೊಡಗಿದರು, "ರಫ್ತು, ನಾಳೆ ನಾನು ಕೊನೆಯ ಬಾರಿಗೆ ತಬಲಾ ಬಾರಿಸಲಿದ್ದೇನೆ. ಅನಂತರ ಶೌಕತ್ ಅಲಿಯೂ ಇರಲಿಕ್ಕಿಲ್ಲ, ಅವನ ತಬಲಾ ಕೂಡ ಇರಲಿಕ್ಕಿಲ್ಲ. ಆದರೆ ಅದೇನೇ ಇದ್ದರೂ ದಾವೂದನನ್ನು ಕರೆತರಲು ಮಾತ್ರ ಮರೆಯಬೇಡ."

"ಹುಜೂರ್, ನೀವಿದೇನನ್ನು ಹೇಳುತ್ತಿದ್ದೀರಿ!" ಕೇಳಿದ ಆಶ್ಚರ್ಯಚಕಿತ ರಫ್ತು. ಅವನ ಕಣ್ಣಲ್ಲಿ ನೀರು ತುಂಬಿದ್ದನ್ನು ಕಂಡ ಖಾನ್ ಸಾಹೇಬರು ಇನ್ನಷ್ಟು ಬಿಡಿಸಿ ಹೇಳಿದರು, "ಬೇಟಾ, ಕೈಯಲ್ಲಿ ಕಲೆಯಿರುವವರೆಗೆ ಮತ್ತು ಅವನ ಕಲೆಗೆ ಮಾನ್ಯತೆಯಿರುವವರೆಗೆ ಮನುಷ್ಯ ಬದುಕಬೇಕು. ನನ್ನ ಕೈಗಳು ಈಗ ಮೊದಲಿನಂತೆ ಸರಾಗವಾಗಿ ಆಡುವುದಿಲ್ಲವೆಂದು ನಿನ್ನ ಗಮನಕ್ಕೆ ಬಂದಿದೆಯೊ ಇಲ್ಲವೋ ಹೇಳಲಾರೆ. ಆದರೆ ಈಗೀಗ ನಾನು ಅದಕ್ಕಾಗಿ ಪರಿಶ್ರಮಿಸಬೇಕಾಗುತ್ತದೆ. ಅದೇನೇ ಇರಲಿ, ನೀವಿಬ್ಬರೂ ಮರೆಯದೇ ಬರಬೇಕು."

ಮರುದಿನ ಸಾಯಂಕಾಲ ಶೌಕತ್ ಅಲೀಖಾನರ ಮನೆಯೆಂದರೆ ದಿಲ್ಲಿಯ ತಬಲಾ ವಾದಕರ ಮಹಾ ಸಮ್ಮೇಳನದಂತೆಯೇ ಗೋಚರಿಸುತ್ತಿತ್ತು. ರಫ್ತುಖಾನ್ ಮತ್ತು ಬಹಾದ್ದೂರಖಾನರು ಬಂದವರನ್ನೆಲ್ಲ ಸ್ವಾಗತಿಸುತ್ತಿದ್ದರು.

ಇಂತಹ ಸಂದರ್ಭಗಳಲ್ಲಿ ಸಂಗೀತ ಕಛೇರಿಯ ನಂತರವೇ ಊಟದ ವ್ಯವಸ್ಥೆಯಿರುವುದು ವಾಡಿಕೆ. ಆದರೆ ಇಂದು ಶೌಕತ್ ಅಲಿ ಆ ಸಂಪ್ರದಾಯವನ್ನು ಮುರಿದು, "ಮೊದಲು ಊಟವಾಗಲಿ," ಎಂದರು. ಹೀಗೇಕೆಂದು ಕೇಳುವ ಧೈರ್ಯ ಒಬ್ಬನಲ್ಲೂ ಇರಲಿಲ್ಲ.

ಭರ್ಜರಿ ಭೋಜನದ ನಂತರ ಮಹಡಿಯ ಮೇಲಿನ ವಿಶಾಲವಾದ ಮಹಲಿನಲ್ಲಿ ಎಲ್ಲರೂ ಕಲೆತರು. ಎಲ್ಲರೂ ಆಸೀನರಾದ ಮೇಲೆ ಹಿಂದಿನಿಂದ ದಾವೂದನೊಂದಿಗೆ ಬರುತ್ತಿದ್ದ ವೃದ್ಧ ಶೌಕತ್ ಅಲೀಖಾನರು ಅಳಿಯನಿಗೆ, "ಮಗು, ನೀನು ಮುಂದೆ ನಡೆ," ಎಂದರು. ದಾವೂದನಿಗೆ ಈ ಮಾತಿನಿಂದ ವಿಸ್ಮಯವಾಯಿತಾದರೂ ಅದನ್ನು ತೋರ್ಪಡಿಸುವ ಸಮಯವಿದಾಗಿರಲಿಲ್ಲ. ಬೈಠಕಿಯ ಮೇಲೆ ಖಾನ್‌ಸಾಹೇಬರ ತಬಲಾ ಡಗ್ಗಾಗಳಿದ್ದುವು. ದಾವೂದನಿಗೆ ಅವುಗಳನ್ನು ಕೊಟ್ಟು, "ಮೊದಲ ಸೇವೆ ನಿನ್ನದಾಗಲಿ," ಎಂದು ಅಪ್ಪಣೆ ಮಾಡಿದರು.

ಸಾರಂಗಿಯವನು ಶ್ರುತಿ ಹಿಡಿಯುತ್ತಿರುವಂತೆಯೇ ದಾವೂದ್ ತೋಳು ಮೇಲೇರಿಸಿ ಝೇಂಕಾರ ಮಾಡಿದ. ಮುಂದೊಂದು ಗಂಟೆ ಕಾಲ ಅವನು ತನ್ನ ವಿದ್ಯೆಯ ಸಿರಿಗೆ ಕಲಾಸೂಕ್ಷ್ಮತೆಯ ಉಡುಗೆ ತೊಡಿಸುತ್ತ, ಅದರ ಗುಂಗಿನಲ್ಲೇ ವಿಹರಿಸುತ್ತಿದ್ದ. ಖಾನ್‌ಸಾಹೇಬರು ಹಿಂದೆಂದಿಗಿಂತಲೂ ಹೆಚ್ಚಾಗಿ ಇಂದು ಅವನಿಗೆ ಹುರುಪು ಕೊಡತೊಡಗಿದರು. ಎಲ್ಲರಿಂದಲೂ ಕರತಾಡನದ ಶಹಬ್ಬಾಸ್ ತೆಗೆದುಕೊಂಡ ದಾವೂದ್ ತನಗೆ ವಹಿಸಿಕೊಟ್ಟ ಕಾರ್ಯವನ್ನು ಶಿಸ್ತಿನಿಂದ ಪೂರೈಸಿದ ಸಿಪಾಯಿಯಂತೆ ಎದ್ದು ಖಾನ್‌ಸಾಹೇಬರ ಪಾದ ಮುಟ್ಟಿ ನಮಸ್ಕರಿಸಿದ.

"ಮಗು, ನಿನ್ನ ವಿಜಯ ಪತಾಕೆ ಹೀಗೆಯೇ ಹಾರಾಡುತ್ತಿರಲಿ!" ಎಂದು ಆಶೀರ್ವದಿಸುತ್ತಾ ಖಾನ್‌ಸಾಹೇಬರು, "ರಫ್ತು," ಎಂದು ಕರೆದರು. ರಫ್ತುಖಾನ್ ಎದ್ದು ನಿಂತ. "ನಿನಗೆ ವಚನವಿತ್ತಂತೆ ನನ್ನ ಮನೆಯ ತಬಲಾ ನಿನ್ನ ಮನೆಗೆ ಹೋಗುವುದೆಂದು ಈ ಸಭೆಯ ಸಾಕ್ಷಿಯಾಗಿ ಹೇಳುತ್ತೇನೆ. ನನ್ನ ಕಟ್ಟ ಕಡೆಯ

ಕಛೇರಿಯಿದು. ನಾನು ನನ್ನ ವಚನವನ್ನು ಪಾಲಿಸಿದ್ದೇನೆ. ನಿನ್ನ ದಾವೂದನಿಗೆ ನಾನು ನನ್ನ ಸರ್ವಸ್ವವನ್ನು ಕೊಟ್ಟಿದ್ದೇನೆ. ತಿಳಿದು ಕೊಳ್ಳುವುದು ಸುಲಭ. ಆದರೆ ಅದನ್ನು ಜೀರ್ಣಿಸಿಕೊಳ್ಳುವುದು ಕಠಿಣ. ನನ್ನನ್ನು ಈ ಕಲೆಯಲ್ಲಿರುವ ಖಲೀಫಾ, ಬಾದಶಹಾ ಇತ್ಯಾದಿಯಾಗಿ ಗೌರವಿಸಿದ್ದೀರಿ. ಇದು ನಿಜವೇ ಆಗಿದ್ದರೆ ನನ್ನ ತರುವಾಯ ದಾವೂದನು ಈ ಗೌರವವನ್ನು ಉಳಿಸಿಕೊಳ್ಳುವನೆಂಬುವುದರಲ್ಲಿ ನನಗೆ ಎಷ್ಟೂ ಸಂಶಯವಿಲ್ಲ."

ಆರಡಿ ಎತ್ತರದ ಸುಸ್ವರೂಪಿ ವಯೋವೃದ್ಧ ಈಗ ತಪೋವೃದ್ಧನಂತೆ ತೋರುತ್ತಿದ್ದರು. ಎಂದಿನಂತೆ ಎಂಟೂ ಕೈಬೆರಳುಗಳಲ್ಲಿ ರತ್ನದ ಉಂಗುರಗಳು ಮಿನುಗುತ್ತಿದ್ದವು. ಖಾನ್ ಸಾಹೇಬರು ಒಮ್ಮೆ ಸಾರಂಗಿಯವನ ಕಡೆಗೆ ಹೊರಳಿ, "ಚಲೋ" ಎಂದು ಸಂಜ್ಞೆ ಮಾಡಿದರು. ಕೈಗೆ ಹೂ ಕಟ್ಟಿಕೊಂಡಿದ್ದ ಸಾರಂಗಿವಾದಕ ತಂತಿ ಮೀಂಟಿ ಶ್ರುತಿ ಹೊರಡಿಸಲು ಆರಂಭಿಸಿದಂತೆಯೇ ಖಾನ್‌ಸಾಹೇಬರ ಕೈಬೆರಳುಗಳು ನುಣುಪಾದ ಬೂದಿಯಲ್ಲೊಮ್ಮೆ ಅಡಿ ತಬಲಾದ ಮೇಲೆ ಕುಣಿಯತೊಡಗಿದುವು. ಅವರ ಬೆರಳ ಸ್ಪರ್ಶದಿಂದಲೇ ತಬಲಾದಲ್ಲಿ ಜೀವಕಳೆ ತುಂಬಿದಂತಾಯಿತು. ಅವರೀಗ ಬೆರಳುಗಳಿಂದಲೇ ಮಾತಾಡುತ್ತಿದ್ದರು. ತರತರಹದ ನುಡಿ, ಗತ್ತು, ಆವರ್ತನೆ, ಥಂಗುಗಳನ್ನು ಆ ಮಹಾನ್ ಕಲಾಕಾರ ಅಲ್ಲಿ ನೆರೆದಿದ್ದ ಕಲಾರಸಿಕರಿಗೆ ಪ್ರದರ್ಶಿಸುತ್ತಿದ್ದನು. ಆ ಸಮುದಾಯವೆಲ್ಲ ತಾಲ ಲಯಗಳ ಅದ್ಭುತ ಸಾಗರದ ತೆರೆಗಳ ಮೇಲೆಯೇ ತೇಲುತ್ತಿರುವಂತಿತ್ತು. ಯಾವುದೋ ಗಂಧರ್ವಲೋಕದಲ್ಲಿ ಜನ ಮೈಮರೆತಿರುವಂತೆಯೇ ರಸಗಂಗೆ ವಿದಾಯ ಹೇಳಿದಳು. ಖಾನ್‌ಸಾಹೇಬರು ಅಂದಿನ ಕಲಾಸೇವೆ ಮುಗಿಯಿತೆಂಬಂತೆ ಶ್ರೋತೃಗಳಿಗೆ ಕೈಮುಗಿದು, "ಖುದಾ ಹಾಫೀಜ್!" ಎಂದುದ್ಗರಿಸಿದರು.

ಕ್ಷಣಾರ್ಧದಲ್ಲೇ ಖಾನ್‌ಸಾಹೇಬರು ಕುಳಿತಲ್ಲೇ ಗೋಣು ಚೆಲ್ಲಿದರು. ಎಲ್ಲರೂ ಧಾವಿಸಿ ಬಂದರಾದರೂ ಪಂಜರದೊಳಗಿನ ಗಿಣಿ ಎಲ್ಲರ ಕಣ್ಣೆದುರಿಗೇ ಹಾರಿ ಮರಳಿ ಬಾರದ ಲೋಕಕ್ಕೆ ಹೋಗಿತ್ತು. ದುಃಖದ ಕರಾಳ ಛಾಯೆ ಎಲ್ಲರನ್ನೂ ಆವರಿಸಿತು. ದಾವೂದನ ಕಣ್ಣೀರು ಮಾತ್ರ ತಡೆಯಿಲ್ಲದಂತೆ ಹರಿಯುತ್ತಿತ್ತು. ಒತ್ತರಿಸಿ ಬಂದ ದುಃಖವನ್ನು ತಡೆಯಲಾಗದ ಮಗುವಿನಂತೆ ಆಗಿತ್ತು ಅವನ ಅವಸ್ಥೆ. ರಫ್ತ ಖಾನ್ ಮಗನ ಬೆನ್ನ ಮೇಲೆ ಕೈಯಾಡಿಸುತ್ತಾ ಅವನನ್ನು ಸಮಾಧಾನಪಡಿಸಿದರು.

"ಮಗು, ದುಃಖಿಸಬೇಡ. ಹುಟ್ಟುವುದು ಯಾರ ಕೈಯಲ್ಲೂ ಇಲ್ಲ. ಆದರೆ ಇಚ್ಛಾಮರಣ ಮಾತ್ರ ಸಾಮಾನ್ಯ ವಿಷಯವಲ್ಲ. ಅದಕ್ಕೆ ಅಲ್ಲಾನ ಕೃಪೆ ಬೇಕು. ಅದನ್ನು ಪಡೆದವರನ್ನು ನಾವು ಪೀರರೆಂದು ಕರೆಯುತ್ತೇವೆ, ಗೌರವಿಸುತ್ತೇವೆ. ಕದಾಚಿತ್ ನಮಗೆಲ್ಲ ಅದು ಗೊತ್ತಾಗಲೆಂದೇ ಈ ದಿನ ನಿನ್ನನ್ನೂ ಇಲ್ಲಿಗೆ ಆಮಂತ್ರಿಸಿರಬೇಕು!"

ಶೌಕತ್ ಅಲೀಖಾನರ ಜನಾಜಾ ಸಿದ್ಧವಾಯಿತು. ನಿಯಮಕ್ಕನುಸಾರವಾಗಿ ಅವರನ್ನು ಡೋಲಿಯಲ್ಲಿ ಮಲಗಿಸಲಿಲ್ಲ. ಅವರು ನಿಧನರಾದಾಗ ಕೂತಿದ್ದ ತೆರದಲ್ಲೇ ಕೂಡಿಸಿ ಎದುರು ಅವರ ಪ್ರೀತಿಯ ತಬಲಾ ಡಗ್ಗಾಗಳನ್ನು ಇಡಲಾಗಿತ್ತು. ಆ ಭಂಗಿಯಲ್ಲೇ ಅವರ ದಫನ್ ಕೂಡ ಆಯಿತು.

ಎಲ್ಲರೂ ಒಬ್ಬೊಬ್ಬರಾಗಿ ಮರಳಿಹೋದರು. ದಾವೂದ್ ಮಾತ್ರ ಕಬರದ ಬಳಿ ಮೊಣಕಾಲೂರಿ ಕುಳಿತಿದ್ದ. ಪ್ರಾಯಶಃ ಅವನ ಕಣ್ಣುಗಳು ಕಣ್ಣೀರಿನ ಬತ್ತದ ತೊರೆಯೇ ಆಗಿರಬೇಕು. ಅಲ್ಲಿ ಕಬರಿಗೆ ಕಣ್ಣೀರಿನ ನಿರಂತರ ಅಭಿಷೇಕವೇ ನಡೆದಿತ್ತು.

ಆದರೆ, ತೊಯ್ದ ಮಣ್ಣಿಗೆ ಮಾತ್ರ ಸುಗಂಧ ಬೆರೆಸಿದಂತೆ ತೋರುತ್ತಿತ್ತು.

ಹುಚ್ಚುನಾಯಿ ರೋಗ

ಡಾ. ಆರ್. ಸಿ. ಅಗಡಿ

ವೈದ್ಯಶಾಸ್ತ್ರದಲ್ಲಿ ಇಂದು ಗಣನೀಯ ಪ್ರಗತಿ ಸಾಧಿಸಿದ್ದೇವೆ. ಸಾಂಕ್ರಾಮಿಕ ರೋಗಗಳಾದ ಕಾಲರಾ, ಪ್ಲೇಗು, ಪೈಲಿ ಬೇನೆ ಮುಂತಾದವುಗಳನ್ನು ತಡೆಗಟ್ಟಿದ್ದೇವೆ. ಕ್ಯಾನ್ಸರ್ ಹೃದಯ ಬೇನೆಯನ್ನು ಗುಣಪಡಿಸಲು ಸಫಲರಾಗಿದ್ದೇವೆ. ಕಣ್ಣು, ಎಲಬು, ಮೂತ್ರಪಿಂಡ, ಅಷ್ಟೇ ಏಕೆ? ಹೃದಯ ಹಾಗೂ ಮೆದುಳನ್ನು ಕೂಡಾ ಕಸಿಮಾಡುವಲ್ಲಿ ಯಶಸ್ವಿಯಾಗಿದ್ದೇವೆ. ಆದರೆ ನಾಯಿ ಕಡಿದ ನಂತರ ಬರುವ 'ಹುಚ್ಚು ನಾಯಿ ರೋಗ'ವು ಮಾತ್ರ ವಿಜ್ಞಾನಿಯ ಕೈಗೆ ಸಿಗದಾಗಿದೆ.

ನಾಯಿ ಕಡಿದ ನಂತರ ಬರುವ ಈ ಹುಚ್ಚು ರೋಗವು ಪ್ರತಿವರ್ಷ ಸಾವಿರಾರು ಜನರನ್ನು ಬಲಿ ತೆಗೆದುಕೊಳ್ಳುತ್ತಿದೆ. ಒಂದು ಅಂದಾಜಿನ ಪ್ರಕಾರ ನಮ್ಮ ರಾಜ್ಯದಲ್ಲಿ ಪ್ರತಿವರ್ಷ ೨೫೦ ರಿಂದ ೩೦೦ಕ್ಕೂ ಹೆಚ್ಚು ಜನ ಇದರಿಂದ ಮರಣ ಹೊಂದುತ್ತಾರೆ. ಪ್ರತಿ ೨೦೦೦ ರೋಗಿಗಳಿಗೆ ಸರಕಾರಿ ಆಸ್ಪತ್ರೆಗಳಲ್ಲಿ ಒಬ್ಬ ಹುಚ್ಚು ನಾಯಿ ರೋಗಿ ಇರುವುದು ಕಂಡುಬಂದಿದೆ.

ಈ ರೋಗವು ಮೊದಲು ಪ್ರಾಣಿಗಳಲ್ಲಿ ಬಂದು ಅವು ಮನುಷ್ಯನಿಗೆ ಕಡಿದರೆ ಅವನಿಗೆ ರೋಗವು ಅಂಟುತ್ತದೆ. ಕೇವಲ ನಾಯಿ ಕಡಿದರೆ ಅಷ್ಟೇ ಅಲ್ಲ. ಬೆಕ್ಕು, ಕುದುರೆ, ನರಿ, ತೋಳ, ಇಣಚಿ, ಮಂಗ, ತೋಗಲಬಾವಲಿ ಮತ್ತಿತರ ಪ್ರಾಣಿಗಳು ಕಡಿಯುವದರಿಂದಲೂ ಹುಚ್ಚು ನಾಯಿ ರೋಗವು ಬರುತ್ತದೆ. ಕಾಡು ಬೆಕ್ಕು, ಕಾಡು ನಾಯಿ, ತೋಳಗಳು ಸಾಕು ಪ್ರಾಣಿಗಳನ್ನು ಕಡಿದರೆ ಅವಕ್ಕೆ ಈ ರೋಗ ಅಂಟುತ್ತದೆ.

ರೋಗ ಬರುವ ಬಗೆ

ಹುಚ್ಚು ಹಿಡಿದ ನಾಯಿಯ ಅಥವಾ ಪ್ರಾಣಿಯ ಜೊಲ್ಲಿನಲ್ಲಿ ಇರತಕ್ಕ ಕಣ್ಣಿಗೆ ಕಾಣದಷ್ಟು ಸೂಕ್ಷ್ಮವಿರುವ ವಿಷಾಣುಗಳು ನಾಯಿ ಕಚ್ಚಿದಾಗ ಗಾಯದ ಮೂಲಕ ದೇಹವನ್ನು ಸೇರಿ ಅಲ್ಲಿಂದ ನರಗಳ ಮೂಲಕ ಮೆದುಳನ್ನು ಸೇರಿ ರೋಗವನ್ನುಂಟು ಮಾಡುತ್ತವೆ. ಕೇವಲ ಕಚ್ಚುವದರಿಂದಷ್ಟೇ ಅಲ್ಲ, ಮೈಮೇಲೆ ಚಿಕ್ಕ ಪುಟ್ಟ ಗಾಯವಿದ್ದರೆ ಅದನ್ನು ಹುಚ್ಚು ಹಿಡಿದ ಪ್ರಾಣಿ ನೆಕ್ಕಿದಾಗಾಗಲಿ, ಮನುಷ್ಯನ ಕೈಗೆ ನಾಯಿಯ ಜೊಲ್ಲು ಹತ್ತಿದಾಗ ಅದೇ ಕೈಯಿಂದ ಕಣ್ಣು, ಮೂಗು, ಬಾಯಿ, ಮತ್ತು ಗುಪ್ತಾಂಗವನ್ನು ತಿಕ್ಕಿಕೊಂಡಾಗ ಅವುಗಳ ತೆಳುವಾದ ಒಳಪದರ ಮುಖಾಂತರ ವಿಷಾಣು ದೇಹವನ್ನು ಸೇರುತ್ತವೆ. ಇಲ್ಲವೇ ಹುಚ್ಚು ಪ್ರಾಣಿಯ (ಉದಾ: ಎಮ್ಮೆ ಅಥವಾ ಆಕಳ) ಹಾಲನ್ನು ಕಾಯಿಸದೇ ಕುಡಿದರೂ ರೋಗ ಬರುತ್ತದೆ.

ರೋಗದ ವೈಶಿಷ್ಟ್ಯ

ಹುಚ್ಚು ಪ್ರಾಣಿಗಳಾಗಲೀ ಸಾದಾ ಪ್ರಾಣಿಗಳಾಗಲೀ ಕಚ್ಚಿದ ನಂತರ ಸಾಮಾನ್ಯವಾಗಿ

ರೋಗ ಕಂಡುಬರಲು ಒಂದರಿಂದ ಮೂರು ತಿಂಗಳುಗಳು ಬೇಕಾಗುತ್ತವೆ. ಕೆಲವೊಮ್ಮೆ ಹತ್ತು ದಿನಗಳಿಂದ ಅನೇಕ ವರ್ಷಗಳು ಹಿಡಿಯಬಹುದು. ಸಾಂಕ್ರಾಮಿಕ ರೋಗಗಳಲ್ಲಿಯೇ ರೋಗ ಕಾಣುವ ಅವಧಿ ಇಷ್ಟೊಂದು ಹೆಚ್ಚು ಕಡಿಮೆಯಿರುವದು ಇದೊಂದರಲ್ಲಿ ಮಾತ್ರ.

ಆರೋಗ್ಯವಂತ ನಾಯಿಗೆ ಹುಚ್ಚುನಾಯಿ ಇಲ್ಲವೆ ಕಾಡು ಪ್ರಾಣಿ ಕಚ್ಚಿದಾಗ ಕಚ್ಚಿದ ಪ್ರಾಣಿಯಲ್ಲಿ ರೋಗ ಕಂಡುಬರಲು ಹತ್ತು ದಿನಗಳಿಂದ ಎಂಟು ತಿಂಗಳು ಹಿಡಿಯುತ್ತದೆ.

ನಾಯಿಗಳಲ್ಲಿ ರೋಗದ ಲಕ್ಷಣಗಳು ಎರಡು ವಿಧ ಇವೆ.

೧) ಉಗ್ರ ಸ್ವರೂಪದ ಹುಚ್ಚು.
೨) ಮೂಕ ಸ್ವರೂಪದ ಹುಚ್ಚು.

ಉಗ್ರ ಸ್ವರೂಪದ ಹುಚ್ಚಿನಲ್ಲಿ ಸಹಜವಾದ ನಡವಳಿಕೆಯಲ್ಲಿ ಹೇರಳ ಬದಲಾವಣೆಯಾಗುತ್ತದೆ. ಸಾಕುನಾಯಿ ತನ್ನ ಒಡೆಯನ ಧ್ವನಿ ಗುರುತಿಸದು, ಬೇರೆ ನಾಯಿಗಳನ್ನು ಕಂಡರೆ ಹಟಮಾರಿತನ, ಸಿಕ್ಕವರನ್ನೇ ಕಚ್ಚುವದು, ಮೈ ಮೇಲೆ ಏರಿ ಹೋಗುವದು, ಅತ್ತಿತ್ತ ಓಡಾಡುವದು, ಮೈಯನ್ನು ತಾನೇ ಪರಚಿಕೊಳ್ಳುವದು. ತಿನ್ನಬಾರದ್ದನ್ನೆಲ್ಲಾ (ಉದಾ: ಕಲ್ಲು, ಮಣ್ಣು ಕಟ್ಟಿಗೆ, ಅರಿವೆ) ತಿನ್ನುತ್ತದೆ.

ಧ್ವನಿಯಲ್ಲಿ ಬದಲಾವಣೆ: ಕರ್ಕಶವಾದ ಧ್ವನಿಯಲ್ಲಿ ಒದರುವದು ಇದರ ಪ್ರಮುಖ ಲಕ್ಷಣ. ರೋಗದ ಕೊನೆಗೆ ನಾಯಿಯು ಕೆಳದವಡೆಗೆ ಪಾರ್ಶ್ವವಾಯು ಹೊಡೆದು ಬಾಯಿ ತೆರೆದಿರುವದು. ತನ್ನಿಂದ ತಾನೇ ಜೊಲ್ಲು ಸೋರುತ್ತದೆ. ಹೀಗೆ ಆರೆಂಟು ದಿನ ಸಣ್ಣ ಧ್ವನಿಯಲ್ಲಿ ಒದರುತ್ತದೆ.



ರೋಗಿ ನೀರನ್ನು ನೋಡಿದಾಗ ಗಂಟಲಿನ ಸ್ನಾಯುಗಳಲ್ಲಿ ಸೆಳೆತವುಂಟಾಗುತ್ತದೆ.

ರೋಗದ ಮೊದಲ ಹಂತ : ನಾಯಿಯು ನೀರಡಿಸಿ ಆತುರದಿಂದ ನೀರು ಕುಡಿಯುತ್ತದೆ. ಆದರೆ ಮನುಷ್ಯರಲ್ಲಿ ಕಾಣುವ, ನೀರನ್ನು ನೋಡಿದೊಡನೆ ಅಂಜುವ, ಲಕ್ಷಣ ಇದರಲ್ಲಿ ಕಂಡುಬರುವುದಿಲ್ಲ. ಕೆಂಪಾದ ಕಣ್ಣು, ಸೆಟೆದ ಕೂದಲು, ಸುಕ್ಕುಗಟ್ಟಿದ ಹಣೆ. ಈ ನಾಯಿಯನ್ನು ಕಟ್ಟಿ ಹಾಕಬೇಕು. ರೋಗವು ಮುಂದುವರೆದಂತೆ ಕೈಕಾಲು ದುರ್ಬಲವಾಗಿ ಪಾರ್ಶ್ವವಾಯು ಹೊಡೆದು ಕಾಲುಗಳನ್ನು ಎಳೆಯುತ್ತಾ ನಡೆಯುತ್ತದೆ. ಕೊನೆಗೆ ಉಸಿರಾಟದಲ್ಲಿ ಅಡ್ಡಿಯಾಗಿ ಸಾಯುತ್ತದೆ.


ಮೂಕ ಸ್ವರೂಪದ ಹುಚ್ಚಿನಲ್ಲಿ ಉಗ್ರ ಸ್ವರೂಪದ ಹುಚ್ಚಿನಲ್ಲಿ ಕಂಡುಬರುವ ಚಟಪಟಿತನ, ಸಿಟ್ಟು, ಓಡಾಟ ಇರುವುದಿಲ್ಲ. ಕತ್ತಿಗೆ ಮತ್ತು ಗಂಟಲಿನ ಸ್ನಾಯುಗಳಿಗೆ ಪಾರ್ಶ್ವವಾಯು ಹೊಡೆಯುವುದರಿಂದ ಬಾಯಿ ತೆರೆದೇ ಇದ್ದು ಜೊಲ್ಲು ಸುರಿಯುತ್ತದೆ. ಮಂದವಾಗಿ, ಮಂಚದಡಿ, ಕುರ್ಚಿ, ಟೇಬಲ್ ಕೆಳಗೆ, ಬಂಡೆ ಸಂದುಗಳಲ್ಲಿ, ಕತ್ತಲು ಸ್ಥಳದಲ್ಲಿ ಮಲಗುತ್ತದೆ. ಹೀಗೇ ಮೂರು ದಿನ ಬಿದ್ದು ಸಾಯುತ್ತದೆ.

ಮನುಷ್ಯರಲ್ಲಿ ರೋಗದ ಲಕ್ಷಣಗಳು

ಹುಚ್ಚು ನಾಯಿಯೇ ಇರಲಿ ಸಾದಾ ನಾಯಿಯೇ ಇರಲಿ ಕಚ್ಚಿದ ನಂತರ ಕೆಲವೊಮ್ಮೆ ಯಾವುದೇ ವೈದ್ಯಕೀಯ ಉಪಚಾರ ನಡೆಯದಿದ್ದರೂ ಗಾಯಗಳು ಮಾಯುತ್ತವೆ. ಕೆಲ ದಿನಗಳ ತರುವಾಯ ಸಾಮಾನ್ಯವಾಗಿ ಒಂದರಿಂದ ಮೂರು ತಿಂಗಳ ಅವಧಿಯಲ್ಲಿ ಕಚ್ಚಿದ ಸ್ಥಳದಲ್ಲಿ ನೋವು, ತುರಿಕೆ, ಕೆಂಪಾಗುವುದು. ರೋಗವನ್ನು ಮೂರು ಹಂತಗಳಲ್ಲಿ ವಿಂಗಡಿಸಬಹುದು.

ಮೊದಲನೇ ಹಂತ: ಇದರಲ್ಲಿ ರೋಗಿಯು ನಿದ್ದೆ ಬಾರದಿರುವುದು, ಹಸಿವಿಲ್ಲದಿರುವುದು, ಚಡಪಡಿಕೆ, ಸುಸ್ತು, [illegible], ಗಂಟಲು ನೋವು, ಬಾಯಿ ಒಣಗುವುದು, ಆಹಾರ ನುಂಗಲು ತೊಂದರೆ, ಧ್ವನಿಯಲ್ಲಿ ಬದಲಾವಣೆ.

ಉದ್ರೇಕದ ಹಂತ: ರೋಗಿಯು ಕೆಲವು ದಿನ ಕೂಡಾ ಸುಮ್ಮನೇ ಕೂಡುವುದಿಲ್ಲ. ಕೈಕಾಲು ನಡುಗುವುದು, ಅತ್ತಿತ್ತ ಓಡಾಡುವುದು, ಮೈಕೈ ನೋವು, [illegible] 'ನೀರು ನೀರು' ಎಂದು ಕೂಗುವುದು. ಆದರೆ ನೀರು ಕುಡಿಯುವಾಗ ತೊಂದರೆಯಾಗಿ ಗಂಟಲಿನ ಸ್ನಾಯುಗಳಲ್ಲಿ ಸೆಳೆತ ಬಂದು ನೋವಾಗುತ್ತದೆ. ಕೊನೆಗೆ ನೀರನ್ನು ನೋಡಿದರೆ ಅಥವಾ ಅದರ ಹೆಸರು ಕೇಳಿದರೆ ಇಲ್ಲವೇ ಅದರ ಸ್ಪರ್ಶಕ್ಕೂ ಗಂಟಲಿನ ಸ್ನಾಯುಗಳಲ್ಲಿ ಸೆಳೆತ ಬರುತ್ತದೆ. ಉಸಿರು ಕಟ್ಟಿದಂತಾಗಿ ಅಂಜಿ ಚೀರುತ್ತಾನೆ. ಅಂತೆಯೇ ಇದಕ್ಕೆ 'ಜಲಭಯ' ಅಥವಾ '[illegible]' ಅನ್ನುತ್ತಾರೆ. ರೋಗವು ಮುಂದುವರೆದಂತೆ [illegible]



೧) ಕೇಂದ್ರಬಿಂದು. ೨) ನೆಗ್ರಿ ಬಾಡೀಜ್ ೩) [illegible]

ಸಪ್ಪಳ, ಗದ್ದಲ. ತಂಪು ಗಾಳಿ, ಇಲ್ಲವೇ ಪ್ರಕಾಶಮಾನವಾದ ಬೆಳಕಿನ ಸ್ಥಾನಗಳಲ್ಲಿ ನಿಶ್ಚಿತ ಬಂದು ಚಡಪಡಿಸುತ್ತಾನೆ. ಕಣ್ಣಲ್ಲಿ ನೀರು, ಮತ್ತು ಬೆವರು, ನಾಯಿಯ ಫೇನು, ಬೇರೆಯವರನ್ನು ಕಚ್ಚುವನು. ಇದೇ ಹಂತದಲ್ಲಿ ಉಸಿರು ಕಟ್ಟಿ ಸಾಯುವದು ಸಾಮಾನ್ಯ. ಬಾಯಲ್ಲಿ ಸ್ನಿಗ್ಧದ್ರವ ಬರುವದರಿಂದ ಆಗಾಗ ಪಿಚಿ-ಪಿಚಿ ಉಗುಳುತ್ತಾನೆ.

ಎರಡನೆಯ ಹಂತದ ನಂತರ ಎರಡು ಮೂರು ದಿನಗಳಲ್ಲಿ ಉಸಿರಾಟದ ತೊಂದರೆ. ಆಯಾಸವಾಗಿ ಹೃದಯ ಹಾಗೂ ಉಸಿರಾಟದ ಕ್ರಿಯೆ ನಿಂತು ಪಾರ್ಶ್ವವಾಯುವಿನಿಂದ ಮರಣ ಹೊಂದುತ್ತಾನೆ. ಆಶ್ಚರ್ಯವೆಂದರೆ ಸಾಯುವ ಪೂರ್ವದಲ್ಲಿ ಕೆಲ ಸಮಯದಲ್ಲಿ ಎಲ್ಲ ಲಕ್ಷಣಗಳೂ ಇಲ್ಲವಾಗಿ ಆಹಾರ ನುಂಗಲು ಸಮರ್ಥನಾಗುತ್ತಾನೆ.

ರೋಗಕ್ಕೆ ಉಪಚಾರವಿಲ್ಲ

ಹುಚ್ಚು ನಾಯಿ ರೋಗದ ಲಕ್ಷಣಗಳು ಕಂಡರೆ "ವಿಷಾಣು"ಗಳು ನರಮಂಡಲವನ್ನು ಸೇರಿದರೆ ಯಾವ ಉಪಚಾರದಿಂದಲೂ ರೋಗ ಗುಣಪಡಿಸಲು ಸಾಧ್ಯವಿಲ್ಲ. ಸಾವು ಕಟ್ಟಿಟ್ಟ ಬುತ್ತಿ. ಈ ಕಾರಣದಿಂದಲೇ ಎಲ್ಲ ರೋಗಗಳಲ್ಲಿಯೇ ಇದು ವಿಶಿಷ್ಟ ಸ್ಥಾನವನ್ನು ಪಡೆದಿದೆ ಎಂದು ಹೇಳಬಹುದು.

ಮೂಢ ನಂಬಿಕೆ ಅಪಾಯಕರ

ನಾಯಿ ಕಡಿದ ನಂತರ ಸೂಕ್ತ ವೈದ್ಯಕೀಯ ಚಿಕಿತ್ಸೆ ಪಡೆಯುವದೊಂದೇ ಅಪಾಯವನ್ನು ನಿವಾರಿಸಲು ಇರುವ ಮಾರ್ಗ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಅದರಲ್ಲಿಯೂ ನಿರಕ್ಷರಿಗಳಲ್ಲಿ ಇಂದಿಗೂ ನಾಯಿ ಕಡಿದ ನಂತರ ತಂತ್ರ ಮಂತ್ರ, ದಾರ, ನೀರು, ಬೂದಿ, ಬಳ್ಳಿ ಹಾಕಿಸಿಕೊಳ್ಳುವದನ್ನು ಮಾಡಿ ರೋಗ ಬಂದ ಮೇಲೆ ವೈದ್ಯರ ಬಳಿಗೆ ಬರುತ್ತಾರೆ.

ಕೆಲವು ಸಲ ಹುಚ್ಚು ನಾಯಿಯೇ ಇರಲಿ, ಸಾದಾ ನಾಯಿಯೇ ಇರಲಿ, ಕಡಿದರೆ ರೋಗ ಬರುವದಿಲ್ಲ. ಸಾದಾ ನಾಯಿ ಕಡಿದರೂ ಒಮ್ಮೊಮ್ಮೆ ರೋಗ ಬರಬಹುದು. ಇಂಥ ಸಂದಿಗ್ಧ ಸ್ಥಿತಿಯನ್ನು ನಾವು ಮತ್ತಾವ ರೋಗಗಳಲ್ಲಿಯೂ ಕಾಣುವದಿಲ್ಲ. ಯಾವುದೇ ಪ್ರಾಣಿ ಕಡಿಯಲಿ ರೋಗ ಬಾರದೇ ಹೋದರೆ ತಂತ್ರ–ಮಂತ್ರ ದಾರದ ಪ್ರಭಾವವೇ ಎಂದು ತಿಳಿಯುತ್ತಾರೆ. ಮೂಢನಂಬಿಕೆಗೆ, ಮಾರು ಹೋಗದೇ ಸೂಕ್ತ ಚಿಕಿತ್ಸೆ ಪಡೆಯುವದು ಸರ್ವೋತ್ತಮ.

ಪ್ರಥಮ ಚಿಕಿತ್ಸೆ

ಕಚ್ಚಿದ ನಾಯಿ ಯಾವದೇ ಇರಲಿ ಗಾಯವನ್ನು ಸಬಕಾರದ ನೀರು ಪೋಟ್ಯಾಸಿಯಂ ಪರಮ್ಯಾಂಗನೇಟಿನ ನೀರು, ಡೆಟಾಲ್ ಕೊನೆಗೆ ಬಿಸಿನೀರಿನಿಂದಾದರೂ ಚೆನ್ನಾಗಿ ತೊಳೆಯಬೇಕು. ನಾಯಿಯ ಜೊಲ್ಲು, ಹೊಲಸು ಪದಾರ್ಥಗಳು ಗಾಯದಲ್ಲಿ ಉಳಿಯದಂತೆ ನೋಡಿಕೊಳ್ಳಬೇಕು.

ಕಚ್ಚಿದ ನಾಯಿಯು ಬಿಡಾಡಿಯೋ, ಹುಚ್ಚಿನದೋ, ಅಡವಿಯದೋ, ಅಥವಾ ಸಾಕಿದ್ದೋ ನಿರ್ಧರಿಸಬೇಕು.

ತಜ್ಞ ವೈದ್ಯರ ಸಲಹೆ ಪಡೆಯುವದನ್ನು ಮರೆಯಬಾರದು.

ಚುಚ್ಚುಮದ್ದಿನ ಅವಶ್ಯಕತೆ ಯಾವಾಗ?

ಕಡಿದ ನಾಯಿ ಹತ್ತು ದಿನಗಳಲ್ಲಿ ಸತ್ತರೆ ಇಲ್ಲವೇ ಅದಕ್ಕೆ ಹುಚ್ಚು ಹಿಡಿದರೆ,

ಬಿಡಾಡಿ, ಮಾಲಕರಿಲ್ಲದ, ಅಥವಾ ಕಡಿದ ನಾಯಿ ಕಾಣೆಯಾದರೆ,

ಮುಖ, ಕುತ್ತಿಗೆ, ಎದೆ, ಕೈ ಬೆರಳುಗಳಿಗೆ ಕಚ್ಚಿದಾಗ.

ನಾಯಿ ಕಡಿಯದಿದ್ದರೂ ಚುಚ್ಚುಮದ್ದಿನ ಅವಶ್ಯಕತೆ

ಹುಚ್ಚು ನಾಯಿಯ ಜೊಲ್ಲು ಮೈಮೇಲಿನ ಗಾಯಕ್ಕೆ ಹತ್ತಿದರೆ,

ಕೈಗೆ ಜೊಲ್ಲು ಹತ್ತಿದಾಗ ಅದೇ ಕೈಯಿಂದ ಬಾಯಿ, ಕಣ್ಣು, ಮೂಗು, ಗುದದ್ವಾರ ತಿಕ್ಕಿಕೊಂಡರೆ,

ಹುಚ್ಚು ನಾಯಿ ಕಡಿದ ಆಕಳು ಅಥವಾ ಎಮ್ಮೆಯ ಹಾಲನ್ನು ಕಾಯಿಸದೇ ಕುಡಿದರೆ,

ಸಾಕು ನಾಯಿ ಕಡಿದರೆ ರೋಗ ಬರುವದೇ?

ಸಾಕು ನಾಯಿ ಕಡಿದಾಗ ಏನೂ ಆಗದೆಂದು ನಿರ್ಲಕ್ಷ್ಯ ತೋರಿ ಕೆಲ ದಿನಗಳ ನಂತರ ರೋಗ ಬಂದು ಸತ್ತ ಉದಾಹರಣೆಗಳು ಸಾಕಷ್ಟು ಉಂಟು. ಕಚ್ಚಿದ ನಾಯಿ ಆರೋಗ್ಯವಂತವಾಗಿ ಕಂಡರೂ "ವಿಷಾಣು"ಗಳು ಜೊಲ್ಲಿನಲ್ಲಿರಬಹುದು. ಕಾರಣ ನಾಯಿಗೆ ರೋಗವಿರಲಿ, ಇಲ್ಲದಿರಲಿ, ನೀವು [illegible] ತೆಗೆದುಕೊಳ್ಳದೇ ವೈದ್ಯರ ಸಲಹೆ ಪಡೆಯಬೇಕು.

ಹುಚ್ಚು ನಾಯಿ ಕಡಿದರೆ ರೋಗ ಬಂದೇ ತೀರುವದೇ?

ಕೆಲವು ಸಲ ಹುಚ್ಚು ನಾಯಿ ಕಡಿದರೂ ರೋಗ ಬರದೇ ಇರಬಹುದು. ಜೊಲ್ಲಿನಲ್ಲಿ ರೋಗಾಣುಗಳು ಇರದೇ ಇದ್ದಾಗ ಕಚ್ಚಿದರೂ ರೋಗ ಬರುವದಿಲ್ಲ. ರೋಗ ಬರುವದು ಜೊಲ್ಲಿನಲ್ಲಿರತಕ್ಕ ವಿಷಾಣುಗಳು, ಮೈಮೇಲಿನ ಗಾಯದ [illegible] ತೀವ್ರತೆ [illegible] "ವಿಷಾಣು" ಸಂಖ್ಯೆ [illegible] ಸಮೀಪದ ಭಾಗ ಮುಂತಾದ ಸಂಗತಿಗಳನ್ನು ಅವಲಂಬಿಸಿದೆ.

ಹುಚ್ಚು ನಾಯಿ ರೋಗವನ್ನು ತಡೆಗಟ್ಟುವ ವಿಧಾನ

ಕಡಿದ ಮೇಲೆ ಗಾಯವನ್ನು ಚೆನ್ನಾಗಿ ತೊಳೆಯಬೇಕು.

ಕಚ್ಚಿದ ನಾಯಿಯನ್ನು ಕೊಲ್ಲದೇ ೧೦ ದಿನಗಳ ವರೆಗೆ ಕಾಯಬೇಕು.

ಬೆಕ್ಕು, ನರಿ ಮುಂತಾದ ಪ್ರಾಣಿಗಳು ಕಡಿದರೂ ಉಪಚಾರ ಪಡೆಯಬೇಕು.

ಸಾಕು ನಾಯಿ, ಸಾಕು ಬೆಕ್ಕಿಗೆ ಹುಚ್ಚು ಹಿಡಿದ ನಾಯಿ ಕಡಿದರೆ ಅವು ಎಷ್ಟೇ ಪ್ರೀತಿಯವಿರಲಿ ಅವನ್ನು ಕೊಲ್ಲಲೇಬೇಕು.

ಮಕ್ಕಳನ್ನು ನಾಯಿಗಳ ಜೊತೆ ಆಡಲು ಬಿಡಬಾರದು.

ಮುದ್ದಿನ ಬೆಕ್ಕು, ನಾಯಿ ನಿಮ್ಮ ಮೈಮೇಲಿನ ಗಾಯಗಳನ್ನು ನೆಕ್ಕಿದಾಗ ವೈದ್ಯಕೀಯ ಚಿಕಿತ್ಸೆ ಪಡೆಯಬೇಕು.

ನಾಯಿಗಳಲ್ಲಿ ರೋಗ ತಡೆಗಟ್ಟುವದು

ಬಿಡಾಡಿ ನಾಯಿಗಳನ್ನು ಕೊಲ್ಲಬೇಕು.

ಸಾಕು ನಾಯಿಗೆ ಲೈಸೆನ್ಸ್ ತೆಗೆಸಬೇಕು. ಅವಕ್ಕೆ ಚುಚ್ಚು ಮದ್ದನ್ನು ಹಾಕಿಸಬೇಕು.

ಹುಚ್ಚು ನಾಯಿ ಸಾಕಿದ ನಾಯಿಗೆ ಕಡಿದರೆ ಅದನ್ನು ಕೊಲ್ಲಬೇಕು.

ನಾಯಿ ಜೊತೆಗೆ [illegible] ಅವರ ಬಾಯಿಗೆ ಚೀಲ ಹಾಕಬೇಕು.

ರೋಗದ ನಾಯಿ ಸತ್ತಾಗ ನರಿ, ಮುಂತಾದ ಪ್ರಾಣಿಗಳಿಗೆ ಅದು ಸಿಗದಂತೆ ಎಚ್ಚರವಹಿಸಬೇಕು.

ರೋಗಿಯನ್ನು ಉಪಚರಿಸುವವರಿಗೆ ಎಚ್ಚರಿಕೆ

ರೋಗಿಯ ಸಂಪರ್ಕ ಬಹಳ ಅಪಾಯಕಾರಿಯಾದುದರಿಂದ ಅವನ ಜೊಲ್ಲಿನೊಂದಿಗೆ ಯಾವುದೇ ರೂಪದಲ್ಲಿ ಯಾರಿಗೇ ಸಂಪರ್ಕ ಬರದಂತೆ ನೋಡಿಕೊಳ್ಳಬೇಕು.

ಮೈಮೇಲೆ ಗಾಯಗಳಿದ್ದರೆ ರೋಗಿಯ ಹತ್ತಿರ ಹೋಗಬಾರದು.

ರೋಗಿಯ ಪಾತ್ರೆ ಅರಿವೆ, ಹಾಸಿಗೆಯನ್ನು ಕ್ರಿಮಿನಾಶಕ ದ್ರಾವಣದಿಂದ ತೊಳೆಯಬೇಕು.

ಮೈಗೆ ಹೊರ ಅಂಗಿ (ಗೌನ್) ಕೈಗೆ ರಬ್ಬರಿನ ಚೀಲಗಳನ್ನು ಉಪಯೋಗಿಸಬೇಕು.

ಚುಚ್ಚು ಮದ್ದನ್ನು ತಗೆದುಕೊಳ್ಳುವವರಿಗೆ ಸಲಹೆಗಳು

ಚುಚ್ಚು ಮದ್ದನ್ನು ತೆಗೆದುಕೊಳ್ಳುವ ಅವಧಿಯಲ್ಲಿ ಮತ್ತು ಚಿಕಿತ್ಸೆ ಮುಗಿದ ನಂತರ ಒಂದು ತಿಂಗಳವರೆಗೆ ಮದ್ಯಪಾನ ಮಾಡಬಾರದು.

ಮಾನಸಿಕ ಹಾಗೂ ದೈಹಿಕ ಶ್ರಮದ ಕೆಲಸ ಮಾಡಬಾರದು.

ನಿದ್ದೆಗೆಡಬಾರದು, ಸಂಪೂರ್ಣ ವಿಶ್ರಾಂತಿ ತೆಗೆದುಕೋಬೇಕು.

ಕಾರ್ಟಿಕೋ ಸ್ಟಿರಾಯಿಡ್‌ನಂಥ ಔಷಧಗಳನ್ನು ಸೇವಿಸಬಾರದು.

ಚುಚ್ಚುಮದ್ದನ್ನು ಅರ್ಧಕ್ಕೇ ನಿಲ್ಲಿಸದೆ ಸಂಪೂರ್ಣ ತೆಗೆದುಕೊಳ್ಳಬೇಕು.

ಮಿನಿ ಕಥೆ

ಪ್ರಿಯ ಪುತ್ರಿ

ಜನರಿಂದ ತುಂಬಿ ತುಳುಕುತ್ತಿತ್ತು ಆ ಬಸ್ಸು.

ಪೆರೌಂಟ್ ರೋಡಿನಲ್ಲೇ ಆ ಬಡಪಾಯಿ ಬಸ್ಸನ್ನೇರಿದರು, ಭರತನನ್ನು ಜ್ಞಾಪಕಕ್ಕೆ ತಂದರು– ಪಾಪ, ಚಪ್ಪಲಿ ಕಿತ್ತು ಹೋಯಿತಂತೆ. ಇನ್ನು ಉಪಯೋಗಿಸಲಾಗದು ಎಂಬ ಸ್ಥಿತಿಗೆ ಬಂದಿತ್ತು; ಹೊಲಿಸಲು ಸಮಯ ಸಿಗದಂತೆ ಬಸ್ ಬಂದುಬಿಟ್ಟಿರಬೇಕು. ಅವಸರದಿಂದ ಬಲಗೈಯಲ್ಲಿ ಒಂದು ಇಂಗು ಜಾಹೀರಾತುಳ್ಳ ಕೈಚೀಲವನ್ನೂ ಎಡಗೈಯಲ್ಲಿ ಜೋಡಿ ಚಪ್ಪಲಿಯನ್ನೂ ಹಿಡಿದು ಅಷ್ಟು ಜನಜಂಗುಳಿಯಲ್ಲಿ ನುಗ್ಗಿ ಏರಿಬಿಟ್ಟರು.

"ಛೇ... ಏನಯ್ಯಾ ಸ್ವಲ್ಪ ಕೂಡ ಮ್ಯಾನರ್ಸ್ ಇಲ್ಲವೇ...ಕೊಳಕು ಮನುಷ್ಯ..."

"ಸ್ವಾಮೀ, ಆ ಚಪ್ಪಲಿ ತೆಗೆದು ತಲೇಲಿ ಇಟ್ಟುಕೊಳ್ಳಿ. ಸ್ವಲ್ಪ ಜಾಗ ಉಳಿಯುತ್ತದೆ..."

ಒಬ್ಬೊಬ್ಬರಾಗಿ ಎಲ್ಲರೂ ಆತನ ತಲೆ ತಿನ್ನಲಾರಂಭಿಸಿದರು. ಸ್ವಲ್ಪ ಸಂಕೋಚದಿಂದ ಅವರು ಅದನ್ನೆಲ್ಲಾ ಅನುಭವಿಸಬೇಕಾಗಿತ್ತು.

"ಅಪ್ಪಾ... ಏನಪ್ಪಾ ಇದು? ನಾಲ್ಕು ಜನರಿಗೆ ತೊಂದರೆಯಾಗುವಂತೆ ಹೀಗೇನಾ ತರೋದು? ಕೊಡಿ... ಚಪ್ಪಲಿ ನಾನು ಹಿಡಿದುಕೊಳ್ಳುತ್ತೇನೆ .." ಗಿಣಿಯ ಧ್ವನಿಯೆಲ್ಲವೂ ಆ ಚೆಲುವೆ ಯುವತಿಯ ಕೊರಳಲ್ಲಿ ಸೇರಿಯಾಗಿರಬೇಕು. ಮಿಂಚಿನಂತಿದ್ದ ಕಾಲೇಜ್ ವಿದ್ಯಾರ್ಥಿನಿ. ಆಡಂಬರವಾಗಿ ಕೆಂಬಣ್ಣದ ಷಿಫಾನ್ ಸೀರೆ ಉಟ್ಟಿದ್ದಳು. ಅದಕ್ಕೆ ಒಪ್ಪುವಂತೆ ಕುತ್ತಿಗೆ, ಕಿವಿಗಳಲ್ಲಿ ಕ್ರಿಸ್ಟಲ್ಸ್ ಮಿಂಚಿದವು. ಶಾಂಪೂ ಹಾಕಿದ್ದ ಕೂದಲು, ಕಬ್ಬಿಣದ ಸರಳುಗಳನ್ನು ಬಳಸಿ ತೋಳಿಗಿಂತ ಕೆಳಗಿಳಿದಿದ್ದವು,

"ಬೇ...ಬೇಡಮ್ಮ... ಸೀರೆ ಹಾಳಾಗುತ್ತೆ. ನಾನೇ ಹಿಡಿದುಕೊಳ್ಳುತ್ತೇನೆ," ಜನಸಂದಣಿಯ ಮಧ್ಯೆ ಅವರು ತಿಣುಕಿ ಹೇಳಿದರು.

"ಸರಿಹೋಯ್ತು. ಕೊಡೀ ಡ್ಯಾಡಿ. ನಮ್ಮ ಊರಿನಂತೆ ಅಲ್ಲ. ಈ ನಗರ," ಎಂದು ಹೇಳಿ ಕಿಲಕಿಲ ನಕ್ಕಳು. ತಟಕ್ಕನೆ ಅವರ ಕೈಗಳಿಂದ ಚಪ್ಪಲಿಗಳನ್ನು ಕಸಿದುಕೊಳ್ಳುವಂತೆ ಪಡೆದುಕೊಂಡಳು.

ಇಷ್ಟು ಹೊತ್ತೂ, ಮುದುಕನ ಕೈಯಲ್ಲಿ ಆ ಚಪ್ಪಲಿ ಇದ್ದಾಗ ಖಂಡನ, ವ್ಯಂಗ್ಯ ಆಡಿದ ಅದೇ ಗುಂಪು, ಈಗ ಹರೆಯದ ಯುವತಿಯ ಕೈಯಲ್ಲಿ–ಅದೂ ಕಾಲೇಜ್ ವಿದ್ಯಾರ್ಥಿನಿಯ ಕೈಯಲ್ಲಿ– ಅದೇ ಧೂಳು ಹತ್ತಿದ ಚಪ್ಪಲಿ ಇರುವಾಗ ಎಷ್ಟು ಭವ್ಯವಾಗಿ ನಾಜೂಕಾಗಿ ಅಡ್ಜಸ್ಟ್ ಮಾಡಿಕೊಳ್ಳುತ್ತಾರೆ! ಸ್ವಲ್ಪ ಮಾಗುಳ್ಳಕ್ಕು ಅವಳು ಕೇಳಿಕೊಂಡರೆ ಅವರು ಅದನ್ನು ತೆಗೆದು ಹಿಡಿದುಕೊಳ್ಳುವುದನ್ನೂ ಲೆಕ್ಕಿಸರೋ ಏನೋ!

ಸೈದಾಪೇಟೆಯಲ್ಲಿ ಬಸ್ ನಿಂತಾಗ, ಆ ವೃದ್ಧ ಇಳಿದರು. ಆ ಹುಡುಗಿಯೂ ಇಳಿದಳು.

"ಇದೋ ರಾಜಮಾನ್ರೇ, ಈ ಜನರ ಬುದ್ಧಿ ನನಗೆ ಗೊತ್ತು! ಜನಕ್ಕೆ ತಕ್ಕಂತೆ ಮಾತೂ ಬದಲಾಗುವುದು. ಅದಕ್ಕೇ ನಿಮ್ಮನ್ನು 'ಅಪ್ಪಾ' ಎಂದು ಕೂಗಿದೆ! ಒಳ್ಳೇ ವೇಳೆ ನೀವು ಅದನ್ನು ತಿರಸ್ಕರಿಸಿ ನಿಮ್ಮನ್ನು ನಗೆಪಾಟಲುಗೊಳಿಸದೆ ಒಪ್ಪಿಕೊಂಡು ಬಿಟ್ಟಿರಿ," ಎಂದಳು ಆ ಚೆನ್ನೆ, ಚಪ್ಪಲಿ ಹಿಂತಿರುಗಿಸುತ್ತಾ. ಕೃತಜ್ಞತೆಯಿಂದ ಅರಳಿತು ಅವರ ಮುಖ.

ತಮಿಳಿನಲ್ಲಿ: **ವೇದಾ ಗೋಪಾಲ್**
ಕನ್ನಡಕ್ಕೆ: **ಡಾ. ಅಶೋಕ ಕುಮಾರ್**

ರಂಗಭೂಮಿಯಲ್ಲಿಷ್ಟು ದಿನ

ಶಂ. ಬಾ. ಮುನಗೋಳಿ

ಗದಗಿನ ಮುಕ್ಕಾಮು ಮುಗಿದ ಕಂಪನಿ ಬೆಳಗಾವಿಗೆ ಹೋದಾಗ ಅಲ್ಲಿಯೂ ಈ ಮಂಡಳಿಯು ಜಯಭೇರಿ ಹೊಡೆಯಿತು. ಅಲ್ಲಿಯ ಶಿವಾನಂದ ಥಿಯೇಟರಿನಲ್ಲಿ ಅಂಬಾ ಪ್ರಾಸಾದಿಕ ಮಂಡಳಿಯು ಕನ್ನಡ ಪ್ರಯೋಗಗಳು ನಡೆಯುತ್ತಿದ್ದಾಗಲೇ ಹೊಸ ಥಿಯೇಟರಿನಲ್ಲಿ ಮಹಾರಾಷ್ಟ್ರದ ಆನಂದ ಸಂಗೀತ ಮಂಡಳಿಯವರು ತಮ್ಮ ಮರಾಠೀ ನಾಟಕಗಳನ್ನಭಿನಯಿಸುತ್ತಿದ್ದರು. ಸೋಜಿಗದ ಮಾತೆಂದರೆ ಒಂದು ಶನಿವಾರ ಶಿವಾನಂದ ಥಿಯೇಟರಿನಲ್ಲಿ 'ರಾಯರ ಸೊಸೆ' ಕನ್ನಡ ನಾಟಕ, ಹೊಸ ಥಿಯೇಟರಿನಲ್ಲಿ 'ಪಂತಾಂಚಿ ಸೂನ' ಮರಾಠಿ ಪ್ರಯೋಗ. ಶಿವಾನಂದ ಥಿಯೇಟರು ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿದ್ದಾಗ ಹೊಸದರಲ್ಲಿ ಕೇವಲ ೬-೮ ಜನ ಮಾತ್ರ ಪ್ರೇಕ್ಷಕರಿದ್ದುದರಿಂದ ತಮ್ಮ ಕಾರ್ಯಕ್ರಮವನ್ನು ರದ್ದುಪಡಿಸಿ ಆ ಕಂಪನಿಯ ನಟವರ್ಗವೆಲ್ಲ ಶಿವಾನಂದ ಥಿಯೇಟರಿಗೆ ಬಂದಿತ್ತು.

ಬೆಳಗಾವಿಯಲ್ಲಿಯೇ 'ಲಾಲಸಾ' ನಾಟಕದ ಪ್ರಥಮ ಪ್ರಯೋಗವನ್ನು ಗೊತ್ತುಪಡಿಸಲಾಗಿತ್ತು. ಹುಬ್ಬಳ್ಳಿಯ ಹನುಮಂತರಾವ್ ದೇಸಾಯಿಯವರು ಈ ನಾಟಕದ ಕರ್ತೃ.

ಬೆಳಗಾವಿಯಿಂದ ಕಂಪನಿ ಗೋಕಾಕಕ್ಕೆ ತೆರಳಿ ಅಲ್ಲಿ ಒಂದೂವರೆ ತಿಂಗಳು ಯಶಸ್ವಿ ಪ್ರಯೋಗಗಳನ್ನು ನಡೆಸಿತು. ಗೋಕಾಕ ಮಿಲ್ಲಿನ ಅಧಿಕಾರಿಗಳಲ್ಲೊಬ್ಬರು ಮಡಿಮಾನ್ ಸದಾಶಿವರಾಯರು. ಸದಾಶಿವರಾಯರು ಪ್ರತಿಯೊಂದು ಪ್ರಯೋಗಕ್ಕೆ ನೂರಾರು ಜನ ಕಾರ್ಮಿಕರನ್ನು ಇತರ ಸಹೋದ್ಯೋಗಿಗಳನ್ನೂ ನಾಟಕಕ್ಕೆ ಕರೆದುಕೊಂಡು ಬರುತ್ತಿದ್ದರು. ಆ ಜನರು ಎಲ್ಲಿ ಕುಳಿತುಕೊಳ್ಳುವರೋ ಅವುಗಳನ್ನು ನಾವು ಬರೆದುಕೊಂಡು ಮರುದಿನ ಸದಾಶಿವ ರಾಯರಿಗೆ ಇಂತಿಷ್ಟು ಕುರ್ಚಿ, ಇಂತಿಷ್ಟು ಚಾಪೆ, ಇಂತಿಷ್ಟು ಹೆಂಗಸರು ಎಂದು ಲೆಕ್ಕ ಕೊಟ್ಟ ಕೂಡಲೆ ಲೆಕ್ಕಮಾಡಿ ಹಣವನ್ನು ಕೂಡಲೇ ಕೊಡುತ್ತಿದ್ದರು. ಕೊನೆಯ ಪ್ರಯೋಗದ ದಿನವಂತೂ ರಾಯರ ಸೊಸೆ ನಾಟಕದ ಪ್ರತಿಯೊಬ್ಬ ಪಾತ್ರಧಾರಿಗೆ ಒಂದು ಚಿನ್ನದ ಪದಕವನ್ನಿತ್ತು ಗೌರವಿಸಿ ಬೀಳ್ಕೊಟ್ಟರು. ಸದಾಶಿವರಾಯರು ಹುಬ್ಬಳ್ಳಿಯ ಸುವಿಖ್ಯಾತ ವರ್ತಕರಾಗಿದ್ದ ದಿ. ರಾವ್‌ಸಾಹೇಬ್ ಗಣಪತರಾವ ಮಡಿಮಾನ್ ಅವರ ಬಂಧು. ಗೋಕಾಕದಿಂದ ಕಂಪನಿ ರಬಕವಿಗೆ ಹೋಗಬೇಕಾಗಿದ್ದುದರಿಂದ ರಾಮಣ್ಣ ಅವರು ಮುಂದಿನ ವ್ಯವಸ್ಥೆಗಾಗಿ ರಬಕವಿಗೆ ಹೋಗಿ ಅಲ್ಲಿ ಎಲ್ಲ ಏರ್ಪಾಟು ಮಾಡಿ

ಬಂದ ನಂತರ ಕಂಪನಿಯು ಪ್ರಯಾಣ ಬೆಳೆಸಿತು. ಅಲ್ಲಿಂದ ಜಮಖಂಡಿ, ಚಿಕಲಿ, ಮುಧೋಳ, ಬಾಗಿಲುಕೋಟೆ, ಗುಳೇದಗುಡ್ಡ, ಕೊಪ್ಪಳ, ಹೊಸಪೇಟೆ, ಬಳ್ಳಾರಿ ಇವೇ ಮೊದಲಾದ ಪಟ್ಟಣಗಳಲ್ಲಿ ಜಯಭೇರಿ ಹೊಡೆದು ಕಂಪನಿ ಮರಳಿ ಧಾರವಾಡಕ್ಕೆ ಟೊಗಿನಕಾಯಿ ಥಿಯೇಟರಿನಲ್ಲಿ ಒಂದೂವರೆ ತಿಂಗಳು ತಮ್ಮ ಪ್ರಯೋಗಗಳನ್ನು ಮಾಡಿ ಮತ್ತೆ ಹುಬ್ಬಳ್ಳಿಗೆ ಮರಳಿ ಬಂತು.

ಹುಬ್ಬಳ್ಳಿಯಲ್ಲಿ ಕೂಡ ಪರಿಪಾಠದಂತೆ ಪ್ರತಿ ಸೋಮವಾರ, ಬುಧವಾರ, ಶನಿವಾರ ನಾಟಕ ಪ್ರಯೋಗಗಳಿರುತ್ತಿದ್ದವು. ಒಂದು ಶನಿವಾರ ಮಲ್ಲಿಕಾರ್ಜುನ ನಾಟಕಗೃಹದಲ್ಲಿ 'ಅಜಸ್ಮ ಕುಮಾರಿ' ನಾಟಕದ ಪ್ರಯೋಗವಿತ್ತು. ಛತ್ರಪತಿ ಶಿವಾಜಿಯ ಜೀವನ ಪ್ರಸಂಗವೊಂದು ಆ ನಾಟಕದ ವಸ್ತು. ವಿಜಾಪುರದ ಆದಿಲ್‌ಶಾಹನ ಮಾಂಡಲಿಕನಾದ ಚಂದ್ರರಾವ್ ಮೋರೆಯು ಶಿವಾಜಿಯನ್ನು ಬಂಧಿಸಿ ತರಬೇಕೆಂದು ಪ್ರಯತ್ನ ನಡೆಸಿದ್ದಾನೆ. ಛತ್ರಪತಿಯನ್ನು ಶೋಧಿಸುತ್ತಿದ್ದಾಗ ಶಿವಾಜಿಮಹಾರಾಜರ ಏಕನಿಷ್ಠ ಸರದಾರ ಧನಾಜಿ ಜಾಧವನು ಚಂದ್ರರಾವ್ ಮೋರೇನ ಸೈನಿಕರ ಕೈಗೆ ಸಿಗುತ್ತಾನೆ. ಎಪ್ಪತ್ತು ವರ್ಷದ ಈ ವೃದ್ಧ ಸರದಾರನನ್ನು ಸೈನಿಕರು ಬಂಧಿಸಿ ಚಂದ್ರರಾಯನ ಓಲಗಕ್ಕೆ ಎಳೆದು ತರುತ್ತಾರೆ.

ಮೇಕ್‌ಅಪ್ ಕಲಾವಿದರು ನನ್ನ ಮುಖಕ್ಕೆ ಬಣ್ಣ ಬಳಿದು ತಲೆಗೆ ಬಿಳಿ ಕೂದಲಿನ ಟೋಪಣ, ನೆರೆತ ಕಲ್ಲಿಮೀಸೆ, ಎದೆಯಿಂದ ಮೊಳಕಾಲವರೆಗೆ ರಬ್ಬರಿನ ಪಟ್ಟಿಕಟ್ಟಿ ಅದರ ಮೇಲೆ ಬಣ್ಣದ ಜಾಕೀಟು ಮತ್ತು ಬಿಳಿಯ ನಿಲುವಂಗಿಯನ್ನು ತೊಡಿಸಿದ್ದರು. ನಡುವಿಗೊಂದು ಜರತಾರಿ ಶಲ್ಯ, ಕೊರಳಲ್ಲಿ ದೊಡ್ಡ ಮುತ್ತಿನ ಹಾರ ಹಾಕಿ, ಹಣೆಗೆ ೩ ಬಟ್ಟಿನ ಕೆಂಪು ಗಂಧದ ಅಷ್ಟಗೆರೆ ಎಳೆದಿದ್ದರು. ಕನ್ನಡಿಯಲ್ಲಿ ಮುಖ ನೋಡಿಕೊಂಡಾಗ ನನ್ನ ಆ ವೀರಶ್ರೀಗೆ ಒಪ್ಪುವ ವೇಷವನ್ನು ನೋಡಿ ನನಗೇ ದಿಗ್ಭ್ರಮೆಯುಂಟಾಗಿತ್ತು.

ನನ್ನ ಎರಡೂ ರಟ್ಟೆಗಳನ್ನು ಹಗ್ಗಗಳಿಂದ ಕಟ್ಟಿ ನಾಲ್ವರು ಸೈನಿಕರು ನನ್ನನ್ನು ಎಳೆದುತಂದು ಓಲಗದಲ್ಲಿ ನಿಲ್ಲಿಸಿದ್ದರು. ಎರಡೂ ಕಾಲುಗಳಿಗೆ ಸಂಕೋಲೆಗಳನ್ನು ಕಟ್ಟಿ ನನ್ನ ಟೊಂಕಕ್ಕೆ ಉಕ್ಕಿನ ಪಟ್ಟಿಕಟ್ಟಿ ಬಿಗಿದಿದ್ದರು. ಇದು ಒಂದು ಮಹತ್ವಪೂರ್ಣ ಸನ್ನಿವೇಶ. ಅದಕ್ಕೂ ಮೊದಲು ಎರಡು ಪ್ರದೇಶಗಳಲ್ಲಿ ನನ್ನ ಪಾಲಿನ ಮಾತುಗಳನ್ನು ಸರಿಯಾದ ಹಾವಭಾವಗಳಿಂದ ಆಡಿದ್ದೆ.

ಓಲಗಕ್ಕೆ ನನ್ನನ್ನು ಎಳೆದು ತಂದ ಕೂಡಲೇ ಚಂದ್ರರಾಯನು ನನ್ನತ್ತ ದುರಗುಟ್ಟಿ ನೋಡುತ್ತ "ಎಲೋ, ಆ ಕುನ್ನಿ ಶಿವಾಜಿ ಎಲ್ಲಿ?" ಎಂದು ಅರ್ಭಟಿಸಿದ. ನಾನು ಮುಖದ ಮೇಲೆ ತಾತ್ಸಾರಭಾವವನ್ನು ತೋರುತ್ತ, "ಸ್ವಾಭಿಮಾನಶೂನ್ಯ ನರಪಶುವೆ, ನಿನಗೆ ಬೇಕಾಗಿದ್ದರೆ ನೀನೇ ಶೋಧಿಸಿ ತೆಗೆ. ಸ್ವಜನದ್ರೋಹಿಯಾದ ನಿನ್ನ ಮುಖ ನೋಡುವುದು ಕೂಡ ಪಾಪದ್ದಾಗುವದು," ಎಂದು ಗರ್ಜಿಸಿದೆ.

"ಯಾರಲ್ಲಿ?" ಎಂದು ಚಂದ್ರರಾಯ ಚಪ್ಪಾಳೆ ತಟ್ಟಿದಾಗ ಮತ್ತೊಬ್ಬ ಸೈನಿಕ ಕೈಯಲ್ಲಿ ಒಂದು ಕೊರಡನ್ನು ತೆಗೆದುಕೊಂಡು ಬಂದು ಚಂದ್ರರಾಯನಿಗೆ ಮುಜುರೆಮಾಡಿ ನಿಲ್ಲುತ್ತಾನೆ. ಚಂದ್ರರಾಯನು 'ಈ ಮುದುಕನ ಚರ್ಮ ಸುಲಿ ಎಂದು ಕೂಗಿದ್ದೆ ತಡ, ಸೈನಿಕನ ಪಾತ್ರವಹಿಸಿದ್ದ ಆ ಅಡಾಗೆಯಭಟ್ಟ ೨-೩ ಸಲ ರಬ್ಬರ ಪಟ್ಟಿ ಬಿಗಿದಿದ್ದ ನನ್ನ ನಡುವಿನ ಮೇಲೂ ಬೆನ್ನಿನ ಮೇಲೂ ಕೊರಡಿನಿಂದ ಪ್ರಹರಿಸಿದ. ರಬ್ಬರ್ ಪ್ಯಾಡ್ ಮೇಲೆ ಏಟು ಬಿದ್ದೊಡನೆ ಫಟ್ ಫಟಲ್ ಎಂಬ ಸಪ್ಪಳ ಕಿವಿಗೆ ಬೀಳುತ್ತಿತ್ತು. ಮೂರನೆಯ ಸಲ ಅವನು ನನ್ನ ಮೊಳಕಾಲ ಕೆಳಗೆ ಒಂದು ಬಿರುಸಾದ ಏಟು ಹಾಕಿದ. ಆ ಏಟು ಬಿದ್ದಲ್ಲಿ ರಬ್ಬರಿನ ಪಟ್ಟಿ ಇಲ್ಲದ್ದರಿಂದ ಏಟು ಬಿದ್ದ ನನ್ನ ಕಾಲುಗಳಿಗೆ ಬೆಂಕಿ ಇಟ್ಟಂತಾಯಿತು.

"ಈಗಲಾದರೂ ಹೇಳು ಆ ಕಳ್ಳ ಶಿವಾಜಿ ಎಲ್ಲಿ?" ಎಂದು ಚಂದ್ರರಾಯನ ಪಾತ್ರವಹಿಸಿದ್ದ ಸೊಂಡೂರ ಲಕ್ಷ್ಮಣ ಮತ್ತೆ ಆರಚಿದ. ನನಗೆ ಹೊಟ್ಟೆಯಲ್ಲಿ ಬೆಂಕಿ ಬಿದ್ದಂತಾದ್ದರಿಂದ ನಾನು ಆಡಬೇಕಾದ ಸಂಭಾಷಣೆಯ ಮಾತುಗಳು ನನ್ನ ಬಾಯಿಯಿಂದ ಹೊರಡದೆ ನಾನು

ನಾನಾಗಿ ಗ್ರಾಮ್ಯಭಾಷೆಯಲ್ಲಿ, "ಸೂ...ಮಗನೆ, ಬೋ... ಮಗನೆ, ಹೇಳೂದಿಲ್ಲಾ," ಎಂದೆನ್ನುತ್ತ ಹೊಡೆತದ ಉರುಪು ತಾಳಲಾರದೆ ಕುಣಿ ದಾಡತೊಡಗಿದೆ.

ಸೊಂಡೂರಸಂತೂ ನಗೆಯನ್ನು ತಡೆಯ ಲಾರದೆ ತನ್ನ ಆಸನದಿಂದ ಎದ್ದು ತೆರೆಯ ಮರೆಗೆ ಓಡಿಹೋದ. ನನ್ನನ್ನು ಕಟ್ಟಿ ಹಾಕಿದ ಸೈನಿಕರು ಮುಖತಿರುವಿಕೊಂಡು ನಗತೊಡ ಗಿದರು. ಕೆಲ ನಿಮಿಷಗಳ ವರೆಗೆ ಗದ್ದಲವೇ ಗದ್ದಲ. ಪಾರ್ಶ್ವದಲ್ಲಿ ತೆರೆಯಮರೆಗೆ ನಿಂತಿದ್ದ ಸೊಂಡೂರ ರಂಗಮಂಟಪಕ್ಕೆ ಬರಬೇಕೆಂದು ಒಂದೆರಡು ಹೆಜ್ಜೆ ಮುಂದಿಟ್ಟಾಗ ನನ್ನ ಮುಖ ನೋಡಿದ ಕೂಡಲೆ ಗಹಗಹಿಸಿ ನಗುತ್ತ ಒಳಗೇ ನಿಂತುಕೊಂಡು ಐದು ನಿಮಿಷಗಳ ನಂತರ ಹೇಗೊ ನಗೆ ತಡೆದು ರಂಗಮಂಟಪದಲ್ಲಿ ಪ್ರವೇ ಶಿಸಿ, "ಈ ಕತ್ತೆಯನ್ನು ಕತ್ತಲು ಕೋಣೆಯಲ್ಲಿ ದೂಡಿರಿ," ಎಂದು ಹೇಳಿ ಒಳಗೆ ಓಡಿ ಹೋಗಿ ಬಿಟ್ಟ. ಸ್ಟೇಜ್ ಮ್ಯಾನೇಜರನು ಈ ಎಲ್ಲ ಗಲಾಟೆಯನ್ನು ನೋಡಿ ಅಂಕಪರದೆ ಇಳಿಬಿಟ್ಟ.

ನಾನು ಒಳಗೆ ಹೋದದ್ದೇ ತಡ ಅದೇ ಕೊರಡು ತೆಗೆದುಕೊಂಡು ಅಡಿಗೆ ಭಟ್ಟ ನಿಗೆ ೩-೪ ಬಾರಿಸಿದೆ. ಭಟ್ಟ ಕೈಕಾಲು ಬಿದ್ದು ಕಣ್ಣೀರು ತಂದು "ದಮ್ಮಯ್ಯ ತಪ್ಪಾಯ್ತು," ಎಂದು ಅಳತೊಡಗಿದ.

ಮುಧೋಳದಲ್ಲಿ ನಮ್ಮ ನಾಟಕಗಳ ಪ್ರಯೋಗ ನಡೆದಾಗ ಊರಲ್ಲಿಯ ಪುಂಡರ ತಂಡದ ಮುಖಂಡನೊಬ್ಬ ಹತ್ತೆಂಟು ಜನ ರನ್ನು ಕರೆದುಕೊಂಡು ಟಿಕೆಟ್ ಪಡೆಯದೆ ನಾಟಕ ನೋಡಲು ಪ್ರೇಕ್ಷಕಗೃಹದತ್ತ ನುಗ್ಗಿ ದಾಗ ನಮ್ಮ ಬಾಗಿಲಕಾಯುವವರು ಅವರನ್ನು ಒಳಗೆ ಬಿಡಲಿಲ್ಲ. ಅದರಿಂದ ರೊಚ್ಚಿಗೆದ್ದ ಆ ತಂಡದವರು ಎರಡು ದಿನಗಳ ನಂತರ ಬಂದಿದ್ದ ಹೋಳಿ ಹುಣ್ಣಿಮೆಯ ಕರಿಯ ದಿವಸ ೨೦-೨೫ ಜನ ಸಂಗಡಿಗರನ್ನು ಕರೆದುಕೊಂಡು ಬಂದು ನಮ್ಮ ಥಿಯೇಟರಿಗೆ ಬೆಂಕಿ ಹಚ್ಚಲು ಪ್ರಯತ್ನಿಸಿದರು. ನಮ್ಮ ಜನರು ಅವರನ್ನು ಬಲದಿಂದ ಹಿಮ್ಮೆಟ್ಟಿಸಿದಾಗ ಮತ್ತೆ ಹತ್ತಿ ಪ್ಪತ್ತು ಜನ ಬಂದು ನಮ್ಮ ಕಂಪನಿಯ ನಾಲ್ಕಾರು ಜನರನ್ನು ಎತ್ತಿ ಒಯ್ದು ಕಾದು ದಹನದ ಬೆಂಕಿಯಲ್ಲಿ ಒಗೆದುಬಿಟ್ಟರು. ಅನೇಕ ಜನರಿಗೆ ನೆಲಪೆಟ್ಟಾಗಿ ಬೀಳುವಂತೆ ಹಣಿದರು. ಆಗ ಸಂಸ್ಥಾನದ ಆಸ್ಪತ್ರೆಯಲ್ಲಿ ಡಾ. ನೆಗಾಂಧಿ ಎಂಬವರು ವೈದ್ಯಾಧಿಕಾರಿ ಯಾಗಿದ್ದರು. ಬೈಂದೂರ ಎಂಬ ನಿವೃತ್ತ ಕಂದಾಯ ಅಧಿಕಾರಿಯೊಬ್ಬರು ದಿವಾಣರಾಗಿ ದ್ದರು, ಮತ್ತು ವಂಜೊರೆ ಎಂಬವರು ಪೋಲೀಸ್ ಮುಖ್ಯಾಧಿಕಾರಿಯಾಗಿದ್ದರು. ಈ ದುರ್ಘಟನೆ ಸಂಭವಿಸಿದ ಕೂಡಲೇ ಗಾಯಾಳು ಗಳಿಗೆ ಯೋಗ್ಯ ಉಪಚಾರದ ಏರ್ಪಾಟು ಮಾಡಿ ದಿವಾಣರಿಗೂ ಪೋಲೀಸ್ ಅಧಿಕಾರಿ ಗಳಿಗೂ ಭೆಟ್ಟಿ ಆಗಿ ಫಿರ್ಯಾದು ಕೊಟ್ಟಿದ್ದಲ್ಲದೆ ಮುಂಬಯಿಯಲ್ಲಿ ವಾಸಿಸುತ್ತಿದ್ದ ಘೋರ್ಪಡೆ ಮಹಾರಾಜರಿಗೆ ವಿವರವಾದ ತಂತಿಯ ವರದಿ ಯನ್ನು ಕಳಿಸಿದೆವು. ಕೆಲ ಗಂಟೆಗಳಲ್ಲಿಯೇ ದಿವಾಣರಿಗೂ ಪೋಲೀಸ್ ಅಧಿಕಾರಿಗಳಿಗೂ ಮಹಾರಾಜರು ಸಂದೇಶ ಕಳುಹಿಸಿ ಆ ಪುಂಡರು ಯಾರೇ ಇರಲಿ, ಅವರನ್ನು ಬಂಧಿಸಿ ಯೋಗ್ಯ ಕ್ರಮ ಕೈಕೊಳ್ಳಬೇಕೆಂದು ಆಜ್ಞಾಪಿ ಸಿದರು. ಅದರಂತೆ ಮಾರನೆ ಎಲ್ಲ ವಿಧಿವಿಧಾನ ಗಳೂ ನಡೆದವು. ಆದರೆ ಈ ದುರ್ಘಟನೆ ಯಲ್ಲಿ ಪ್ರಮುಖ ನಟವರ್ಗವೆಲ್ಲ ಗಾಯ ಗೊಂಡು ಹಾಸಿಗೆ ಹಿಡಿದಿದ್ದರಿಂದ ನಮ್ಮ ನಾಟಕ ಪ್ರಯೋಗಗಳು ಸ್ಥಗಿತವಾದವು. ಆದಾಯ ನಿಂತು ಹೋಯಿತು. ನಾಟಕದ ಪಾತ್ರಧಾರಿ ಗಳ ಹೊಟ್ಟೆಗೆ ಹಾಕುವ ಸಮಸ್ಯೆ ಬೃಹದಾ ಕಾರವಾಗಿ ಬೆಳೆದು ನಿಂತಿತು.

ಕಂಪನಿಗೆ ಇಂತಹ ಆಪತ್ತು ಬಂದಾಗ ಮುಧೋಳದ ಮಲ್ಲಪ್ಪ ಅವಟಿ ಎಂಬ ಪ್ರತಿ ಷ್ಠಿತ ವರ್ತಕರು ಕಂಪನಿಯ ದೈನಂದಿನ ವೆಚ್ಚ ಕ್ಕಾಗಿ ನಗದು ಹಣ ನೀಡಿದ್ದಲ್ಲದೆ, ತಮ್ಮ ಅಂಗಡಿಯಿಂದ ನಮ್ಮ ಬೋರ್ಡಿಂಗಿಗೆ ಬೇಕಾ ಗುವ ಸಾಮಗ್ರಿಗಳನ್ನೂ ಒದಗಿಸಿ ಕೊಟ್ಟರು.

ಆಗ ಈ ಗಂಡಾಂತರ ಪರಿಸ್ಥಿತಿಯೊಳಗಿಂದ ಕಂಪನಿಯನ್ನು ಪಾರುಮಾಡಿದವರೆಂದರೆ ಬಿ.

ರಾಘವೇಂದ್ರರಾಯರು. ಅವರು ರಂಗನಾಥ ಭಟ್ಟರ ಬಾಲ್ಯಸ್ನೇಹಿತರಾಗಿದ್ದರು. ಕಂಪನಿಯ ಹಣಕಾಸಿನ ವ್ಯವಹಾರವೆಲ್ಲ ಅವರ ಕಡೆಗೇ ಇದ್ದಿತು. ಅವರು ನೈಷ್ಠಿಕ ಬ್ರಹ್ಮಚಾರಿಯಾಗಿದ್ದರಲ್ಲದೆ ಪ್ರೊ. ಪಳನಿ ಮೂರ್ತಿ ಎಂಬ ಯೋಗ ಪಟುವಿನ ಬಳಿ ತರಬೇತಿ ಪಡೆದು ವಜ್ರಾಂಗರಾಗಿದ್ದರು. ನಾಟಕಗಳು ನಡೆಯದಂತಹ ಪರಿಸ್ಥಿತಿ ಉಂಟಾಗಿದ್ದರಿಂದ ಅವರು ತಮ್ಮ ಶರೀರ ಬಲದ ಪ್ರದರ್ಶನ ಏರ್ಪಾಟು ಮಾಡಿದರು. ೬೪ ಯೋಗಾಸನಗಳನ್ನು ಹಾಕುವುದು, ಇಸ್ಪೀಟಿನ ಪ್ಯಾಕನ್ನು ಒಂದೇ ಏಟಿಗೆ ಇಬ್ಭಾಗ ಮಾಡುವುದು, ಮೈಮೇಲೆ ಮೋಟಾರ್ ವಾಹನ ಹಾಯಿಸಿಕೊಳ್ಳುವುದು, ಎದೆಯ ಮೇಲೆ ನಾಲ್ಕೆಂಟು ಮಣ ಬಂಡೆಗಲ್ಲನ್ನು ಇರಿಸಿಕೊಂಡು ಅದರ ಮೇಲೆ ಬೃಹದಾಕಾರದ ಸುತ್ತಿಗೆಯಿಂದ ಏಟು ಹಾಕಿಸಿಕೊಳ್ಳುವುದು ಇವೇ ಮೊದಲಾದವುಗಳನ್ನು ಕಂಪನಿಯ ಥಿಯೇಟರಿನಲ್ಲಿ ಮಾಡಿ ಪ್ರತಿ ದಿನದ ಆಟಕ್ಕೆ ನೂರಿನ್ನೂರು ರೂಪಾಯಿಗಳನ್ನು ಗಳಿಸಿ ಕಂಪನಿಯನ್ನು ಗಂಡಾಂತರದಿಂದ ಪಾರು ಮಾಡಿದರು.

ಈಗ ಮಲ್ಲಾಡಿಹಳ್ಳಿಯಲ್ಲಿ ತಮ್ಮ ಆಶ್ರಮ ಕಟ್ಟಿಕೊಂಡು ಅನೇಕಾನೇಕ ಶೈಕ್ಷಣಿಕ ಸಂಸ್ಥೆಗಳನ್ನು ಪೋಷಿಸುತ್ತ ಬಂದ 'ತಿರುಕ' ರಾಘವ ಎಂದು ಜನಾದರಕ್ಕೆ ಪಾತ್ರರಾದವರೇ ಇಲ್ಲಿ ನಾನು ಉಲ್ಲೇಖಿಸಿದ ಬಿ. ರಾಘವೇಂದ್ರ ರಾಯರು.

ಇದೇ ಸಮಯಕ್ಕೆ ಕಂಪನಿಯ ಅಗ್ರಸ್ಥಾನದ ನಟರಾದ ರಾಮದುರ್ಗ ವೆಂಕಟರಾಯರು ಬನಗಂಡಿ ಮತ್ತು ತೇರದಾಳಗಳಲ್ಲಿ ಕೆಲ ಜನ ನೂತನ ಪರಿಚಿತರ ಉತ್ತೇಜಕ ಮಾತುಗಳಿಗೆ ಮರುಳಾಗಿ ಅಂಬಾ ಪ್ರಾಸಾದಿಕ ನಾಟಕ ಮಂಡಳಿಯನ್ನು ಬಿಟ್ಟು ತಮ್ಮದೇ ಆದ ಒಂದು ಹೊಸ ಕಂಪನಿ ಪ್ರಾರಂಭಿಸಲು ಉದ್ಯುಕ್ತರಾದರು. ಆವಟೆ ಮಲ್ಲಪ್ಪನವರ ನೆರವಿನಿಂದ ಮುಧೋಳದ ಕ್ಯಾಂಪನ್ನು ಮುಗಿಸಿ ಕಂಪನಿ ಬಾಗಿಲುಕೋಟೆಗೆ ತನ್ನ ಪ್ರಯಾಣ ಬೆಳೆಸಿ ಶಿವಯೋಗ ಮಂದಿರದ ನಾಟ್ಯಗೃಹದಲ್ಲಿ ಅಳಿದುಳಿದ ಆರೋಗ್ಯ ಸುಧಾರಿಸಿಕೊಂಡ ಕೆಲ ನಟರ ನೆರವಿನಿಂದ ನಾಟ್ಯ ಪ್ರಯೋಗ ಪ್ರಾರಂಭಿಸಿತು. ವೆಂಕಟರಾಯರಂಥ ಉಚ್ಚ ಶ್ರೇಣಿಯ ನಟರಿಲ್ಲ. ಇದ್ದವರು ಹಾಸಿಗೆ ಹಿಡಿದವರು, ಮೇಲೆ ಆದಾಯ ಶೂನ್ಯ. ಇಂಥ ದುರ್ಧರ ಪ್ರಸಂಗವನ್ನು ಕಂಪನಿಯು ಎದುರಿಸುತ್ತಿದ್ದಾಗ ಕಂಪನಿಯ ತಮ್ಮಣ್ಣ ದೇಸಾಯಿ ಎಂಬ ಪ್ರಮುಖ ಹಾಸ್ಯ ಪಾತ್ರಧಾರಿಯು ರಂಗನಾಥಭಟ್ಟರ ಬಿಡಾರಕ್ಕೆ ತೆರಳಿ ತನಗೆ ಇನ್ನೂರು ರೂಪಾಯಿ ಬೇಕೇಬೇಕೆಂದೂ, ಹಣ ಕೊಟ್ಟರೆ ಮಾತ್ರ ತಾನು ಅಂದಿನ ನಾಟಕದಲ್ಲಿ ಪಾತ್ರವಹಿಸುವದಾಗಿಯೂ ಇಲ್ಲದೆ ಹೋದರೆ ಮುಖಕ್ಕೆ ಬಣ್ಣವನ್ನೇ ಹಚ್ಚುವುದಿಲ್ಲವೆಂದೂ ಖಡಾಖಂಡಿತವಾಗಿ ಹೇಳಿಬಿಟ್ಟ. ಆಗ ಸಂಜೆಯ ಏಳು ಗಂಟೆ ಆಗಿತ್ತು. ರಂಗನಾಥಭಟ್ಟರು ನನ್ನನ್ನು ಕರೆ ಕಳುಹಿಸಿ ಈ ವಿಷಯವನ್ನು ಹೇಳಿದರು. ಅಷ್ಟರಲ್ಲ ಬಾಗಿಲುಕೋಟೆಯಲ್ಲಿ ೩-೪ ಪ್ರಯೋಗಗಳಾಗಿ ತಕ್ಕ ಮಟ್ಟಿಗೆ ಆದಾಯ ಬರಲಿಕ್ಕಾರಂಭವಾಗಿತ್ತು. ೨-೩ ತಿಂಗಳುಗಳಿಂದ ಕಂಪನಿಯು ನಟವರ್ಗಕ್ಕೆ ಪ್ರತಿಯೊಬ್ಬರಿಗೆ ವಾರಕ್ಕೆ ಒಂದೆರಡು ರೂಪಾಯಿಗಳನ್ನು ಅವರ ಚಿಲ್ಲರೆ ವೆಚ್ಚಕ್ಕೆ ಹಾಗೂ ಹೀಗೂ ಕೊಡುತ್ತಿದ್ದಾಗ, ದೇಸಾಯಿಯು ಬೇಡಿಕೆಯಂತೆ ಹಣ ಕೊಡುವುದು ತೀರ ಅಶಕ್ಯವಾಗಿತ್ತು. ನಾಟಕದ ಪ್ರಮುಖ ಪಾತ್ರಧಾರಿಯೇ ಈ ರೀತಿ ಪಟ್ಟು ಹಿಡಿದದ್ದರಿಂದ ದುಃಖಿತರಾದ ರಂಗನಾಥಭಟ್ಟರು ಅಂದಿನ ಪ್ರಯೋಗವನ್ನು ರದ್ದುಗೊಳಿಸಬೇಕೆಂದು ನನಗೆ ಸೂಚಿಸಿದರು. ಅವರ ಸೂಚನೆಯನ್ನು ಒಪ್ಪದೆ, ಏನಾದರೂ ಆಗಲಿ, ಅಂದಿನ ಪ್ರಯೋಗ ನಡೆದೇ ತೀರುವುದೆಂದು ಹೇಳಿ ನಾನು ನಾಟ್ಯಗೃಹಕ್ಕೆ ಬಂದೆ. ತಮ್ಮಣ್ಣನನ್ನು ಕರೆ ಕಳುಹಿಸಿ ಮಾಸೆಯ ಖರ್ಚಿಗೆ ಬೇಕಾದರೆ ೮-೧೦ರೂಪಾಯಿ ಕೊಡುವುದಾಗಿ ಹೇಳಿ, ಅವನ ಲೆಕ್ಕ ತೆಗೆದು ನೋಡಿದಾಗ ಕಂಪನಿಯಿಂದ ಅವನಿಗೆ ಏನೂ ಕೊಡುವುದು ಉಳಿದಿದ್ದಿಲ್ಲವೆಂಬುದು ಕಂಡು ಬಂದಿತು. ತಮ್ಮಣ್ಣನು ತನ್ನ ಹಟ ಬಿಡದಿದ್ದಾಗ ನಾನು ರಂಗಭೂಮಿಯ ನಾಲ್ಕು ಜನ ಕಾರ್ಮಿಕರನ್ನು

ಕರೆದು, ಕಂಪನಿಯವರು ತಮ್ಮಣ್ಣನಿಗೆ ಒದಗಿಸಿ ಕೊಟ್ಟಿದ್ದ ಬಿಡಾರವನ್ನು ತೆರವು ಮಾಡಿ ಅಲ್ಲಿಯ ಸಾಮಾನುಗಳನ್ನು ಹೊರಗಿಟ್ಟು ಬಿಡಾರಕ್ಕೆ ಬೀಗಹಾಕಲಿಕ್ಕೆ ಹೇಳಿ ಕಳಿಸಿದೆ. ತಮ್ಮಣ್ಣನ ಖಾತೆಯ ಲೆಕ್ಕ ಮಾಡಿ ಅವನಿಗೆ ಕೊಡಬೇಕಾದ ೬-೭ ರೂಪಾಯಿಗಳನ್ನು ಕೊಟ್ಟು ಅವನಿಗೆ ಅಪ್ಪಣೆ ಕೊಟ್ಟೆ. ಇಷ್ಟಾದರೂ ಅವನಿಗೆ ಬುದ್ಧಿ ಬರಲಿಲ್ಲ. ಕಂಪನಿಯ ಪರಿಸ್ಥಿತಿಯ ಬಗೆಗೆ ಅನುಕಂಪವೂ ಉಂಟಾಗಲಿಲ್ಲ. ನಾಟಕ ಗೃಹದ ಬಳಿ ಬಂದು ನಿಂತುಕೊಂಡು ಅವನು ತನ್ನ ಪೌರುಷವನ್ನು ಕೊಚ್ಚಿಕೊಳ್ಳುತ್ತ. "ಆಗಲಿ. ನನ್ನ ಪಾತ್ರವನ್ನು ಮಾಡುವರ್ಯಾರು ನೋಡೋಣ." ಎಂದು ಗೊಣಗುತ್ತಿದ್ದುದು ನನಗೆ ಕೇಳಿಸಿತು.

ಅಂದು ಇದ್ದ ನಾಟಕ 'ಶಾಲಿನಿ'. ಅದರಲ್ಲಿ ಮರೋಳ ರಾಮಣ್ಣ ಕಾಳಿಂಗರಾವ್, ರಾಮಕೃಷ್ಣ, ಟಿ. ಜಿ. ಶಾಮರಾವ್, ಬಿ. ದಾಸಪ್ಪ ಸೋನೂಬಾಯಿ ದೊಡವಾಡ ಮತ್ತು ತಮ್ಮಣ್ಣ ದೇಸಾಯಿ ಇವರೆಲ್ಲರ ಪಾತ್ರವಿತ್ತು. ಎಲ್ಲರೂ ತೆರೆಯ ಮರೆಯಲ್ಲಿ ಕೂಡಿ ಹೊಸದಾಗಿ ಉದ್ಭೂತವಾದ ಪರಿಸ್ಥಿತಿಯಲ್ಲಿ ಮುಂದೇನು ಮಾಡಬೇಕು? ಎಂದು ಯೋಚಿಸುವದಕ್ಕಾಗಿ ಸಮ್ಮಿಲಿತರಾಗಿದ್ದರು. ನಾನು, ಶಾಮಣ್ಣ, ರಾಘವೇಂದ್ರರಾವ್ ಮೂವರೂ ಅಲ್ಲಿಗೆ ಹೋದೆವು. ತಮ್ಮಣ್ಣನ ಹಟಮಾರಿತನಕ್ಕೆ ಎಲ್ಲರೂ ರೋಸಿ ಹೋಗಿದ್ದರು. ಆದರೆ ಅವನ ಪಾತ್ರವನ್ನು ಯಾರು ವಹಿಸಬೇಕು? ಎಂಬ ಸಮಸ್ಯೆ ಎದುರಾಗಿತ್ತು. ಅಲ್ಲಿಯ ಆ ಗಂಭೀರ ವಾತಾವರಣವನ್ನು ನೋಡಿ, ಆ ಉದ್ವಿಗ್ನತೆಯನ್ನು ಹೋಗಲಾಡಿಸುವುದಕ್ಕಾಗಿ ನಾನು ತಮ್ಮಣ್ಣ ವಹಿಸುತ್ತಿದ್ದ ಮೋಹನನ ಪಾತ್ರ ಮಾಡುವುದಾಗಿ ಹೇಳಿ ಬಿಟ್ಟೆ. ಎಲ್ಲರಿಗೂ ಆಶ್ಚರ್ಯವುಂಟಾಯಿತು. ಏಕೆಂದರೆ ಆ ಪಾತ್ರದ ಸಂಭಾಷಣೆ, ಹಾವ ಭಾವ ಇವಾವುದೂ ನನ್ನಂಥವನಿಗೆ ಹೇಗೆ ಸಾಧ್ಯ? ಆ ನಾಟಕದ ಬಗೆಗೆ ನನಗೆ ಏನೂ ತಿಳಿದಿದ್ದಿಲ್ಲವೆಂದೇ ಅವರ ಭಾವನೆಯಾಗಿತ್ತು. ಕೆಲ ಮಟ್ಟಿಗೆ ಅದು ನಿಜವೂ ಆಗಿತ್ತು. ನಾಟಕ ಕಂಪನಿಯ ವ್ಯವಸ್ಥಾಪಕನೇ ಹಾಗೆ ನಾಟಕದ ಪ್ರಾರಂಭ ಹೇಗೆ ಆಗುವುದು? ನಾನು ಇವ ಹೇಗೆ ನಟಿಸುವ? ಇದಾವುದೂ ತಿಳಿದಿರುವುದಿಲ್ಲ. ಯಾಕೆಂದರೆ ನಾಟಕ ಪ್ರಾರಂಭವಾದ ನಂತರ ಮುಂದೆ ಬಂದೆಂದು ನಾಟಕಾ ಪ್ರೇಕ್ಷಕ ಗೃಹದಲ್ಲಿ ಬಳಿಗೆ ಇರಿಕ ಹಾಕಲು ಸಹ ವ್ಯವಸ್ಥಾಪಕರಿಗ ಅವಕಾಶವಿರುವುದಿಲ್ಲ. ಅಂದಾಗ ಈ ಪಾತ್ರ ನಿನಗೆ ಹೇಗೆ ಸಾಧ್ಯ? ಎಂದು ಒಬ್ಬೊಬ್ಬರು ಆಕ್ಷೇಪಿಸಿದರು. ನಾನು ಹೇಳಿದೆ: "ಆ ನಾಟಕವನ್ನು ನಾನು ಮೊದಲ ಓದಿದ್ದೇನೆ. ಸಂದರ್ಭಾನುಸಾರವಾಗಿ ನಾನು ಮಾತು ಸಾಗಿಸಿಕೊಂಡು ಹೋಗುವೆ. ಆದರೆ ನೀವು ಪಾತ್ರ ನನ್ನಿಂದ ಕೊನೆಯ ಶಬ್ದ (Catch word)ವನ್ನು ಅಪೇಕ್ಷಿಸಬಾರದು." ಎಂದು ತಿಳಿಸಿದೆ.

ಕರ್ಮ ಧರ್ಮ ಸಂಯೋಗದಿಂದ ನೂರು ರೂಪಾಯಿ ಕಾಣದ ದಿನಗಳಲ್ಲಿ ಅಂದು ೩೭೦ ರೂಪಾಯಿಗಳ ಆದಾಯ ಬಂದಿತ್ತು. ನಾಟಕವು ಪ್ರಾರಂಭವಾಯಿತು. ನಟ ವರ್ಗದವರೆಲ್ಲರೂ ಕಾತುರರಾಗಿ ನನ್ನ ಪಾತ್ರವನ್ನು ನೋಡಲು ನೋಡತೊಡಗಿದ್ದರು. ನನ್ನ ಪ್ರವೇಶ ಬಂದಿತು. ನಾನು ನನ್ನ ಮಾತುಗಳನ್ನು ಹಾಸ್ಯಕ



"ಇವನು ಕನ್ನಡ ಹೈದೀನೋ, ಹಿಂದೀ ಹೈದೀನೋ ಗೊತ್ತಾಗ್ತಾ ಇಲ್ವಲ್ಲಾ..."

ಭಾಷೆಯಲ್ಲಿ ಆಡದೆ ಉತ್ತರ ಕರ್ನಾಟಕದ ಗ್ರಾಮೀಣ ಭಾಷೆಯಲ್ಲಿಯೇ ಆಡತೊಡಗಿದೆ. ಪ್ರೇಕ್ಷಕರಿಗೆ ಅದೊಂದು ಹೊಸ ಅನುಭವ ಬಂದಿತು. ಅದು ಸಾಮಾಜಿಕ ನಾಟಕವಿದ್ದುದ ರಿಂದ ನನ್ನ ಪಾತ್ರ ಮತ್ತು ನನ್ನ ಉಚ್ಚಾರ ಗಳು ಅತ್ಯಂತ ಮನರಂಜಕವಾಗತೊಡಗಿ ದವು. ಪ್ರತಿ ಮಾತಿಗೆ ಪ್ರೇಕ್ಷಕರ ಚಪ್ಪಾಳೆ ಬೀಳತೊಡಗಿದವು. ಅದರಿಂದ ಪುಲಕಿತನಾದ ನಾನು, "ಇದು ಜನರಿಗೆ ಬಲು ಸರಸಾ, ಕುಡಿ ಬೇಕು ಚಹ ದರ ದಿವಸಾ," ಎಂದು ಹಾಡುತ್ತ ರಂಗ ಮಂಟಪವನ್ನು ಸುತ್ತಾಡತೊಡಗಿದೆ. ಲಾಲಸಾ ನಾಟಕವು ಶೋಕಾಂತಿಕವಾಗಿದ್ದರೂ ನಾನು ಅಂದು ವಹಿಸಿದ ಪಾತ್ರದಿಂದ ಅದಕ್ಕೆ ಒಂದು ಬಗೆಯ ದುಃಖ ಹಾಸ್ಯಗಳ ಮಿಶ್ರಣ ವನ್ನು ಪ್ರೇಕ್ಷಕರಿಗೆ ಒದಗಿಸಿದಂತಾಗಿತ್ತು.

ಕೊನೆಯ ಪ್ರವೇಶವೊಂದು ಉಳಿದಾಗ ಬಾಗಿಲುಕೋಟೆಯ ಸುವಿಖ್ಯಾತ ಹವ್ಯಾಸೀ ನಾಟ್ಯ ಸಂಸ್ಥೆಯಾದ ವಾಸುದೇವ ವಿನೋದಿನೀ ಸಂಸ್ಥೆಯ ವತಿಯಿಂದ ಕಂಚಿ ಅವರು ರಂಗ ಭೂಮಿಯ ಮೇಲೆ ಬಂದು ನನ್ನ ಪಾತ್ರವನ್ನು ಬಹುವಾಗಿ ಕೊಂಡಾಡಿ ನಾನೊಬ್ಬ ಅಭಿಜಾತ ನಟನೆಂದು ನಾಲೆ ಹಾಕಿ ಗೌರವಿಸಿದರು. ನಾನು ಅವರಿಗೆ ನನ್ನ ವತಿಯಿಂದ ಮತ್ತು ನಮ್ಮ ನಾಟ್ಯ ಸಂಸ್ಥೆಯ ವತಿಯಿಂದ ಧನ್ಯವಾದಗಳನ್ನು ಸಲ್ಲಿಸಿ ಬಣ್ಣ ಒರೆಸಿಕೊಳ್ಳಲಿಕ್ಕೆ ಗ್ರೀನ್ ರೂಮಿಗೆ ಬಂದಾಗ ನನ್ನ ನಟ ಮಿತ್ರರೆಲ್ಲ ಬಂದು ನನ್ನ ಬೆನ್ನು ಚಪ್ಪರಿಸುತ್ತ ಆನಂದೋದ್ಗಾರಗಳನ್ನು ತೆಗೆದು, "ಇಷ್ಟು ದಿನ ಈ ಸುಪ್ತಕಲೆಯನ್ನು ಯಾಕೆ ಮುಚ್ಚಿಟ್ಟಿದ್ದಿ?" ಎಂದು ಕೇಳಿದರು. ನಾನು ಹೇಳಿದೆ: "ನಾಟಕಕಾರರು ಬರೆದ ನನ್ನ ಸಂಭಾಷಣೆ ನನಗೆ ಬಾಯಿ ಪಾಠ ಇದ್ದಿಲ್ಲ. ಅನು ಮಾನ ಕಟ್ಟಿ ನನಗೆ ಆ ಸಮಯಕ್ಕೆ ಬಾಯಿಗೆ ಬಂದದ್ದನ್ನು ಆಡಿದೆ. ಯಾಕೆಂದರೆ, ನನ್ನ ಕಣ್ಣು ಅಂದಿನ ಗಲ್ಲೆ ಪೆಟ್ಟಿಗೆಯ ಮೇಲಿತ್ತು. ಕಂಪನಿಯ ಕರ್ಮಚಾರಿಗಳಿಗೆ ಹೊಟ್ಟೆಗೆ ಕೊಡ ಬೇಕಾಗಿತ್ತು. ರಂಗನಾಥ ಭಟ್ಟರು ಸೂಚಿಸಿ ದಂತೆ ನಾಟಕದ ಪ್ರಯೋಗವನ್ನು ರದ್ದುಪಡಿಸಿ ದ್ದರೆ ನಮಗೆ ೩೭೦ ರೂಪಾಯಿ ಎಲ್ಲಿಂದ ಬರುತ್ತಿದ್ದವು? ಒಂದೊಮ್ಮೆ ನನ್ನ ಪಾತ್ರ ಸರಿ ಯಾಗಿ ಆಗದೆ ಕೆಟ್ಟು ಹೋಗಿದ್ದರೆ, 'ನಾಟಕ ವೇನೋ ಚನ್ನಾಗಿತ್ತು, ಆದರೆ ಮೋಹನನ ಪಾತ್ರ ವಹಿಸಿದವ ಮಾತ್ರ ನಾಟಕ ಕೆಡಿಸಿಬಿಟ್ಟ' ಎಂದು ಅನ್ನುತ್ತಿದ್ದರು. ಆದರೆ ನಮ್ಮ ಗಲ್ಲೆ ಪೆಟ್ಟಿಗೆ ಸೇರಿದ ಹಣವನ್ನು ಯಾರೂ ತಿರುಗಿ ಬೇಡುತ್ತಿದ್ದಿಲ್ಲ," ಎಂದು ಹೇಳಿದೆ.

ಬಾಗಿಲುಕೋಟೆಯಿಂದ ಗುಳೇದಗುಡ್ಡ, ಕೊಪ್ಪಳ, ಬಳ್ಳಾರಿ, ಹೊಸಪೇಟೆ ಇವುಗಳನ್ನು ಮುಗಿಸಿಕೊಂಡು ಕಂಪನಿ ಮತ್ತೆ ಹುಬ್ಬಳ್ಳಿಗೆ ಮರಳಿ ಬಂದಿತು. ಮತ್ತೆ ಅಲ್ಲಿ ಒಂದೂವರೆ ತಿಂಗಳು ವಾಸ್ತವ್ಯ ಹೂಡಿ ಅಲ್ಲಿಂದ ಕರಾವಳಿ ಪ್ರದೇಶಕ್ಕೆ ಹೊರಡುವ ಸಿದ್ಧತೆಯಲ್ಲಿದ್ದಾಗ ಅಸಹಕಾರ ಆಂದೋಲನವು ಸ್ಥಗಿತವಾಗಿತ್ತು. ಸೆರೆಮನೆಗೆ ಹೋಗಿದ್ದ ರಾಷ್ಟ್ರೀಯ ಹೋರಾಟ ಗಾರರು ಒಬ್ಬೊಬ್ಬರಾಗಿ ತಮಗಾದ ಶಿಕ್ಷೆ ಯನ್ನು ಅನುಭವಿಸಿ ಹೊರಗೆ ಬರಲಾರಂಭಿ ಸಿದ್ದರು. ನನ್ನ ಮೇಲಿನ ಗುಮಾನಿಯೂ ಮರೆತುಹೋದ ಮಾತಾಗಿತ್ತು. ಮತ್ತೆ ಕಡೇ ಕಾರ ಗುರುರಾಯರು, ಹುಬ್ಬಳಿಕರ ಗುರುನಾಥ ಪ್ಪನವರು ಮತ್ತು ಮಾಳ್ವೇಕರ ವಿಠ್ಠಲರಾಯರು ನಾನು ಮುಂದೆ ಹೋಗಕೂಡದೆಂದೂ ಹುಬ್ಬಳ್ಳಿ ಯಲ್ಲಿಯೇ ಇರಬೇಕೆಂದೂ ಹೇಳಿ ಮತ್ತೆ ನನ್ನನ್ನು ಪತ್ರಿಕಾ ವ್ಯವಸಾಯಕ್ಕೆ ಅಣಿಗೊಳಿಸಿದರು. ನಾನು ರಂಗನಾಥ ಭಟ್ಟರನ್ನು ಕಂಡು ವಿಷಯ ಹೇಳಿ ಅವರಿಂದ ಅಪ್ಪಣೆ ತೆಗೆದುಕೊಂಡು ಅವರನ್ನು ಬೀಳ್ಕೊಟ್ಟೆ.



ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅನಮೋಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. **ವೈಶಾಲ್ಯ**
(ಅ) ಧಾರಾಳ (ಆ) ಹರವು (ಇ) ಹೊಂದಿಕೆ ಇಲ್ಲದ್ದು (ಈ) ರಜಾ

೨. **ಮೌಲಿಕ**
(ಅ) ಒಣಹುಲ್ಲಿನ ಹೊರೆ (ಆ) ಕಟ್ಟಿಗೆ ಹೊರೆ (ಇ) ಬೆಲೆ ಇಲ್ಲದ (ಈ) ಸ್ವತಂತ್ರ ಕೃತಿ

೩. **ಹತಬುದ್ಧ**
(ಅ) ಏನೆಂದು ತೋಚದಿರುವವ (ಆ) ಬುದ್ಧಿ ಜೀವಿಗಳ ಕೊಲೆ (ಇ) ದುರುದ್ದೇಶ (ಈ) ತೀಕ್ಷ್ಣ ಬುದ್ಧಿ

೪. **ಆಪ್ತವಾಕ್ಯ**
(ಅ) ಗುಟ್ಟು (ಆ) ಉದ್ದನ್ನ ಮಾತು (ಇ) ಶಾಸ್ತ್ರ ಪ್ರಮಾಣ (ಈ) ಚಾಡಿ

೫. **ಕರಗ**
(ಅ) ಮೂಸೆ (ಆ) ಚಿಪ್ಪು (ಇ) ಕೊಡ (ಈ) ಕಲ್ಲು

೬. **ಠರಾವು**
(ಅ) ಗಲ್ಲಿಗೇರಿಸುವುದು (ಆ) ತಾಳಿಕೆ (ಇ) ನಿರ್ಧಾರ (ಈ) ನಿಲ್ಲಿಸುವಿಕೆ

೭. **ಖನಿ**
(ಅ) ದೊಡ್ಡ (ಆ) ಚಿಕ್ಕ (ಇ) ಹೊಳಪು (ಈ) ಅಪ್ರಬುದ್ಧ

೮. **ಕರ್ಕಟ**
(ಅ) ಚೇಳು (ಆ) ದೊಂದಿ (ಇ) ಕಲ್ಲಿನ ಚೂರುಗಳು (ಈ) ಕ್ರೂರ

೯. **ಜೈವಿಕ**
(ಅ) ಗಳಿಕೆ (ಆ) ಸಂಬಳ (ಇ) ಅದೃಷ್ಟ (ಈ) ಪ್ರಾಣಿಗೆ ಸಂಬಂಧಿಸಿದ್ದು

೧೦. **ವಾರ್ತಿಕ**
(ಅ) ಟೀಕೆ (ಆ) ಒಂದು ಮಾಸ (ಇ) ಸುಳ್ಳು ಸುದ್ದಿ (ಈ) ಬೆಳವಣಿಗೆ

೧೧. **ನಿಚ್ಚಳ**
(ಅ) ಖಚಿತ (ಆ) ಪೇಚು (ಇ) ಸ್ಪಷ್ಟ (ಈ) ದುರಭ್ಯಾಸ ರಹಿತ

೧೨. **ಕುತ್ತಟ್ಟ**
(ಅ) ಆಸ್ಪತ್ರೆ (ಆ) ಬಡಿಗೆ (ಇ) ಚಿಕ್ಕ ಅಟ್ಟ (ಈ) ಅಲುಗಾಟ

'ಶಬ್ದ ಭಾಂಡಾರ'ದ ಸರಿಯಾದ ಅರ್ಥಗಳು

೧. **ವೈಶಾಲ್ಯ** (ಅ) ಹರವು, ಪರವಾಗಿರುವಿಕೆ, ವಿಸ್ತಾರ, ಉದಾ– ದೃಷ್ಟಿ ವೈಶಾಲ್ಯ, ಸಾಮ್ರಾಜ್ಯ ವೈಶಾಲ್ಯ. [ಸಂ. ವಿಶಾಲ = ಪರವಾದ – ಇಂದ]

೨. **ಮೌಲಿಕ** (ಈ) ಸ್ವತಂತ್ರ (ಕೃತಿ, ವಿಚಾರ ಇತ್ಯಾದಿಗಳಲ್ಲಿ) ಮೂಲ; ಬೆಲೆ ಬಾಳುವ. ಉದಾ– ಮೌಲಿಕ ಕಲ್ಪನೆಗಳಿಂದ ಕೂಡಿದ ಕಾವ್ಯ. [ಸಂ. ಮೂಲ = ಬುಡ – ಇಂದ]

೩. **ಹತಬುದ್ಧ** (ಅ) ಏನು ಮಾಡಬೇಕೆಂದು ತೋಚದಿರುವ, ಬುದ್ಧಿ ಕೆಲಸ ಮಾಡಲಾರದ. ಉದಾ– ಸುದ್ದಿ ಕೇಳಿ ಹತಬದ್ಧನಾದನು. [ಸಂ. ಹತ = ಸತ್ತ + ಬುದ್ಧಿ – ಅದುಳ್ಳವ]

೪. **ಆಪ್ತವಾಕ್ಯ** (ಇ) ವೇದ ಶಾಸ್ತ್ರಗಳಲ್ಲಿ ಬಂದ ಮಾತಿನ ಪ್ರಮಾಣ; (ಈ ಪ್ರಮಾಣವನ್ನು ಒಪ್ಪಬೇಕೆಂದು ಕೆಲವರು ಒಪ್ಪಲಾಗದೆಂದು ಇತರರು ವಾದಿಸುತ್ತಾರೆ), ಶಾಸ್ತ್ರ ಪ್ರಮಾಣ. [ಸಂ. ಆಪ್ತ = ಬೇಕಾದವರು + ವಾಕ್ಯ = ಮಾತು]

೫. **ಕರಗ** (ಇ) ನೀರು ತುಂಬುವ ಕಲಶ, ಕೊಡ; ಕರಗ ಹೊರುವ ಒಂದು ಉತ್ಸವ. ಉದಾ– ಕರಗ ಹೊರುವ ಕೆಲಸ. [ಸಂ. ಕರಕ]

೬. **ಠರಾವು** (ಇ) ತೀರ್ಮಾನ, ನಿಶ್ಚಯ; ಗೊತ್ತುವಳಿ; ನಿರ್ಧಾರ. ಉದಾ– ಮದುವೆ ಠರಾವಾಯಿತು. [ಹಿಂದೀ: ಠಹರ್ = ನಿಲ್ಲು – ಇಂದ]

೭. **ಮಿನಿ** (ಅ) ಚಿಕ್ಕ, ಬಲು ಚಿಕ್ಕ, ಹ್ರಸ್ವ. ಉದಾ– ಮಿನಿ ಕಥೆ ಅಂದರೆ ಅತಿ ಚಿಕ್ಕ ಕಥೆ. ಮಿನಿ ಸ್ಕರ್ಟ್ ಅಂದರೆ ತೀರ ಗಿಡ್ಡನ್ನ ಪರಕಾರ. [ಲ್ಯಾಟಿನ್ – ಮಿನಿಮಸ್ = ಅತಿ ಚಿಕ್ಕ]

೮. **ಕಕ್ಕಡ** (ಅ) ದೀವಟಿಗೆ, ದೊಂದಿ. ಪಂಜು; ದಪ್ಪ ಬತ್ತಿ, ಅದಕ್ಕೆ ಹಚ್ಚಿದ ದೀಪ. ಉದಾ– ಕಕ್ಕಡ ಹಿಡಿದು ಹುಡುಕಿದರೂ ಸಿಗಲಿಲ್ಲ. [ದೇಶ್ಯ – ತೆಲಗು – ಕಾಗಡಾ – ಮರಾಠಿ – ಕಾಕಡಾ]

೯. **ಜೈವಿಕ** (ಈ) ಪ್ರಾಣಿಗಳಿಗೆ ಸಂಬಂಧಿಸಿದ, ಜೀವ ಸಂಬಂಧಿ, ಇಂಗ್ಲೀಷಿನಲ್ಲಿ biol. ಉದಾ– ಜೈವಿಕ ತೈಲ = ಪ್ರಾಣಿಗಳ ನೆಣದಿಂದ (ವನಸ್ಪತಿಯಿಂದಲ್ಲ) ಉತ್ಪತ್ತಿಯಾದ ಎಣ್ಣೆ. [ಸಂ. ಜೀವ – ದಿಂದ]

೧೦. **ವಾರ್ತಿಕ** (ಅ) ಟೀಕೆ, ಟಿಪ್ಪಣಿ, ವೃತ್ತಿ, ಮೂಲ ಗ್ರಂಥಕ್ಕೆ ಬರೆದ ವಿವರಣೆಗಳಲ್ಲಿ ಒಂದು ವಿಧ. ಉದಾ– ಸೂತ್ರ ಗ್ರಂಥಕ್ಕೆ ವಾರ್ತಿಕ ಬರೆದ. [ಸಂ. ವೃತ್ತಿ = ವಿವರಣೆ – ಯಿಂದ]

೧೧. **ನಿಚ್ಚಟ** (ಅ) ಖಚಿತ, ನಿಶ್ಚಿತ, ಸ್ಥಿರ; ನಿಷ್ಕಪಟ. ಉದಾ– ನಿಚ್ಚಟವಾದ ಪ್ರಮಾಣ. [ಸಂ. ನಿಶ್ಚಿತ]

೧೨. **ಕುತ್ತಟ್ಟ** (ಇ) ಚಿಕ್ಕ ಅಟ್ಟ, ಸಾಮಾನ್ಯವಾಗಿ ಹಳೇ ಕಾಲದ ಮನೆಗಳಲ್ಲಿ ಅಡಿಗೆ ಮನೆಯ ಮೇಲೆ ಇರುತ್ತಿದ್ದ ಪ್ರತ್ಯೇಕ ಅಟ್ಟ. [ದೇಶ್ಯ, ಕುರು = ಚಿಕ್ಕ + ಅಟ್ಟ]

●

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೨–೬ ಸರಿಯಿದ್ದರೆ		...	ಸಾಧಾರಣ
೯–೧೦	,,	...	ಉತ್ತಮ
೧೧–೧೨	,,	...	ಅತ್ಯುತ್ತಮ

●

✤ ವಿಜಯ ವಿಠಲ

ಜಾರು ಮಾತು ನಿಮಗೆ ಗೊತ್ತೆ?

ಭಾನುವಾರ ಮಧ್ಯಾಹ್ನ ಕದ ತಟ್ಟಿ ಡಾಕ್ಟರನ್ನು ಎಬ್ಬಿಸಿದಳು ಸುಶೀಲ. "ಡಾಕ್ಟ್ರೇ! ಇಂಜಾತ ತೀರಿಕೊಳ್ತಾ ಇದಾರೆ. ಅಂದ್ರೆ ತೀರ್ಕೊಂಡಿಲ್ಲ. ಸ್ವಲ್ಪ ಜ್ವರ, ಅಲ್ಲಲ್ಲ ಬಾಬು ಕಾಮಕೆ ಇದ್ದು..." ಎಂದು ತಡಬಡಿಸುತ್ತ ಅವಳನ್ನು ಅರ್ಧಕ್ಕೆ ನಿಲ್ಲಿಸಿ, ಕಣ್ಣುಜ್ಜುತ್ತ ಡಾಕ್ಟರು ಕೇಳಿದರು... "ನಿಮ್ಮಪ್ಪ ತೀರಿ ನಾಲ್ಕು ವರ್ಷ ಆಯ್ತಲ್ಲ?"

"ಅದೇ ಅದೇ... ನಮ್ ಪಕ್ಕದ್ಮನೆ ತಾತ... ಇವತ್ತು ಬೆಳಿಗ್ಗೆ ಚೆನ್ನಾಗಿದ್ರಂತೆ... ಅಲ್ಲಲ್ಲ ಸ್ನಾನ ಮಾಡಿದ್ರಂತೆ..."

"ಎಂಥದ್ದೇ! ನೀನು ಹೇಳೋದು" ಎಂದು ಯಾವುದೂ ಅರ್ಥವಾಗದೆ ಅವಳ ಹಿಂದೆ ಹೊರಟ ಡಾಕ್ಟರು ಐದೇ ನಿಮಿಷದಲ್ಲಿ ವಾಪಸಾದರು. ಏಕೆಂದರೆ ಆ ಶೀತದ ತಾತ ಸುಶೀಲಂಗೆ ಹೇಳಿದ್ದು ಆಚೆ ಮಗ್ಗುಲಿನ ಆಯುರ್ವೇದ ಡಾಕ್ಟರನ್ನ ಕರೀ ಅಂತ!

ಇದೇ ಸುಶೀಲ ನನ್ನ ಕ್ಲಾಸಿನಲ್ಲಿ ಧೈರ್ಯವಾಗಿ, "ನಾನು ತಪ್ಪು ಮಾಡಿದರೆ ಬೈಬಾರದು ಸಾರ್; ಎಷ್ಟೋ ಆಗಲಿ ನಾವು ಮನುಷ್ಯರಲ್ಲವಲ್ಲ" ಎಂದು ಎದುರಿಸಿದ್ದಳು. ಏನು ಹೇಳಿದಳು ಅಂತ ಅರ್ಥ ಮಾಡುತ್ತಿದ್ದಾಗಲೇ, "ನಂದು ತಪ್ಪಿರಬಹುದು ಆದರೆ ಸ್ವಲ್ಪ ಸರೀನೂ ಇದೀನಿ." ಎಂದು ವಿವರಣೆ ಕೊಟ್ಟಳು!

ಸುಶೀಲ ಜಾರು ಮಾತಿನ ಪ್ರವೀಣೆ. ಮಳೆಗಾಲದ ಕೆಸರಲ್ಲಿ ಜಾರಿಯೋ ಕಾಲು ಹೂತುಕೊಂಡೋ ನಡೆಯುವುದನ್ನೇ ನಿಲ್ಲಿಸಬೇಕಾಗುತ್ತದಲ್ಲ ಹಾಗೇ ಈ ತರದ ಮಾತು ಅರ್ಥವನ್ನೆ ನಿಲ್ಲಿಸುತ್ತದೆ. ಇದು ಬರೀ ನಾಲಗೆ ತಡವರಿಸಿದ್ದಲ್ಲ–ಇಡೀ ಮಿದುಳೇ ಮುಗ್ಗರಿಸಿದ್ದು. ಮಯವದನದಲ್ಲಿ ತಲೆ ಅದಲು ಬದಲಾದಂತೆ ಎರಡು ಬೇರೆ ಬೇರೆ ವಿಚಾರಗಳನ್ನು ಕತ್ತರಿಸಿ ಅದರರ್ಧ ಇದಕ್ಕಿಟ್ಟು ಒಂದೇ ಫಿಲ್ಮಿನ ಮೇಲೆ ಎರಡು ಬಿಂಬ ಮೂಡಿಸಿದಂತೆ ಕಲಸಿ ಬಿಡುವುದು. ತುಂಬ ಕೊರೆಯುವವರನ್ನು ಭೈರಿಗೆ ಎಂದ ಹಾಗೆ ಸುಶೀಲಳಂತಹ ಜಾರು ಮಾತಿನವರನ್ನು ಈಳಿ ಎನ್ನಬಹುದು. ಇಂಥವರು ಕವಿಗಳಾದರೆ ತುಂಬ ಚೆನ್ನ. ಉದ್ವೇಗಗೊಂಡರಂತೂ ಇವರ ಮಾತು ಇಳಿಜಾರು ಮಾತಾಗುತ್ತದೆ. ನಮ್ಮ ಮನಸ್ಸು ಇವರ ಅರ್ಧಂಬರ್ಧ ಮಾತುಗಳನ್ನು ಹಿಡಿದು ಪಾತಾಳಕ್ಕೆ ಹೋದರೂ ತಲೆಗೆ ಅಂಟದ ಬಗೆಯು ಇರುವುದಿಲ್ಲ. ತನ್ನ ಗಂಡ ಬರೆದ ಒಂದು ಪ್ರೇಮದ ಕತೆ ಪ್ರಕಟವಾದಾಗ ಸುಶೀಲ "ಸಿನಿಮಾ ಆದರೆ ನಡುಗಿಸಿ

೧. **ವೈಶಾಲ್ಯ** (ಅ) ಹರವು, ಹರವಾಗಿರುವಿಕೆ, ವಿಸ್ತಾರ, ಉದಾ– ದೃಷ್ಟಿ ವೈಶಾಲ್ಯ, ಸಾಮ್ರಾಜ್ಯ ವೈಶಾಲ್ಯ. [ಸಂ. ವಿಶಾಲ = ಹರವಾದ – ಇಂದ]

೨. **ಮೌಲಿಕ** (ಈ) ಸ್ವತಂತ್ರ (ಕೃತಿ, ವಿಚಾರ ಇತ್ಯಾದಿಗಳಲ್ಲಿ) ಮಾದ; ಬೆಲೆಬಾಳುವ. ಉದಾ– ಮೌಲಿಕ ಕಲ್ಪನೆಗಳಿಂದ ಕೂಡಿದ ಕಾವ್ಯ. [ಸಂ. ಮೂಲ = ಬುಡ – ಇಂದ]

೩. **ಹತಬುದ್ಧ** (ಅ) ಏನು ಮಾಡಬೇಕೆಂದು ತೋಚದಿರುವ, ಬುದ್ಧಿ ಕೆಲಸ ಮಾಡಲಾರದ. ಉದಾ– ಸುದ್ದಿ ಕೇಳಿ ಹತಬದ್ಧನಾದನು. [ಸಂ. ಹತ = ಸತ್ತ + ಬುದ್ಧಿ – ಅದುಳ್ಳವ]

೪. **ಆಪ್ತವಾಕ್ಯ** (ನ) ವೇದ ಶಾಸ್ತ್ರಗಳಲ್ಲಿ ಬಂದ ಮಾತಿನ ಪ್ರಮಾಣ; (ಈ ಪ್ರಮಾಣವನ್ನು ಒಪ್ಪಬೇಕೆಂದು ಕೆಲವರು ಒಪ್ಪಲಾಗದೆಂದು ಇತರರು ವಾದಿಸುತ್ತಾರೆ), ಶಾಸ್ತ್ರ ಪ್ರಮಾಣ. [ಸಂ. ಆಪ್ತ = ಬೇಕಾದವರು + ವಾಕ್ಯ = ಮಾತು]

೫. **ಕರಗ** (ನ) ನೀರು ತುಂಬುವ ಕಲಶ, ಕೊಡ; ಕರಗ ಹೊರುವ ಒಂದು ಉತ್ಸವ. ಉದಾ– ಕರಗ ಹೊರುವ ಕೆಲಸ. [ಸಂ. ಕರಕ]

೬. **ಠರಾವು** (ನ) ತೀರ್ಮಾನ, ನಿಶ್ಚಯ; ಗೊತ್ತುವಳಿ; ನಿರ್ಧಾರ. ಉದಾ– ಮದುವೆ ಠರಾವಾಯಿತು. [ಹಿಂದೀ: ಠಹರ್ = ನಿಲ್ಲು – ಇಂದ]

೭. **ಮಿನಿ** (ಅ) ಚಿಕ್ಕ, ಬಲು ಚಿಕ್ಕ, ಹ್ರಸ್ವ. ಉದಾ– ಮಿನಿ ಕಥೆ ಅಂದರೆ ಅತಿ ಚಿಕ್ಕ ಕಥೆ. ಮಿನಿ ಸ್ಕರ್ಟ್ ಅಂದರೆ ತೀರ ಗಿಡ್ಡನ್ನ ಲಂಗ. [ಲ್ಯಾಟಿನ್ – ಮಿನಿಮಸ್ = ಅತಿ ಚಿಕ್ಕ]

೮. **ಕಕ್ಕಡ** (ಅ) ದೀವಟಿಗೆ, ದೊಂದಿ. ಪಂಜು; ದಪ್ಪ ಬತ್ತಿ, ಅದಕ್ಕೆ ಹಚ್ಚಿದ ದೀಪ. ಉದಾ– ಕಕ್ಕಡ ಹಿಡಿದು ಹುಡುಕಿದರೂ ಸಿಗಲಿಲ್ಲ. [ದೇಶ್ಯ – ತೆಲಗು – ಕಾಗಡಾ – ಮರಾಠಿ – ಕಾಕಡಾ]

೯. **ಜೈವಿಕ** (ಈ) ಪ್ರಾಣಿಗಳಿಗೆ ಸಂಬಂಧಿಸಿದ, ಜೀವ ಸಂಬಂಧಿ, ಇಂಗ್ಲೀಷಿನಲ್ಲಿ biol. ಉದಾ– ಜೈವಿಕ ತೈಲ = ಪ್ರಾಣಿಗಳ ನೆಣದಿಂದ (ವನಸ್ಪತಿಯಿಂದಲ್ಲ) ಉತ್ಪತ್ತಿಯಾದ ಎಣ್ಣೆ. [ಸಂ. ಜೀವ – ದಿಂದ]

೧೦. **ವಾರ್ತಿಕ** (ಅ) ಟೀಕೆ, ಟಿಪ್ಪಣಿ, ವೃತ್ತಿ, ಮೂಲ ಗ್ರಂಥಕ್ಕೆ ಬರೆದ ವಿವರಣೆಗಳಲ್ಲಿ ಒಂದು ವಿಧ. ಉದಾ– ಸೂತ್ರ ಗ್ರಂಥಕ್ಕೆ ವಾರ್ತಿಕ ಬರೆದ. [ಸಂ. ವೃತ್ತಿ = ವಿವರಣೆ – ಯಿಂದ]

೧೧. **ನಿಚ್ಚಟ** (ಅ) ಖಚಿತ, ನಿಶ್ಚಿತ, ಸ್ಥಿರ; ನಿಷ್ಕಪಟ. ಉದಾ– ನಿಚ್ಚಟವಾದ ಪ್ರಮಾಣ. [ಸಂ. ನಿಶ್ಚಿತ]

೧೨. **ಕುತ್ತಟ್ಟು** (ನ) ಚಿಕ್ಕ ಅಟ್ಟ, ಸಾಮಾನ್ಯವಾಗಿ ಹಳೇ ಕಾಲದ ಮನೆಗಳಲ್ಲಿ ಅಡಿಗೆ ಮನೆಯ ಮೇಲೆ ಇರುತ್ತಿದ್ದ ಪ್ರತ್ಯೇಕ ಅಟ್ಟ. [ದೇಶ್ಯ, ಕುರು = ಚಿಕ್ಕ + ಅಟ್ಟು]

●

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	...	ಸಾಧಾರಣ
೯–೧೦ ,,	...	ಉತ್ತಮ
೧೧–೧೨ ,,	...	ಅತ್ಯುತ್ತಮ

●

ವಿಜಯ ವಿಠಲ

ಜಾರು ಮಾತು ನಿಮಗೆ ಗೊತ್ತೆ?

ಭಾನುವಾರ ಮಧ್ಯಾಹ್ನ ಕಿವಿ ತಟ್ಟಿ ಡಾಕ್ಟರನ್ನು ಎಬ್ಬಿಸಿದಳು ಸುಶೀಲ. "ಡಾಕ್ಟ್ರೇ ನಂತಾತ ತೀರಿಕೊಳ್ತಾ ಇದಾರೆ. ಆಂದ್ರೆ ತೀಕೊಂಡಿಲ್ಲ. ಸ್ವಲ್ಪ ಜ್ವರ, ಅಲ್ಲಲ್ಲ ಉಸಿರು ತೊಂದರೆ ಇತ್ತು..." ಎಂದು ತಡಬಡಿಸುತ್ತ ಅವಸರಕ್ಕೆ ಸಿಲುಕಿ. ಕಣ್ಣುಜ್ಜುತ್ತ ಡಾಕ್ಟರು ಕೇಳಿದರು... "ನಿಮ್ತಾತ ತೀರಿ ನಾಲ್ಕು ವರ್ಷ ಆಯ್ತಲ್ಲ?"

"ಅದೇ ಅದೇ... ನಂ ಪಕ್ಕದ್ಮನೆ ತಾತ... ಇವತ್ತು ಬೆಳಿಗ್ಗೆ ಚೆನ್ನಾಗಿದ್ರಂತೆ... ಅಲ್ಲಲ್ಲ ಸ್ನಾನ ಮಾಡಿದ್ರಂತೆ..."

"ಎಂತದ್ದೋ ಏನು ಹೇಳೋದು" ಎಂದು ಯಾವುದೂ ಅರ್ಥವಾಗದೆ ಅವಳ ಹಿಂದೆ ಹೋದ ಡಾಕ್ಟರು ಐದೇ ನಿಮಿಷದಲ್ಲಿ ವಾಪಸಾದರು. ಏಕೆಂದರೆ ಆ ಶೀತದ ತಾತ ಸುಶೀಲಳಿಗೆ ಹೇಳಿದ್ದು ಅಜೆ ಮಾಗ್ಗಲಿನ ಅಂದು ಬೇಗ ಡಾಕ್ಟರನ್ನ ಕರೀ ಅಂತ!

ಇದೇ ಸುಶೀಲ ನನ್ನ ಕ್ಲಾಸಿನಲ್ಲಿ ಧೈರ್ಯವಾಗಿ, "ನಾನು ತಪ್ಪು ಮಾಡಿದರೆ ಪೈಚಾರದು ಸಾರ್; ಏಷ್ಟೋ ಆಗಲಿ ನಾವು ಮನುಷ್ಯರಲ್ಲವಲ್ಲ" ಎಂದು ಎದುರಿಸಿದ್ದಳು. ಏನು ಹೇಳಿದಳು ಅಂತ ಅರ್ಥ ಮಾಡುತ್ತಿದ್ದಾಗಲೆ, "ನಂದು ತಪ್ಪಿರಬಹುದು ಆದರೆ ಸ್ವಲ್ಪ ಸರೀನೂ ಇದೀನಿ," ಎಂದು ವಿವರಣೆ ಕೊಟ್ಟಳು!

ಸುಶೀಲ ಜಾರು ಮಾತಿನ ಪ್ರವೀಣೆ. ಮಳೆಗಾಲದ ಕೆಸರಲ್ಲಿ ಜಾರಿಯೋ ಕಾಲು ಹೂತು ಕೊಂಡೋ ನಡೆಯುವುದನ್ನೇ ನಿಲ್ಲಿಸಬೇಕಾಗುತ್ತದಲ್ಲ ಹಾಗೇ ಈ ತರದ ಮಾತು ಅರ್ಥವನ್ನೇ ನಿಲ್ಲಿಸುತ್ತದೆ. ಇದು ಬರೀ ನಾಲಗೆ ತಡವರಿಸಿದ್ದಲ್ಲ—ಇದು [illegible]. ಪಂಚವದನದಲ್ಲಿ ತಲೆ ಅದಲು ಬದಲಾದಂತೆ ಎರಡು ಬೇರೆ ಬೇರೆ ವಿಚಾರಗಳನ್ನು ಕತ್ತರಿಸಿ ಅದರರ್ಥ ಇದಕ್ಕಿಟ್ಟು ಒಂದೇ ಫಿಲ್ಮಿನ ಮೇಲೆ ಎರಡು ಬಿಂಬ ಮೂಡಿಸಿದಂತೆ ಕಲಸಿ ಬಿಡುವುದು. ತುಂಬ ಕೊರೆಯುವವರನ್ನು ಭೈರಿಗೆ ಎಂದ ಹಾಗೆ ಸುಶೀಲಳಂತವ ಜಾರು ಮಾತಿನವರನ್ನು ಈಳಿ ಎನ್ನಬಹುದು. ಇಂಥವರು ಕವಿಗಳಾದರೆ ತುಂಬ ಚೆನ್ನ. ಉದ್ವೇಗಗೊಂಡರಂತೂ ಇವರ ಮಾತು ಇನ್ನೂ ಜಾರು ಮಾತಾಗುತ್ತದೆ. ನಮ್ಮ ಮನಸ್ಸು ಇವರ ಅರ್ಥಾರ್ಥ ಮಾತುಗಳನ್ನು ಹಿಡಿದು ಪಾತಾಳಕ್ಕೆ ಹೋದರೂ ತಲೆಗೆ ಅಂಟಿದ ಒಗಟು ಬಿಡುವುದಿಲ್ಲ. ತನ್ನ ಗಂಡ ಬರೆದ ಒಂದು ಪ್ರೇಮದ ಕತೆ ಪ್ರಕಟವಾದಾಗ ಸುಶೀಲ "ಸಿನಿಮಾ ಆದರೆ ನಡುಗಿಸಿ

ಬಿಡುತ್ತೆ" ಎಂದು ಹೊಗಳಿದ್ದಳು! ನನಗೆ, "ಓದಲಿಕ್ಕೆ ಆಗದೇ ಹೋದರೂ, ಅದನ್ನು ಮಾತ್ರ ಖಂಡಿತ ಬಿಡಬೇಡಿ" ಎಂದು ಶಿಫಾರಸು ಮಾಡಿದಳು.

ಜಾರು ಮಾತಿನ ಗಮ್ಮತ್ತು ಇದೇ– ನೀವು ಅದನ್ನು ಪೂರ್ತಿ ಕೇಳಿದಿರೋ ಇಲ್ಲವೋ ಅಂತ ಗೊತ್ತಾಗೋದೇ ಇಲ್ಲ. ಏನನ್ನೋ ಮರೆತು ಬಂದ ಎಂದು ಸಿಕ್ಕಿದ್ದನ್ನೆಲ್ಲ ದಾರಿಯಲ್ಲಿ ಜ್ಞಾಪಿಸಿಕೊಳ್ಳುವ ಹಾಗೆ ಅದು. ಕೋರೆ ಫೋರ್ಡ್ ಹೇಳುವಂತೆ ಈ ಜಾರು ಭಾಷೆ ಒಂದು ಟೈಮ್ ಬಾಂಬ್. ನಿಮ್ಮ ಸುಪ್ತ ಪ್ರಜ್ಞೆಯೊಳಕ್ಕೆ ಟಕ ಟಕಿಸುತ್ತ ಇದ್ದು ಐದಾರು ನಿಮಿಷದಲ್ಲಿ ನೀವು ಈಗ ಕೇಳಿದ್ದು ಒಂದಷ್ಟು ವಕ್ರವಾಗಿದೆ ಎಂಬ ಜ್ಞಾನ ನಿಮ್ಮ ಮನಸ್ಸಿನಲ್ಲಿ ಸ್ಫೋಟವಾಗುತ್ತದೆ.

"ಗಾಂಧಿ ಎಲ್ಲಾದರೂ ಬದುಕಿದ್ದಿದ್ದರೆ ಅವರ ಸಮಾಧೀಲೇ ತಿರುಕ್ಕೊಂಡು ಬಿಡೋರು. ಈ ದೇಶ ನೋಡಿ" ಎಂದಿದ್ದಳು ಸುಶೀಲ. ಒಮ್ಮೆ ಬೇಡಾಂದರೂ ಕೇಳದೆ ಒಂದು ಸಲ ಡಿಬೇಟ್‌ನಲ್ಲಿ ಮಾತನಾಡಲು ಶುರು ಮಾಡಿದ್ದಳು. "ನಿಮಗೆ ನಾನು ಕೇಳಲೇಬೇಕಾದ ಒಂದು ಪ್ರಶ್ನೆ ಇದೆ... ಮನು ಹೇಳಿದ ಹಾಗೆ ನಾವು ಎಲ್ಲ ಜಾತಿಗಳಲ್ಲೂ ಕುಟುಂಬಯೋಜನೆ ಯಾಕೆ ಮಾಡಬೇಕು?..."

ತುಂಬ ಸರಳವಾದ ಜಾರು ಮಾತಿನ ಮಾದರಿ ಎಂದರೆ ಗಾದೆಗಳನ್ನು ಪದಗಳನ್ನು ಮಿಶ್ರ ಮಾಡಿ ಬಿಡೋದು. ಉದಾಹರಣೆಗೆ,

"ತಾಮ್ರದ ಚೆಂಬು ತಾಯಿ ಮಕ್ಕಳನ್ನು ಕೆಡವಿತು."

"ಅತ್ತೆಗೊಂದು ಕಾಲು ಸೊಸೆಗೊಂದು– ಕಾಲು"

"ಅತ್ತೆ ಮೇಲಿನ ಕೋಪ ಕತ್ತೀಲಿ ತೀರಿಸಿದ



ಹಾಗೆ."

"ಅದೇನೋ ಕೇಳ್ತಾರಲ್ಲ... ಹಾಗೆ ಮಾಡಿ ಬಿಟ್ಟೆ."

"ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯ ವಿಲ್ಲ."

"ಎಷ್ಟು ಕತ್ತಲೆ ಇತ್ತು ಅಂದರೆ ನಂ ಮುಖಾನೇ ನಮಗೆ ಕಾಣ್ತಾ ಇರಲಿಲ್ಲ."

ಪರಭಾಷೆಯವರಂತೂ ಜಾರು ಮಾತಿನ ಕುಪ್ಪೆಗಳನ್ನೇ ಕನ್ನಡಕ್ಕೆ ತಂದು ಸುರೀತಾ ಇದ್ದಾರೆ. ನಮ್ಮ ಪಕ್ಕದ್ಮನೆ ರೀಟಾ ನಿನ್ನೆ ಬಂದಿ ಹಲ್ವ ಮಾಡ್ತಾ ಕೈ ಉರಿದುಕೊಂಡಳಂತೆ! ಪೆಟ್ರೋಲ ಕೆಟ್ಟು ಕಾರು ಬಿಡಬೇಕಾದ ಡ್ರೈವರ್ ಪೇಚಾಡುವಾಗಿನ ಕಷ್ಟ ಇನ್ನೊಂದು ರೀತಿ. "ಕಾರು ಸುಮ್ಮನೆ ಹೋಗ್ತಾ ಇರ್ತಾರೆ. ಎಡಕ್ಕೆ ತಿರುಗಿಸಿದರೆ ಬಲಕ್ಕೆ ಹೋಗ್ತಾರೆ. ಅಷ್ಟು ಸಿಕ್ಕ ಹಾಗೆ ಬ್ರೇಕೂ...ಹಿಂದೆ ತಿರುಗ್ತಾರೆ"?

ಸುಶೀಲಳ ಇನ್ನೊಂದು ವೈಶಿಷ್ಟ್ಯ ಎಂದರೆ ನಾವು ಕೇಳಿದ ಪ್ರಶ್ನೆಗೆ ಅದರ ಮುಂದೆ ಇನ್ನೇನು ಕೇಳುವುದೆಂದು ಊಹಿಸಿ ಅದಕ್ಕೆ ಉತ್ತರಿಸುವುದು. ಆಕೆ ಮದ್ರಾಸಿಗೆ ಹೋಗಿ ಬಂದಾಗ "ಹೇಗಿತ್ತು ಪ್ರವಾಸ ಸುಶೀಲ?" ಅಂದೆ. "ತುಂಬ ಸುಸ್ತಾಯ್ತು ಸಾರ್," ಅಂದಳು! ಉಂಡೆನ್ಸೋ ಗಾಂಚಾ ಎಂದರೆ ಮುಂಡಾಸು ಹೋದರು ಹೊಳೆ ಅಂದಂತೆ-ಹಾಗೆ ಈ ಶೈಲಿ.

ಜಾರು ಮಾತಿನವರು ಒಮ್ಮೊಮ್ಮೆ ಇಡೀ ವಾಕ್ಯವನ್ನೇ ಹೇಗೆ ಬುಡಮೇಲು ಮಾಡಿ ತಿರುಗಿಸುತ್ತಾರೆ ಎಂದರೆ ನೀವು ಎಷ್ಟೇ ಪ್ರಯತ್ನಿಸಿದರೂ ಅದನ್ನು ಮತ್ತೆ ಸರಿ ಮಾಡಲು ಸಾಧ್ಯವೇ ಇಲ್ಲ. 'ಅವರು ಮಧ್ಯಾಹ್ನ ಒಂದು ತರಹ ಹೇಳ್ತಾರೆ ಮತ್ತೆ ಇನ್ನೊಂದು ಮಾಡ್ತಾರೆ!' ಹೀಗಾಗಿ ಮದುವೆಯಾದ ಹೊಸದಾಗಿ ಸುಶೀಲ ಹೇಳಿದ್ಲು: 'ಒಬ್ಬರ ಖರ್ಚಿನಲ್ಲಿ ಇಬ್ಬರೂ ಬದುಕಬಹುದು. ಆದರೆ ಎರಡರಷ್ಟು ಹಣ ಬೇಕಾಗುತ್ತೆ. ಕೆಲವು ಸಲ—' ಇದರ ಅರ್ಥ ಏನೆಂದು ಇನ್ನೂ ನನಗೆ ಗೊತ್ತಾಗಿಲ್ಲ.

ಸುಶೀಲ ತನ್ನ ಹಳ್ಳಿ ಮನೆಯ ಬಗ್ಗೆ ಮಾತನಾಡುವಾಗ ಭಾವುಕಳಾಗುತ್ತಾಳೆ. ಕಣ್ಣುಗಳನ್ನು ಮಾಡಿ, "ನಮ್ಮನೆ ಹಿಂದಿನ ಕೆರೆ ನೀರು ಮನೆಮನೆಗೆಲ್ಲ ಬರುತ್ತೆ ಗೊತ್ತಾ... ಅಮ್ಮ ಮಾಡಿದ ಅಡುಗೆ ನಾನು ಪೂರ್ತಿ ಹಾಳಾಗುವ ತಿನ್ತಾ ಇದ್ದೆ. ಅವಳೇನಾದರೂ ತಿಂಡಿ ಮಾಡಿ ದಳೂ ಅಂದ್ರೆ ರೂಮ್ನಲ್ಲಿರೋರೆಲ್ಲ ಅಲ್ಲೇ ಇರ್ತೋರು. ಎಷ್ಟು ಚೆನ್ನ ಅಲ್ವ. ನೆನಪು ಕಾಡೋದು...." ಎನ್ನುತ್ತಾಳೆ. ಸುಶೀಲಳ ಹೊಗಳಿಕೆಗಳಂತೆಯೇ ಬೈಗುಳವೂ ತಬ್ಬಿಬ್ಬು ಮಾಡುತ್ತದೆ. "ಬೇಜಾರಾಗಲ್ಲ, ನಿಮ್ಮನ್ನು ಸ್ನೇಹ ಮಾಡಿರಲಿಲ್ಲ. ಕಾರಣ ನಂಬಿ ನನ್ನ ಮತ್ತೆ..." ಎಂದು ಒಂದು ಸಾರೆ ಅತ್ತೆಗೆ ಬೈದಿದ್ದಳು. ಹೇರ್‌ಕಟ್ ಮಾಡಿ ಕೊಂಡು ಬಂದ ರೀಟಾಗೆ, "ನಿನ್ನ ಮುಖಕ್ಕಾಗೋ ಅಷ್ಟು ಚೆನ್ನಾಗಿ ಕಾಣ್ತೀ" ಎಂದದ್ದು ಪ್ರಶಂಸೆಯೋ ಹೊಗಳಿಕೆಯೋ ಅಂತ ಒಗಟಾಗಿಯೇ ಉಳಿದಿದೆ.

ಎಂದು ಬಿಟ್ಟ ದೋಸೆಗಳನ್ನು ಗಟ್ಟಿ ಹಾಕಿ ಒಂದು ಹೊಸ ಬಗೆಯ ರೊಟ್ಟಿ ಕರ್ ಮಾಡಿ ರಾಕೆಟ್ ಶೈಲಿಯಲ್ಲಿ ಭಾಷೆ ಬೆನ್ನು ಬಳಸುವುದು ಜಾರು ಮಾತಿನ ಇನ್ನೊಂದು ವಿಧಾನ. ಪಕ್ಕದ ಮನೆಯವ ರಿಗೆ ತೊಂದರೆಯಾಗುತ್ತೆಂದು ಯೋಚಿಸಿ, ರಾತ್ರಿ ಹನ್ನೊಂದಕ್ಕೆ ಬಂದು ತುಂಬ ಗಲಾಟೆ ಮಾಡುತ್ತಿದ್ದ ಹುಡುಗರಿಗೆ ಸುಶೀಲ ಗದರಿ ಸಿದ್ಲು: "ಸುಮ್ಮನಿರ್ರೀ. ಗಲಾಟೆ ಮಾಡಕ್ಕೆ ಇದೊಂದೇ ಮನೆ ಅಲ್ಲ ನಿಮ್ಮದೇನೋ, ಅಂತ ಕಾಣಲ್ವ?"

ಜಾರು ಮಾತಿನವರ ಜತೆ ಜಗಳವಾಡು ವುದು ಸಾಧ್ಯವೇ ಇಲ್ಲ. ನಿಮ್ಮ ಮಾತನ್ನ, ಜಾರು ಮಾತಿಗೆ ಬದಲಿಸಿಕೊಳ್ಳಬಾರದೇಕೆ?



ಆತ ರೇಸ್‌ಕೋರ್ಸ್ ಸಮೀಪ ಬಸ್ಸಿನಿಂದಿಳಿದ. ಕಾದ ಭೂಮಿಯ ಮೇಲೆ ನಡೆಯಲಾರಂಭಿಸಿದಾಗ ಬಿಸಿಲಿನ ತಾಪ ಮೈಯನ್ನೆಲ್ಲಾ ವ್ಯಾಪಿಸುತ್ತಿರುವಂಥ ಅನುಭವವಾಯಿತು. ಆತ ಉಗುಳನ್ನು ನುಂಗಿಕೊಂಡು, ಒಣಗಿದ್ದ ಗಂಟಲನ್ನು ತೇವಗೊಳಿಸಿಕೊಳ್ಳುತ್ತಾ ತನ್ನೆದುರು ಮಲಗಿದ್ದ ರಸ್ತೆಯನ್ನೇ ದಿಟ್ಟಿಸಿದ. ಅಂಕುಡೊಂಕಾದ ಡಾಂಬರು ರಸ್ತೆ; ಬಿಸಿಲಿನ ಜಳಕ್ಕೆ ನಾಗರಹಾವಿನ ಹೆಡೆಯ ಮೇಲ್ಭಾಗದಂತೆ ಥಳಥಳನೆ ಹೊಳೆಯುತ್ತಿತ್ತು. ಆತ ಬಂದಿಳಿದ ಬಸ್ಸು ಆತನ ಪಕ್ಕಕ್ಕೆ ಹಾದು, ರಸ್ತೆಯ ಎಡ ತಿರುವಿನಲ್ಲಿ ಮರೆಯಾದಾಗ, ಬಲಪಕ್ಕದಲ್ಲಿ "ರೇಸ್‌ಕೋರ್ಸ್" ಎಂಬ ಸೂಚಿಫಲಕ ಇರುವುದನ್ನು ಗಮನಿಸಿದ.

ಸೂರ್ಯನ ಪ್ರಖರ ಕಿರಣಗಳು ಆತನಿಗೆ ದೇಹವನ್ನು ಕುಕ್ಕುತ್ತಿರುವಂತೆನಿಸಿತು. ಬಾಯಾರಿಕೆಯಿಂದ ತುಂಬಾ ಬಳಲಿದ್ದ ಆತ ಉಗುಳು ನುಂಗುತ್ತಾ ನಡೆಯಲಾರದೆ ಕಾಲೆಳೆಯುತ್ತಿದ್ದ.



ಗುರುಪಾದ

ನಿಧಾನವಾಗಿ ನಡೆಯುತ್ತಿದ್ದವನು ಬಂದ [illegible] ಕೆಳಗೆ ನಿಂತು ಜೇಬನ್ನು ತಡಕಾಡಿ ತಂದು ಕಾಗದವೊಂದನ್ನು ಹೊರತೆಗೆದು ಕಣ್ಣಾಡಿಸಿದ– 'ಜೆ. ಬ್ಲ್ಯಾಕ್ ಜಾರ್ ಭಾಗ ರಸ್ತೆ ಅಲಿ [illegible] ದೊಡ್ಡಮನೆ--೨.'

ಅಲ್ಲಿಂದ ತುಸು ದೂರಕ್ಕೆ ರಸ್ತೆ ಬದಿಯಲ್ಲಿ ಕಾಣುತ್ತಿತ್ತು. ಒಬ್ಬನಿಗೆ ಸೈಕಲ್‌ವಾಲನೊಬ್ಬ ಪಂಪಿನಿಂದ ಸೈಕಲ್ ಟ್ಯೂಬಿಗೆ ಗಾಳಿ ತುಂಬುತ್ತಿದ್ದ. ಅವನ ಪಕ್ಕದಲ್ಲೇ ನ ತೆರೆದಿದ್ದ ಸೈಕಲ್ ಪಂಕ್ಚರ್ ಆಗಿದ್ದು ಟ್ಯೂಬನ್ನು ಸರಿಪಡಿಸಲು ಚಕ್ರದಿಂದ ಹೊರಗೆ ಬಿಡಿಸಲಾಗಿತ್ತು. ಅದರ ಸಮೀಪದಲ್ಲಿಯೇ ಬೋಗುಣಿಯೊಂದರಲ್ಲಿ ಕೊಳಕು ರಾಡಿಯಂತಹ ನೀರಿತ್ತು.

ನೀರು!

ನೀರನ್ನು ಕಂಡೊಡನೆ ಆತನಿಗೆ ಬಾಯಾರಿಕೆ ಕೆರಳಿ ಸಹಿಸಲಸಾಧ್ಯವಾಯಿತು. ಆ ಕೊಳಕು ನೀರನ್ನಾದರೂ ಕುಡಿಯುವ ತವಕದಲ್ಲಿ ಆತ ಸೈಕಲ್‌ವಾಲನನ್ನು ಸಮೀಪಿಸಿದ. ಸೈಕಲ್ ಟ್ಯೂಬಿಗೆ ಗಾಳಿ ತುಂಬುವುದರಲ್ಲಿ ನಿರತನಾಗಿದ್ದ ಆತನನ್ನೇ ಕ್ಷಣ ಕಾಲ ದಿಟ್ಟಿಸಿದ. ಅವನ ಹಣೆ ಮೇಲ್ಗಡೆ ಬೆವರಿನ ಹನಿಗಳು. ಹತ್ತಿರದ ಕವಲೊಡೆದು ಬಸಿಯುತ್ತಿತ್ತು. ಅಂತಹ ಬಿಡೆದು ಕವಲೊಡೆದ ಬೆವರು ಅವನ ಮೂಗಿನ ತುದಿಗೂ ಹೋಗುತ್ತಿದ್ದುದನ್ನು ಆತ ಗಮನಿಸದೇ ಇರಲಿಲ್ಲ.

"ಕುಡಿಯಲು ಸ್ವಲ್ಪ ನೀರು ಕೊಡ್ತೀರಾ?" ಆತ ಪ್ರಶ್ನಿಸಿದ. ಸೈಕಲ್‌ವಾಲ ತಲೆ ಮೇಲೆತ್ತದೆ ಅವನ ಬಾಯಿಯಿಂದ [illegible] ಕೈತೋರಿಸಿ, [illegible] ನಲ್ಲಿ ದೆ" [illegible].

ಆ ಸೈಕಲ್ [illegible] ಬೀದಿಯ ಬಲಪಕ್ಕದಲ್ಲಿ [illegible] ನಲ್ಲಿ [illegible] [illegible] [illegible] ಗೇಟಿನ ಬಲ ಪಕ್ಕದಲ್ಲೇ ನಲ್ಲಿ ಇರುವುದನ್ನು ಗಮನಿಸಿದ.

ನಲ್ಲಿಯನ್ನು ತಿರುವಿದ. ಥಟ್ಟನೆ [illegible] ಬಂದ ನೀರು ಕೈ [illegible]. [illegible] ಬಾಯಾರಿಕೆಯಿಂದ ಗಂಟಲೆಲ್ಲಾ ಒಣಗಿಹೋಗಿ

ದ್ದರೂ ಆತ ನೀರನ್ನು ಹಾಗೆಯೇ ಹರಿಯಬಿಟ್ಟ.

"ನೀನಲ್ಲಿ ಏನು ಮಾಡ್ತಿಯಾ?..." ಹಿಂಬದಿಯಿಂದ ಕೂಗು ಕೇಳಿ ಬಂದಾಗ ಆತ ಹಿಂತಿರುಗಿ ನೋಡಿದ. ಅದೇ ಘೂರ್ಖ! ಕೆಂಗಣ್ಣುಗಳಿಂದ ಆತನನ್ನೇ ದಿಟ್ಟಿಸುತ್ತಾ ನಿಂತಿದ್ದ.

"ನೀರು ಕುಡಿಯಬೇಕಿತ್ತು," ಆತ ನವ್ರುನಾಗಿ ನುಡಿದ.

"ಹಾಂ? ಮತ್ತೇಕೆ ಕುಡಿಯುತ್ತಿಲ್ಲ," ಬಿರುಸಾಗಿ ಬಂದಿತ್ತು ಘೂರ್ಖನ ನುಡಿ.

"ನೀರು ಬಹಳ ಬಿಸಿಯಿದೆ," ನುಡಿದ. ಆತ ಘೂರ್ಖನಿಂದ ಮತ್ತೊಂದು ಮಾತು ಬರುವುದರೊಳಗೇ ಸುರಿಯುತ್ತಿದ್ದ ನೀರಿಗೆ ಬೇಗ ಬೇಗನೆ ಬೊಗಸೆಯೊಡ್ಡಿದ. ನೀರಿಗೆ ಅಷ್ಟೊಂದು ಬಿಸಿಯಿರಲಿಲ್ಲ. ಆತುರಾತುರವಾಗಿ ನೀರು ಕುಡಿದು ನಲ್ಲಿಯನ್ನು ತಿರುವಿ ಬಂದ್ ಮಾಡಿದ. ಈಗಲೂ ಆತನಿಗೆ ಬಾಯಾರಿಕೆ ಹಿಂಗಿರಲೇ ಇಲ್ಲ.

ರಣಬಿಸಿಲು. ರಸ್ತೆಯಲ್ಲಿ ಕೆಲವು ಸೈಕಲ್ ಸವಾರರನ್ನು ಬಿಟ್ಟರೆ ಅಪರೂಪಕ್ಕೊಮ್ಮೆ ಬರ್ರನೆ ಹಾದು ಹೋಗುವ ಕಾರುಗಳ ಓಡಾಟ ಮಾತ್ರ ಇತ್ತು. ಬಹುಮಟ್ಟಿಗೆ ಗಿಜಿಗಿಜಿಯಿಲ್ಲದ ಪ್ರಶಾಂತ ವಾತಾವರಣವೇ ಅದಾಗಿತ್ತು.

ಆತ ಹಾಗೆಯೇ ನಡೆಯುತ್ತಾ ಮುಂದು ವರಿದಾಗ 'ಚಾರ್ ಬಾಗ್ ರಸ್ತೆ' ಎಂಬ ನಾಮಫಲಕವನ್ನು ಕಂಡದ್ದೇ ತಡ, ಜೇಬಿನಿಂದ ಮತ್ತೊಮ್ಮೆ ವಿಳಾಸ ತೆಗೆದು ಓದಿಕೊಂಡ: 'ಜಿ. ಬ್ಲಾಕ್ ಚಾರ್‌ಬಾಗ್ ರಸ್ತೆ ಆಲಿಗಂಜ್ ಮನೆಸಂಖ್ಯೆ–೨.'

ಚಾರ್‌ಬಾಗ್ ರಸ್ತೆ ಜೋಡಿಯಾಗಿತ್ತು. ಆತನಿಗೆ ಯಾವ ರಸ್ತೆಯಲ್ಲಿ ಹೋಗಬೇಕೆಂಬುದೇ ತಿಳಿಯದೆ ಕಕ್ಕಾವಿಕ್ಕಿಯಾದ. ಯಾರನ್ನಾದರೂ ಕೇಳಬೇಕೆಂದು ಸುತ್ತಲೂ ಕಣ್ಣು ಹಾಯಿಸಿದ. ಯಾರೂ ಕಾಣಲಿಲ್ಲ. ಹಳತಾದ ಅಷ್ಟೇ ಕೊಳಕಾದ ಸೈಕಲ್ ಟ್ಯೂಬಿಗೆ ಗಾಳಿ ತುಂಬುತ್ತಿದ್ದ. ಅದೇ ಸೈಕಲ್‌ವಾಲನತ್ತ ಆತನ ದೃಷ್ಟಿ ಬಿತ್ತು. ಸೈಕಲ್‌ವಾಲನ ಪಕ್ಕದಲ್ಲಿ ಕುಂಟು ವ್ಯಕ್ತಿಯೊಬ್ಬ, ಕಂಕುಳಲ್ಲಿದ್ದ ಕ್ರಚಸ್ಸಿಗೆ ದೇಹದ ಭಾರವನ್ನೆಲ್ಲಾ ಬಿಟ್ಟು ಬಾಗಿ ನಿಂತಿದ್ದ. ಆ ವ್ಯಕ್ತಿಯ ಬಟ್ಟೆಯಲ್ಲಿದ್ದಷ್ಟೇ ಕೊಳಕು ಅವನ ಮುಖದಲ್ಲಿಯೂ ಇದ್ದಂತಿತ್ತು. ಸೈಕಲ್‌ವಾಲನಲ್ಲಿಗೆ ಮರಳಿ ಬಂದ ಆತ ಆಲಿಗಂಜಿಗೆ ಯಾವ ರಸ್ತೇಲಿ ಹೋಗಬೇಕೆಂದು ವಿಚಾರಿಸಿದ.

ಪಂಪಿನಿಂದ ಕೈ ತೆಗೆಯದೆ ಸೈಕಲ್‌ವಾಲಾ ತಲೆಯನ್ನು ತುಸು ಬಲಬದಿಗೆ ತಿರುಗಿಸಿ ನೇರವಾಗಿ ಹೋಗಬೇಕೆಂಬಂತೆ ಕಣ್ಸನ್ನೆ ಮಾಡಿದ.

ಆತ ನೇರವಾಗಿ ನಡೆಯತೊಡಗಿದ. ಬಿಸಿ ಗಾಳಿ ಮುಖಕ್ಕೆ ರಾಚುತ್ತಿತ್ತು.

ಆತನಿಗೆ ಸ್ವಲ್ಪ ಸುಧಾರಿಸಿಕೊಳ್ಳಬೇಕೆನಿಸಿತು ಮರವೊಂದರ ಕೆಳಗೆ ಹೋಗಿ ನಿಂತಾಗ ಆತನಿಗೆ ಜ್ವರ ಬಂದಂತೆನಿಸಿತು. ಕೊಂಚ ಕಾಲ ಅಲ್ಲಿಯೇ ನಿಂತು ಯಾವುದಾದರೂ ವಾಹನಗಳು ಬರಬಹುದೆಂದು ಕಾತುರದಿಂದ ಕಾದ.

ಕಾರೊಂದು ಸರ್ರನೆ ಹಾದು ಹೋದಾಗ ಹಿಂದೊಮ್ಮೆ ಯಾರೋ ಹೇಳಿದ್ದು ಥಟ್ಟನೆ ನೆನಪಾಯಿತು– ದಿಲ್ಲಿಯಲ್ಲಿ ಕಾರಿನವರು ಪಾದಚಾರಿಗಳಿಗೆ ಲಿಫ್ಟ್ ಕೊಡುತ್ತಾರೆ, ಎಂದು. ಆ ಭಾಗ್ಯ ತನಗೀಗ ಒದಗಿ ಬಂದಿದ್ದರೆ ...ಎಂದುಕೊಂಡ.

ದೂರದಲ್ಲಿ ಮತ್ತೊಂದು ಕಾರು ಬರುತ್ತಿರುವುದನ್ನು ಗಮನಿಸಿದ. ಅದು ಸಮೀಪಿಸುತ್ತಿದ್ದಂತೆಯೇ, "ಲಿಫ್ಟ್ ಪ್ಲೀಸ್," ಎಂದು ತನ್ನ ಶಕ್ತಿಯನ್ನೆಲ್ಲಾ ಒಗ್ಗೂಡಿಸಿ ಆತ ಗಟ್ಟಿಯಾಗಿ ಕೂಗಿಕೊಂಡ.

ಆತನ ಕೂಗು ಭರದಿಂದ ಬೀಸುತ್ತಿದ್ದ ಗಾಳಿಯಲ್ಲಿ ಬೆರೆತುಹೋಗಿತ್ತು. ಕಾರು ಬಂದ ವೇಗದಲ್ಲೇ ಹೊರಟುಹೋಗಿತ್ತು.

ಬಾಯಾರಿಕೆ, ಬಳಲಿಕೆ ಮತ್ತು ಗೊಂದಲಗಳಿಂದ ತತ್ತರಿಸಿ ಹೋಗಿದ್ದ ಆತ ಕೊನೆಯ ಬಾರಿಯಾಗಿ ಸುತ್ತಮುತ್ತ ದೃಷ್ಟಿ ಹರಿಸಿ ಬೀದಿಗಿಳಿದ.

"ನೀವೆಲ್ಲಿಗೆ ಹೋಗ್ಬೇಕಾಗಿದೆ?"

ಹೌದು. ಅದೇ ಕುಂಟ ವ್ಯಕ್ತಿ... ಅದೇ ಕೊಳಕು ವ್ಯಕ್ತಿ...ಕಂಕುಳಲ್ಲಿ ಕ್ರಚಸ್ ಇಟ್ಟು

ಕೊಂಡವನೆ. ಜೋಲಾಡುತ್ತಿದ್ದ ಮೋಟುಕಾಲಿನ ಆ ವ್ಯಕ್ತಿಯೇ ಈಗ ಸೈಕಲ್ಲಿನಲ್ಲಿ ಬಂದಿದ್ದಾನೆ.

"ಆಲಿಗಂಜ್ ಇಲ್ಲಿಂದೆಷ್ಟು ದೂರವಾಗುತ್ತೆ?"

"ಸ್ವಲ್ಪ ದೂರವಾಗುತ್ತೆ. ಹಾಗಂತ ತೀರಾ ಹತ್ರನೂ ಆಗೋಲ್ಲ." ಆತ ತಾತ್ವಿಕವಾಗಿ ಮರು ನುಡಿದ.

"ಹಾಗಂದ್ರೆ..."

"ಅಂದ್ರೆ ಅದು ತುಂಬಾ ದೂರವೇನಲ್ಲ. ಆದ್ರೆ ಈ ಬಿಸಿಲಲ್ಲಿ ನಿಮಗದು ದೂರವೆನಿಸ ದೇನೂ ಇರೋಲ್ಲ."

ಆತ ಸುಮ್ಮನಾಗಿದ್ದ ಈತನನ್ನೇ ಕ್ಷಣಕಾಲ ದಿಟ್ಟಿಸಿದ. ಬಿರುಸಾಗಿ ಬೀಸುತ್ತಿದ್ದ ಗಾಳಿಯಲ್ಲಿ ಬೆರೆತ ಧೂಳು ತಿಪ್ಪರಲಾಗ ಹಾಕುತ್ತಿತ್ತು.

"ನಿಮ್ಗೆ ಆಲಿಗಂಜಿಗೆ ಹೋಗ್ಬೇಕಿಲ್ಲವಾ? ಮತ್ತೇಕೆ ಯೋಚಿಸ್ತೀರಾ? ಬನ್ನಿ ಹೋಗೋಣ."

"ಆಲಿಗಂಜಿಗೇನೇ ಹೋಗ್ಬೇಕು."

"ಮತ್ತೇಕೆ ನಿಂತಿದ್ದೀರಾ ಬನ್ನಿ..."

ಆತನಿಗೆ ಏನು ಹೇಳಬೇಕೆಂಬುದೇ ತಿಳಿಯದೆ ಈತನನ್ನೇ ನೋಡ ತೊಡಗಿದನು. "ಬನ್ನಿ, ಕೂತ್ಕೊಳ್ಳಿ," ಎಂದು ಈತ ತನ್ನಷ್ಟೇ ಕೊಳಕಾಗಿದ್ದ ಸೈಕಲ್ಲಿನ ಕ್ಯಾರಿಯರ್ ಕಡೆಗೆ ಕೈ ತೋರಿಸಿದ.

ಈತನ ಮಾತಿಗೆ ವಿಸ್ಮಯಗೊಂಡು ಆತ, "ನೀನು ಹೋಗಪ್ಪ; ನಾನು ನಡೆದು ಹೋಗ್ತೇನೆ," ಎಂದ.

"ಬೇಡ ಬೆಡ, ಬನ್ನಿ, ಈ ಬಿಸಿಲಿನಲ್ಲಿ ನಿಮ್ಗೆ ಅಲ್ಲಿಯವರೆಗೆ ನಡೆಯೋಕಾಗೊಲ್ಲ," ಎಂದು ಒತ್ತಾಯಿಸುತ್ತಾ ಈತ ತನ್ನ ಧೋತಿಯಿಂದ ಸೈಕಲ್ ಕ್ಯಾರಿಯರ್‌ನ್ನೊಮ್ಮೆ ಜಾಡಿಸಿದ. ಈ ಹೊತ್ತಿನಲ್ಲಿ ನಿಮ್ಗೆ ಯಾವ ವಾಹನವೂ ಸಿಕ್ಕೊಲ್ಲ. ಬನ್ನಿ ಹೋಗೋಣ," ಎಂದ.

ಆತನಿಗೀಗ ಗೊಂದಲವಾಯಿತು. ಯೋಚಿಸುತ್ತ ನಿಲ್ಲಲೂ ಸಮಯವಿರಲಿಲ್ಲ. ಆತ ಸೈಕಲ್ಲನ್ನು ಸಮೀಪಿಸಿದ. ಈತ ಆತನನ್ನೇ ಎವೆಯಿಕ್ಕದೇ ನೋಡುತ್ತಾ ಮುಗುಳ್ನಕ್ಕ. ಕಂಕುಳಲ್ಲಿದ್ದ ಕ್ರಚೆಸ್ಸನ್ನು ತೆಗೆದು ತೂರಾಡಿನ ದೇಹವನ್ನು ಸಮತೋಲನಗೊಳಿಸಿಕೊಂಡು ಬಳಿಕ ಕ್ರಚೆಸ್ಸನ್ನು ಸೈಕಲ್ಲಿನ ಹ್ಯಾಂಡಲ್ಲಿನ ಮೇಲಿರಿಸಿಕೊಂಡ.

"ನೀನು ಕ್ಯಾರಿಯರ್ನಲ್ಲಿ ಕೂತ್ಕೊಳಪ್ಪ. ನಾನು ಸೈಕಲ್ ಹೊಡೀತೇನೆ" ಆತ ಸಲಹೆ ಮಾಡಿದಾಗ ಈತ, "ಬೇಡ ಬೇಡ, ನಾನೇ ಸೈಕಲ್ ಹೊಡಿತೇನೆ" ಎಂದ.

"ನನಗೇನು ಸಂಕಟವೋಲ್ಲ. [illegible]," ಎಂದು ನಗುವಾಗ ಆತನ ದೃಷ್ಟಿ ಕತ್ತರಿಸಿ ಹಾಕಲ್ಪಟ್ಟ ತನ್ನ ಕಾಲಿನ ಮೇಲೆ ಕೇಂದ್ರೀಕೃತವಾಗಿರುವುದನ್ನು ಗಮನಿಸಿದ ಈತ ನುಡಿದ.

"ನಿಮಗ್ಯಾಕೆ ಚಿಂತೆ? ಒಂದೇ ಕಾಲ್ನಲ್ಲಿ ನಾನು ಸೈಕಲ್ ಹೊಡೆಯಬಲ್ಲೆ."

"ಬೇಡ ಬೇಡ, ನೀವು ಹಿಂದೆ ಕೂತ್ಕೊಳ್ಳಿ," ಎಂದವನೇ ಆತನು ಸೈಕಲ್ಲಿನ ಹ್ಯಾಂಡಲ್ಲನ್ನು ಹಿಡಿದುಕೊಂಡ. ಈತ ಕ್ಯಾರಿಯರ್ನಲ್ಲಿ ಕುಳಿತು ಕೊಂಡಾಗ ಆತ ಸೈಕಲ್ಲನ್ನು ಮೆಲ್ಲನೆ ತುಳಿಯಲಾರಂಭಿಸಿದ.

ಬಿರು ಬಿಸಿಲಿಗೆ ರಸ್ತೆಯ ಡಾಂಬರು ಕರಗಿ ಹೋಗಿತ್ತು. ಸೈಕಲ್ಲಿನ ಚಕ್ರಗಳು ಸರಾಗವಾಗಿ ಜಾರದೆ ಚಟ್‌ಚಟ್ ಎಂದು ಕರ್ಕಶ ಸಪ್ಪಳ ಹೊರಡಿಸುತ್ತಿದ್ದುವು.



[illegible]

ತುಳಿಯಲಾರದೆ ತುಳಿಯುತ್ತಿದ್ದ ಆತ ಗೊಣಗಿದ. "ಸರಿಯಾಗಿ ಕೂತ್ಕೊ. ಏನ್ಮಾಡ್ತಿದ್ದೀಯಾ"? ಈತನಿಗೆ ಆತ ನುಡಿದದ್ದು ಕೇಳಿಸಲೇ ಇಲ್ಲ.

ಪ್ರಯಾಸದಿಂದ ಪೆಡಲನ್ನು ತುಳಿಯುತ್ತಿದ್ದ ಆತನಿಗೆ ವಾಂತಿ ಬರುವಂತಾಯಿತು. ಬಿಸಿ ಗಾಳಿ. ಬಡಿತ ಬೇರೆ. ಫುಟಪಾತಿನ ಬದಿಯಲ್ಲಿ ಮರವೊಂದರ ಕೆಳಗೆ ಸೈಕಲ್ಲನ್ನು ನಿಲ್ಲಿಸಿದ. ಆತ ಕೆಳಗಿಳಿದ.

"ನೀವಿನ್ನು ಬಸ್ನಲ್ಲೇ ಹೋಗುವುದೊಳ್ಳೆಯದು. ನಾನು ನಡೆದುಹೋಗ್ತೇನೆ," ಏದುತ್ತಾ ಆತ ನುಡಿದಾಗ, "ಯಾಕೆ? ಏನಾಯ್ತು?" ಈತ ವಿಸ್ಮಯದಿಂದ ಪ್ರಶ್ನಿಸಿದ.

ಆತ ಒಣಗಿದ್ದ ತುಟಿಗಳನ್ನು ನಾಲಿಗೆಯಿಂದ ಸವರಿಕೊಂಡ. "ನನಗೆ ಸೈಕಲ್ ಹೊಡಿಯೋಕಾಗದಷ್ಟು ಅಶಕ್ತತೆಯಾಗಿದೆ," ಎಂದ. ಆತನ ಹಣೆ, ಕೈಗಳನ್ನು ಮುಟ್ಟಿ ನೋಡಿದ ಈತ, "ನಿಮ್ಗೆ ಜ್ವರ ಬಂದಿದೆಯಲ್ಲ" ಎಂದು, "ನೀವಿನ್ನು ಹಿಂದೆ ಕೂತ್ಕೊಳ್ಳಿ, ನಾನು ಸೈಕಲ್ ಹೊಡೀತೇನೆ," ಎಂದು ಮುಂದಾದ.

"ನಿನಗದು ಸಾಧ್ಯವಾ?"

"ನನಗಾಗುತ್ತೋ ಇಲ್ವೋ ನೀವೇ ನೋಡ್ತಿರಲ್ಲ."

ಸೈಕಲ್ ಹಿಡಿದು ಹಿಂದಕ್ಕೆ ಹತ್ತಿ ಕುಳಿತ ಆತನಿಗೆ ಈತ ಸೈಕಲ್ಲನ್ನು ಹೇಗೆ ಹೊಡೆಯುತ್ತಿದ್ದಾನೆಂದು ನೋಡಲೂ ಸಾಧ್ಯವಾಗಲೇ ಇಲ್ಲ. ಮೈಯೆಲ್ಲಾ ಕೆಂಡದಂತೆ ಸುಡುತ್ತಿದ್ದ ಆತನ ಕಣ್ಣುಗಳು ತಾವಾಗಿಯೇ ಮುಚ್ಚಿಕೊಂಡು ಬಿಟ್ಟಿದ್ದವು.

"ನೀವ್ಯಾವ ಬ್ಲಾಕಿಗೆ ಹೋಗ್ಬೇಕು?" ಈತ ಪ್ರಶ್ನಿಸಿದಾಗ ಆತ ಕಣ್ಣು ಮುಚ್ಚಿಕೊಂಡೇ, "ಜೆ ಬ್ಲಾಕಿಗೆ," ಎಂದು ಉತ್ತರಿಸಿದ.

"ಅಲ್ಲಿ ಯಾರಿದ್ದಾರೆ"?

"ಸಂಬಂಧಿಕರಿದ್ದಾರೆ."

ಇಬ್ಬರ ನಡುವೆ ಮತ್ತೆ ಮೌನ. ಸೈಕಲ್ಲಿನ ಹಿಂದಕ್ಕೆ ಕುಳಿತಿದ್ದ ಆತನಿಗೆ ಮರದೆಲೆಗಳ ಮರ್ಮರ, ಚಕ್ರಗಳ ಕಿಚ್ ಕಿಚ್ ಕರ್ಕಶ ಶಬ್ದ, ಗಾಳಿಯ ಭೋರ್ಗರೆತಗಳು ಕಿವಿಯಲ್ಲಿ ಮೊರೆಯುತ್ತಿದ್ದವು. ಕಾರೊಂದು ಗುಂಯ್‌ಕಾರ ಎಬ್ಬಿಸಿ ತೀರಾ ಆತನ ಪಕ್ಕಕ್ಕೆ ಹಾದುಹೋದಾಗ ಆತ ಕಣ್ಣುಬಿಟ್ಟ. ಹಾಗೆಯೇ ರಸ್ತೆಯಲ್ಲಿ ಮೂಡಿದ್ದ ಕಾರಿನ ಟೈರುಗಳ ಮುದ್ರೆಯನ್ನೇ ಕೆಕ್ಕರಿಸಿ ನೋಡಿದ.

"ಜೆ ಬ್ಲಾಕಿಗೆ ರಸ್ತೆ ಯಾವುದು?" ಈತ ಓರ್ವ ಪಾದಚಾರಿಯನ್ನು ವಿಚಾರಿಸಿದ.

"ಅದೇ ಎದುರು ರಸ್ತೆ," ಎಂಬ ಉತ್ತರ ಬಂದಾಗ ಈತ, "ನಿಮ್ಗೆ ಕುಡಿಯೋಕೆ ನೀರೇನಾದ್ರೂ ಬೇಕಾ?" ಆತನನ್ನು ಕೇಳಿದ.

"ಯಾಕೀಗ ನೀರು? ಸಂಬಂಧಿಕರ ಮನೇಲೆ ಕುಡಿದರಾಯ್ತು."

"ಸರಿ ಹಾಗಾದ್ರೆ."

× × ×

"ಇಂಥಾ ಬಿಸಿಲು ತಾಪದಾಗೆ ನೀವು ಹ್ಯಾಗೆ ಬಂದ್ರಿ?" ಶರಬತ್ತು ನೀಡುತ್ತಾ ಸಂಬಂಧಿ ಕೇಳಿದ.

"ರೇಸ್ ಕೋರ್ಸ್ ವರೆಗೆ ಬಸ್ನಲ್ಲಿ ಬಂದೆ ನಂತ್ರ..."

"ನಂತ್ರ ಹ್ಯಾಗೆ?"

"ಲಿಫ್ಟ್ ಸಿಕ್ತು."

ಸಂತಸಗೊಂಡ ಸಂಬಂಧಿ ಆತನೊಂದಿಗೆ ಹೆಮ್ಮೆಯಿಂದ ಹೇಳಿಕೊಂಡ:

"ಇಲ್ಲಿಯ ಕಾರು ಮಾಲಿಕರು ತುಂಬಾ ಒಳ್ಳೆಯ ಜನ. ಉದಾರತೆಯಿಂದ ಲಿಫ್ಟ್ ಕೊಡ್ತಾರೆ." ತುಂಬಾ ಬಾಯಾರಿ ಬಳಲಿದ್ದ ಆತ ಶರಬತ್ತನ್ನು ಗುಟುಕರಿಸುತ್ತಾ "ನಿಜ" ಎಂದು ತಲೆ ತೂಗಿದ.

(ಮಹೀಪ ಸಿಂಗರ ಹಿಂದೀ ಕತೆಯೊಂದರ ಸ್ಫೂರ್ತಿಯಿಂದ)

ಇತಿಹಾಸದ ಪುಟಗಳಿಂದ

ವಿಲ್‌ಹೆಮ್ ಬೋಲ್ಟ್ಸ

ಗೋವಿಂದಮೂರ್ತಿ ದೇಸಾಯಿ

ಮೊಗಲರ ಕಾಲದಿಂದ ಇಂದಿನ ವರೆಗೂ ವಿದೇಶಿ ರಾಜತಾಂತ್ರಿಕ-ಚಟುವಟಿಕೆಗಳು ಭಾರತದ ರಾಜಧಾನಿ ದಿಲ್ಲಿಯಲ್ಲಿ ನಡೆಯುತ್ತ ಬಂದಿವೆ. ಆದರೆ ಮೊಗಲರ ಪ್ರಭುತ್ವವು ಶಕ್ತಿಗುಂದಿ, ಶಿವಾಜಿ ಮಹಾರಾಜರ ನಂತರ ಮರಾಠಾ ರಾಜ್ಯವು ಕಳೆಗುಂದುತ್ತ ನಡೆದಾಗ ಪವಿತ್ರ ರೋಮನ್ ಸಾಮ್ರಾಜ್ಯದ ಮಹಾರಾಣಿ ಮರಿಯಾ ಭಾರತದೊಡನೆ ರಾಜತಾಂತ್ರಿಕ ಸಂಬಂಧವನ್ನು ಬೆಳೆಸಲು ಒಬ್ಬೊಬ್ಬ ರಾಜತಾಂತ್ರಿಕನನ್ನು ಪುಣೆಯ ಪೇಶ್ವೆ ದರ್ಬಾರಿಗೆ ಕಳಿಸಿದ್ದಳೆಂದರೆ ಪೇಶ್ವೆಯ ಆಳ್ವಿಕೆಯ ಕೀರ್ತಿ ಅಷ್ಟು ದೇಶಗಳಿಗೂ ಪಸರಿಸಿತ್ತೆಂದು ವಿದಿತವಾಗುತ್ತದೆ. ಮೊಗಲರು ತಮ್ಮ ಪ್ರಭಾವವನ್ನು ಕಳೆದುಕೊಂಡಾಗ ಪ್ರಾಯಶಃ ಪೇಶ್ವೆಯವರೇ ಈ ದೇಶದ ಆಡಳಿತವನ್ನು ವಹಿಸಿಕೊಳ್ಳಬಹುದೆಂದು ಸಾಮ್ರಾಜ್ಞಿ ಮರಿಯಾ ತರ್ಕಿಸಿರಬಹುದು.

ಮೊಗಲ್ ಮತ್ತು ಮರಾಠರು ಶಕ್ತಿಗುಂದುತ್ತ ನಡೆದಂತೆ ಬ್ರಿಟಿಶರು ಪ್ರಬಲರಾಗುತ್ತ ನಡೆದರಲ್ಲದೆ, ಭಾರತದಲ್ಲಿ ಕಾಲೂರಿ ನಿಲ್ಲಲು ಪ್ರಯತ್ನಿಸುತ್ತಿದ್ದ ಫ್ರೆಂಚರನ್ನು ಕೂಡ ೧೭೬೧ರಲ್ಲಿ ಓಡಿಸಿ ತಮ್ಮ ಆಳ್ವಿಕೆಗೆ ಸುಗಮವಾದ ವಾತಾವರಣವನ್ನು ಕಲ್ಪಿಸಿಕೊಂಡರು. ಪ್ಲಾಸೀ ಕಾಳಗದ ನಂತರ ಬ್ರಿಟಿಶರು ಕಲಕತ್ತೆಯನ್ನು ಗಟ್ಟಿಯಾಗಿ ಹಿಡಿದುಕೊಂಡರೂ ಮುಂಬೈ ಮತ್ತು ಅದರ ಸುತ್ತಲಿನ ಪ್ರದೇಶವನ್ನು ಅವರಿಂದ ವಶಪಡಿಸಿಕೊಳ್ಳುವುದಾಗಲಿಲ್ಲ. ಅದು ಆಗಿದ್ದರೆ ಬ್ರಿಟಿಶರು ಈ ಉಪಖಂಡವನ್ನು ಅಂದೇ ತಮ್ಮದನ್ನಾಗಿ ಮಾಡಿಕೊಳ್ಳುತ್ತಿದ್ದರೇನೋ!

ಅಂದು ಪುಣೆಯಲ್ಲಿ ಫ್ರೆಂಚ್ ಪ್ರತಿನಿಧಿಯಾದ ಶಾವಲಿಯರ್ ದ. ಸೇಂಟ್ ಲೂಬಿನ್ ಮರಾಠರ ಸರದಾರರಾದ ನಾನಾ ಫಡ್ನವೀಸನೊಂದಿಗೆ ಅತ್ಯಂತ ಸ್ನೇಹದಿಂದ ಇದ್ದ. ನಾನಾ ಫಡಣವೀಸ್ ಒಬ್ಬ ಧೂರ್ತ ರಾಜಕಾರಣಿ. ವಿಸ್ಖಲಿತವಾಗುತ್ತ ನಡೆದಿದ್ದ ಮರಾಠಾ ಸಾಮ್ರಾಜ್ಯವನ್ನು ಒಂದುಗೂಡಿಸಲು ಎಷ್ಟೋ ಪ್ರಯತ್ನಿಸುತ್ತಿದ್ದರೂ ಸಿಂಧೆ ಹೋಳ್ಕರ ಮತ್ತು ಗಾಯಕವಾಡ ರಾಜಮನೆತನಗಳು ತಮ್ಮ ತಮ್ಮಲ್ಲಿ ಕಚ್ಚಾಡಿ ಮರಾಠಾ ಸಾಮ್ರಾಜ್ಯದ ಭದ್ರತೆಗೆ ಧಕ್ಕೆಯನ್ನುಂಟು ಮಾಡುತ್ತಿದ್ದವು.

ಅಂದು ಪುಣೆಯ ಪೇಶ್ವೆ ಗಾದಿಯ ಮೇಲೆ ಪೇಶ್ವೆ ನಾರಾಯಣರಾಯ ಅಲ್ಪವಯ ಮಗ ಕುಳಿತಿದ್ದನು. ೧೭೭೩ರಲ್ಲಿ ನಾರಾಯಣರಾವ್ ಪೇಶ್ವೆಯ ಕೊಲೆಯಾದ ಮೇಲೆ ಈ ಅರ್ಭಕನನ್ನೇ ಸಿಂಹಾಸನದ ಮೇಲೆ ಕೂಡಿಸಿ ನಾನಾ ಫಡಣವೀಸನ ರಾಜಪ್ರತಿನಿಧಿಯಾಗಿ ಆಡಳಿತವನ್ನು ನಿರ್ವಹಿಸತೊಡಗಿದನು.

ನಾನಾ ಫಡಣವೀಸನ ಮುತ್ಸದ್ದಿತನದ ವಾರ್ತೆ ಯುರೋಪ್ ಖಂಡವಲ್ಲೆಲ್ಲಾ ಪಸರಿಸಿತ್ತು.

ಆಂತಲೇ ೧೭೭೭ರಲ್ಲಿ ಸಾಮ್ರಾಜ್ಞಿ ಮರಿಯಾ ಥೆರೇಸಾ ಮರಾಠಾ ರಾಜಧಾನಿ ಪುಣೆಗೆ ಸರ್ವತಂತ್ರ ಸ್ವತಂತ್ರನಾದ ತನ್ನ ರಾಯಭಾರಿಯೊಬ್ಬನನ್ನು ಕಳಿಸಿದಳು. ಸಾಮ್ರಾಜ್ಞಿ ಶೋಧಿಸಿದ ರಾಯಭಾರಿ ವಿಲ್‌ಹೆಮ್ ಬೋಲ್ಟ್ಸ ಒಳ್ಳೇ ಸಾಹಸಿಯಾದ್ದನಲ್ಲದೆ ಈ ಪೂರ್ವದಲ್ಲಿ ಅವನು ಭಾರತದಲ್ಲಿದ್ದ. ಬ್ರಿಟಿಶ್ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿರುವಾಗ ವಿಲ್‌ಹೆಮ್ ಕಲಕತ್ತೆಯಲ್ಲಿ ಬ್ರಿಟಿಶರೊಡನೆ ವ್ಯಾಪಾರ ನಡೆಸಿದ್ದ. ಬ್ರಿಟಿಶ್ ಈಸ್ಟ್ ಇಂಡಿಯಾ ಕಂಪನಿಯ ಸೈನ್ಯದಲ್ಲಿ ವಿಲ್‌ಹೆಮ್ ಎರಡನೆಯ ಕಮಾಂಡಿಂಗ್ ಆಫೀಸರ್ ಆಗಿದ್ದ. ಆದರೆ ಬೋಲ್ಟ್ಸ ಬ್ರಿಟಿಶರ ಲಂಚಗುಳಿತನ ಮತ್ತು ಶ್ರೀಸಾಮಾನ್ಯರನ್ನು ಕ್ರೂರರೀತಿಯಲ್ಲಿ ನಡೆಸಿಕೊಳ್ಳುವುದನ್ನು ನೋಡಿ ಬೇಸತ್ತು ಬ್ರಿಟಿಶ್ ಸೈನ್ಯಕ್ಕೆ ಶರಣು ಹೊಡೆದ.

ಬೋಲ್ಟ್ಸ ಸೈನ್ಯವನ್ನು ಬಿಟ್ಟಿದ್ದಕ್ಕೆ ಕಂಪನಿಗೆ ಏನೂ ಅನಿಸಲಿಲ್ಲ. ಆದರೆ ಅವನು ಬ್ರಿಟಿಶರ ವಿರುದ್ಧ ಕತ್ತಿಯನ್ನೆತ್ತಿ ಅಪಪ್ರಚಾರವನ್ನು ಮಾಡಹತ್ತಿದೊಡನೆ ಬ್ರಿಟಿಶರು ರೊಚ್ಚಿಗೆದ್ದರು. ಭಾರತದಲ್ಲಿ ಪತ್ರಿಕೆಯೊಂದನ್ನು ಹೊರಡಿಸಲು ಅವನು ಕಂಪನಿಯ ಸರಕಾರದ ಅನುಮತಿಯನ್ನು ಬೇಡಿದ. ಆದರೆ ಸರಕಾರವು ಅನುಮತಿಯನ್ನು ನಿರಾಕರಿಸಿತು. ಅಂದು ಬೋಲ್ಟ್ಸನಿಗೆ ಪತ್ರಿಕೆಯನ್ನು ಪ್ರಾರಂಭಿಸಲು ಅನುಮತಿ ಸಿಕ್ಕಿದ್ದರೆ, 'ಬೋಲ್ಟ್ಸ ಪತ್ರಿಕೆ' ಭಾರತದ ಮೊದಲನೆಯ ಪತ್ರಿಕೆಯೆಂದು ಕೀರ್ತಿಗೆ ಪಾತ್ರವಾಗಿರುವ 'ಹಿಕ್ಕೀಸ್ ಬೆಂಗಾಲ್ ಗೆಜೆಟ್'ಗಿಂತ ಹದಿನಾಲ್ಕು ವರುಷಗಳ ಮೊದಲೇ ಪ್ರಕಟವಾಗುತ್ತಿತ್ತು. ಕಂಪನಿ ಸರಕಾರವು ಬೋಲ್ಟ್ಸನಿಗೆ ಅನುಮತಿಯನ್ನು ನಿರಾಕರಿಸಿ ತೆಪ್ಪಗೆ ಕುಳಿತಿದ್ದರೆ ಸಾಕಾಗಿತ್ತು. ಆದರೆ ಅವರು ಅವನನ್ನು ದೇಶದಿಂದ ಹೊರಗೆ ಹಾಕಿದರು. ಇದರಿಂದಂತೂ ಬೋಲ್ಟ್ಸ ಬೇಟೆಯನ್ನು ಕಳೆದುಕೊಂಡ ಸಿಂಹದಂತಾದ. ಅವನು ಲಂಡನ್ನಿಗೆ ಹೋಗಿ ಕಂಪನಿ ಸರಕಾರದ ಡೈರೆಕ್ಟರರ ಮುಂದೆ ಒಂದು ಮನವಿ

ಸಾಧನೆ ಕವಲು

ಮುಬ್ಬುಗತ್ತಲಲ್ಲಿ ಎಲ್ಲೆಂದರಲ್ಲಿ
ಹಾದಿಯೊಳಗೆದ್ದ ಪೋಟಕಲ್ಲಿಗೆ
ಹಾಯುತ್ತ

ಇಲ್ಲಾ ... ಮಣ್ಣ ಕುಳಿಯೊಳಗೆ
ಬೀಳುತ್ತ
ಹಬ್ಬಿದ ತಮಂಧ ಸೀಳಿ ನೋಡದ
ನೇತ್ರ
ಪೂರಾ ದಾರಿ ತಪ್ಪುತ್ತ ಗುರಿ
ದೂರ ಸರಿಯುತ್ತ

ಅಲ್ಪ ಜ್ಞಾನದಮಲಿನಲ್ಲಿ
ಅರಿವಿಲ್ಲದ ಅಡ್ಡ ನಡೆಯು ಅರೆಕೊರೆ
ಹೆಜ್ಜೆಯಲ್ಲಿ
ಎಡವಿದಲ್ಲೇ ಎಡವುತ್ತ
ಸಾಧನೆಶೂನ್ಯವಾಗುತ್ತ

ನೋಟ ಕಪ್ಪು
ತನು ತೂಗುಯ್ಯಾಲೆ
ಚಿತ್ತ ಡೋಲಾಯಮಾನ !

ಒಳಗಿನೊಳಗಿನ ಅಂತರಂಗದಿಂಗಿತ
ಪೂರಾ ಕುದಿತ...

ಹೊರಟ ಪಯಣದಲ್ಲಿ
ಬಯಲಲ್ಲೇ ನಡಿಗೆ ಕವಲು....
ಕವಲು !

ದೊಡ್ಡ ರಂಗೇಗೌಡ

ಯನ್ನು ಸಲ್ಲಿಸಿದ. ಆದರೆ ಡೈರೆಕ್ಟರ್ ಮಂಡಳಿ ಅದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಕೂಡಲೇ ಬೋಲ್ಟ್ಸ್ "Considerations on India Affairs" ಎಂಬ ಗ್ರಂಥವನ್ನು ಬರೆದು ಬಂಗಾಳ ಪ್ರಾಂತದಲ್ಲಿ ಕಂಪನಿ ಸರಕಾರವು ನಡೆಸುತ್ತಿದ್ದ ದುರಾಡಳಿತವನ್ನೆಲ್ಲಾ ಬಯಲಿಗೆಳೆದ. ಈ ಗ್ರಂಥವು ೧೭೭೨, ೧೭೭೫ರ ಮಧ್ಯೆ ಎರಡು ಆವೃತ್ತಿಗಳನ್ನು ಕಂಡಿತೆಂದರೆ ಅದೆಷ್ಟು ಹೆಸರು ಮಾಡಿರಲುಬೇಕು!

ಇಂಗ್ಲಂಡಿನಿಂದ ಬೋಲ್ಟ್ಸ್, ರೋಮನ್ ಸಾಮ್ರಾಜ್ಞಿ ಮರಿಯಾ ಥೇರೆಸಾ ಭಾರತದೊಡನೆ ವ್ಯಾಪಾರವನ್ನು ಮಾಡಲು ಹೊಸ ಕಂಪನಿಯೊಂದನ್ನು ಸ್ಥಾಪಿಸಲಿರುವಳೆಂದು ಕೇಳಿ ವಿಯೆನ್ನಾಕ್ಕೆ ಬಂದ. ಅಂದು ರೋಮನ್ ಸಾಮ್ರಾಜ್ಯವು ಭಾರತಕ್ಕೆ ಮಸಾಲೆ ಪದಾರ್ಥ, ನೀಲಿ ಮತ್ತು ವಸ್ತ್ರಗಳನ್ನು ಕಳಿಸುವ ಹವಣಿಕೆಯಲ್ಲಿತ್ತು. ಸಾಮ್ರಾಜ್ಞಿ ಬೋಲ್ಟ್ಸ್‌ನನ್ನು ಸೈನ್ಯದಲ್ಲಿ ನಿಯಮಿಸಿಕೊಂಡು ಭಾರತಕ್ಕೆ ಕಳಿಸಲು ನಿರ್ಧರಿಸಿದಳು.

ಮರಿಯಾ ಬೋಲ್ಟ್ಸ್‌ನಿಗೆ ಸರ್ವತಂತ್ರ ಸ್ವತಂತ್ರ ರಾಯಭಾರಿ ಪಕ್ಕಾಪತ್ರವನ್ನು ಕೊಟ್ಟು ಭಾರತಕ್ಕೆ ಕಳಿಸಿದಳು. ಅಲ್ಲದೆ ಫ್ರಾನ್ಸಿನಿಂದ ಫ್ರೆಂಚ್ ರಾಯಭಾರಿಗೆ ಒಂದು ಪರಿಚಯದ ಪತ್ರವನ್ನು ಕೊಡಿಸಿದಳು. ಬೋಲ್ಟ್ಸ್ ಭಾರತಕ್ಕೆ ಬಂದು ಸುರತ ಮತ್ತು ಪುಣೆಯಲ್ಲಿದ್ದ ಫ್ರೆಂಚ್ ಪ್ರತಿನಿಧಿಗಳನ್ನು ಭೆಟ್ಟಿಯಾದ. ಅನಂತರ ನಾನಾ ಫಡಣವೀಸನನ್ನು ಭೆಟ್ಟಿಯಾಗಿ ಪೇಶ್ವೆ ಮತ್ತು ರೋಮನ್ ಸಾಮ್ರಾಜ್ಯದ ಸಂಬಂಧಗಳನ್ನು ಬೆಳೆಸಲು ಪ್ರಯತ್ನಿಸಿದ. ಇಂಗ್ಲಿಷ್ ಇತಿಹಾಸಕಾರರು ಈ ವಿಷಯದ ಮೇಲೆ ಹೆಚ್ಚು ಬೆಳಕನ್ನು ಚೆಲ್ಲಲು ಪ್ರಯತ್ನಿಸಲಿಲ್ಲ.

ಬೋಲ್ಟ್ಸ್ ಮುಂಬೈಯಲ್ಲಿಯ ಬ್ರಿಟಿಶ್ ಅಧಿಕಾರಿಗಳನ್ನು ಕಂಡು ಭಾರತದೊಡನೆ ವ್ಯಾಪಾರವನ್ನು ಮಾಡಲು ತಮ್ಮ ಸರಕಾರಕ್ಕೆ ಅನುಮತಿಯನ್ನು ಕೊಡಬೇಕೆಂದು ಕೇಳಿದ. ಆದರೆ ಅವರಿಗೆ ಬೋಲ್ಟ್ಸ್‌ನು ಯಾರೆಂಬುದು ಗೊತ್ತಿದ್ದುದರಿಂದ ಅನುಮತಿಯನ್ನೀಯಲಿಲ್ಲ. ಬೋಲ್ಟ್ಸ್ ಕಂಪನಿಯವರಿಗೆ, "ಭಾರತದ ಮೇಲೆ ನಿಮಗೆ ಪೂರ್ಣ ಹಕ್ಕಿಲ್ಲ. ಇಲ್ಲಿಯ ರಾಜರು-ನವಾಬರು ಅನುಮತಿಯನ್ನಿತ್ತರೆ ಅವರೊಡನೆ ವ್ಯವಹರಿಸಲು ಯುರೋಪಿನ ಯಾವ ರಾಷ್ಟ್ರಕ್ಕೂ ಹಕ್ಕಿದೆ," ಎಂದು ಹೇಳಿದ. ಅಲ್ಲದೆ ಮೈಸೂರಿನ ಹೈದರಾಲಿಯನ್ನು ಭೆಟ್ಟಿಯಾಗಿ ಅವನೊಡನೆ ವ್ಯಾಪಾರ ಸಂಬಂಧದ ಹಕ್ಕುಗಳನ್ನು ಪಡೆದುಕೊಂಡು ನಿಕೋಬಾರಿನಲ್ಲಿ ಒಂದು ಫ್ಯಾಕ್ಟರಿಯನ್ನು ತೆಗೆದ.

ಮುಂದೆ ನಾಲ್ಕು ವರ್ಷಗಳ ನಂತರ ಬೋಲ್ಟ್ಸ್ ೧೭೮೧ರಲ್ಲಿ ವಿಯೆನ್ನಾಕ್ಕೆ ಹೋದನು. ಅಲ್ಲಿಗೆ ಹೋದ ಮೇಲೆ ಮರಿಯಾ ಥೆರೇಸಾ ಸತ್ತದ್ದು ಅವನಿಗೆ ತಿಳಿಯಿತು. ಮುಂದೆ ಸಿಂಹಾಸನಕ್ಕೆ ಬಂದ ಯಾರೂ ಭಾರತದೊಡನೆ ವ್ಯಾಪಾರ ಸಂಬಂಧವನ್ನು ಉಳಿಸಿಕೊಳ್ಳುವ ಆಸ್ಥೆಯನ್ನು ತೋರಿಸಲಿಲ್ಲ.

ಬೋಲ್ಟ್ಸ್‌ನ ಹೋರಾಟವು ನಂತರವೂ ನಡೆದೇ ಇತ್ತು. ಕಂಪನಿ ಸರಕಾರದ ವಿರುದ್ಧ ಅವನು ಹಲವಾರು ಆಪಾದನೆಗಳನ್ನು ಮಾಡಿದ. ಆದರೆ ಆಗ ಯಾರೂ ಅವನನ್ನು ಕೇಳಲಿಲ್ಲ. ಆದರೆ ೧೮೫೭ರ ಸಿಪಾಯಿ ಬಂಡಾಯವಾದ ಮೇಲೆ ಭಾರತದ ಆಡಳಿತವು ಕಕ್ಕಡಿಯಿಂದ ಕೀರೀಟಕ್ಕೆ ಹಸ್ತಾಂತರವಾಗುವಾಗ ಬೋಲ್ಟ್ಸ್ ಮಾಡಿದ ಆಪಾದನೆ ಮತ್ತು ಅವನು ಸೂಚಿಸಿದ ಸಂಗತಿಗಳನ್ನೇ ಕಂಪನಿ ಸರಕಾರದ ವಿರುದ್ಧ ಮಾಡಿ ಕಂಪನಿ ಸರಕಾರವನ್ನು ಕೊನೆಗಾಣಿಸಿತು. ಜೀವಂತವಿರುವಷ್ಟು ಕಾಲ ಅವನ ವಿಚಾರವನ್ನು ಒಪ್ಪದ ಇಂಗ್ಲೆಂಡಿನ ರಾಣಿ ಅವನು ಸತ್ತ ನಂತರ ೪೨ ವರುಷಗಳ ಮೇಲೆ ಅವನ ಮಾತುಗಳನ್ನೇ ಪುನರುಚ್ಚರಿಸಿ ಕಂಪನಿ ಸರಕಾರವನ್ನು ಕೊನೆಗೊಳಿದ್ದನ್ನು ನೋಡಿದರೆ, ಬೋಲ್ಟ್ಸ್‌ನ ಹೃದಯಕ್ಕೆ ಏನಾಗಿರಲಿಕ್ಕಿಲ್ಲ! ಇತಿಹಾಸ ಇಂತಹ ಎಷ್ಟೆಷ್ಟೋ ಸಂಗತಿಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಟ್ಟುಕೊಂಡಿದೆ. ಬೋಲ್ಟ್ಸ್ ಸತ್ತದ್ದು ೧೮೦೮ರಲ್ಲಿ.

– ೭೨ –

ವತ್ಸ ಎಂದರೆ ಕರು, ಗೋತ್ರ ಎಂದರೆ ದೊಡ್ಡಿ

ನಮ್ಮ ಪಶುಪಾಲನ ವೃತ್ತಿಯ ದಿನಗಳಲ್ಲಿ ಬಳಕೆಗೆ ಬಂದ ಪದಗಳು ಇಂದು ಕೂಡ ನಮ್ಮೊಡನೆ ಇರುವುದು ಎಷ್ಟೇ ಬದಲಾವಣೆ ಹೊಂದಿದರೂ ಭಾಷೆಗಳು ಇತಿಹಾಸದ ಸಂಕೋಲೆ ಕಳಚಿಕೊಳ್ಳಲಾರವೆಂದು ತೋರಿಸುತ್ತದೆ. ನಮ್ಮ ಹಿಂದಿನ ತಲೆಮಾರಿನ ಬರವಣಿಗೆಗಳಲ್ಲಿ ಹಿರಿಯರು ಕಿರಿಯರನ್ನು '**ವತ್ಸ**' ಎಂದು ಪ್ರೀತಿಯಿಂದ ಸಂಬೋಧಿಸುವ ಉದಾಹರಣೆಗಳು ಸಿಗುತ್ತವೆ. ಈ ಶಬ್ದ ವೇದಕಾಲದಷ್ಟು ಹಳೆಯದು. ಅದರ ಪ್ರಾಥಮಿಕ ಅರ್ಥ **ಆಕಳ** ಕರು ಎಂಬುದಾಗಿ. ಈ ವತ್ಸಕ್ಕೆ ಬೇರೆ ಭಾರೋಪ್ಯ ಭಾಷೆಗಳಲ್ಲಿ ಸಂವಾದಿ ಪದಗಳಿವೆ. ಲ್ಯಾಟಿನ್ನಲ್ಲಿ vatulus ಎಂದರೆ ಕರು. ಹಳೇ ಇಂಗ್ಲೀಷ್, ನಾರ್ಸ್ ಮೊದಲಾದ ಭಾಷೆಗಳಲ್ಲಿ weder, vedr ಮೊದಲಾದವುಗಳಿವೆ. ಅದಕ್ಕೆ ಟಗರು (ಹೆಚ್ಚಾಗಿ ತರಡು ಒಡೆದದ್ದು) ಎಂದೂ ಗಾಥಿಕ್ ಭಾಷೆಯಲ್ಲಿ ಅದರ ಸಂವಾದಿ ಪದಕ್ಕೆ ಕುರಿಮರಿ ಎಂದೂ ಅರ್ಥವಿದೆ. ಹೇಗಿದ್ದರೂ ಸಾಕು ಪ್ರಾಣಿಯ ಮರಿ ಎಂಬ ಸಾಮಾನ್ಯಾರ್ಥ ಅದಕ್ಕಿದೆ. ಕರುವಿಗೆ ತಾಯಿ ಆಕಳು ಪ್ರೀತಿಯಿಂದ ಮೊಲೆಯೂಡಿಸಿ ಮೈ ನೆಕ್ಕುವುದನ್ನು ನೋಡಿ ಪಶುಪಾಲಕರು ತಮ್ಮ ಮಕ್ಕಳನ್ನು ಪ್ರೀತಿಯಿಂದ 'ವತ್ಸ' ಎಂದೇ ಸಂಬೋಧಿಸಿದ್ದು ಸಹಜ.

ಸಂಸ್ಕೃತ ಭೂಯಿಷ್ಠ ಶೈಲಿಯಲ್ಲಿ **ವತ್ಸ** ಬಂದದ್ದು ವಿಶೇಷವಲ್ಲ. ಉತ್ತರದ ಪ್ರಾಕೃತಜನ್ಯ ಭಾಷೆಗಳಲ್ಲಿ ಈ ಪದ **ಬಚ್ಚಾ** ಎಂದು ತದ್ಭವ ಹೊಂದಿ **ಮಗ** ಎಂಬ ಅರ್ಥದಲ್ಲೇ ಬಳಕೆಯಲ್ಲಿದೆ. ಆಕಳು ಕರುವಿಗೆ ಅನ್ವಯಿಸುವಾಗ ಹಿಂದಿಯಲ್ಲಿ ಅದಕ್ಕೇ ಒಂದು ಸ್ವಾರ್ಥಕ ಪ್ರತ್ಯಯ ತಗಲಿಸಿ ಬಛಡಾ ಮಾಡಿದ್ದಾರೆ.

ಇದೇನು ಆರ್ಯರ ಸಂಸ್ಕೃತಿಯದು, ನಮಗೇನು ಸಂಬಂಧ? ಎನ್ನುವಂತಿಲ್ಲ. ಕನ್ನಡದಲ್ಲಿ ನಾವು '**ಕಂದಾ**' ಎನ್ನುವಾಗಲೂ ಅದೇ ದನಗಾಹಿ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತೇವೆ. **ಕಂದು** ಎಂದರೆ ಆಕಳು ಕರು; **ಕಂದಿ** ಎಂದರೆ ಈದ ಆಕಳು, ತಮಿಳು 'ಕನು,' ಮಲಯಾಳಿ 'ಕಱು' ತುಳು 'ಕಂಜಿ,' ಕುರುಖ್ ಭಾಷೆಯ 'ಖದ್ದ್' ಎಲ್ಲ **ಕರು** ಶಬ್ದದ ಜ್ಞಾತಿ ಪದಗಳು. ಕೂಸು ಹಸುಳೆ ಎಂಬರ್ಥದಲ್ಲಿ ಮಲೆಯಾಳ, ತೆಲುಗು, ಕುರುಖ್ ಭಾಷೆಗಳಲ್ಲಿ **ಕಂದ**ಕ್ಕೆ ಸಾಮ್ಯವುಳ್ಳ ಪದಗಳಿವೆ. ಕರು ಮತ್ತು ಕಂದ ಮೂಲದಲ್ಲಿ ಒಂದೇ.

ಈ **ವತ್ಸ** ಬೇರೆ ರೀತಿಗಳಲ್ಲಿಯೂ ಭಾಷೆಯಲ್ಲಿ ಸ್ಥಾನಾಪನ್ನವಾಗಿದೆ. ಕಿರಿಯರ ಮೇಲೆ, ಆಶ್ರಿತರ ಮೇಲೆ ಪ್ರೀತಿ, ದಯೆ ಇರುವವರನ್ನು **ವತ್ಸಲ** ಎನ್ನುತ್ತೇವೆ. **ಪುತ್ರವತ್ಸಲ** ತಂದೆ: **ಪ್ರಜಾವತ್ಸಲ** ರಾಜ ಇತ್ಯಾದಿ. ದಾಕ್ಷಿಣ್ಯಯುಕ್ತವಾದ ಪ್ರೀತಿ **ವಾತ್ಸಲ್ಯ** ಎನಿಸುತ್ತದೆ. ಪುತ್ರವಾತ್ಸಲ್ಯ ಎನ್ನುತ್ತೇವೆಯೆ ಹೊರತು ಪಿತೃವಾತ್ಸಲ್ಯ ಎನ್ನುವುದಿಲ್ಲ; ಹಾಗೆ ಹೇಳಿದರೆ ಅದು ಔಚಿತ್ಯವಿಲ್ಲದ ಪ್ರಯೋಗವೇ ಸೈ.

ವರ್ಷಕ್ಕೆ **ಸಂವತ್ಸರ, ವತ್ಸರ** ಎಂಬ ಪರ್ಯಾಯ ಪದಗಳಿವೆ. ಇದು ಕೂಡ **ವತ್ಸ** (=ಕರು)ವಿಗೆ ಸಂಬಂಧಿಸಿರಬೇಕೆಂದು ನನ್ನ ಅನುಮಾನ. ಒಮ್ಮೆ ಕರು ಹಾಕಿದ ಆಕಳು ಸುಮಾರು ಒಂದು ವರ್ಷದ ವರೆಗೆ ಕರೆಯುತ್ತ ಆಮೇಲೆ ಮತ್ತೆ ಈಯುತ್ತದೆ. ಇಂಥ ಆಕಳನ್ನು 'ವರ್ಷಕಂದಿ' ಎಂದೇ ಹೇಳುವುದುಂಟು. ಆಕಳು ಒಂದು ಕರು **ಈ**ಯುವ ಅವಧಿಯನ್ನು ಕನ್ನಡದಲ್ಲಿ ಒಂದು **ಕರಾವು** ಎನ್ನುತ್ತಾರೆ. ಈ ಕರಾವೆಂಬರ್ಥದಲ್ಲೇ **ವತ್ಸರ** ಜನ್ಮತಾಳಿರಬೇಕು. ಪಶುಪಾಲಕರು ತಮ್ಮ ಆರ್ಥಿಕತೆಗೆ ಆಧಾರವಾದ ಕರಾವನ್ನು ಕಾಲಗಣನೆಗೆ ಬಳಸಿದ್ದರೆ ಆಶ್ಚರ್ಯವಿಲ್ಲ.

ಗೋಧೂಲಿ ಲಗ್ನದಲ್ಲಿ ಮದುವೆಗಳಾಗುತ್ತವೆ. ಜ್ಯೋತಿಷದಲ್ಲಿ ಹನ್ನೆರಡು ರಾಶಿಗಳ (ಮೇಷ, ವೃಷಭ ಇತ್ಯಾದಿ) ಹೆಸರುಗೊಂಡ ಲಗ್ನಗಳಿವೆಯೇ ಹೊರತು ಗೋಧೂಲಿ ಎಂಬುದಿಲ್ಲ. ಮೇಯಲು ಹೋದ ಆಕಳ ಹಿಂಡು ಸೂರ್ಯಾಸ್ತದ ಹೊತ್ತಿಗೆ ಧೂಳೆಬ್ಬಿಸುತ್ತ ಹಟ್ಟಿಗೆ ಹಿಂದಿರುಗುವ ಹೊತ್ತು, **ಗೋಧೂಲಿ**. ಲಗ್ನ ಆ ಹೊತ್ತಿಗೆ ಮೇಷ, ವೃಷಭಾದ್ಯಯಾವುದೇ ವಿವಾಹವಿಹಿತ ಮುಹೂರ್ತವಿದ್ದರೆ ಅದರಲ್ಲಿ ಲಗ್ನವಾಗಬಹುದೆಂದು ಜೋಯಿಸರು ಹೇಳುತ್ತಾರಲ್ಲದೆ ಗೋವುಗಳು ಧೂಳೆಬ್ಬಿಸುವ ಮುಹೂರ್ತಕ್ಕೇ ಯಾವ ಪಾವಿತ್ರ್ಯವೂ ಇಲ್ಲ. ಆದರೂ ಸಂಧ್ಯಾಕಾಲದ ಮುಹೂರ್ತವನ್ನು ಗೋಧೂಳಿ ಎಂದು ಕರೆದ ಪಶುಪ್ರಧಾನ ಆರ್ಥಿಕತೆಯನ್ನವಲಂಬಿಸಿದ ನಮ್ಮ ಪೂರ್ವಜರ ಸಂಪ್ರದಾಯವನ್ನು ಆಕಳ ಹಿಂಡನ್ನೇ ಕಂಡರಿಯದಿರಬಹುದಾದ ನಾವು ಇನ್ನೂ ಪದಪ್ರಯೋಗದಲ್ಲಿ ಅನುಸರಿಸುತ್ತೇವೆ.

ಕಣ್ಣಿಗೆ **ಗೋಚರ**ವಾಯಿತು, ಅಥವಾ **ಅಗೋಚರ** ಶಕ್ತಿಗಳು ಎನ್ನುವಾಗಲೂ ನಾವು ಬಹುಶಃ ಪಶುಪಾಲಕ ಸಂಸ್ಕೃತಿ ಉತ್ಪಾದಿಸಿದ ಪದವನ್ನೇ ಬಳಸುತ್ತೇವೆ. ಗೋಚರ ಶಬ್ದಕ್ಕೆ ಇತರ ದಾರಿಗಳಿಂದ ನಿರುಕ್ತವನ್ನು ಹುಡುಕಬಹುದಾದರೂ ಆ ಶಬ್ದಕ್ಕೆ ತುರು ಮೇಯುವ ಭೂಮಿ ಎಂದೇ ಪ್ರಾಥಮಿಕ ಅರ್ಥವೆಂದು ಗಮನಿಸಬೇಕು. ಋಗ್ವೇದದ ನಾಲ್ಕನೇ ಮಂಡಲದಲ್ಲಿ 'ಗೋಚರ' ಪದ ಗೋಚರಾವು ಎಂಬರ್ಥದಲ್ಲಿ ಬಂದಿದೆ. ಕಾಠಕ ಉಪನಿಷತ್ತಿನ ಕಾಲಕ್ಕೆ ಅದರ ಅರ್ಥ ವಿಸ್ತರಣೆ ಹೊಂದಿ ಕ್ರಿಯಾಕ್ಷೇತ್ರ ಎಂಬ ಅರ್ಥವೂ ಸೇರಿತು. ಗ್ರಾಮ ದಾಖಲೆಗಳಲ್ಲಿ ಗೋಚರಾವು ಭೂಮಿಯ ಉಲ್ಲೇಖಗಳು ಬರುತ್ತವೆ. ಗೋವುಗಳು ಚರಿಸುವ (ಚರ = ನಡೆ, ಮೇಯು) ಪ್ರದೇಶ ಗೋಪಾಲಕನ ಕಣ್ಣಳವಿನಲ್ಲೇ ಇರಬೇಕಲ್ಲ. (ಅದು ಊರಿನ ಎರಡು ಮೈಲು ಅಳವಿನೊಳಗೆ ಇರುತ್ತದೆ.) ಆದ್ದರಿಂದ ಕಣ್ಣಳವಿನಲ್ಲಿರುವಂಥಾದ್ದು ಗೋಚರ. ಮೊದಲು ಕಣ್ಣಿಗಷ್ಟೆ ಅನ್ವಯಿಸುತ್ತಿದ್ದ ಗೋಚರತೆ ಆಮೇಲೆ ಇತರ ಇಂದ್ರಿಯಗಳಿಗೂ ಅನ್ವಯಿಸಿ ಇಂದ್ರಿಯಗೋಚರ, **ಶ್ರವಣಗೋಚರ** ಇತ್ಯಾದಿ ಪ್ರಯೋಗಗಳೂ ಹುಟ್ಟಿಕೊಂಡವು.

ಗವೇಷಣೆ ಎಂಬ ಪದವೂ ಹೀಗೆಯೆ ಹುಟ್ಟಿತೇ ಎಂದು ಅನುಮಾನಿಸಲೆಡೆಯುಂಟು. **ಗವೇಷಣೆ** ಎಂದರೆ ಹುಡುಕುವುದು, ಅನ್ವೇಷಣೆ. ಗೋವನ್ನು ಈಷಿಸುವುದು ಗವೇಷಣೆಯೆಂಬುದು ಸಹಜವಾಗಿ ಹೊಳೆಯುವ ಮಾತು. ಆಕಳು ಕಳೆದು ಹೋದರೆ ಹುಡುಕಬೇಕಲ್ಲವೆ? ಈಷಾ ಎಂದರೆ ಅಪೇಕ್ಷೆ, ಆಶೆ ಇತ್ಯಾದಿ. ಆಕಳು ಹುಡುಕುವ ಕೆಲಸಕ್ಕೆ ಅನ್ವಯಿಸುವಂಥಾದ್ದು ಕಡೆಗೆ ಎಲ್ಲ ಅನ್ವೇಷಣೆಗೂ ಅನ್ವಯಿಸಿರಬೇಕು. ಋಗ್ವೇದದಲ್ಲಿ 'ಗವಿಷ್' ಪದಕ್ಕೆ ಆಕಳುಗಳಿಗಾಗಿ ಆಶಿಸುವುದು ಎಂಬ ಪ್ರಾಥಮಿಕ ಅರ್ಥವಿದ್ದು ಆಮೇಲೆ ಸಾಮಾನ್ಯವಾಗಿ ಎಲ್ಲ ಇಚ್ಛೆ, ಹಂಬಲಗಳಿಗೆ ಅದು ಅನ್ವಯಿಸಿತು. ಆಶಿಸುವುದನ್ನು ನಾವು ಹುಡುಕುತ್ತೇವಾದ್ದರಿಂದ ಅನ್ವೇಷಣೆ ಎಂಬರ್ಥವನ್ನೂ ಅದು ಪಡೆಯಿತು.

ಇವಲ್ಲದೇ **ಗೋತ್ರ** ಎಂಬ ಶಬ್ದ **ಕುಲ** ಎಂಬರ್ಥದಲ್ಲಿ ಪ್ರಾಚೀನ ಕಾಲದಿಂದ ನಡೆದು ಬಂದಿದೆ. ವೇದದಲ್ಲಿ 'ಗೋತ್ರ' ಶಬ್ದದ ಮೂಲ ಅರ್ಥ 'ದನಗಳ ದೊಡ್ಡಿ' ಎಂದಿದೆ. ಆಮೇಲೆ ದೊಡ್ಡಿಯಂಥ ಯಾವುದೇ ಬೇಲಿ ಅಥವಾ ಪ್ರಾಕಾರದಿಂದ ಆವೃತವಾದ ಸ್ಥಳ; ಆದ್ದರಿಂದ ಅಡವಿಯಲ್ಲಿ ಗೋಪಾಲಕರು ರಚಿಸಿಕೊಂಡ ವಸತಿ 'ಗೋತ್ರ'ವಾಗಿ ಆ ಗೋತ್ರದಲ್ಲಿ ವಾಸಿಸುವ ಕುಟುಂಬ, ಕುಲ ಕೂಡ ಗೋತ್ರವಾಯಿತು. ಇಂದು ಬಳಕೆಯಲ್ಲಿ ಅನೇಕ ಋಷಿಗಳ ಹೆಸರಲ್ಲಿ ಗೋತ್ರಗಳಿವೆ. ಋಷಿಗಳು ತಮ್ಮ ಕುಟುಂಬ ಮತ್ತು ಶಿಷ್ಯವೃಂದಕ್ಕಾಗಿ ನೂರು ಗಟ್ಟಳೆಯಲ್ಲಿ ಪಸುಗಳನ್ನು ಸಾಕುತ್ತಿದ್ದದ್ದು ಪುರಾಣಗಳಿಂದ ತೋರಿಬರುತ್ತದೆ. ಛಾಂದೋಗ್ಯ ಉಪನಿಷತ್ತಿನ ಕಾಲಕ್ಕಾಗಲೇ ಗೋತ್ರಕ್ಕೆ ಕುಲ, ಕುಟುಂಬ ಎಂಬರ್ಥಗಳು ಬಂದಾಗಿತ್ತು.

ಪಾ. ವೆಂ.

ಇವರಿಗೇಕೆ ನಿವೃತ್ತಿವೇತನ?

ಎಂ. ಆರ್. ಕುಲಕರ್ಣಿ


ಭ್ರಷ್ಟಾಚಾರದ ವಿರುದ್ಧ ಕಳೆದ ಶತಕದಲ್ಲಿ ನಡೆದ ನವ ನಿರ್ಮಾಣ ಆಂದೋಲನವು ತನ್ನ ಉಗಮ ಸ್ಥಾನವಾದ ಗುಜರಾಥಿನಿಂದ ದೇಶಾದ್ಯಂತ ಹರಡಿ ತನ್ಮೂಲಕ ಉಂಟು ಮಾಡಿದ ಜನಜಾಗೃತಿ ಆಧುನಿಕ ಭಾರತದ ಇತಿಹಾಸದಲ್ಲಿ ಒಂದು ಮೈಲುಗಲ್ಲು. ಗುಜರಾಥ ರಾಜ್ಯದ ಹುಟ್ಟು ದಿನವಾದ ಮೇ ಮೊದಲನೆಯ ದಿನಾಂಕದಂದು ಪೆನ್‌ಶನ್ ಪ್ರತಿಕಾರ ಯುವಕ ಸಮಿತಿಯು ನೀಡಿದ ಕರೆಯ ಮೇರೆಗೆ ಅಹಮ್ಮದಾಬಾದ ಬಂದ ಆಚರಣೆಯು ನಾದಿಯಾದ, ಮೆಹಗ್ರಜ, ಆನಂದ, ಮೆಹಸಾನಾ, ಮಹಮ್ಮದಾಬಾದುಗಳಿಗೂ ಹಬ್ಬಿ ನವ ನಿರ್ಮಾಣ ಆಂದೋಲನದ ದಿನಗಳನ್ನು ನೆನಪಿಗೆ ತಂದು ಕೊಟ್ಟಿತು. ಮಧ್ಯಮ ವರ್ಗದ ಜನತೆ ಹಾಗೂ ಗ್ರಾಮಾಂತರಗಳಲ್ಲಿರುವ ಯುವ ಜನಾಂಗ ಕೋಪದಿಂದ ಕಳಕತನೆ ಕುದಿಯುತ್ತಿದೆ. ವಿಧಾನ ಸಭೆಗಳ ಸದಸ್ಯರಿಗೆ ಪೆನ್‌ಶನ್ ನೀಡಬೇಕೆಂಬ ಕ್ಷುದ್ರ ವಿಚಾರವೇ ಈ ಕುಪಿತ ಪ್ರತೀಕಾರಕ್ಕೆ ಮೂಲಕಾರಣ.

ನಮ್ಮ ದೇಶದ ಹದಿಮೂರು ರಾಜ್ಯಗಳಲ್ಲಿ ಈಗಾಗಲೇ ಜಾರಿಯಲ್ಲಿ ಬಂದು ಈಗ ಗುಜರಾಥಿನ ವಿಧಾನಸಭೆಯ ಸದಸ್ಯರ ಪೆನ್‌ಶನ್ ಯೋಜನೆಯನ್ವಯ ಓರ್ವ ಸದಸ್ಯನು ಐದು ವರ್ಷಗಳ ಅವಧಿಗಿಂತ ಕಡಿಮೆ ಕಾಲ ಸದಸ್ಯನಾಗಿದ್ದರೂ ಸಾಕು, ಆತ ಸಾಯುವ ವರೆಗೆ ಪ್ರತಿ ತಿಂಗಳು ೨೦೦ ರೂಪಾಯಿ ಪೆನ್‌ಶನ್ ಪಡೆಯಲು ಬಾಧ್ಯಸ್ಥನಾಗುತ್ತಾನೆ. ಒಂದು ವೇಳೆ ಆತನು ಅಥವಾ ಅವಳು ಐದು ವರ್ಷಗಳಿಗಿಂತ ಹೆಚ್ಚಿನ ಅವಧಿಯ ವರೆಗೆ ಸದಸ್ಯರಾಗಿ ಮುಂದುವರೆದರೆ ಪ್ರತಿ ವರ್ಷಕ್ಕೆ ೬೦ ರೂಪಾಯಿಗಳಂತೆ, ಅಂದರೆ ೬೦೦ ರೂಪಾಯಿಗಳಿಗೆ ಮಿಕ್ಕದಷ್ಟು ಪೆನ್‌ಶನ್‌ನ್ನು ಹೊಸ ಕಾನೂನು ಪ್ರಕಾರ ನೀಡಲಾಗುವುದು.

೧೯೮೦ರಿಂದಲೂ ಈ ಕಾನೂನನ್ನು ಪಾಸು ಮಾಡಬೇಕೆಂದು ಪ್ರಯತ್ನಗಳು ನಡೆದಿದ್ದು ವಿಧಾನಸಭೆಯ ಬಜೆಟ್ಟಿನ ಅಧಿವೇಶನದ ಕೊನೆಯ ದಿನ ಈ ವಿಧೇಯಕವನ್ನು ಪಾಸು ಮಾಡಲಾಯಿತು. ಗುಜರಾಥಿನಲ್ಲಿ ಲೋಕ ಸಮಿತಿ ಎಂಬ ರಾಜಕೀಯದಿಂದ ದೂರವಿರುವ ಒಂದು ಸಂಸ್ಥೆಯಿದ್ದು, ಮೌಲ್ಯಾಧಾರಗಳನ್ನಾಧರಿಸಿದ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಹೋರಾಡುತ್ತಿದೆ. ವಿಧಾನಸಭೆಯ ಸದಸ್ಯರಿಗೆ ಪೆನ್‌ಶನ್ ನೀಡುವ ವಿಚಾರವೇ ನೈತಿಕ ದಿವಾಳಿಯ ಕುರುಹೆಂದು ಬಗೆದ ಲೋಕ ಸಮಿತಿಯು ವಿಚಾರಧಾರೆಗಳನ್ನು

ಪುಷ್ಟೀಕರಿಸಿದ ಜನತೆ ಪೆನ್‌ಶನ್ ಪ್ರತಿಕಾರ ಸಮಿತಿಯನ್ನು ರಚಿಸಿ ಆಂದೋಲನ ಮಾರ್ಗಕ್ಕೆ ಇಳಿದೊಡನೆ ವಿರೋಧಿ ಪಕ್ಷಗಳು ಗಾಳಿಯು ಎತ್ತ ಬೀಸುತ್ತದೆ ಎಂಬುದನ್ನು ಮನಗಂಡು ತಾವು ಸಹ ಈ ಆಂದೋಲನದಲ್ಲಿ ಭಾಗವಹಿಸಲು ಅಣಿಯಾಗಿ ಆಳುವ ಪಕ್ಷಕ್ಕೆ ಆಘಾತ ವನ್ನುಂಟುಮಾಡಿವೆ.

ವಿಧೇಯಕದ ಪುರಸ್ಕರ್ತರ ಹೇಳಿಕೆಯಂತೆ ವಿಧಾನಸಭೆಯ ಸದಸ್ಯರು ತಾವು ಮಾಡುತ್ತಿರುವ ಉದ್ಯೋಗ ಅಥವಾ ಕಸಬುಗಳನ್ನು ಕೈಬಿಡಬೇಕಾಗುವದರಿಂದ, ಅವರಿಗೆ ಈ ಪರಿಹಾರ ಅವಶ್ಯವಾಗಿದೆಯೆಂದು ಹೇಳಲಾಗುತ್ತಿದೆ, ಆದರೆ ತಾತ್ವಿಕ ಚೌಕಟ್ಟಿನಲ್ಲಿ ಪರಿಶೀಲಿಸಿದರೆ ಈ ಪೆನ್‌ಶನ್ ಯೋಜನೆ ಆಕ್ಷೇಪಾರ್ಹವಾದ ದ್ದೆಂಬುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ವಿಧಾನ ಸಭೆಯ ಸದಸ್ಯರನ್ನು ಸರಕಾರಿ ನೌಕರರಂತೆ ಪರಿಗಣಿಸಲು ಬರುವುದಿಲ್ಲ. ಅವರ ಮೇಲೆ ಸರಕಾರದ ಯಾವುದೇ ನಿಯಂತ್ರಣವಿರದೆ ಸರ್ವತಂತ್ರ ಸ್ವತಂತ್ರ ರಾಜಕಾರಣಿಗಳು ಆಗಿರುತ್ತಾರೆ. ಜನತೆಯ ಪ್ರತಿನಿಧಿಗಳಾಗಿ ಹಲವಾರು ಹಕ್ಕುಗಳನ್ನು ಸೌಲಭ್ಯಗಳನ್ನು, ಹಣಕಾಸಿನ ಹಾಗೂ ಇತರ ರಿಯಾಯತಿಗಳನ್ನು ಜನತೆಯ ಪ್ರತಿನಿಧಿಗಳೆಂದು ಉಪಭೋಗಿಸುತ್ತಾರೆ. ಜನತೆಯ ಪ್ರತಿನಿಧಿಗಳೆಂದು ಪಡೆಯುವ ಸೌಲಭ್ಯಗಳೆಲ್ಲ ಅವರು ಜನತೆಯ ಪ್ರಾತಿನಿಧ್ಯದ ಸ್ಥಳವನ್ನು ತೆರವು ಮಾಡಿದ ಬಳಿಕ ಹೊರಟು ಹೋಗಲೇಬೇಕು. ಪೆನ್‌ಶನ್ ವಿಧೇಯಕವು ತಾರ್ಕಿಕವಾದ ಈ ವಿಚಾರ ಸರಣಿಗೆ ವಿರೋಧಿಯಾಗಿದೆ. ರಾಜಕಾರಣಿಗಳು ತಮಗೆ ದೊರೆತ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಸ್ವಾರ್ಥಸಾಧನೆಗಾಗಿ ಈ ವಿಧೇಯಕವನ್ನು ಪಾಸು ಮಾಡಿಕೊಂಡಿದ್ದಾರೆಂಬ ಸಾಮಾನ್ಯ ಜನತೆಯ ಅಭಿಪ್ರಾಯ ಸರಿಯಾಗಿರುವದಿಲ್ಲವೆಂದು ಹೇಳಲಾದೀತೆ? ಜನತೆಯ ಸೇವೆಗಾಗಿಯೇ ತಾವು ರಾಜಕಾರಣದಲ್ಲಿರುವುದಾಗಿ ಡಂಭಾಚಾರದ ಮಾತುಗಳನ್ನು ಹೇಳುವ, ಪುರಾಣ ಹೇಳಿ ಬದನೆಕಾಯಿ ತಿನ್ನುವುದನ್ನು ಜನತೆ ಸಹಿಸೀತೆ?



ಆಂದೋಲನದ ಮುಂದಾಳುಗಳಲ್ಲೊಬ್ಬರಾದ ಶ್ರೀ ಪಟೇಲರ ಹೇಳಿಕೆಯಂತೆ ವಿಧಾನಸಭೆಯ ಸದಸ್ಯನೊಬ್ಬನು ತನ್ನ ಐದು ವರ್ಷಗಳ ಅವಧಿಯಲ್ಲಿ ಇತರ ಸೌಲಭ್ಯಗಳನ್ನು ಹೊರತುಪಡಿಸಿ ಹದಿನಾರು ಸಾವಿರ ರೂಪಾಯಿಗಳನ್ನು ಗಳಿಸುತ್ತಾನೆ. ಸದಸ್ಯತ್ವವು ರದ್ದಾಗದಿರುವುದಕ್ಕೆ ಅರವತ್ತು ದಿನಗಳಲ್ಲಿ ಒಂದು ದಿನ ಮಾತ್ರ ಹಾಜರ ಇದ್ದರೆ ಸಾಕೆಂಬ ನಿಯಮಾವಳಿಯಿರುವುದರಿಂದ ಬಹುತರವಾಗಿ ಸದಸ್ಯರು ಸಭೆಗಳಲ್ಲಿ ಭಾಗವಹಿಸದೆ ಗೈರ ಹಾಜರು ಇರುತ್ತಾರೆ. ಕೋರಮ್ ಇಲ್ಲದೆ ಸಭೆಯನ್ನು ಮುಂದೂಡಬೇಕಾದ ಪ್ರಸಂಗಗಳು ಬರುತ್ತವೆ. ಇಂಥವರಿಗೆ ಮೂವತ್ತು ವರ್ಷ ಸರಕಾರದ ಸೇವೆ ಮಾಡಿದ ನೌಕರರಂತೆ ಪೆನ್‌ಶನ್ ಕೊಡಬೇಕೆ? ಎಂದು ವ್ಯಂಗ್ಯವಾಗಿ ಕೇಳುತ್ತಾರೆ.

ಮಾಜಿ ಸ್ವತಂತ್ರ ಸದಸ್ಯರಾದ ಶ್ರೀ ಪಿ. ಜಿ ಮಾಳವಣಕರರು, "ಜನತೆಯಿಂದ ಆರಿಸಲ್ಪಟ್ಟ ಪ್ರತಿನಿಧಿಗಳಾದ ನಾವು ದೇಶಸೇವೆಯ ಕರೆಗೆ ಓಗೊಟ್ಟು ಬಂದವರಾಗಿದ್ದೇವಲ್ಲದೆ,

ಸರಕಾರಿ ನೌಕರರಂತೆ ಚಾಕರಿಗಾಗಿ ಬಂದವರಲ್ಲವಾದ್ದರಿಂದ, ಅವರಂತೆ ಪೆನ್‌ಶನ್ ಪಡೆಯಲು ಅನರ್ಹರಾಗಿರುತ್ತೇವೆ." ಎಂದು ನುಡಿದಿದ್ದಾರೆ. ಮಹಾರಾಷ್ಟ್ರ ಸರಕಾರವು ತನ್ನ ನಿಯಮಾವಳಿಗಳಂತೆ ಪೆನ್‌ಶನ್ ನೀಡಲು ಮುಂದೆ ಬಂದಾಗ ಅದನ್ನು ನಿರಾಕರಿಸಿದವರಲ್ಲಿ ಪಟೇಲ ಹಾಗೂ ಮಾಳವಣಕರರು ಅಗ್ರಗಣ್ಯರು. ಶ್ರೀ ಮಾಳವಣಕರರಂತೂ ಆಪತ್ ಕಾಲದಲ್ಲಿ ಪೆನ್‌ಶನ್ ನೀಡಬಾರದೆಂದು ಪ್ರಪ್ರಥಮವಾಗಿ ದಿಟ್ಟ ಹೇಳಿಕೆಯನ್ನಿತ್ತ ಪ್ರಚಂಡರು.

ಇದರರ್ಥ ಎಲ್ಲ ವಿರೋಧಿ ಪಕ್ಷದ ಸದಸ್ಯರು ಪೇನ್‌ಶೆನ್ ವಿರುದ್ಧವಿದ್ದಾರೆಂದಲ್ಲ, ಗಾಳಿ ಎತ್ತ ಬೀಸುತ್ತದೆಯೋ ಅತ್ತ ತಿರುಗಿ ವಿಧಾನ ಸಭೆಯಲ್ಲಿ ಪೇನ್‌ಶನ್ ವಿರೋಧಿಸಿದ ವಿರೋಧಿ ಪಕ್ಷಗಳ ಭಂಡಾಚಾರದ ಮಾತುಗಳಿಂದ ಖತಿಗೊಂಡು ಮುಖ್ಯಮಂತ್ರಿಗಳಾದ ಶ್ರೀ ಮಾಧವ ಸಿಂಹ ಸೋಳಂಕಿಯವರು ರಾಜ್ಯಸಭೆ ಹಾಗೂ ಲೋಕಸಭೆಗಳ ಮಾಜಿ ಸದಸ್ಯರೆಂದು ಹಾಗು ಮುಂಬಯಿ ವಿಧಾನಸಭೆಯ ಮಾಜಿ ಸದಸ್ಯರೆಂದು ಪೆನ್‌ಶೆನ್ ಪಡೆಯುತ್ತಿರುವ ಪ್ರಭೃತಿಗಳ ಉದ್ದವಾದ ಪಟ್ಟಿಯನ್ನೇ ಮಂಡಿಸಿ, ಆಡುವುದೊಂದು, ಮಾಡುವುದೊಂದರ ಈ ಜನತಾ ಪ್ರತಿನಿಧಿಗಳ ಗುಟ್ಟನ್ನು ರಟ್ಟು ಮಾಡಿದರು.

ಗಾಜಿನ ಮನೆಯಲ್ಲಿರುವವರು ಕಲ್ಲು ತೂರಬಾರದೆಂಬ ನಿಯಮವನ್ನು ಉಲ್ಲಂಘಿಸಿದಂತೆ, ರಾಡಿಯಲ್ಲಿ ಕಲ್ಲು ತೂರಿದರೆ ಮೈಯೆಲ್ಲ ರಾಡಿಯಾಗುವಂತೆ, ಗಾಳಿಯಲ್ಲಿ ಮುಖ ಮೇಲೆ ಮಾಡಿ ಉಗುಳಿದರೆ ಅದು ತಮ್ಮ ಮೈಗೇ ಸಿಡಿಯುವಂತೆ, ಗುಜರಾಥ ವಿಧಾನ ಸಭೆಯ ಸದಸ್ಯರ ಪರಿಸ್ಥಿತಿಯಾಗಿದೆ.

ಇದಕ್ಕೆ ಕಳಸವಿಡುವಂತೆ ಗುಜರಾಥ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ವಿಧಾನ ಸಭೆಯ ಸದಸ್ಯರೂ ಆದ ಶ್ರೀ ಮಹಂತ ವಿಜಯದಾಸನು ೨೦ ಅಂಶಗಳ ಕಾರ್ಯಕ್ರಮಕ್ಕೆ ಕೋ-ಚೇರಮನ್ ಎಂದು ನಿಯಮಿಸಲಾಗಿದ್ದು ಈ ಸ್ಥಾನವು ಲಾಭದಾಯಕ ಹುದ್ದೆಯಾಗಿರುವುದರಿಂದ ಅವರ ಸದಸ್ಯತ್ವವು ರದ್ದಾಗುವ ಭಯವಿರುವುದರ ನಿವಾರಣೆಗೆ ಸರಕಾರವು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿಬಿಟ್ಟಿದೆ. ಭೋಪಾಳಕ್ಕೆ ವರ್ಗವಾಗಿ ಹೋದ ರಾಜ್ಯಪಾಲ ಶ್ರೀ ಕೆ. ಎಂ. ಚಾಂಡಿಯವರು, ಅವಸರದಿಂದ ಸುಗ್ರೀವಾಜ್ಞೆಗೆ ಸಹಿ ಮಾಡಿ ಭೋಪಾಳಕ್ಕೆ ಹೋದದ್ದು, ಮುಖ್ಯಮಂತ್ರಿ ಸೋಳಂಕಿಯ ಕಟ್ಟಾ ಅನುಯಾಯಿಗಳನ್ನು ಸಹ ಆಘಾತಕ್ಕೀಡು ಮಾಡಿದೆ. ದಲಿತ ಕವಿಯೊಬ್ಬನು, "ಯಾರಾದರೂ ಮಹಾತ್ಮಾ ಗಾಂಧೀ ಭೇಟಿಯಾಗುವ ಸೌಭಾಗ್ಯ ಪಡೆದರೆ ಅವರ ಮಾರ್ಗವಾದ ಸತ್ಯ ಹಾಗು ಅಹಿಂಸೆಗಳ ಮೇಲೆ ಸುಲಭವಾಗಿ ದಾಟಿ ಹೋಗಲು ಒಂದು ಸೇತುವೆಯನ್ನು ಕಟ್ಟಿದ್ದೇವೆಂದು ಅವರಿಗೆ ದಯವಿಟ್ಟು ತಿಳಿಸಿ" ಎಂದು ಕೇಳಿಕೊಂಡಿದ್ದಾನೆ.

ಇಷ್ಟು ಮಾತ್ರ ನಿಜ. ಗುಜರಾಥ ಸರಕಾರ ವಿಧಾನ ಸಭೆಯಲ್ಲಿ ಪಾಸು ಮಾಡಿದ ಪೆನ್‌ಶನ್ ಮಸೂದೆಯನ್ನು ಕಾನೂನನ್ನಾಗಿ ಪರಿವರ್ತಿಸದೆ ಹಿಂದೆ ತೆಗೆದುಕೊಳ್ಳದಿದ್ದರೆ, ಮಹಂತರನ್ನು ಉಳಿಸಲು ಹೊರಡಿಸುವ ಸುಗ್ರೀವಾಜ್ಞೆಯನ್ನು ಕಸದ ಬುಟ್ಟಿಗೆ ಚೆಲ್ಲದಿದ್ದರೆ, ಗುಜರಾತಿನ ಮಧ್ಯಮ ವರ್ಗ ಹಾಗೂ ಗ್ರಾಮಾಂತರ ಯುವ ಜನತೆ ಸುಮ್ಮನೆ ಕೂಡುವುದಿಲ್ಲ. ತಮ್ಮನ್ನಾಳುವ ಪ್ರಜಾಪ್ರತಿನಿಧಿಗಳು ಸ್ವಾರ್ಥಕ್ಕಾಗಿ ಬೇಕಾದದ್ದನ್ನು ಮಾಡುತ್ತಾರೆಂದು ನಂಬಿ ಪಾಠ ಕಲಿಸಲು ಜನತೆ ಮುಂದಾದರೆ ಈ ಜನತಾ ಪ್ರತಿನಿಧಿಗಳೆಂದೆನಿಸಿಕೊಳ್ಳುವವರ ಗತಿಯೇನು? ಕಾಲ ಮಿಂಚಿ ಹೋಗುವ ಮೊದಲೇ ಅವರ ತಿದ್ದಿಕೊಳ್ಳದಿದ್ದರೆ, ಜನತಾ ಪ್ರಕೋಪಾಗ್ನಿಗೆ ಆಹುತಿಯಾಗುತ್ತಾರೆ.

ಆದರೆ ಈ ಎಚ್ಚರ ರಾಜಕಾರಣಿಗಳಿಗೆ ಇದೆಯೆ?

ಕಲೆ ಮತ್ತು ಶಾಂತಿ

ರಾ. ಅನಂತನಾರಾಯಣ

ಒಂದು ಗ್ರಂಥವನ್ನು ಓದಿದರೆ ಅಥವಾ ಒಂದು ಉಪನ್ಯಾಸವನ್ನು ಕೇಳಿದರೆ ಮನಸ್ಸು ಆ ವಿಷಯವನ್ನು ಪ್ರವೇಶಿಸಲು ಸಹಾಯಕವಾಗುವುದು. ಹರಿಕಥೆಯಲ್ಲಿ ಮಾಡುವಂತೆ ಮಾತಿನ ಜೊತೆ ಗಾನ ಮತ್ತು ವಾದ್ಯಸಂಗೀತ ಸೇರಿದರೆ, ವಿಷಯ ಇನ್ನೂ ಹೆಚ್ಚು ಆಕರ್ಷಣೀಯವಾಗಿ ಮನಸ್ಸನ್ನು ಹಿಡಿಯುವುದು. ಗ್ರಂಥದಲ್ಲಿ ಅಲಂಕಾರ, ಪ್ರಾಸ ಮತ್ತು ಶೈಲಿಯ ಸೌಂದರ್ಯ, ಕಣ್ಣು ಕಟ್ಟುವ ಪ್ರಕೃತಿ ವರ್ಣನೆ ಇದ್ದರೆ ವಾಚಕನ ಮನಸ್ಸು ಆ ಸೊಗಸಿನಲ್ಲಿ ಸಂತೋಷದಿಂದ ವಿಹರಿಸುವುದು. ಸಾಮಾನ್ಯ ಗ್ರಂಥಗಳನ್ನೂ ಹರಿಕಥೆಗಳನ್ನೂ ಮೀರಿದುವು ಮಹಾಕಾವ್ಯಗಳು. ಮಹಾಕಾವ್ಯಗಳಲ್ಲಿ ಎರಡು ಬಗೆ: ಕೇಳುವವು ಮತ್ತು ನೋಡುವವು: ಶ್ರಾವ್ಯಕಾವ್ಯ ಮತ್ತು ದೃಶ್ಯಕಾವ್ಯ. ನಾಟಕಗಳು ಎರಡನೆಯ ವರ್ಗಕ್ಕೆ ಸೇರಿದುವು. ಪುಸ್ತಕಗಳಲ್ಲಿ ಎಷ್ಟೇ ಬರೆದರೂ ರಂಗಸ್ಥಳದ ಮೇಲೆ ತೋರಿಸುವ ಅಭಿನಯದಿಂದ ಹೆಚ್ಚು ಪ್ರತ್ಯಕ್ಷವೂ ಪರಿಣಾಮಕಾರಿಯೂ ಆದ ಫಲವುಂಟಾಗುತ್ತದೆ. ಅಭಿನಯವೆಂಬುದು ಪ್ರದರ್ಶನ. ಅನೇಕ ಶತಮಾನಗಳ ಹಿಂದೆಯೇ ಕಾಳಿದಾಸ, ಭಾಸ ಮುಂತಾದ ಮಹಾಕವಿಗಳು ನಾಟಕಗಳನ್ನು ಬರೆದಿದ್ದಾರೆ. ಈಚೆಗೆ ಮುದ್ರಣ ಸೌಕರ್ಯ ಬಂದ ವೇಳೆ, ಪುಸ್ತಕದ ಪ್ರತಿಗಳನ್ನೂ ಹೆಚ್ಚಿಸಿಕೊಳ್ಳುವುದು ಸುಲಭವಾಗಿದೆ. ಈಗ ಪ್ರತಿಯೊಂದು ಪ್ರತಿಯನ್ನು ಕೈಯಿಂದ ಬರೆಯಬೇಕಾದ ಅವಶ್ಯಕತೆ ಇಲ್ಲ. ಈಗ ನಾಟಕವನ್ನು ಒಂದು ಸಲ ಅಭಿನಯಿಸಿಕೊಂಡರೇ ಸಾಕು. ಪ್ರೊಜೆಕ್ಟರಿನಲ್ಲಿ ಬಿಳಿಯ ಪರದೆಯ ಮೇಲೆ ಪದೇ ಪದೇ ಪ್ರದರ್ಶಿಸಬಹುದು. ನಟ ನಟಿಯರು ಮತ್ತೆ ಅದನ್ನು ರಂಗದಲ್ಲಿ ಆಡಬೇಕಾದುದಿಲ್ಲ.

ಶಾಂತಿರಸದಿಂದ ಶಾಂತಿ

ಪ್ರತಿಯೊಂದು ನಾಟಕದಲ್ಲಿಯೂ ಸ್ವಲ್ಪ ಹೆಚ್ಚು ಕಡಿಮೆ ನವರಸ ಇದ್ದೇ ಇರುತ್ತವೆ. ಆದರೆ ಪ್ರತಿ ನಾಟಕಕ್ಕೂ ಒಂದು ಪ್ರಮುಖವಾದ ರಸವುಂಟು. ಉದಾಹರಣೆಗೆ ಮಹಾವೀರ ಚರಿತ್ರೆ ಮತ್ತು ವೇಣೀ ಸಂಹಾರಗಳು ವೀರರಸ ಪ್ರಧಾನವಾದುವು. ಹಾಗೆಯೇ ಇನ್ನೂ ಕೆಲವು ನಾಟಕಗಳಲ್ಲಿ, ಕರುಣ, ರೌದ್ರ ಮುಂತಾದ ಇತರ ರಸಗಳನ್ನು ಪ್ರಧಾನವಾಗಿ ಚಿತ್ರಿಸಲಾಗಿದೆ. ಅಲಂಕಾರಶಾಸ್ತ್ರದ ಗ್ರಂಥಕರ್ತರು, ಶಾಂತಿರಸವನ್ನು ಉಳಿದ ರಸಗಳಂತೆ ಪರಿಗಣಿಸಬೇಕೇ? ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ ಶಾಂತಿರಸ ಮನಸ್ಸಿನ ಒಂದು ಸ್ಥಿತಿ. ಇತರ ರಸಗಳು ಮನಸ್ಸನ್ನು ವಿಚಲಿತಗೊಳಿಸುವಂತೆ ಅದು ವಿಚಲಿತಗೊಳಿಸುವುದಿಲ್ಲ ಎಂಬುದೊಂದು ವಾದ. ಮನಸ್ಸಿನ ಮೇಲೆ ಇತರ ರಸಗಳ ಪರಿಣಾಮ ತಾತ್ಕಾಲಿಕ. ಅವು ದುಃಖವನ್ನೂ ನೋವನ್ನೂ ವಿಕಾರವನ್ನೂ ಉಂಟುಮಾಡುತ್ತವೆ. ಅವುಗಳಿಂದ ಆನಂದವೂ ಶಾಂತಿಯೂ ಉಂಟಾಗುವುದಿಲ್ಲ. ಆದರೆ ಶಾಂತಿ ರಸ ಶಾಶ್ವತ ತೃಪ್ತಿಯನ್ನು ಉಂಟುಮಾಡುತ್ತದೆ. ಶಾಂತಿರಸವನ್ನು ಅನುಭವಿಸುವ ಮನಸ್ಸು, ತಾನು ಶಾಂತವಾಗಿರುವುದಲ್ಲದೆ ಜಗತ್ತಿನೊಂದಿಗೆ ಮೈತ್ರಿಯಿಂದಿರುತ್ತದೆ. ಗಾನ ಮಹರ್ಷಿ ತ್ಯಾಗರಾಜರು ಹಾಡಿರುವಂತೆ "ಶಾಂತಮು ಲೇಕ ಸೌಖ್ಯಮು ಲೇದು." ಶಾಂತಿಯಿಲ್ಲದೆ ಸೌಖ್ಯವಿಲ್ಲ. ಶಾಂತಿರಸ ಇತರ ರಸಗಳಂತೆ ಉದ್ದೀಪನಗೊಳಿಸುವುದೂ ರಂಜಿಸುವುದೂ ಅಲ್ಲದಿದ್ದರೂ ಅದು ತನ್ನ ಸಾರ್ವಭೌಮತ್ವದಿಂದಲೇ ಒಂದು ರಸವೆಂದು ಪರಿಗಣಿತವಾಗಿದೆ.

ಮಧುರರಸದ ಮಾಧುರ್ಯ

ನಮ್ಮ ಆಹಾರದ ಷಡ್ರಸಗಳನ್ನು ಇದಕ್ಕೆ ಹೋಲಿಸಬಹುದು. ಉಪ್ಪು, ಹುಳಿ, ಖಾರ ಮುಂತಾದುವು ತಮ್ಮ ತಮ್ಮ ಶುಚಿ, ಗುಣಗಳಿಂದ ನಮ್ಮ ಸ್ವಾದ ಶಕ್ತಿಯನ್ನು ಉತ್ತೇಜನಗೊಳಿಸುತ್ತವೆ. ಷಡ್ರಸಗಳಲ್ಲಿ ಒಂದೊಂದನ್ನೇ ಅನುಭವಿಸುವುದು ಸಾಧ್ಯವಿಲ್ಲ. ಮತ್ತು ರಸಗಳ ಮಿಶ್ರಣದಲ್ಲಿ ಒಂದು ಪ್ರಮಾಣ ಇರಬೇಕು. ಅಲ್ಲದೆ ಅವು ಸಾತ್ವಿಕ ರಸಗಳಲ್ಲ. ಅವು ನಾಲಿಗೆಯನ್ನು ತೃಪ್ತಿಗೊಳಿಸಬಹುದು; ಆದರೆ ಮನಸ್ಸಿಗೆ ಶಾಂತಿಯುಂಟುಮಾಡುವುದಿಲ್ಲ. ನಾಲಿಗೆಯನ್ನು ಕೆರಳಿಸಿ ಮನಸ್ಸನ್ನು ಉದ್ರೇಕಗೊಳಿಸುತ್ತವೆ ಮಾತ್ರ. ಸಿಹಿ ಎಂಬುದು ಮಧುರ. ಆದರೆ ಅದನ್ನು ಅತಿಯಾಗಿ ಸೇವಿಸಿದರೆ ಅರುಚಿಯಾಗಿ ನಾಲಿಗೆ ಒಣಗುತ್ತದೆ. ಆದರೆ ಎಷ್ಟು ಅನುಭವಿಸಿದರೂ ತೃಪ್ತಿಯಾಗದ ಒಂದು ಸಿಹಿರಸ ಇದೆ. ಇದೇ ಅತ್ಯುತ್ತಮವಾದ ಮಧುರ. ಇದನ್ನು ಮಧುರ ರಸವೆನ್ನುತ್ತಾರೆ. ನಿಜವಾದ ಸಿಹಿ ರಸ ಅದು. ಅದರಿಂದ ಉಂಟಾಗುವ ಆನಂದ ಎಂದಿಗೂ ಕಡಿಮೆಯಾಗುವುದಿಲ್ಲ. ಅದು ಇತರ ಅಡಿಗೆಯ ರಸಗಳ ಜೊತೆ ಸೇರುವುದಿಲ್ಲ. ಅವು ಇರುವೆಡೆ ಇರುವುದಿಲ್ಲ. ಶ್ರೀಕೃಷ್ಣ ಅನುಭವಿಸಿದ್ದು ಈ ರಸವನ್ನೇ. ಶುದ್ಧವಾದ ಮೊಸರು ಮತ್ತು ಆಗ ತಾನೆ ಕಡೆದ ಬೆಣ್ಣೆಯನ್ನು ಎಷ್ಟು ಬೇಕಾದರೂ ತಿನ್ನಬಹುದು. ಮೊಸರು, ಬೆಣ್ಣೆ ಸ್ವಾಭಾವಿಕವಾಗಿಯೇ ಬೆಳ್ಳಗಿವೆ. ಅವನ್ನು ಬೆಳ್ಳ ಮಾಡಲು ಮತ್ತೇನನ್ನೂ ಸೇರಿಸಬೇಕಾದುದಿಲ್ಲ. ಶ್ರೀಕೃಷ್ಣನ ಬಾಯಿ ಬೆಣ್ಣೆ, ಮೊಸರಿನಿಂ ತುಂಬಿದ್ದಂತೆ ಅವನ ಹೃದಯ ಆನಂದದಿಂ ತುಂಬಿತ್ತು. ಬೆಣ್ಣೆಯ ಮಧುರರಸ ಶಾಂತರಸ.


ಇನ್ನು ಬಣ್ಣಗಳ ವಿಚಾರ. ಕಪ್ಪು ಒಂದ ಬಣ್ಣ, ಬಿಳುಪು ಒಂದು ಬಣ್ಣ ಎನ್ನುತ್ತೇವ ಆದರೆ ವಿಜ್ಞಾನಕ್ಕೆ ಅನುಸಾರವಾಗಿ ಕಪ ಬಿಳುಪು ಬಣ್ಣಗಳಲ್ಲ. ಅವು ಹಾಗೆ ಕಾಣ ತ್ತವೆ. ಸೂರ್ಯನು ಏಳು ಅಶ್ವಗಳ ರಥವ ಪ್ರಯಾಣ ಮಾಡುತ್ತಾನೆಂದು ಪುರಾಣಗಳ ಹೇಳಿದೆ. ವೇದಗಳು ಅವನನ್ನು ಸಪ್ತಾಶ್ವ ಎನ ತ್ತವೆ. ಅಶ್ವ ಎಂದರೆ ಕಿರಣ ಎಂದು ನಿ ಕ್ತದ ಅರ್ಥ. ಸಪ್ತಾಶ್ವ ಎಂದರೆ ಏಳು ಕಿ ಗಳುಳ್ಳವನೆಂಬ ಅರ್ಥ. ಪೂರ್ವ ಕಾಲ ಸ್ಫಟಿಕ ರೂಪದ ಅಲಂಕಾರ ದೀಪಗಳ ಪ

ಅಲುಗಾಡಿದಾಗ ಏಳು ಬಣ್ಣಗಳು ಸಮಗೆ ಕಾಣುತ್ತವೆ. ಏಳು ವರ್ಣಗಳೂ ಒಂದಾದರೆ ಬಿಳಿಯ ಬಣ್ಣ ಕಾಣುತ್ತದೆ. ಅಂದರೆ ಬಣ್ಣವೇ ಅಲ್ಲ. ಅದು ಶುದ್ಧ, ಸ್ವಚ್ಛ; ವರ್ಣ ಪಟಲ ನೋಟ ಅದರ ಮೇಲೆ ಬಿದ್ದಾಗ ಅದರಲ್ಲಿ ಊದು ಬಣ್ಣದಿಂದ ಕೆಂಪು ಬಣ್ಣದವರೆಗೆ ದಿಕ್ಷೇಣದಿಂದ ವರ್ಣಪ್ರಕಾಶ ವಾಗುತ್ತದೆ. ಸೂರ್ಯನ ಬೆಳಕಿನಲ್ಲಿರುವ ಪ್ರತಿಯೊಂದು ಬಣ್ಣದ ಮೊತ್ತವನ್ನೂ ವಿಜ್ಞಾನಿಗಳು ಗೊತ್ತು ಮಾಡಿದ್ದಾರೆ. ಆ ಪ್ರಮಾಣದಲ್ಲಿ ಆ ಬಣ್ಣಗಳನ್ನೆಲ್ಲಾ ಕೂಡಿಸಿದರೆ ಬಿಳಿಯ ಬೆಳಕು ಉಂಟಾಗುತ್ತದೆ. ಎಣ್ಣೆಯ ದೀಪ ಕೆಂಪು; ಏಕೆಂದರೆ ಎಣ್ಣೆಯಲ್ಲಿ ಕೆಂಪು ವರ್ಣದ ಅಂಶ ಸ್ವಲ್ಪ ಹೆಚ್ಚಾಗಿದೆ. ಆದರೆ ಶುದ್ಧವಾದ ತುಪ್ಪದ ಉರಿ ಕೆಂಪಾಗಿರುವುದಿಲ್ಲ. . ಅದು ಸ್ವಚ್ಛವಾದ ಜ್ಯೋತಿ. ಆದುದರಿಂದಲೇ ನಮ್ಮ ದೇವಾಲಯಗಳ ಗರ್ಭಗೃಹದಲ್ಲಿ ದೇವರ ವಿಗ್ರಹಗಳ ಸಮೀಪದಲ್ಲಿ ತುಪ್ಪದ ದೀಪಗಳನ್ನು ಹಚ್ಚಿಡುತ್ತಾರೆ. ಆ ದೀಪದಲ್ಲಿ ಅಶುದ್ಧತೆ ಇಲ್ಲ. ಆದ್ದರಿಂದ ಬಣ್ಣವೂ ಇಲ್ಲ.

ಬಣ್ಣದ ಚಮತ್ಕೃತಿ

ಚಿನ್ನ, ಬೆಳ್ಳಿ, ಕಬ್ಬಿಣ, ತಾಮ್ರ ಮುಂತಾದ ಲೋಹಗಳನ್ನು ನಿಗಿ ನಿಗಿಯಾಗಿ ಕಾಯಿಸಿದರೆ ಪ್ರತಿಯೊಂದು ಬೇರೆ ಬೇರೆ ಬಣ್ಣವನ್ನು ಹೊರ ಚೆಲ್ಲುವುದು (ವರ್ಣಪಟಲದರ್ಶಕ ಯಂತ್ರದಿಂದ ನೋಡಿ). ಆದರೆ ಆ ಬಣ್ಣಗಳ ಮೂಲಗಳು ಸೂರ್ಯರಶ್ಮಿಯಲ್ಲಿಯೂ ಇವೆ. ಇವರ ಜೊತೆಗೆ ಸೂರ್ಯಬಿಂಬದಲ್ಲಿ ಹೀಲಿಯಂ ಎಂಬ ಒಂದು ಪಾರದರ್ಶಕ ಅನಿಲ ಇದೆ. ಸೂರ್ಯ ಎಂಬ ಹೆಸರಿನ ಮೂಲದ ಲ್ಯಾಟಿನ್ ಪದದಿಂದ ಇದು ಹುಟ್ಟಿದೆ. ಸಂಸ್ಕೃತದಲ್ಲಿ ಸೂರ್ಯನನ್ನು "ಹೇಲಿ" ಎಂದು ಕರೆಯುತ್ತಾರೆ. ಹೀಲಿಯಂ ಎಂಬ ದ್ರವ್ಯ ಸೂರ್ಯನಲ್ಲಿದೆ. ಭೂಮಿಯಲ್ಲಿಲ್ಲ. ಈ ಬ್ರಹ್ಮಾಂಡ ಹೀಲಿಯೊಸೆಂಟ್ರಿಕ್ ಎಂದು ಹೇಳುತ್ತಾರೆ. ಅಂದರೆ ಸೂರ್ಯನನ್ನು ಇದರ ಕೇಂದ್ರವೆಂದು ಭಾವಿಸಬೇಕೆಂಬ ಅರ್ಥ. ಹೇಲಿ: ಎಂಬ ಶಬ್ದದಿಂದಲೇ ಹುಟ್ಟಿದೆ.

ಸೂರ್ಯ ಜ್ಯೋತಿಗೆ ವರ್ಣವಿಲ್ಲ. ಹಾಗೆಂ ಸ್ಫಟಿಕಕ್ಕೂ ವರ್ಣವಿಲ್ಲ. ನೀರಿಗೂ ಸಹ ವ ವಿಲ್ಲ. ಉತ್ತಮವಾದ ಸ್ಫಟಿಕದ ಲ ವೆಂದರೆ ಅದನ್ನು ಶುದ್ಧವಾದ ನೀರ ಮುಳುಗಿಸಿದರೆ ಅದು ಕಾಣಬಾರದು. ದ ಗೋಚರವಾಗುವ ವಸ್ತುಗಳಲ್ಲಿ ಸ್ಫಟಿಕವೇ ಶ ಮತ್ತು ವರ್ಣರಹಿತ. ರುಚಿಯ ಪ ಗಳಲ್ಲಿ ಬೆಣ್ಣೆ ಶುದ್ಧ ಮತ್ತು ವಣಿ ಮನಸ್ಸಿನ ಭಾವನೆಗಳಲ್ಲಿ ಶಾಂತಿ, ಶುದ್ಧ ಸಮಾಧಾನಕರ, ಯಾವ ರಸಾನುಭಾ ಮನಸ್ಸು ಶಾಂತವಾಗಿರುವುದೋ ಶಾಂತಿರಸ. ರಸಾನುಭವದಲ್ಲಿ ಮ ರಸದೊಂದಿಗೆ ಏಕವಾಗುತ್ತದೆ ತಾದಾತ್ಮ್ಯವನ್ನು ಹೊಂದುತ್ತದೆ.



ನಾಟಕಗಳಲ್ಲಿ ಶೃಂಗಾರ, ವೀರ, ಕರುಣ, ಪ್ರ, ಹಾಸ್ಯ, ಭಯಾನಕ, ಭೀಭತ್ಸರಸವನ್ನು ಪ್ರಧಾನವಾಗಿ ಉಳ್ಳ ನಾಟಕಗಳು ಅನೇಕ ಇದ್ದರೂ ಶಾಂತರಸವನ್ನು ಪ್ರದರ್ಶಿಸುವ ನಾಟಕಗಳು ಅಷ್ಟು ಇಲ್ಲ. ಆಧುನಿಕ ನಾಟಕಗಳ ವಿಷಯದಲ್ಲಿಯಂತೂ ಇದು ತೀರ ನಿಜ. ಇವು ಭಾವಗಳನ್ನು ಉದ್ರೇಕಗೊಳಿಸುವುದೇ ಹೊರತು, ಶಮನ ಮಾಡುವುದಿಲ್ಲ. ಮನುಷ್ಯನನ್ನು ಅವನತಿಗೆ ಎಳೆಯುತ್ತವೆ—ಉನ್ನತಿಗೆ ಏರಿಸುವ ಬದಲು.

ಶಾಂತರಸದ ಅತ್ಯುತ್ತಮ ನಾಟಕ

ಶಾಂತರಸವ ಪ್ರಬೋಧನೆಗಾಗಿಯೇ ಬರೆದ ಪುರಾತನ ಕಾಲದ ಅತ್ಯುತ್ತಮ ನಾಟಕವೊಂದಿದೆ. ಇದು ರಾಜಸ್ಥಾನದಲ್ಲಿ ಸಾವಿರ ವರ್ಷಗಳ ಹಿಂದೆ ಇದ್ದ ಕೃಷ್ಣ ಮಿಶ್ರ ಎಂಬುವನು ಬರೆದ "ಪ್ರಬೋಧ ಚಂದ್ರೋದಯ" ನಾಟಕ. ಮೋಕ್ಷಕ್ಕೆ ಜ್ಞಾನವೇ ರಾಜಮಾರ್ಗವೆಂಬುವನ್ನು ತೋರಿಸುವ ಒಂದು ರೂಪಕ ಕಥೆ ಅದು. ಆ ನಾಟಕದ ಪಾತ್ರಗಳು ವಿವೇಕ, ವಿಷ್ಣುಭಕ್ತಿ, ಶ್ರದ್ಧೆ, ಶಾಂತಿ, ಧರ್ಮ, ವೈರಾಗ್ಯ, ಅಜ್ಞಾನ, ಮುಂತಾದವು. ಪ್ರಬೋಧನ ಸಾಮ್ರಾಜ್ಯಕ್ಕಾಗಿ ನಡೆಸುವ ಹೋರಾಟವೇ ನಾಟಕದ ವಸ್ತು. ಜಗತ್ತಿನ ವಿರೋಧಿಯ ಶಕ್ತಿಗಳನ್ನು ಸೋಲಿಸಿ ಶಾಂತಿಯೂ ಮಹಾವಿಷ್ಣುವೂ ಜಯಶಾಲಿಯಾಗಿ ಮೆರೆಯುತ್ತವೆ. "ಶಾಂತಿ ಮಾವರಿಯಲ್ಲಿ ವೇದಾಂತ ದೇಶಿಕರು "ಸಂಕಲ್ಪ ಸೂರ್ಯೋದಯ" ಎಂಬ ನಾಟಕವನ್ನು ಬರೆದರು. ಇದು ಪರಮಾತ್ಮನ ಕರುಣೆಯನ್ನು ಪಡೆಯುವುದಕ್ಕೆ, ಭಕ್ತಿಯು ಸಾಧನಭೌಮ ರಾಜಮಾರ್ಗವೆಂಬುದನ್ನು ಪ್ರತಿಪಾದಿಸುತ್ತದೆ.

ರಂಗಸ್ಥಳದಲ್ಲಿ ಅಭಿನಯಿಸುವ ನಾಟಕಗಳು ಜನರನ್ನು ಉನ್ನತಿಗೆ ಏರಿಸುವವಾಗಿರಬೇಕು. ಅಂಧಕಾರಗಳತ್ತ ತಳ್ಳುವದಾಗಿರಬಾರದು. ನಾಟಕವನ್ನು ನೋಡುವವರಿಗೆ ಮನಸ್ಸಿನಲ್ಲಿ ಸರ್ವರಲ್ಲಿ ಸ್ನೇಹವೂ ಉಂಟಾಗಬೇಕು. ಮನಸ್ಸನ್ನು ವಿಕಾರಗೊಳಿಸಿ ಭಾವವನ್ನು ಉದ್ರೇಕಿಸಬಾರದು. ನೀಚ ಪ್ರವೃತ್ತಿಗಳನ್ನು ಉದ್ರೇಕಿಸುವ, ಒಂದು ಪಂಗಡಕ್ಕೆ ವಿರೋಧವಾಗಿ ಬೇರೊಂದು ಪಂಗಡವನ್ನು ಎತ್ತಿಕಟ್ಟುವ, ಪರಸ್ಪರರಲ್ಲಿ ಕ್ರೋಧ, ತಿರಸ್ಕಾರ ಅಸಮಾಧಾನಗಳನ್ನು ವ್ಯಕ್ತಪಡಿಸುವ, ನಾಟಕಗಳೂ ಚಿತ್ರಗಳೂ ಈಗ ಹೆಚ್ಚಾಗಿವೆ.

ಹಿಂದಿನ ಕಾಲದಲ್ಲಿ ರಂಗಸ್ಥಳದ ಮೇಲೆ ಅಭಿನಯಿಸುವುದು ಒಂದು ಪಂಗಡದ ಜನರಿಗೆ ಮಾತ್ರ ಮೀಸಲಾಗಿತ್ತು. ಇವರಿಗೆ "ಭರತಪುತ್ರ"ರೆಂದು ಹೆಸರಿತ್ತು. ಅದು ಅವರಿಗೆ ಪೃಥಕ್ಕಾಗಿ ಮೀಸಲಾದ ಕಲೆ. ಇತರರು ತಮ್ಮ ತಮ್ಮ ಧರ್ಮಗಳನ್ನು ತಾವು ಆಚರಿಸುತ್ತಿದ್ದರು. ಅವರು ಅಭಿನಯವನ್ನು ಪ್ರಾರಂಭಿಸುವುದೆಂದರೆ, ಅಭಿನಯಕಾರನ ಧರ್ಮವನ್ನು ತಾವು ಅಂಗೀಕರಿಸಿ ಸ್ವಧರ್ಮವನ್ನು ತ್ಯಜಿಸಿದಂತೆ ಆಗುತ್ತಿತ್ತು. ಸ್ವಧರ್ಮ ತ್ಯಾಗದಿಂದ ಸಮಾಜಕ್ಕೂ ತನಗೂ ತುಂಬಾ ಕೇಡು. ಅಭಿನಯದಲ್ಲಿಯೂ ಭರತಪುತ್ರರು ಕೆಲವು ನಿಯಮಗಳನ್ನು ಅನುಸರಿಸಬೇಕಾಗಿತ್ತು. ಯಾವ ಪುರುಷನೂ ಹೆಂಗಸಿನ ವೇಷವನ್ನು ಹಾಕಬಾರದು. "ಸ್ತ್ರೀವೇಷಧಾರಿ ಪುರುಷನನ್ನು" ನೋಡುವುದೇ ಪಾಪವೆಂದು ಗಣಿಸಲಾಗಿತ್ತು. ಯಾವುದೋ ಹೆಣ್ಣು, ಯಾವುದೋ ಗಂಡು, ನಾಟಕದಲ್ಲಿ ಪತಿ ಪತ್ನಿಯರಾಗಿ ಅಭಿನಯಿಸಲು ಅವಕಾಶವಿರಲಿಲ್ಲ. ರಂಗಸ್ಥಳದಲ್ಲಿ ಪತಿಪತ್ನಿಯರಾಗುವವರು ನಿಜ ಜೀವನದಲ್ಲೂ ಪತಿಪತ್ನಿಯರೇ ಆಗಿರಬೇಕಾಗುತ್ತಿತ್ತು. ಈ ನಿಯಮವು ಇಂದಿನ ನಾಟಕ, ಚಿತ್ರಗಳಲ್ಲಿ ಅನುಸರಿಸುತ್ತಿರದ ಕಾರಣ ನಮ್ಮ ಜನರ ನೀತಿ ಅವನತಿಗೊಳ್ಳುತ್ತಿದೆ. ಸಾಧಾರಣವಾಗಿ ಇಂದಿನ ನಾಟಕಗಳು ಜನರ ಭಾವನೆಗಳನ್ನು ಉದ್ರೇಕಿಸುತ್ತವೆಯೇ ಹೊರತು, ಶಾಶ್ವತವಾದ ಶಾಂತಿಯನ್ನೂ ಶುದ್ಧವಾದ ಆನಂದವನ್ನೂ ಪ್ರೇಕ್ಷಕರಲ್ಲಿ ಉಂಟುಮಾಡುವುದಿಲ್ಲ.

ಸುಮಾರು ನಾಲ್ಕು-ಐದು ವರ್ಷಗಳ ಹಿಂದೆ ಜರ್ಮನಿಯ ನಿಷ್ಣಾತ ವಿಜ್ಞಾನಿಗಳ-ಲ್ಲೊಬ್ಬರಾದ ಡಾ. ಫ್ರೆಡ್ರಿಕ್ ಎಂಬುವರು ನಮ್ಮ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವಿಸಿಟಿಂಗ್ ಪ್ರೊಫೆಸರ್ ಆಗಿ ಬಂದಿದ್ದರು. ಒಂದು ಮಧ್ಯಾಹ್ನ ಭಾರತೀಯ ವಿಜ್ಞಾನ ಮಂದಿರದ ಒಂದು ವಿಭಾಗದಲ್ಲಿ ಪ್ರೊ. ಫ್ರೆಡ್ರಿಕ್‌ರವರ ಉಪನ್ಯಾಸವನ್ನು ಏರ್ಪ-ಡಿಸಿದ ಸಂದರ್ಭ. ದಾರಿಯಲ್ಲಿ ಇದ್ದಕ್ಕಿದ್ದ ಹಾಗೇ ಏನನ್ನೋ ಜ್ಞಾಪಿಸಿಕೊಂಡು, "ನಾನು ಕೋಟು ಹಾಕಿಕೊಂಡಿಲ್ಲ. ಟೈ ಕಟ್ಟಿಕೊಂಡು ಬರಲು ಮರೆತುಬಿಟ್ಟೆ. ಹೀಗೆಯೇ ಉಪನ್ಯಾಸ ಮಾಡಲು ಹೋದರೆ ಆ ವಿಭಾಗದ ವಿಜ್ಞಾನಿಗಳು ನನ್ನ ಬಗ್ಗೆ ಏನೂ ತಿಳಿದುಕೊಳ್ಳುವುದಿಲ್ಲವೆ?" ಎಂಬುದಾಗಿ ಅವರ ಕಾರಿನಲ್ಲೇ ಕುಳಿತುಕೊಂಡಿದ್ದ ನನ್ನಲ್ಲಿ ತಮ್ಮ ಆತಂಕ ತೋಡಿಕೊಂಡರು. ನಾನು ಅವರನ್ನು ಸಮಾಧಾನಪಡಿಸುತ್ತ, "ನಮ್ಮ ದೇಶದಲ್ಲಿ, ಉನ್ನತ ಶಿಕ್ಷಣ ಮತ್ತು ಸಂಶೋಧನ ಸಂಸ್ಥೆಗಳಲ್ಲಿ ವೇಷ ಭೂಷಣಗಳ ಬಗ್ಗೆ ನಿಜವಾದ ವಿದ್ವಾಂಸರು ಮತ್ತು ವಿಜ್ಞಾನಿಗಳು ಹೆಚ್ಚು ಕಾಳಜಿಯನ್ನು ತೋರುವುದಿಲ್ಲ. ಸೂಟು-ಟೈ ಮುಂತಾದವುಗಳ ಬಗ್ಗೆಯೇ ತಲೆಕೆಡಿಸಿಕೊಳ್ಳುವುದು ಸಾಮಾನ್ಯವಾಗಿ ನಮ್ಮ ವಿಶ್ವವಿದ್ಯಾಲಯಗಳ ಮತ್ತು ಸರ್ಕಾರಿ ಕಾಲೇಜುಗಳ ಪ್ರಾಧ್ಯಾಪಕರುಗಳು ಮಾತ್ರ" ಎಂದು ತಮಾಷೆ ಮಾಡಿದೆ. ಇದನ್ನು ಕೇಳಿ ನಮ್ಮ ಜರ್ಮನ್ ಪ್ರೊಫೆಸರ್‌ರವರು ನಮ್ಮ, ನಮ್ಮ ಎದುರಿಗೇ ಬರುತ್ತಿದ್ದ ಒಬ್ಬ ಸೂಟ್ ಧಾರಿಯತ್ತ ಬೆರಳು ತೋರಿ "ಹಾಗಾದರೆ, ಅವರು ಒಬ್ಬ ವಿಜ್ಞಾನಿಯಲ್ಲವೇ?" ಎಂದು ಪ್ರಶ್ನಿಸಿದರು. ಆತನ ಕೈಯಲ್ಲಿದ್ದ ಬ್ರೀಫ್-ಕೇಸ್ ನೋಡಿ, "ಖಂಡಿತವಾಗಿಯೂ ಅಲ್ಲ. ಈತ ಯಾವುದೋ ಕಂಪನಿಯ ಸೇಲ್ಸ್ಮನ್ ಇರಬಹುದು," ಎಂದು ನಾನು ಸ ಧೈರ್ಯವಾಗಿ ಉತ್ತರಿಸಿದೆ. ಆತ ಬಳ ಹತ್ತಿರ ಬಂದಾಗ, ನಾನು ಬಹಳ ವಿನ ದಿಂದ ಆ ವ್ಯಕ್ತಿಯನ್ನು, "ತಾವು ಯ ವಿಭಾಗಕ್ಕೆ ಸೇರಿದ್ದೀರಿ"? ಎಂದು ಕೇಳಿದ ಆತ, ವಿಜ್ಞಾನ ಸಲಕರಣೆಗಳನ್ನು ಮಾ ಒಂದು ಪ್ರಸಿದ್ಧ ಕಂಪನಿಯ ರೆಪ್ರೆ ಟಿವ್ ಎಂಬುದಾಗಿ ಹೇಳಿದ. ನನ್ನ ಭ ವಾಣಿಯು ನಿಜವಾಗಿದ್ದರಿಂದ ಸಂತ ಗೊಂಡ ಪ್ರೊಫೆಸರ್ ಸಾಹೇಬರು ಅಷ್ಟ ಬಿಡದೆ, ನಮ್ಮ ವಿಶ್ವವಿದ್ಯಾಲಯ ಮತ್ತು ಸರ್ಕಾರಿ ಕಾಲೇಜುಗಳ ಪ್ರಾಧ್ಯಾ ಪಕರುಗಳು ತಮ್ಮ ಸೂಟು ಮತ್ತು ಟೈ ಬಗ್ಗೆ ಅಷ್ಟೊಂದು ಮುತುವರ್ಜಿಯ ಯಾಕೆ ವಹಿಸುತ್ತಾರೆ? ಎಂದು ನನ್ನ ಕೇಳಿದರು. ನಾನು ತಮಾಷೆಗಾಗಿ, "ತ ಕೀಳರಿಮೆಯನ್ನು ಮುಚ್ಚಿಕೊಳ ಯಾವಾಗಲೂ ಸೂಟು-ಟೈಗಳನ್ನು ಸುತ್ತಾರೆ. ಸಂಸ್ಕೃತದಲ್ಲಿ 'ಶಾಲು ಮಾತ್ರೆ ಪಂಡಿತಃ' ಎಂಬ ಹಂಡಬಂಡ ಗಾದೆ ಪ್ರಚಲಿತವಾಗಿದೆ" ಎಂದು ಏನೇನೋ ಟಲು ನಾನು ಶುರುಮಾಡಿದಾಗ, ಆಗ ವಿಶ್ವವಿದ್ಯಾಲಯದ ಒಬ್ಬ ಸೂಟ್‌ಧ ಗಳು ನಮ್ಮ ಬಳಿಯಲ್ಲೇ ದಿಢೀರ್ ಎ ಪ್ರತ್ಯಕ್ಷರಾದಾಗ ನಮ್ಮ ಸಂಭಾಷಣೆಯ ಅಲ್ಲಿಗೇ ಕೈಬಿಡಬೇಕಾಯಿತು!

-ಡಾ. ಎಸ್. ಬಾಲಚಂದ್ರ

ಕನ್ನಡ ನಾಟಕ ಸ್ಪರ್ಧೆಯಲ್ಲಿ ಬೆಳಗ ನಾವು ಶ್ರೀರಂಗರ 'ಅಶ್ವಮೇಧ' ನಾಟ ಒಯ್ದಿದ್ದೆವು. ಮದುವೆಗೆ ಬಂದ ತ ಮಗಳಿಗಾಗಿ ಒಂದು ವರವನ್ನು ಅರಸ ಕೊನೆಗೂ ಹತಾಶನಾದ ಬಡ ಬ್ರಾಹ್ಮ ವೆಂಕಪ್ಪ, ತನ್ನ ಮಗಳನ್ನು ಮ ಯಾಗಲು ಯಾರಾದರೂ ವರ ವ ಬನ್ನಿ ಎಂದು ಅಶ್ವಮೇಧದ ಕುದುರೆ

ಶಿಸ್ತುಬದ್ಧ ಕಟ್ಟುವುದು ನಾಟಕದ ಕಥಾ ...ತ್ತು. ಸಭಿಕರು ತುಂಬಾ ಇದ್ದರು. ...ಜತೆಗೆ ಲೋಪ ಬರದಂತೆ ನಾಟಕವೂ ಯಶಸ್ವಿಯಾಗಿ ನಡೆಯಿತು.

ನಾಟಕ ಮುಗಿದು ನಾವು ಬಣ್ಣದ ಮನೆಯಲ್ಲಿ ಉಡುಪು ಬದಲಿಸುತ್ತಿದ್ದೆವು. ...ಣರೊಬ್ಬರು ತಮ್ಮ ವೃದ್ಧ ತಾಯಿಯೊಂದಿಗೆ ನಮ್ಮೆದುರು ನಿಂತು, "ನಾಟಕ ...ಗಿ ಬಂತು. ಹುಡುಗೀನ್ ನೋಡಿ ...ಬಾ ಕೆಡುಕೆನಿಸಿತು," ಎಂದರು.

...ಜ ಜೀವನದಲ್ಲೂ ಆಕೆ ಅಶ್ವಮೇಧದ ಕುದುರೆ ಎಂದು ನಾವು ವಸ್ತುಸ್ಥಿತಿ ತಿಳಿಸಿದೆವು. ಅವರ ಮುಖದಲ್ಲಿ ಏನೋ ಬದಲಾವಣೆಯನ್ನು ಗಮನಿಸಿದೆವು. ಏನೋ ನಿರ್ಧಾರ ಮಾಡಿದಂತೆ ಅವರು ಹೊರಟು ಹೋದರು. ಮುಂದೆ ಒಂದೇ ತಿಂಗಳಲ್ಲಿ ನಮ್ಮ ಅಶ್ವಮೇಧದ ಕುದುರೆ ತನ್ನ ಗಂಡನೊಂದಿಗೆ ಮುಂಬೈಯಲ್ಲಿ ಹೊಸ ಸಂಸಾರ ಹೂಡಿದಳೆಂದರೆ ನೀವು ನಂಬುವಿರಾ?

—ಸುರೇಶ್ ಹೆಗಡೆ

ಸುಮಾರು ಎರಡು ವರ್ಷಗಳ ಹಿಂದಿನ ಮಾತು. ಆಗ ತಾನೇ ಬ್ಯಾಂಕಿನಲ್ಲಿ ಅಧಿಕಾರಿಯಾಗಿ ಸೇರಿದ್ದೆ. ನಾವು ಕೆಲವು ಮಿತ್ರರು ಸೇರಿ ... ಸಂಸ್ಥೆಯನ್ನು "...ಪಿಸಿದ್ದೆವು. ದೂರದ ಊರುಗಳಿಂದ ಬಂದಿರುವ ನಮ್ಮ ಸಮಾಜದ ಬಂಧುಗಳಿಗೆ ಹಬ್ಬಹರಿದಿನಗಳನ್ನು ಆಚರಿಸಲು ಅನುಕೂಲವಾಗುವಂತೆ ಹಾಗೂ ಪರಸ್ಪರರು ವಿಚಾರ ವಿನಿಮಯ ಮಾಡಿ ಸಮಾಜದ ಏಳಿಗಾಗಿ ಶ್ರಮಿಸುವುದೇ ಸಂಸ್ಥೆಯ ಉದ್ದೇಶವಾಗಿತ್ತು. ಆ ವರ್ಷ ಮಕರ ಸಂಕ್ರಾಂತಿಯನ್ನು ಸಂಭ್ರಮದಿಂದ ಆಚರಿಸಬೇಕೆಂದು ನಿರ್ಧರಿಸಿದೆವು. ಅದಕ್ಕಾಗಿ ಒಂದು ...ಸ್ತ್ರ ವ್ಯವಸ್ಥೆಯನ್ನು ಮಾಡಿ, ಖರ್ಚು ಮಾಡಿ ಮಾರಿ ಮಿಕ್ಕಿದ ಹಣವನ್ನು ... ಕಲ್ಯಾಣ ಮಂಟಪವನ್ನು ಕಟ್ಟಲು ...ಬೇಕೆಂದು ನಮ್ಮೆಲ್ಲರ ಆಲೋಚನೆಯಾಗಿತ್ತು. ಸರಿ, ಇದಕ್ಕಾಗಿ ನಾವು ಮನೆ ಮನೆಗೆ ತಿರುಗಲು ಸನ್ನದ್ಧರಾದೆವು. ನಮ್ಮೆಲ್ಲ ಕೆಲಸದಲ್ಲಿ ಅತ್ಯಂತ ಶ್ರದ್ಧೆಯಿಂದ ನೋಡಿ ಭಾಗವಹಿಸುವ ಗೃಹಸ್ಥರೊಬ್ಬರಿದ್ದರು. ನಾವು ಅವರನ್ನು ಕರೆದುಕೊಂಡು ಬರಲು ಅವರ ಮನೆಗೆ ಹೋದೆವು. ಆ ದಿನ ಅವರಿಗೆ ಸ್ವಲ್ಪ ಎದೆನೋವೆಂದು ಅವರ ಪತ್ನಿ ಹೇಳಿದಾಗ, ನಾವು ಒತ್ತಾಯಪಡಿಸದೇ ಹಿಂತಿರುಗಿದೆವು. ಆದರೆ ಆ ಗೃಹಸ್ಥರಿಗೋ ನಮ್ಮ ಕೆಲಸದಲ್ಲಿ ಭಾಗವಹಿಸುವ ಉತ್ಸಾಹ. ಮನೆಯಲ್ಲಿ ಪತ್ನಿಗೆ ಯಾವುದೋ ಸುಳ್ಳು ಕಾರಣ ಹೇಳಿ ಅವರು ನಮ್ಮನ್ನು ಕೂಡಿಕೊಂಡರು. ಸುಮಾರು ಒಂದೆರಡು ಗಂಟೆಗಳ ವರೆಗೆ ನಮ್ಮ ಕೆಲಸ ಮಾಡಿದ ನಂತರ, ಮುಂದುವರಿಸಲು ಅವರಿಂದ ಸಾಧ್ಯವಾಗಲಿಲ್ಲ. ಅವರನ್ನು ನಾವು ಮನೆಗೆ ಕಳುಹಿಸಿದೆವು. ಸಂಜೆ ನಮ್ಮೆಲ್ಲ ಕೆಲಸವನ್ನು ಮುಗಿಸಿ ಮನೆಗೆ ಬಂದಾಗ ಆಘಾತ ಕಾದಿತ್ತು. ಆ ದಿನ ಎದೆನೋವು ಜಾಸ್ತಿಯಾಗಿ, ರಾತ್ರಿ ಅವರನ್ನು ಮಣಿಪಾಲಕ್ಕೆ ಕರೆದುಕೊಂಡು ಹೋಗಬೇಕಾಯಿತು. ದುರ್ದೈವವಶಾತ್ ಎದೆನೋವು ಉಲ್ಬಣಿಸಿ, ಅವರು ಅಲ್ಲಿಯೇ ತೀರಿಕೊಂಡರು. ನಮ್ಮ ಮಿತ್ರ ಬಳಗಕ್ಕಾದ ನೋವು ಅಪಾರ. ಇದರಿಂದಾಗಿ ಮಕರ ಸಂಕ್ರಾಂತಿಯನ್ನು ನೀರಸವಾಗಿ ಆಚರಿಸಲಾಯಿತು.

ಸ್ವಲ್ಪ ದಿನಗಳ ನಂತರ ಆ ಗೃಹಸ್ಥರ ಮನೆಗೆ ಹೋಗಿದ್ದೆವು. ನಮ್ಮಿಂದಾದಷ್ಟು ಆ ಮನೆಯವರಿಗೆ ಸಾಂತ್ವನ ಹೇಳಿದೆವು. ಇಂದು ನಮ್ಮ ಸಂಸ್ಥೆ ದೊಡ್ಡದಾಗಿದೆ. ಪ್ರತಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದೇವೆ. ಆದರೆ ಮಕರ ಸಂಕ್ರಾಂತಿ ಬಂದಾಗೆಲ್ಲ ಆ ಗೃಹಸ್ಥರ ನೆನಪು ಬರುತ್ತದೆ. ಅವರ ನೆನಪು ನಮ್ಮಿಂದ ಮಾಸಿ ಮಾಸುವುದಿಲ್ಲ. ಅವರ ನೆನಪು ಬಂದಾಗ ಮೌನವಾಗಿ ದುಃಖಾಶ್ರುಗಳನ್ನು ಸುರಿಸುವುದೊಂದೇ ನಮಗಿರುವ ದಾರಿ. -ಮಾ. ...

ಪುಸ್ತಕ ವಿಭಾಗ



ಅವನಿ

ಮೂಲ ಮರಾಠಿ: ಬಾಳ ಭಿಡೆ
ಸಂಗ್ರಹ: ಡಾ.ಕೆ.ಜಿ.ದೇಸಾಯಿ

ಅವಂತಿ

ಪರಮಾನಸಶಾಸ್ತ್ರ ಇನ್ನೂ ಬೆಳೆಯುತ್ತಿರುವ ವಿಜ್ಞಾನ ಭಾಗ. ವಿಜ್ಞಾನದ ಇತರ ಹಲವು ಭಾಗಗಳಲ್ಲಿ ಕಂಡುಬರುವ ಖಚಿತತೆ ಅದಕ್ಕೆ ಇನ್ನೂ ಪ್ರಾಪ್ತವಾಗಿಲ್ಲ. ಅಲ್ಲದೆ ವಿಜ್ಞಾನದ ಹೆಸರಿನಲ್ಲಿ ಸಾರ್ವಜನಿಕರನ್ನು ಮೋಸ ಮಾಡುವ ಅನೇಕ ಪ್ರಯತ್ನಗಳು ಜಗತ್ತಿನ ಎಲ್ಲೆಡೆಗಳಲ್ಲಿ ನಡೆಯುತ್ತಲೇ ಇರುವುದುಂಟು. ಆದರೆ ೧೯೭೧ರಲ್ಲಿ 'ಅವಂತೀ ಮಾತಾ' ಎಂಬ ಹೆಸರಿನಲ್ಲಿ ಪುಣೆ ಮತ್ತು ನಾಗಪುರಗಳಿಂದ ಏಕಕಾಲಕ್ಕೆ ಪ್ರಕಟವಾಗುವ ಮರಾಠಿ ದೈನಿಕ 'ತರುಣ ಭಾರತ'ದಲ್ಲಿ ಧಾರಾವಾಹಿಯಾಗಿ ಘಟನಾವಳಿ ಪ್ರಕಟವಾಯಿತು. ಅನಂತರ ೧೯೭೩ರಲ್ಲಿ ಅದೇ ಲೇಖಕರು ಈ ಘಟನೆಗಳು ನಡೆದ ಸ್ಥಳಕ್ಕೆ ಭೇಟಿಯಿತ್ತು ಸಂಬಂಧಪಟ್ಟ ವ್ಯಕ್ತಿಗಳನ್ನು ಕಂಡು ಮಾತಾಡಿದರು. ಪೂರ್ವಜನ್ಮ-ಪುನರ್ಜನ್ಮಗಳಿಗೆ ಸಂಬಂಧಿಸಿದಂತೆ ಬರುವ ಈ ಘಟನಾವಳಿಗಳನ್ನು ಓದಿ ನೋಡಿ ನೀವೇ ನಿಮ್ಮ ನಿರ್ಣಯಕ್ಕೆ ಬನ್ನಿ.

ಇದು ಇತ್ತೀಚೆ ನಡೆದ ಸತ್ಯಕಥೆ ಎಂದು ಮಾತ್ರ ಹೇಳಿದರೆ ನೀವು ಹುಬ್ಬು ಗಂಟಿಕ್ಕಬಹುದು. ಆದರೆ ವಿಶ್ವಗರ್ಭದಲ್ಲಿ ಅಡಗಿರುವ ಅನೇಕ ಸಂಗತಿಗಳು ಆಗಾಗ ಹೊರಬಂದಾಗ ಅನೇಕರಿಗೆ ಆಶ್ಚರ್ಯವಾಗುತ್ತದೆ, ಕೆಲವರಿಗೆ ಭಯವಾಗುತ್ತದೆ, ಮತ್ತೆ ಕೆಲವರಿಗೆ ಇದೊಂದು 'ಮೋಸ' ಎಂಬ ಭಾವನೆಯಾಗಿಬಿಡುತ್ತದೆ. ಇಲ್ಲಿ ಹೇಳಲಿರುವ ಕಥೆ ನಿಮ್ಮಲ್ಲಿ ಇಂಥ ಬಗೆಬಗೆಯ ಪ್ರತಿಕ್ರಿಯೆಯನ್ನುಂಟುಮಾಡಿದರೆ ಅಚ್ಚರಿಯೇನಲ್ಲ. 'ಅವಂತಿ'ಯನ್ನು ಪೂರ್ತಿ ಓದಿ ಮುಗಿಸಿದ ನಂತರ ಇದರ ಸತ್ಯಾಸತ್ಯದ ಅನ್ವೇಷಣಕ್ಕಾಗಿ ನಡೆದ ಪ್ರಯತ್ನ ಹಾಗೂ ಅದಕ್ಕೆ ದೊರೆತ ಫಲ ಎಲ್ಲವನ್ನೂ ಹೇಳುತ್ತೇನೆ. ವಿಜ್ಞಾನವು ಸತ್ಯವನ್ನು ಅರಸುವ ಒಂದು ದಾರಿ. ಒಂದಿಲ್ಲೊಂದು ದಿನ ಇಂಥ ಸಂಗತಿಗಳನ್ನೂ ಅದು ಎಲ್ಲರೂ ನಂಬಲೇಬೇಕಾದ ತೆರದಲ್ಲಿ ವಿವರಿಸಬಹುದು.

ಒಂದು

ಈ ಕಥೆಯ ಕೇಂದ್ರ ಪಾತ್ರಗಳು ಎರಡು. ಈಗ ಮಧ್ಯಪ್ರದೇಶದ ಖರಗೋಲ ಜಿಲ್ಲೆಯ ಪಾನಸೇಮಾಲ ತಾಲೂಕಿನಲ್ಲಿಯ ಸಕರಾ[illegible] ಎಂಬ ಗ್ರಾಮದಲ್ಲಿ ವಾಸವಾಗಿರುವ ಗೋಪಾಲಸಿಂಹ ರಜಪೂತನನ್ನು ನಾಯಕನೆಂದು ಗುರುತಿಸೋಣ. ನಾಯಕಿಯೇ ಅವಂತಿ. ಕ್ರಿ. ಶ. ೧೯೫೩ರಲ್ಲಿ ಹುಟ್ಟಿದ್ದ ಆಕೆಯ ಪೂರ್ಣ ಹೆಸರು ಅವಂತಿ ವಿಶ್ವಂಭರ ಬೇಲಪಾಠಕ. ಮಹಾರಾಷ್ಟ್ರದ ಪೈಠಣ ಆಕೆಯ ಆತ್ತೆಯೆಮನೆಯಾದರೆ ಉತ್ತರ ಪ್ರದೇಶದ ಮಥುರಾ [illegible]ತವರುಮನೆ. ಇವರಿಬ್ಬರ ನಡುವಣ ಈ ಕಥೆ ನಡೆದುದು ಮಹಾರಾಷ್ಟ್ರ ಮತ್ತು ಮಧ್ಯ ಪ್ರದೇಶಗಳಲ್ಲಿ.

ಗೋಪಾಲಸಿಂಹ ರಜಪೂತನ ಮನೆತನ ಮಧ್ಯಪ್ರದೇಶ, ರಾಜಸ್ಥಾನಗಳಲ್ಲಿರುವ

ರಾಠೋಡ ಪರಂಪರೆಗೆ ಸೇರಿದ್ದು. ಅವರ ಇವನ ಪೂರ್ವಜರು ತಲೆತಲಾಂತರಗಳಿಂದ ಮಹಾರಾಷ್ಟ್ರಕ್ಕೆ ಬಂದು ನೆಲಸಿದವರು. ಗೋಪಾಲಸಿಂಹ ಹುಟ್ಟಿದ ಬೋರಾಳೆ ಎಂಬ ಗ್ರಾಮವಿರುವುದು ಮಹಾರಾಷ್ಟ್ರದ ಧುಳೆ ಜಿಲ್ಲೆಯ ಸಂದೂರ ಬಾರ ತಾಲೂಕಿನಲ್ಲಿ. ಜನನ ೧೯೨೮ರ ಜನವರಿ ಏಳರಂದು. ಗೋಪಾಲಸಿಂಹನನ್ನು ಮನೆಯಲ್ಲಿ ಬಾಪೂಸಾಹೇಬ ಎಂದು ಕರೆಯುವ ರೂಢಿಯೂ ಇದೆ. ಗೋಪಾಲಸಿಂಹನ ತಂದೆ ಮೋಲಾಬ ಸಿಂಹ ತಮ್ಮ ಸರಕಾರಿ ಸೇವಾನಿವೃತ್ತಿಯ (೧೯೪೯) ನಂತರ ೧೯೫೦ರಲ್ಲಿ ಧುಳೆ ಜಿಲ್ಲೆಯ ತಾಮಥರೆ ಎಂಬಲ್ಲಿ ಒಂದು ಹಿಟ್ಟಿನ ಕಿರಣಿಯನ್ನು ಹಾಕಿದರು. ಬೋರಾಳೆಯಲ್ಲಾಗಲೇ ಒಂದು ಗಿರಣಿಯಿದ್ದುದರಿಂದ ಈ ಹಳ್ಳಿಯನ್ನು ಆಯ್ಕೆ ಮಾಡಲಾಗಿತ್ತು. ಈ ಗಿರಣಿ ಗೋಪಾಲಸಿಂಹನಿಗಾಗಿಯೇ ಇತ್ತು. ೧೯೫೨ರಿಂದ ಗೋಪಾಲಸಿಂಹ ಗಿರಣಿಯನ್ನು ನೋಡಿಕೊಳ್ಳುತ್ತ ತಾಮಥರೆಯಲ್ಲೇ ಇರತೊಡಗಿದ. ಮರುವರ್ಷವೇ ಅವನ ಮದುವೆ ಪದ್ಮಕುವರಳೊಡನೆ ಧುಳೆಯಲ್ಲಿ ನಡೆಯಿತು.

ಆ ಮೊದಲ ಪ್ರಸಂಗ ನಡೆದದ್ದು ೧೯೫೪ರಲ್ಲಿ.

ಮಧ್ಯಾಹ್ನ ಎರಡು ಎರಡೂವರೆಯಾಗಿರಬೇಕು. ಗೋಪಾಲಸಿಂಹ ಗಿರಣಿಯಿಂದ ಸ್ವಲ್ಪ ದೂರ ಮೂತ್ರವಿಸರ್ಜನೆಗೆಂದು ಹೋಗಿ ಕುಳಿತ. ಆಗ ಅವನನ್ನು ಯಾರೋ ಅನಾಮತ್ತಾಗಿ ಎತ್ತಿದರು. "ಯಾರು! ಯಾರು!" ಎಂದು ಅವನು ಕೂಗುತ್ತಲೇ ಅವನನ್ನು ಕೆಳಗೆಸೆಯಲಾಯಿತು. ಅವನು ತೀರ ವಿಚಲಿತನಾಗಿದ್ದನಾದರೂ ಕೂಡಲೇ ಸಾವರಿಸಿಕೊಂಡು ಹಿಂತಿರುಗಿ ನೋಡಿದ. ಅಲ್ಲೊಬ್ಬ ಹದಿನೆಂಟರ ಯುವತಿ. ಶುಭ್ರ ಬಿಳಿ ಸೀರೆ ಉಟ್ಟಿದ್ದ ಆಕೆಯ ಮೈಯಲ್ಲಿ ಕುಪ್ಪಸವಿರಲಿಲ್ಲ; ಆದರೆ ಎದೆಯ ಮೇಲ್ಗೆ ಸುಮಾರು ಎರಡು ಅಂಗುಲ ಅಗಲವಾಗಿ ನಿರಿಗೆ ಹಾಕಿದ ಸೀರೆಯನ್ನು ಅಡ್ಡವಾಗಿ ಬಿಗಿದು ಕಟ್ಟಿದಂತಿತ್ತು. ಆ ಪಟ್ಟಿಯ ಮಧ್ಯದಲ್ಲಿ ಚಿನ್ನದ ಪಟ್ಟಿ. ಕೊರಳಲ್ಲಿ ಮುತ್ತಿನ ಸರ, ಜಡವಾದ ಮಂಗಲಸೂತ್ರ, ಕೈಗಳಿಗೆ ಹಸಿರು ಬಳೆ, ಚಿನ್ನದ ಗೋಟು, ತೋಡೆ, ನಾಗಮುರಿಗೆಗಳ ಸಿಂಗಾರ. ಕೇದಿಗೆ ಬಣ್ಣದ ಆಕೆಯ ಮುಖವರ್ಣನೆಗೆ ಕವಿಸಮಯವನ್ನೇ ನೆನೆಯಬೇಕು. ಪಂಢರಪುರದ ಕುಂಕುಮ ಬೊಟ್ಟು ಅವಳ ವಿಶಾಲ ಹಣೆಯನ್ನು ಅಲಂಕರಿಸಿತ್ತು. ಅದರ ಮೇಲೆಯೇ ನೇತಾಡುವ ಬಿಂದಿ. ಮಿನುಗುವ ಕಂಗಳು ಹಾಗು ನೀಳಕೇಶರಾಶಿಯನ್ನು ಹಿಂದೆ ಜಡೆ ಕಟ್ಟಿಕೊಂಡಿದ್ದ ಅವಳ ರೀತಿ ತೇಜಃಪುಂಜ ಮುಖಮಾಟಕ್ಕೆ ಇನ್ನೂ ಕಳೆ ಕಟ್ಟಿತ್ತು.

ಕಿಲಕಿಲನೆ ನಗುತ್ತ ಆ ಯುವತಿ ಗೋಪಾಲಸಿಂಹನೆದುರೇ ಬಂದು ನಿಂತಳು. ಸಂತಪ್ತನಾಗಿದ್ದ ಅವನ ದೇಹವೆಲ್ಲ ಕಂಪಿಸುತ್ತಿತ್ತು. "ನೀನು ಯಾರು? ಇಲ್ಲಿಗೇಕೆ ಬಂದೆ? ನನ್ನನ್ನೇಕೆ ಎತ್ತಿದೆ?"– ಎಂದು ಅವನು ಅರಚಿದ. ಆದರೆ ಅದರ ಪರಿಣಾಮ ಅವಳ ಮೇಲೆಷ್ಟೂ ಆದಂತೆ ತೋರಲಿಲ್ಲ. ಆಕೆ ನಗುತ್ತಲೇ ಇದ್ದಳು.

ಗೋಪಾಲಸಿಂಹನ ಕೂಗನ್ನು ಕೇಳಿ ಆಸುಪಾಸಿನ ಅನೇಕರು ಲಾಠಿ ಕುಡಗೋಲು, ಬರ್ಚಿ ಮುಂತಾದ ಆಯುಧ ಸಹಿತ ಅಲ್ಲಿಗೆ ಧಾವಿಸಿದರು. "ಬಾಪೂಸಾಹೇಬ, ಯಾರೊಡನೆ ಮಾತಾಡುತ್ತಿದ್ದೀರಿ? ಯಾರು ನಿಮ್ಮನ್ನು ಎತ್ತಿದವರು? ಎಲ್ಲಿದ್ದಾರವರು?" ಪ್ರತಿಯೊಬ್ಬರೂ ಕೇಳುವವರೇ.

"ಇಲ್ಲಿ ನೋಡಿ, ಇಲ್ಲೇ ನಿಮ್ಮೆದುರೇ ನಿರ್ಲಜ್ಜಳಂತೆ ನಗುತ್ತ ನಿಂತಿದ್ದಾಳಲ್ಲ!"

ಎಲ್ಲರಿಗೂ ಆಶ್ಚರ್ಯ. ಅವರಾರಿಗೂ ಅಲ್ಲಿ ಗೋಪಾಲಸಿಂಹನ ವಿನಾ ಬೇರಾರೂ ತೋರಲಿಲ್ಲ. ಅದರೂ ಆಕೆ ನಗುತ್ತಲೇ ನಿಂತಿದ್ದಳು. ಗೋಪಾಲಸಿಂಹನು ಕೈ ಮಾಡಿ ತೋರಿಸಿದ ದಿಕ್ಕಿನಲ್ಲಿ ಒಬ್ಬ ತನ್ನ ಭಲ್ಲೆಯನ್ನು ಎಸೆದ. ಅದು ಅವಳ ಮೈಯಲ್ಲಿ ಹಾಯ್ದು ಹೋಗಿ ಆಚೆ ಬಿತ್ತಾದರೂ ಆಕೆಗೆ ಏನೂ ಆಗಿರಲಿಲ್ಲವೆಂಬುದು ಗೋಪಾಲಸಿಂಹನಿಗೆ ಮಾತ್ರ ಕಂಡಿತ್ತು. ಇದೇನೋ ಪಿಶಾಚಿಯೇ ಇರಬೇಕೆಂದು ಅವನಿಗೆ

ಮಾಸದಷ್ಟಾಗಿ ಅವನ ಮೈಯೆಲ್ಲ ಬೆವೆತು ಆ ನಡು ಬಿಸಿಲಲ್ಲೂ ನಡುಕ ಹುಟ್ಟಿತು; ಅಂಗಾಂಗಗಳೆಲ್ಲ ಜಡವೆನಿಸತೊಡಗಿದವು. ಈ ಹೊತ್ತಿಗೆ ಆ ಯುವತಿ ಇದ್ದಲ್ಲೇ ಅದೃಶ್ಯಳಾದಳು.

ಎರಡು

ಗೋಪಾಲಸಿಂಹನ ಗಿರಣಿಯಿಂದ ಸುಮಾರು ನೂರು ಗಜ ದೂರದಲ್ಲಿ ಈ ಘಟನೆ ನಡೆಯಿತು. ಅಲ್ಲಿಂದ ಅವನ ಮನೆ ಒಂದು ಒಂದೂವರೆ ಮೈಲು ದೂರ. ಭಯಭೀತನಾದ ಅವನನ್ನು ನೆರೆವವರೆಲ್ಲ ಕೈ ಹಿಡಿದು ಗಿರಣಿಯ ವರೆಗೆ ಕರೆತಂದ ನಂತರ ಗಿರಣಿಯನ್ನು ಆ ದಿನದ ಮಟ್ಟಿಗೆ ಮುಚ್ಚಲಾಯಿತು. ಸಮೀಪದಲ್ಲೇ ಇದ್ದ ಅವನ ಸಂಬಂಧಿಕರ ಮನೆಗೆ ಅವನನ್ನು ಕರೆದೊಯ್ದು ಉಪಚಾರ ಮಾಡಿ ಮನೆಗೆ ಮರಳಿಸಲಾಯಿತು.

ಮನೆಗೆ ಮರಳಿದಾಗ ಗೋಪಾಲಸಿಂಹ ಭಯದಿಂದ ತತ್ತರಿಸಿ ಹೋಗಿದ್ದ. ಮನೆ ಬಿಟ್ಟು ಹೊರಬೀಳುವುದೆಂದರೇ ಅವನಿಗೆ ಮೈ ಮೇಲೆ ಮುಳ್ಳು ಬಂದಂತೆನಿಸುತ್ತಿತ್ತು. ಆದರೂ ಎರಡು ದಿನಗಳ ನಂತರ ಅವನು ಮತ್ತೆ ಗಿರಣಿಗೆ ಹೋದ. ಅಂದು ಗಿರಣಿ ಗಿರಾಕಿಗಳಿಂದ ತುಂಬಿ ತುಳುಕುತ್ತಿತ್ತು. ಆದರೇನು, ಅಲ್ಲಿಯೂ ಆಕೆ ಪ್ರತ್ಯಕ್ಷ! ಇದ್ದಕ್ಕಿದ್ದಂತೆ ತನ್ನ ಮುಂದೆ ಬಂದು ನಿಂತ ಆವಳನ್ನು ಕಂಡಾಗ ಭಯ ಮತ್ತೆ ಅವನನ್ನಾವರಿಸಿತು. "ಯಾಕೆ ಹೆದರುತ್ತೀರಿ? ನಾನು ನಿಮಗೇನೂ ಮಾಡುವುದಿಲ್ಲ," ಎಂದು ಉದ್ಗರಿಸಿದಳಾಕೆ. ಆಗ ಮಾತ್ರ ಗೋಪಾಲಸಿಂಹ ಆಳಿದುಳಿದ ಧೈರ್ಯವನ್ನೆಲ್ಲ ಬಾಯಲ್ಲೇ ಒಟ್ಟುಗೂಡಿಸಿಕೊಂಡು, "ನೀನಿಲ್ಲಿ ಬರಬೇಡ. ನೀನು ಹೀಗೆಲ್ಲ ಮಾಡುವುದರಿಂದ ನನ್ನ ವ್ಯವಸಾಯದ ಮೇಲೆ ಕೆಟ್ಟ ಪರಿಣಾಮವಾಗುತ್ತದೆ," ಎಂದ. ಈ ಮಾತು ಕಿವಿಗೆ ಬೀಳುತ್ತಿದ್ದಂತೆಯೇ ಆಕೆ ಅಲ್ಲಿಂದ ಮಾಯವಾದಳು: ಅವನು ಸಮಾಧಾನದಿಂದ ನಿಟ್ಟುಸಿರು ಬಿಟ್ಟನು. ಆದರೆ ಮೂರು ದಿನಗಳ ನಂತರ ಪುನಶ್ಚ ಹರಿಃ ಓಂ. ಈ ಸಲ ಆಕೆ ಅವನ ಮನೆಯಲ್ಲೇ ಅವನಿಗೆ ಕಂಡಾಗ, ತೀರ ಸಹಜವೆಂಬಂತೆ ನಾಲ್ಕಾರು ಮಾತು ಹೇಳಿ

ಅದೃಶ್ಯಳಾದಳು. ಮುಂದೆ ತುಸುವೇ ಅಂತ
ದಲ್ಲಿ ಎರಡು ಮೂರು ಸಲ ಇದೇ ಘಟ
ನಡೆಯಿತು.

ಮುಂದೊಂದು ಸಂಜೆ ಆಕೆ ಅವನ ಬ
ಬಂದು ಬೇರೆ ವಿಷಯ ಪ್ರಸ್ತಾಪಿಸಿದಳ
"ಆ ವಾಡೆಯ ಬಳಿಯಲ್ಲಿರುವ ದೊಡ್ಡ ಮರ
ಹತ್ತಿರ ಹೋಗೋಣ ನಡೆಯಿರಿ," ಎಂದಳ
ಅವನು ಒಪ್ಪದಿದ್ದಾಗ ಆಕೆ ಮತ್ತೆ ಮತ
ಒತ್ತಾಯಿಸಿದಳಾದರೂ ಆತ ಜಗ್ಗಲಿಲ್ಲ. ಈ
ವಿಷಯವನ್ನು ತನ್ನ ಆಪ್ತ ಮಿತ್ರರೆದುರ
ಪ್ರಸ್ತಾಪಿಸಿದಾಗ ಗೋಪಾಲಸಿಂಹನಿಗೆ ಅವರ
ಆಕೆಯೊಡನೆ ಅವನು ಮಾತು ಕೂಡ ಆ
ಬಾರದೆಂದು ಸಲಹೆಯಿತ್ತರು.

ಆದರೆ ಗೋಪಾಲಸಿಂಹನ ಮನಸ್ಸಿನಿಂ
ಮಾತ್ರ ಆಕೆಯ ಭಯ ಹೋಗಲಿಲ್ಲ. ಏನ
ದರೂ ಮಂತ್ರೋಪಾಯ ಮಾಡಿ ಅವನ
ನಿವಾರಿಸಬೇಕೆಂಬ ಸೂಚನೆ ಕೆಲವರಿಂ
ಬಂದಾಗ ಅವರಿವರ ಉಪದೇಶದಂತೆ ಮಂತ್ರ
ತಂತ್ರಗಳು ನಡೆದವು. ಕರಿಕೆ, ಲಿಂಬೆಹಣ
ಮುಂತಾದವನ್ನು ಮಂತ್ರಿಸಿ. ನಿವಾಳಿಸಿ ಚೆಲ್ಲ
ದಾಯಿತು. ಕೋಳಿ, ಕುರಿಗಳ ಆಹುತಿಯ
ಆಯಿತು. ಅಂಗಾರ, ಧೂಪ, ಹರಕೆ, ಉ
ವಾಸ ಏನೆಲ್ಲ ಮಾಡಿದರೂ ನಿಷ್ಫಲವಾಯಿತು
ಕೊನೆಯ ಪ್ರಯತ್ನವೆಂದು ಪಂಚಾಕ್ಷರಿ
ಷಡಾಕ್ಷರಿ ಮಂತ್ರ ಪ್ರಯೋಗವೂ ನಡೆಯಿತು
ನಾನಾ ಎನ್ನುವಂತಹ ಮಂತ್ರವಾದಿಗಳ
ಹತಾಶರಾಗಿ ಕೈ ಚೆಲ್ಲಿದರು.

ಆಗ ಆಕೆ ಮತ್ತೆ ಗೋಪಾಲಸಿಂಹನನ
ಸಂಧಿಸಿ, "ನೀವು ಹೀಗೆಲ್ಲ ಮಾಡುವುದರಿಂ
ವ್ಯರ್ಥ ಹಣ ಕಳೆದುಕೊಂಡಷ್ಟೇ ಆಗುತ್ತದೆಯ
ಹೊರತು ಬೇರೇನೂ ಆಗುವದಿಲ್ಲ. ವ್ಯರ್ಥವಾ
ಸಮಯ-ಸಂಪತ್ತುಗಳನ್ನು ಹಾಳು ಮಾ
ಮನಸ್ತಾಪವನ್ನು ಕೊಂಡುಕೊಳ್ಳಬೇಡಿ
ಇವಾವುಗಳಿಂದಲೂ ನನ್ನ ಮೇಲೆ ಏನೂ ಪ
ಣಾಮವಾಗದು. ಯಾವ ಮಾಂತ್ರಿಕನೇ ಆಗಲಿ
ನನ್ನ ಮೇಲೆ ಪಂಚಾಕ್ಷರೀ- ಷಡಾಕ್ಷರಿಗಳನ
ಪ್ರಯೋಗಿಸಲಾರ," ಎಂದು ಹೇಳುತ್ತ ನ

ತೊಡಗಿದಳು. ಗೋಪಾಲಸಿಂಹನಿಗೆ ಮಾತ್ರ ಪ್ರತ್ಯಕ್ಷದಲ್ಲಿ ಆಕೆಯಿಂದ ಯಾವ ತೊಂದರೆಯೂ ಆಗುತ್ತಿರಲಿಲ್ಲ. ತನ್ನ ತೊಂದರೆಗಳೆಲ್ಲವೂ ಕಾಲ್ಪನಿಕವೇ ಎಂದು ಆಗ ಅವನ ಗಮನಕ್ಕೆ ಬಂತು.

ಅನಂತರ ಗೋಪಾಲಸಿಂಹನಿಗೆ ಇದು ರೂಢಿಯೇ ಆಯಿತಲ್ಲದೆ ಅವನನ್ನಾವರಿಸಿದ್ದ ಭಯ ಕೂಡ ಕ್ರಮೇಣ ಕಡಿಮೆಯಾಯಿತು. ಆತ ಬಿಚ್ಚು ಮನಸ್ಸಿನಿಂದ ಆಕೆಯೊಡನೆ ಮಾತಾಡಲು ಧೈರ್ಯ ಮಾಡಲಾರಂಭಿಸಿದ. ಇದು ಗೊತ್ತಾದ ಅವನ ಕೆಲ ಮಿತ್ರರು 'ಗುಪ್ತ ಧನವೆಲ್ಲಿಯಾದರೂ ಇದೆಯೆ? ಎಂದಾಕೆಯನ್ನು ಕೇಳು' ಮುಂತಾದ ವಿಚಿತ್ರ ಸಲಹೆಗಳನ್ನು ನೀಡುತ್ತಿದ್ದರಾದರೂ ಅವನಿಗೆ ಅದು ರುಚಿಸಲಿಲ್ಲ. ನಂತರ ಅವನು ಕೆಲ ದಿನ ಧಾಳಿಗೆ ಹೋಗಿದ್ದು ಮತ್ತೆ ತಾಮಥರೆಗೆ ಬಂದನು. ಈಗ ಮಾತ್ರ ಆಕೆಯು ನಿತ್ಯವೂ ಅವನನ್ನು ಭೆಟ್ಟಿಯಾಗತೊಡಗಿದಳು. ಪ್ರತಿ ಸಲವೂ 'ಆ ಮಾಡೆಯ ಬಂದಿನ ದೊಡ್ಡ ಮರದ ಬಳಿ ಹೋಗೋಣ'ವೆಂಬುದೇ ಅವಳ ಆಗ್ರಹವಾಗಿರುತ್ತಿತ್ತು. ಪ್ರತಿ ಬಾರಿಯೂ ಅವನು ನಿರಾಕರಿಸುತ್ತಿದ್ದ. ಒಮ್ಮೆಯಂತೂ ರಾತ್ರಿ ಅವನು ಗಾಢ ನಿದ್ರೆಯಲ್ಲಿದ್ದಾಗ ಅವನನ್ನು ಅನಾಮತ್ತಾಗಿ ಯಾರೋ ಮೇಲಕ್ಕೆಳೆಯುತ್ತಿದ್ದಂತೆ ಕಂಡಾಗ ಅವನ ಹೆಂಡತಿ ಮನ್ನುಕುಂವರಳು ಅವನನ್ನು ಗಟ್ಟಿಯಾಗಿ ಹಿಡಿದು ಕೆಳಕ್ಕೆ ಜಗ್ಗುತ್ತಿದ್ದಳು. ಬೆಳಗ್ಗೆದ್ದಾಗ ಅವನು ಮಲಗಿದ್ದ ಪಲ್ಲಂಗವು ಸರಿದಾಡಿದ ಕುರುಹಿನಂತೆ ಅದರ ಕಾಲುಗಳ ಬುಡದಲ್ಲಿಯ ನೆಲ ಕಿತ್ತಿರುತ್ತಿತ್ತು. ಇಂಥ ಘಟನೆಗಳು ಮೇಲಿಂದ ಮೇಲೆ ನಡೆಯತೊಡಗಿದಾಗ ಒಂದು ದಿನ ಮನ್ನುಕುಂವರ ಗಂಡನಿಗೆ ಹೇಳಿದಳು, "ರಾತ್ರಿಯ ಅಂಧಃಕಾರದಲ್ಲಿ ನೀವು ಹಾಸಿಗೆ ಸಮೇತ ಮೇಲೆ ಮೇಲೆ ಹೊರಟಿದ್ದಿರಿ. ನಾನು ಜಗ್ಗಿ ಹಿಡಿದೆ. ಯಾರೋ ನಿಮ್ಮನ್ನು ಮೇಲ–ಕ್ಕೆಳೆಯುತ್ತಿದ್ದಂತೆ ತೋರುತ್ತಿತ್ತು. ನಿಮಗೆ ಗಾಢ ನಿದ್ರೆ. ನಾನು ಹೇಗೋ ನಿಮ್ಮನ್ನು ಗಟ್ಟಿಯಾಗಿ ಹಿಡಿದುಕೊಂಡೆ!" ಎಂದು.

ಆ ರಾತ್ರಿ ಗೋಪಾಲಸಿಂಹ ತನ್ನ ಕೋಣೆಯನ್ನು ಒಳಗಡೆ ಕೀಲಿ ಹಾಕಿ ಭದ್ರಪಡಿಸಿಕೊಂಡು ಏನಾಗುವುದೋ ನೋಡಬೇಕೆಂದು ಎಚ್ಚರದಿಂದಲೇ ಉಳಿದ. ಎಂದಿನಂತೆ ಮಧ್ಯರಾತ್ರಿಯ ನಂತರ ಆ ಲಾವಣ್ಯವತಿ ಅವನನ್ನು ಮತ್ತೆ ಮೇಲೆಳೆಯತೊಡಗಿದಳು. ಈಗ ಅವನು ಅವಳ ಕೈ ಹಿಡಿದು ಅವಳ ಬಳೆಗಳನ್ನು ಕಿತ್ತುಕೊಳ್ಳಲು ಯತ್ನಿಸಿದರೂ ಅವು ಬರಲಿಲ್ಲ. ಆಕೆ ನಕ್ಕು ಬಳೆಗಳನ್ನು ಸಹಜವಾಗಿ ಹೊರತೆಗೆದು ತೋರಿಸಿ, ಮತ್ತೆ ತೊಟ್ಟುಕೊಂಡು, "ನೀವು ಇವುಗಳನ್ನು ಕಿತ್ತುಕೊಳ್ಳಲು ಶಕ್ಯವಿಲ್ಲ; ಅದಕ್ಕಾಗಿ ಪ್ರಯತ್ನಿಸಲೂ ಬೇಡಿ." ಎಂದು ಹೇಳಿದಳು.

ಗೋಪಾಲಸಿಂಹನಿಗೆ ಆಕೆಯ ಬಗ್ಗೆ ಈಗ ಭಯವೆನಿಸುತ್ತಿರಲಿಲ್ಲವಾದರೂ ಈ ಅನುಭವ ಅವನನ್ನು ಮಾನಸಿಕವಾಗಿ ಗಾಸಿಗೊಳಿಸುತ್ತಿತ್ತು. ಈ ಅಪರಿಚಿತ, ಅಲೌಕಿಕ ವ್ಯಕ್ತಿ–ಶಕ್ತಿ–ಇವಕ್ಕೆಲ್ಲ ತನ್ನನ್ನೇ ಏಕೆ ಆಯ್ಕೆ ಮಾಡಿಕೊಂಡಿರಬಹುದೆಂಬುದು ಅವನಿಗೆ ಬಿಡಿಸಲಾಗದ ಒಗಟಾಗಿ ಪರಿಣಮಿಸಿತ್ತು. ತನ್ನ ಹಿತಚಿಂತಕರೊಂದಿಗೆ ಆಗೀಗ ಚರ್ಚಿಸುತ್ತಲೂ ಇದ್ದನು. ಆಗೊಮ್ಮೆ ಧಾಳಿಯ ಡಾ. ಮಾಮಾಜನಿ ಅವನಿಗೊಂದು ಸೂಚನೆಯಿತ್ತರು. ಆಕೆ ಯಾರು, ಎಲ್ಲಿಯವಳೆ, ಯಾವ ವಿಚಾರದಿಂದ ನಿನ್ನ ಬಳಿ ಬರುತ್ತಿದ್ದಾಳೆ ನಯವಾಗಿ ಆಕೆಯನ್ನೇ ಕೇಳೆಂದು ಅವರು ಹೇಳಿದಾಗ ಅದು ಸರಿಯಾದ ದಾರಿಯೆಂದು ಗೋಪಾಲಸಿಂಹನಿಗೂ ಅನಿಸಿತು. ಆ ರಾತ್ರಿ ಅವನು ತನ್ನ ಹಾಸಿಗೆಯ ಮೇಲೆ ಶಾಂತವಾಗಿ ಮಲಗಿದ್ದ. ಮಧ್ಯರಾತ್ರಿಯಾದರೂ ನಿದ್ರೆ ಹತ್ತಿರಲಿಲ್ಲ. ಆಕೆಯ ದಾರಿಯನ್ನೇ ನೋಡುತ್ತ ಅವನು ಮಲಗಿದಂತಿತ್ತು. ಅವಳೊಡನೆ ಮಾತಾಡಬೇಕೆಂಬ ತವಕ ಅವನನ್ನು ಆವರಿಸಿತ್ತು. ಅವಳಿಗಾಗಿ ಕಾಯುವ ಪ್ರತಿಕ್ಷಣವೂ ಯುಗವೆಂಬಂತೆ ಭಾಸವಾಗುತ್ತಿದ್ದಂತೆಯೇ ಆ ಲಾವಣ್ಯವತಿ ಕಾಣಿಸಿಕೊಂಡಳು. ಗೋಪಾಲಸಿಂಹನಿಗೆ ಮಾತಾಡುವುದಕ್ಕೂ ಅವಕಾಶವೀಯದಂತೆ ಆಕೆ ತನ್ನ

ಎಂದಿನ ಬೇಡಿಕೆಯನ್ನೇ ಇದೂ ಮುಂದೆ ಮಾಡಿದಳು. "ನಡೆಯಿರಿ, ಆ ವಾಡೆಯ ಬಳಿಯ ಮರದ ಹತ್ತಿರ ಹೋಗೋಣ," ಎಂದಳು.

"ಬೇಡ, ಅದಕ್ಕಾಗಿ ಮಾತ್ರ ಒತ್ತಾಯಿಸ ಬೇಡ. ಆದರೆ ನನ್ನ ಕೆಲವು ಪ್ರಶ್ನೆಗಳಿಗೆ ನಿನ್ನಿಂದ ಉತ್ತರ ಬೇಕಾಗಿದೆ; ಕೊಡಬಲ್ಲೆಯಾ ಹೇಳು? ಅವನು ನೇರವಾಗಿ ಪ್ರಶ್ನಿಸಿದನು. ಬೇರೆ ಮಾತಿಲ್ಲದೆ ತಟ್ಟನೆ ಆಕೆ ಒಪ್ಪಿಕೊಂಡಳು.

"ನೀನು ಯಾರು? ಎಲ್ಲಿಂದ ಬಂದೆ? ನಿನಗೂ ನನಗೂ ಏನು ಸಂಬಂಧ? ಇಲ್ಲಿಗೇಕೆ ಬರುತ್ತಿರುವೆ?"– ಗೋಪಾಲಸಿಂಹ ತಡೆಯಿಲ್ಲದಂತೆ ಪ್ರಶ್ನೆಗಳ ಮಳೆಯನ್ನೇ ಸುರಿಸಿದ.

ಮಂದಸ್ಮಿತಳಾದ ಆಕೆ ಈಗ ಶಾಂತಚಿತ್ತದಿಂದ ಹೇಳತೊಡಗಿದಳು. ಧೀರ ಗಂಭೀರೆಯಾದ ಈ ಯುವತಿಯ ಮಾತುಗಳನ್ನು ತದೇಕಚಿತ್ತದಿಂದ ಗೋಪಾಲಸಿಂಹ ಆಲಿಸಲುದ್ಯುಕ್ತನಾದ.

"ಗೋಪಾಲ, ನನ್ನ ನಿಮ್ಮ ಸಂಬಂಧ ಒಂಬತ್ತು ಜನ್ಮಗಳಷ್ಟು ಹಳತು. ವಿಕ್ರಮ ಶಕದ ೯೧೭ನೆಯ ವರ್ಷ ನಂದನನಾಮ ಸಂವತ್ಸರದ ಮಾರ್ಗಶಿರ ಶುದ್ಧ ಸಪ್ತಮಿಗೂ ನನ್ನ ನಿಮ್ಮ ಸಂಬಂಧಕ್ಕೂ ಮಹತ್ತರ ನಂಟಿದೆ. ಅದು ಹೇಗೆಂದು ಮುಂದೆ ಹೇಳುತ್ತೇನೆ. ಆಗಿನ ನಿಮ್ಮ ಹೆಸರು ವಿಶ್ವಂಭರ ಚೇಲಪಾಠಕ, ನೀವು ಪೈಠಣದವರು. ನಾನು ನಿಮ್ಮ ಹೆಂಡತಿ ಅವಂತಿ. ನನ್ನ ತವರ್ಮನೆ ಮಥುರಾ. ಆ ಮಾರ್ಗಶಿರ ಶುದ್ಧ ಸಪ್ತಮಿಯಂದು ನೀವು ನನ್ನನ್ನು ನನ್ನ ತವರೂರಾದ ಮಥುರಾಕ್ಕೆ ಕರೆದೊಯ್ಯುತ್ತಿದ್ದಿರಿ. ನೀವು ನಿಮ್ಮ ಹತ್ತು ಹನ್ನೆರಡು ಮಿತ್ರರೊಡಗೂಡಿ ಅಶ್ವಾರೋಹಿಗಳಾಗಿ ಮುಂದೆ ಮುಂದೆ ನಡೆದಿದ್ದಿರಿ. ನಾನು ಮತ್ತು ನನ್ನ ಸಖಿಯರಿದ್ದ ಮೇಣೆಗಳು ತುಸು ಹಿಂದಿನಿಂದ ಬರುತ್ತಿದ್ದವು. ಒಂದು ರಾತ್ರಿ ದಾರಿಯಲ್ಲಿ ನೀವು ನಾವೆಲ್ಲ ವಿಶ್ರಮಿಸಿದೆವು. ಆದರೆ ಅದು ಕರಾಳ ರಾತ್ರಿಯಾಗಿ ಪರಿಣಮಿಸಿತು. ಠಕ್ಕರ ಟೋಳಿಯೊಂದು ನಮ್ಮ ಮೇಲೆ ದಾಳಿ ಮಾಡಿದಾಗ ಅವರೊಡನೆ ಕೈಗೆ ಕೈ ಹತ್ತಿತ್ತು. ತೀಕ್ಷ್ಣ ಆಯುಧದ ಹೊಡೆತದಿಂದ ನೀವು ಜೀವ ಕಳೆ[ದು] ಕೊಂಡಿರಿ. ನಿಮ್ಮ ಮಿತ್ರರು ಅಲ್ಲಿಯೇ ಒಂದ[ು] ಗಿಡದ ಬುಡದಲ್ಲಿ ನಿಮ್ಮ ಅಂತ್ಯಸಂಸ್ಕಾರ ಮಾ[ಡಿ] ದರು. ನಾನು ನಿಮ್ಮೊಡನೆಯೇ ಸತೀ ಹೋ[ದೆ].

"ಗೋಪಾಲಸಿಂಹ, ಅಂದಿನಿಂದ ಸಾವಿ[ರ]ದೊಂದು ನೂರು ವರ್ಷ ಕಾಲ ನಾ[ನು] ನಿಮ್ಮನ್ನು ಹುಡುಕುತ್ತಲೇ ಇದ್ದೆ. ನೀವಿರು[ವು]ದೆಲ್ಲಿಯೆಂದು ಮಾತ್ರ ತಿಳಿಯುತ್ತಿದ್ದವ[ು]. ನಿಮ್ಮನ್ನು ಸಂಧಿಸಲು ಮಾತ್ರ ಆಗಲಿ[ಲ್ಲ]. ಒಂದಿಲ್ಲೊಂದು ಕಾರಣದಿಂದ ಹನ್ನೊಂದು ಶ[ತ]ಮಾನಗಳ ದೀರ್ಘ ಪರಿಶ್ರಮದ ನಂತರ ... ದಿನ ನಿಮ್ಮ ಗಿರಣಿಯ ಬಳಿ ನಿಮ್ಮ ದರ್ಶ[ನ] ನನಗೆ ಲಭಿಸಿತು. ಆಗ ನನಗಾದ ಅದಮ[್ಯ] ಆನಂದದಿಂದಾಗಿಯೇ ನಾನು ಅಷ್ಟೊಂದು ನಗ[ು]ತ್ತಿದ್ದೆ. ಈ ಮಧ್ಯದಲ್ಲಿ ನಿಮ್ಮದು ಎಂಟು ಜನ[್ಮ]ಗಳಾದವು. ನಾನು ಮಾತ್ರ ನಿಮ್ಮನ್ನು ಹುಡ[ು]ಕುತ್ತ ಹಾಗೆಯೇ ಈ ಅವಸ್ಥೆಯಲ್ಲೇ ಉ[ಳಿ]ದಿದ್ದೇನೆ. ಅಂದಿನಿಂದ ನಾನಿನ್ನೂ ಜನ್ಮ ತೆಗೆ[ದು] ಕೊಂಡೇ ಇರದಿರುವುದಕ್ಕೆ ಕಾರಣ ನಿಮ್ಮನ[್ನು] ಪುನಃ ಸಂಧಿಸಲೇಬೇಕೆಂಬ ಉತ್ಕಟ ಇಚ್ಛ[ೆ]. ನಾನು ಈ ಮಧ್ಯೆಯೇ ಮಾನವ ಯೋನಿಯ[ಲ್ಲಿ] ಜನ್ಮ ತಳೆದಿದ್ದರೆ ಅನಂತ ಕಾಲದ ವರೆಗ[ೆ] ನಿಮ್ಮ ನೆನಪು ಅಳಿಸಿಹೋಗಿರಬಹುದಿತ್ತು. ಹನ್ನೊಂದುನೂರು ವರ್ಷಗಳ ಕಾಲ ಈ ಪೃ[ಥ್ವಿ]ಯಲ್ಲಿ ಆಗಿ ಹೋದ ಕೋಟಿ ಕೋಟಿ ಜನರ[ಲ್ಲಿ] ನಾನು ನಿಮಗಾಗಿ ಹುಡುಕಿ ಹುಡ[ುಕಿ] ಸೋತಿದ್ದೆ. ಇಂದು ಆ ತಪಸ್ಸಿನ ಫಲವಾ[ಗಿ] ನನ್ನ ಇಚ್ಛೆ ಪೂರೈಸಿದೆ; ಇನ್ನು ಮಾ[ತ್ರ] ನನ್ನನ್ನು ದೂರ ಮಾಡಬೇಡಿ. ಇದು ನ[ನ್ನ] ಅಂತರ್ಯದ ಮೊರೆ. ಆತ್ಮದ ಕರೆ. ನಾನು ನಿ[ಮ]ಗಾಗಲಿ ನಿಮ್ಮ ಕುಟುಂಬಕ್ಕಾಗಲಿ ಎಳ್ಳಷ್ಟು ತೊಂದರೆ ಕೊಡುವುದಿಲ್ಲ. ಬದಲು ನಿಮಗ[ೆ] ನನಗೆ ಶಕ್ಯವಿದ್ದ ಸಹಾಯವನ್ನೇ ಮಾಡು[ತ್ತ] ಹೋಗುತ್ತೇನೆ. ಸಮಾಜದಲ್ಲಿ ನಿಮ್ಮ ಗೌ[ರವ]ಕ್ಕೆ ಚ್ಯುತಿ ಬಾರದ ರೀತಿಯಲ್ಲಿ ನಡೆ[ದು] ಕೊಳ್ಳುತ್ತೇನೆ."

ಅವಂತಿಯ ಮಾತುಗಳು ಮುಗಿದಾಗ ಗೋಪಾಲಸಿಂಹನು ಒಂದು ರೀತಿಯ ಅನಿರ್ವಚನೀಯ ಆನಂದವನ್ನೇ ಅನುಭವಿಸುತ್ತಿದ್ದ. ಆದರೂ ಅವಂತಿ ಎದುರಿಲ್ಲದಾಗ ಮತ್ತೆ ಮತ್ತೆ ಸಂಶಯ ಪಿಶಾಚಿ ಅವನನ್ನು ಮುತ್ತುತ್ತಿತ್ತು. ಅವಂತಿ ಅಂದು ಹೇಳಿದ್ದೆಲ್ಲ ದಿಟವೇ ಎಂದು ನಂಬುವುದೆಂತೆಂದು ಅವನಿಗೆ ಒಮ್ಮೊಮ್ಮೆ ಸಮಸ್ಯೆಯಾಗಿಬಿಡುತ್ತಿತ್ತು.

ಹೀಗೆಯೇ ಒಂದು ದಿನ ಒಬ್ಬರು ಒಂದು ಮಾರ್ಗ ಸೂಚಿಸಿದರು. ಶಿರಪುರದಲ್ಲಿ ಪಾಟೀಲ ಮನೆತನದಲ್ಲಿ ಆರು ವರ್ಷದ ಒಬ್ಬ ಬಾಲಿಕೆ ಅಧಿಭೌತಿಕ ಶಕ್ತಿ ಸಂಪನ್ನಳಾಗಿದ್ದಾಳೆಂದೂ ಅನೇಕರ ಸಮಸ್ಯೆಗಳನ್ನು ಅವಳು ಬಿಡಿಸಿ ಪರಿಹಾರ ನೀಡುತ್ತಿದ್ದಾಳೆಂದೂ ಪ್ರತೀತಿಯಿತ್ತು. ಅವಳನ್ನು ಕಂಡು ಬರಬೇಕೆಂಬ ನಿರ್ಧಾರಕ್ಕೆ ಅವನು ಬಂದನು. ಅವನ ಜೊತೆ ಹಾಗೂ ಆಪ್ತ ಮಿತ್ರರು ಈ ವಿಚಾರವನ್ನು ಅನುಮೋದಿಸಿದರು.

ಇಬ್ಬರು ಮೂವರು ಗೆಳೆಯರನ್ನು ಕರೆದುಕೊಂಡು ಗೋಪಾಲಸಿಂಹ ಪಾಟೀಲರ ಮನೆಗೆ ಹೋದ. ಅಲ್ಲಿ ವಿಪರೀತ ಜನದಟ್ಟಣೆ. ಪ್ರತ್ಯೇಕರಿಗೆ ಅಲ್ಲಿ ಕ್ರಮಾಂಕ ನೀಡಲಾಗುತ್ತಿತ್ತು. ಅಲ್ಲಿ ಅವನ ಕ್ರಮಾಂಕ ೧೧೩. ಈ ಗದ್ದಲದಲ್ಲಿ ಇಲ್ಲಿ ಸಮಯ ಕಳೆಯುವುದಕ್ಕಿಂತ ಊರಲ್ಲಿ ಅಡ್ಡಾಡಿಕೊಂಡು ಬಂದರಾಯಿತೆಂದುಕೊಂಡು ಅವನು ತನ್ನ ಮಿತ್ರರೊಂದಿಗೆ ಹೊರಟ. ಅಷ್ಟರಲ್ಲಿ "ಬೋರಾಳೆಯವರು ಯಾರಾದರೂ ಬಂದಿದ್ದೀರಾ?" ಎಂದು ಕೂಗುತ್ತ ಒಳಗಿನಿಂದ ಕೆಲವರು ಧಾವಿಸಿ ಬಂದರಾದರೂ ಅವರ ಮಾತು ಇವರಿಗೆ ಕೇಳಲಿಲ್ಲವಾದ್ದರಿಂದ ಇವರು ಹೊರಟು ಹೋಗಿದ್ದರು. ಇವರೆಲ್ಲ ಮತ್ತೆ ಪಾಟೀಲರ ಮನೆಗೆ ಮರಳಿದ ಹೊತ್ತಿಗೆ ಪಾಟೀಲರ ಅಂಗ

ತೊಟ್ಟ ಕುವರಿಯೇ ಬಾಳೆಹಣ್ಣು ತಿನ್ನುತ್ತ ಹೊರಬಂದಳು. ಅವಳಿಗಾಗಿ ಒಳಗೆ ನೂರಾರು ಜನ ಕಾಯುತ್ತಿರುವಾಗಲೂ ಆಕೆ ನೇರವಾಗಿ ಗೋಪಾಲಸಿಂಹನ ಬಳಿಗೇ ಬಂದು, "ಬನ್ನಿ, ಬನ್ನಿ. ನೀವು ನನ್ನ ದೊಡ್ಡಕ್ಕನ ಯಜಮಾನರಲ್ಲವೆ? ನಿಮಗಾಗಿ ನಾನು ಏನೂ ಮಾಡಲಾರೆ; ಏನು ಮಾಡಲು ನನಗೆ ಅಧಿಕಾರವಿಲ್ಲ," ಎಂದೆಲ್ಲ ಹೇಳತೊಡಗಿದಳು. ಅವಳ ಹಿಂದಿನಿಂದಲೇ ಬಂದ ಅವಳ ಅಜ್ಜಿ ಅವಳನ್ನೆಳೆಯುತ್ತ, "ಏನೇನು ಗುರುತು ಪರಿಚಯವಿಲ್ಲದವರೊಡನೆ ಏನು ಹರಟುತ್ತ ನಿಂತಿದ್ದೀ? ಒಳಗೆ ಅನೇಕರು ನಿನಗಾಗಿ ಕಾಯುತ್ತಿದ್ದಾರೆ," ಎಂದಳು. "ನಾನು ಇವರನ್ನು ಗುರುತಿಸಿದ್ದೇನೆ. ಇವರು ಬಹುದೊಡ್ಡ ಗೌರವಯುತ ಕುಟುಂಬದವರು," ಎಂದಳು ಆ ಬಾಲೆ. ಆಕೆ ಮತ್ತೆ ಗೋಪಾಲಸಿಂಹನತ್ತ ಹೊರಳಿ ತುಸು ಅಂಗಾರವನ್ನು ಕಾಗದದಲ್ಲಿ ಕಟ್ಟಿಕೊಡುತ್ತ, "ಇದರಿಂದ ಏನೂ ಪ್ರಯೋಜನವಾಗಲಿಕ್ಕಿಲ್ಲ. ಆದರೂ ಒಂದು ಪ್ರಯತ್ನವೆಂದು ಮಾತ್ರ ಇಟ್ಟುಕೊಂಡಿರಿ," ಎಂದು ಹೇಳಿದಳು. ತನ್ನ ಈ ಯಾತ್ರೆಯೊಂದು ವಿಫಲ ಯತ್ನವೆಂದುಕೊಂಡು ಗೋಪಾಲಸಿಂಹ ಗೆಳೆಯರೊಂದಿಗೆ ತನ್ನೂರಿಗೆ ಮರಳಿದ.

ಮೂರು

ಗೋಪಾಲಸಿಂಹನ ಕೆಲ ಅನುಭವಗಳನ್ನು ಅವನ ಮಾತುಗಳಲ್ಲೇ ಕೇಳಿರಿ. ಅವೆಲ್ಲ ನಡೆದಿದ್ದು ೧೯೫೭-೫೮ರಲ್ಲಿ.

ನಮ್ಮ ಮನೆಯಿರುವುದು ತಾಪೀ ನದಿಯ ದಡೆಯ ಮೇಲೆ. ಒಂದು ಬೆಳಿಗ್ಗೆ ಅವಂತಿ ಬಂದು, "ನಿಮ್ಮ ತಾಯಿಯನ್ನೂ ಹೆಂಡತಿಯನ್ನೂ ಈಗಿಂದೀಗಲೇ ಸಕರಾಳೆಗೆ ಕಳಿಸಿಕೊಡಿ," ಎಂದು ಹೇಳಿ ಅದೃಶ್ಯಳಾದಳು. ಆಕೆ ಹೀಗೇಕೆ ಹೇಳಿದಳೆಂದು ನನಗೆ ಅರ್ಥವಾಗಲಿಲ್ಲ. ಇವರಿಬ್ಬರನ್ನೂ ಸಕರಾಳೆಗೆ ಕಳಿಸಿಕೊಡುವುದೆಂದರೆ ಅದಕ್ಕಾಗಿ ವ್ಯವಸ್ಥೆ ಮಾಡಲು ಸಮಯ ಬೇಕು. ಸಾಯಂಕಾಲ ಅಥವಾ ಮರುದಿನ ಕಳಿಸಿದರೆ ಹೇಗೆಂದು ಯೋಚಿಸಿದೆ. ಕಳಿಸದೇ ಇದ್ದರೆ ಏನಾಗಬಹುದೆಂಬ ವಿಚಾರವೂ ಸುಳಿದು ಹೋಯಿತು. ಆದರೆ ಅವಂತಿಯ ಪರೀಕ್ಷೆ ಮಾಡುವುದು ನನಗೇಕೋ ಸರಿಯೆನಿಸಲಿಲ್ಲ. ಕೂಡಲೆ ಇಬ್ಬರನ್ನೂ ಸಕರಾಳೆಗೆ ಹೋಗುವ ಎಸ್.ಟಿ. ಬಸ್ಸಿನಲ್ಲಿ ಕೂಡಿಸಿದೆ.

ಬಸ್ಸು ಅದೇ ಊರ ಗಡಿದಾಟಿ ಹೋಗಿರಬೇಕು, ಅಷ್ಟರಲ್ಲೇ ನದಿಗೆ ಮಹಾಪೂರ ಬರತೊಡಗಿತು. ಒಂದೆರಡು ಗಂಟೆಗಳಲ್ಲೇ ನೀರು ಏರುತ್ತೇರುತ್ತ ಇಡೀ ಊರನ್ನೇ ಅರ್ಧಮರ್ಧ ಮುಳುಗಿಸಿತು. ನಮ್ಮ ಮನೆಯಲ್ಲಿ ಎದೆಯ ಮಟ್ಟಕ್ಕೆ ನೀರು ಏರಿತು. ಅನೇಕ ಮನೆಗಳು ಕುಸಿದು ಬಿದ್ದುವು; ಹತ್ತಾರು ಜನ ತೇಲಿ ಹೋದರು. ಅವಂತಿಯ ದೂರದೃಷ್ಟಿಯನ್ನೂ ಕೃಪಾದೃಷ್ಟಿಯನ್ನೂ ನಾನು ಮನದಲ್ಲೇ ಕೃತಜ್ಞತೆಯಿಂದ ನೆನೆದೆ.

ಇದಕ್ಕೂ ಮುಂಚಿನ ಒಂದು ಘಟನೆಯೊಂದು ನೆನಪಾಗುತ್ತದೆ. ೧೯೫೬ರಲ್ಲಿ ನಾವು ಶಾಮಾಘರೆಯನ್ನು ಬಿಟ್ಟು ಬೋರಾಳೆಯಲ್ಲಿ ಇರಲು ಹೋದೆವು. ಗಿರಣಿಯನ್ನು ಅಲ್ಲಿಗೆ ಸ್ಥಳಾಂತರಿಸಿದೆನು. ಅಲ್ಲಿ ನಡೆದ ಘಟನೆಯಿದು. ನಾವೆಲ್ಲ ಒಂದು ಬೆಳಿಗ್ಗೆ ಚಹಾ ಸೇವನೆಯಲ್ಲಿ ನಿರತರಾಗಿ ಹರಟುತ್ತ ಕುಳಿತಿದ್ದೆವು. ಅಷ್ಟರಲ್ಲೇ ಅವಂತಿ ಬಂದವಳೆ, "ಟಾಂಗಾ ಬಿದ್ದು ನಿಮ್ಮ ತಾಯಿಯ ಕೈ ಮುರಿದಿದೆ, ನಾನು ಸಂಭಾಳಿಸುತ್ತೇನೆ." ಎಂದು ಹೇಳಿ ಅದೃಶ್ಯಳಾದಳು, ತಕ್ಷಣ ಏನು ಮಾಡಬೇಕೆಂದೇ ನನಗೆ ತೋಚಲಿಲ್ಲ. ಎದ್ದು ಶಶಪಥ ಹಾಕತೊಡಗಿದೆ. ತಾಯಿ ಆಗ ಸಕರಾಳೆಯಲ್ಲಿರುತ್ತಿದ್ದಳು. ಏನಾಗಿದೆಯೆಂದು ನಾನು ಅಲ್ಲಿಗೆ ಹೋಗಿ ನೋಡಿದರೆ ಟಾಂಗಾ ಬಿದ್ದ ಸ್ವರೂಪ ಕಂಡು ದಂಗಾದೆ. ಅದರಲ್ಲಿ ಕುಳಿತವರು ಬದುಕಿರುವುದೇ ಸಾಧ್ಯವಿಲ್ಲವೇನೋ ಎಂಬಂತೆ ಅನಿಸುತ್ತಿತ್ತು. ಆದರೆ ತಾಯಿಯ ಕೈ ಮಾತ್ರ ಮುರಿದು ಅವಳು ಪ್ರಾಣಭಯದ ಗಂಡಾಂತರದಿಂದ ಪಾರಾಗಿದ್ದಳು. ಅವಂತಿ ತನ್ನ ಮಾತಿನಂತೆಯೇ ಸಂರಕ್ಷಿಸಿದ್ದಳು. ಅವಳ ಆಶ್ರಯ ನನ್ನ ಕುಟುಂಬಕ್ಕೆ ಸದಾ ಸಿಗುತ್ತಿರುವುದು

ತ್ತಿತ್ತು. ತಾಯಿಯು ಗಾಯ ಮಾಯುತ್ತೊದಗಿದಂತೆ ನಾನು ಅವಳನ್ನು ಬೋರಾಳಿಗೆ ಕರೆದು ಕೊಂಡು ಬಂದೆ.

ಇಂಥದೇ ಇನ್ನೊಂದು ಪ್ರಸಂಗವನ್ನು ಹೇಳಬೇಕು. ಇದು ೧೯೬೩-೬೪ರಲ್ಲಿ ನಡೆದದ್ದು: "ನಾಗಪುರದ ನಿಮ್ಮ ಅಣ್ಣ ಮತ್ತು ಅವರ ಮಗಳ ಜೀವಕ್ಕೆ ಗಂಡಾಂತರವಿದೆ, ಆದರೆ ನಾನು ಅದನ್ನು ನಿವಾರಿಸುತ್ತೇನೆ" ಎಂದು ಅವಂತಿ ಒಮ್ಮೆ ಹೇಳಿಹೋದಳು. ಕೂಡಲೆ ನಾನು ನಾಗಪುರಕ್ಕೆ ತೆರಳಿದೆ.

ನನ್ನ ಅಣ್ಣ ಗೋವಿಂದಸಿಂಹ ಅಲ್ಲಿ ಸೀನಿಯರ್ ಡ್ರಗ್ ಇನ್ಸ್‌ಪೆಕ್ಟರ್ ಆಗಿದ್ದರು. (ಮುಂದೆ ಅವರು ಮುಂಬಯಿಯಲ್ಲಿ ಅಸಿಸ್ಟಂಟ್ ಡ್ರಗ್ ಕಮೀಶನರ್ ಎಂದು ಸೇವೆಸಲ್ಲಿಸಿ ನಿವೃತ್ತರಾದರು.) ನಾನು ಮನೆಗೆ ಹೋದಾಗ ಅಲ್ಲೇನೂ ವಿಶೇಷ ನಡೆದದ್ದು ಕಂಡುಬರಲಿಲ್ಲ. ಅಣ್ಣನೊಂದಿಗೆ ನಾವು ನಾಲ್ಕಾರು ಜನ ಪ್ರದರ್ಶನ ನೋಡಲು ಆ ಸಂಜೆ ಹೊರಟೆವು. ಅಲ್ಲಿಂದ ಮರಳುತ್ತಿದ್ದಾಗ ಅಣ್ಣ ತಲೆ ತಿರುಗಿ ರಸ್ತೆಯಲ್ಲಿ ಬಿದ್ದುಬಿಟ್ಟರು. ಅಷ್ಟರಲ್ಲೇ ಹಿಂದಿನಿಂದ ಬಸ್ಸೊಂದು ಭೂಸಗುಡುತ್ತ ಬಂತು. ನಾನು ಕೂಡಲೇ ಅವನನ್ನು ಈಚೆಗೆ ಎಳೆದುಕೊಳ್ಳುವಷ್ಟರಲ್ಲೇ ಬಸ್ಸು ಭರ್ರೆಂದು ಹಾದುಹೋಯಿತು. ಕ್ಷಣಾರ್ಧದ ಅಂತರದಲ್ಲಿ ಅಣ್ಣ ಬದುಕಿದ್ದರು! ಅದೇ ಸಮಾಧಾನದಿಂದ ಮನೆಗೆ ಮರಳುವುದರಲ್ಲೇ ಅಲ್ಲಿ ಅಣ್ಣನ ಮಗಳು

ಬಿದ್ದು ಅವಳ ತಲೆಗೆ ತೀವ್ರ ಗಾಯವಾಗಿತ್ತು. ನನಗೆ ಮತ್ತೆ ಅವಂತಿಯ ಆಶ್ವಾಸನ ನೆನಪಾಗಿ ಆಕೆಗೆ ಪ್ರಾಣಭಯವಿಲ್ಲವೆಂದು ವಿಶ್ವಾಸ ಹುಟ್ಟಿತು.

ತಾಮಥರೆಯಲ್ಲಿ ನಡೆದ ಒಂದು ಪ್ರಸಂಗ ನನ್ನ ಮಿತ್ರನನ್ನು ಕಂಗೆಡಿಸಿಬಿಟ್ಟಿತು. ನನ್ನ ಹೆಂಡತಿ ತವರಿಗೆ ಹೋದಾಗ ನನ್ನ ಜೊತೆ ಇರಲು ಬರುವುದಾಗಿ ಪ್ರತಾಪಸಿಂಗ ನಮ್ಮ ಮನೆಗೆ ಬಂದ. ರಾತ್ರಿ ಒಂದೇ ಕೋಣೆಯಲ್ಲಿ ನಾವಿಬ್ಬರೂ ಮಲಗಿದ್ದೆವು. ಮಧ್ಯರಾತ್ರಿಯ ನಂತರ ಅವನಿಗೆ ಶಬ್ದ ಕೇಳಿ ಎಚ್ಚರವಾಯಿತಂತೆ. "ನಾನು ಬರುವುದಿಲ್ಲ, ನಾನು ಬರುವುದಿಲ್ಲ" ಎಂದು ನಾನು ಯಾರಿಗೋ ಸ್ಪಷ್ಟವಾಗಿ ಹೇಳುತ್ತಿದ್ದೆನಂತೆ. ಅವನು ನೋಡ ನೋಡುತ್ತಿದ್ದಂತೆಯೇ ನನ್ನನ್ನು ಹಾಸಿಗೆ ಸಮೇತ ಮೇಲ ಮೇಲ ಕೈತ್ತಲಾಯಿತಂತೆ. ಅವನು ಭಯಚಕಿತನಾಗಿ ನೋಡುತ್ತಿರುವಾಗಲೇ ಹಾಸಿಗೆ(ಮೊದಲು ಮಂಚದ ಮೇಲಿದ್ದದ್ದು)ಯಲ್ಲಿ ಮಲಗಿದ್ದ ನನ್ನನ್ನು ಹಾಗೆಯೇ ಹೂವಿನಂತೆ ಕೆಳಕ್ಕಿಳಿಸಿ ನೆಲದ ಮೇಲೆ ಮಲಗಿಸಿದರೂ ನನಗೆ ಎಚ್ಚರವಾಗಲಿಲ್ಲವಂತೆ. ಅದುವರೆಗೆ ಭಯದಿಂದ ಮಾತೇ ಬಾರದಾಗಿದ್ದ ಅವನು ಈಗೊಮ್ಮೆಲೆ "ಭೂತ! ಭೂತ!" ಎಂದು ಕೂಗಿಕೊಳ್ಳತೊಡಗಿದನು! ನನಗೆ ಎಚ್ಚರವಾಗದಿದ್ದರೂ ನೆರೆಹೊರೆಯವರು ಎಚ್ಚೆತ್ತು ಹತ್ತಾರು ಜನ ನನ್ನ ಕೋಣೆಯ ಹೊರಗಡೆ ಕೂಡಿದರು. ಆಗಲೇ ಅವನಿಗೆ ತುಸು ಧೈರ್ಯ ಬಂದದ್ದು. ಈಗ ದೀಪಹಚ್ಚಿ ಬಾಗಿಲು ತೆರೆದು ಹೊರಗೋಡಬೇಕೆಂದರೆ ಬಾಗಿಲಿಗೆ ಒಳಗಡೆ ಬೀಗ ಹಾಕಿತ್ತು. ಅವನಿಗೇನೋ ನೆನಪಾಗಿ ನನ್ನ ಒಳ ಅಂಗಿಯ ಜೇಬಿನಲ್ಲಿಯ ಬೀಗದ ಕೈ ಹುಡುಕಿ ತೆಗೆದುಕೊಂಡು ಕೀಲಿ ತೆಗೆದು ಹೊರಗೋಡಿಬಿಟ್ಟ. ಆನಂತರ ತಪ್ಪಿ ಕೂಡ ಅವನು ನಮ್ಮ ಮನೆಯೆಡೆ ರಾತ್ರಿ ಸುಳಿಯಲಿಲ್ಲ.

ಪ್ರತಾಪಸಿಂಹ ಕಂಡ ಆ ಸಂದರ್ಭದಲ್ಲಿ ಅವಂತಿ ಎಂದಿನಂತೆ ಆ ವಾಡೆಯ ಹಿಂದಿನ ಮರದ ಬಳಿ ನಡೆಯೆಂದು ನನ್ನನ್ನು ಒತ್ತಾಯಿಸುತ್ತಿದ್ದಳು. ನಾನು ಬೇಡ ಬೇಡವೆಂದು ನಿರಾಕರಿಸುತ್ತಿದ್ದರೂ ಆಕೆ ನನ್ನನ್ನು ಎತ್ತಿ ಒಯ್ಯಲು ಪ್ರಯತ್ನಿಸುತ್ತಿದ್ದಳು. ಈಗ ನನ್ನನ್ನು ಕೆಳಕ್ಕಿಳಿಸಲು ಎಂದಿನಂತೆ ನನ್ನ ಹೆಂಡತಿಯೂ ನನ್ನ ಬಳಿಯಿರದಿದ್ದುದು ಅವಳಿಗೆ ಅನುಕೂಲ ಅಂಶವಾಗಿತ್ತು, ನಾನು ತುಸು ಬೇಸರದಿಂದ, "ನನ್ನ ಮೈ ಕೈ ಮುಟ್ಟಿದರೆ ನನ್ನಾಣೆಯಿದೆ" ಎಂದುಬಿಟ್ಟೆ. ಇದು ತಕ್ಷಣ ಫಲಕಾರಿಯಾಗಿತ್ತು. ಅಂದಿನಿಂದ ಇಂದು ವರೆಗೆ ಆಕೆ ನನ್ನ ಮೈಕೈ ಮುಟ್ಟಿಲ್ಲವಿಷ್ಟೇ ಅಲ್ಲ, ಮರ್ಯಾದೆಯಿಂದ ದೂರ ನಿಂತು ಮಾತಾಡುತ್ತಾಳೆ. ಈ ಘಟನೆ ನಡೆದದ್ದು ೧೯೫೭–೫೮ರಲ್ಲಿ.

ನನಗೊಮ್ಮೆ ಕಾರ್ಯಾರ್ಥ ಇಂದೂರಿಗೆ ಹೋಗಬೇಕಾಗಿ ಬಂತು. ಮರಳಿ ಊರಿಗೆ ಬರುವಾಗ ಒಂದು ಖಾಸಗಿ ಬಸ್ಸಿನಲ್ಲಿ ಪ್ರಯಾಣ ಬೆಳೆಸಿದೆ. ಇಂದೂರಿನಿಂದ ಸುಮಾರು ೮೦ ಮೈಲುಗಳ ಅಂತರದಲ್ಲಿ ಒಂದು ಭಾರಿ ಘಟ್ಟ ಹತ್ತುತ್ತದೆ. ಅದಕ್ಕೆ ಮಾನಪುರ ಘಟ್ಟವೆಂದು ಹೆಸರು. ನಮ್ಮ ಕಡೆಯ ಘಟ್ಟಗಳಿಗೆ ಹೋಲಿಸಿದರೆ ಇದು ಭಯಂಕರ ಘಟ್ಟವೆಂದೇ ಹೇಳಬೇಕು.

ಬಸ್ಸಿನಲ್ಲಿ ನನಗೆ ಕಿಟಕಿಯ ಬಳಿ ಸ್ಥಳ ದೊರಕಿತ್ತು. ಸುಮಾರು ೪೦ ಜನ ಪ್ರಯಾಣಿಕರಿದ್ದ ಬಸ್ಸಿನಲ್ಲಿ ನಾನು ಸುಖಕರ ಪ್ರವಾಸವನ್ನೇ ಮಾಡುತ್ತಿದ್ದೇನೆಂಬ ಭಾವನೆಯಲ್ಲಿದ್ದೆ. ಮಾನಪುರ ಘಟ್ಟವನ್ನು ಬಸ್ಸು ಇಳಿಯತೊಡಗಿದಂತೆಯೆ ನನ್ನ ಕಿಟಕಿಯ ಹೊರಗೆ ಅವಂತಿ ಒಮ್ಮೆಲೆ ಅವತರಿಸಿದಳು. "ನೀವು ಬಸ್ಸಿನಿಂದ ಕೂಡಲೆ ಕೆಳಗಿಳಿಯಿರಿ," ಎಂದಳಾಕೆ- ನನಗೆ ಎಚ್ಚರ ನೀಡುವ ಧ್ವನಿಯಲ್ಲಿ. ಮತ್ತೆ ಇದೆಂಥ ಪ್ರಸಂಗ ಎಂದು ನಾನು ಮನದಲ್ಲೇ ಅಂದುಕೊಳ್ಳುತ್ತಿರುವಂತೆಯೆ ಆಕೆ ಇನ್ನೂ ಸ್ಪಷ್ಟವಾಗಿ ಹೇಳಿದಳು: "ಈಗಿಂದೀಗಲೇ ಬಸ್ಸು ನಿಲ್ಲಿಸಿ ತಕ್ಷಣ ಕೆಳಗಿಳಿಯಿರಿ, ಇಲ್ಲವಾದಲ್ಲಿ ಎಲ್ಲರ ಜೀವಕ್ಕೂ ಅಪಾಯವಿದೆ!" ಬಸ್ಸಿನ ವೇಗದಲ್ಲೇ ಆಕೆಯೂ ಧಾವಿಸುತ್ತಿದ್ದಳು.

ಮುಂದಿನ ಯೋಚನೆಯನ್ನೇ ಮಾಡದೆ

"ಬಸ್ಸು ನಿಲ್ಲಿಸಿರಿ, ನನಗೆ ಇಲ್ಲೇ ಇಳಿಯಬೇಕಿದೆ," ಎಂದು ಕೂಗಿಕೊಂಡೆ. ಬಸ್ಸು ನಿಲ್ಲುವಷ್ಟರಲ್ಲೇ ಅವಂತಿ ಮತ್ತೆ ನನಗೆ, "ಬಸ್ಸಿನ ಮುಂದಿನ ಭಾಗ ಪೂರ್ತಿ ಕೆಟ್ಟು ಹೋಗಿದೆ. ಅದು ಮುಂದೆ ಹೋಗಲು ಅವಕಾಶ ಕೊಡಬೇಡಿ," ಎಂದು ಕೂಗಿದಳು.

"ನೀವು ಸ್ವಲ್ಪ ಕೆಳಕ್ಕಿಳಿದು ಬಸ್ಸಿನ ಎಂಜಿನ್ ಮತ್ತು ಮುಂಭಾಗದಲ್ಲೇನಾದರೂ ದೋಷವಿದೆಯೇನೆಂದು ನೋಡಿರಿ. ನನಗೇಕೋ ವಿಚಿತ್ರ ಶಬ್ದ ಕೇಳಿಬರುತ್ತಿದೆ; ಏನೆಂದು ಪರೀಕ್ಷಿಸಿ ಬಿಡಿ," ನಾನು ಡ್ರೈವರನಿಗೆ ಬಿನ್ನವಿಸಿದೆ.

ಬಸ್ಸಿನ ಅಚ್ಚಿನ ಒಂದು ಗುಂಡು ಮುರಿಯಲು ಬಂದಿತ್ತು. ಸ್ಪ್ರಿಂಗಿನ ಸುತ್ತುಗಳಲ್ಲಿ ಅರ್ಧ ಅಂಗುಲದಷ್ಟು ಮಾತ್ರ ಇನ್ನೂ ಹಿಡಿದುಕೊಂಡಿತ್ತು. ಗುಂಡು ಪೂರ್ತಿ ಮುರಿದು ಸ್ಟಿಯರಿಂಗಿನ ಮೇಲೆ ಡ್ರೈವರನ ಹಿಡಿತ ತಪ್ಪಲು ಹೆಚ್ಚು ಕಾಲಾವಕಾಶವೇನೂ ಉಳಿದಿರಲಿಲ್ಲ. ಡ್ರೈವರನಿಗೆ ಈ ಅಂಶ ಗಮನಕ್ಕೆ ಬಂತು. ಅಲ್ಲಿಯೇ ಎಡಗಡೆಯೇ ಸುಮಾರು ೨೦೦ ಅಡಿ ಆಳವಾದ ಕಂದಕ. ಆಗಬಾರದ್ದು ಆಗಿ ಬಿಟ್ಟಿದ್ದರೆ ಬಸ್ಸಿಗೆ ಬಸ್ಸೇ ಅದರಲ್ಲಿ ಧುಮುಕಿ ಚಾಲಕ, ಪ್ರಯಾಣಿಕರೆಲ್ಲ ಯಮಲೋಕಕ್ಕೆ ನೇರವಾಗಿ ಪ್ರಯಾಣಿಸಬಹುದಿತ್ತು. ಈ ಸಕಾಲಿಕ ಎಚ್ಚರಿಕೆಯಿಂದ ಒಂದು ಭೀಕರ ಅಪಘಾತ ತಪ್ಪಿತ್ತು.

ಆದರೆ ಡ್ರೈವರನ ವಿಚಾರಧಾರೆ ಬೇರೆ ಮಾರ್ಗವನ್ನೇ ಹಿಡಿದಿತ್ತೆಂದು ತೋರುತ್ತದೆ. "ಗಾಡಿ ಹೊರಡುವ ಪೂರ್ವದಲ್ಲಿ ಇಂದೂರಲ್ಲಿ ನೀವೇ ಇದನ್ನೇಕೆ ಕೆಡಿಸಿರಬಾರದು? ಇಲ್ಲವಾದರೆ ಇದು ನಿಮಗೆ ಹೇಗೆ ತಿಳಿಯಿತು?" ಅವನು ನನ್ನನ್ನು ಪೋಲೀಸ್ ಅಧಿಕಾರಿಯಂತೆ ಗದರಿಸಿ ಕೇಳಿದ. ಸಹಪ್ರಯಾಣಿಕರ ಮನಸ್ಸನ್ನೂ ಈ ಸಂದೇಹ ಆವರಿಸಿ ಕಲಕಿರಬೇಕು. ಮೋಟರ್ ವಾಹನಗಳ ಬಗ್ಗೆ, ಟಿಕೆಟ್ ಪಡೆದು ಪ್ರಯಾಣ ಮಾಡುವುದಕ್ಕಿಂತ ಹೆಚ್ಚೇನೂ ತಿಳಿಯದಿದ್ದ ನನಗೆ ಇದಕ್ಕೇನೆಂದು ಉತ್ತರಿಸುವುದೆಂದು ಕೂಡಲೇ ಹೊಳೆಯಲಿಲ್ಲ. ಆದರೆ ಪ್ರಸಂಗಾವಧಾನ ನೆರವಿಗೆ ಬಂತು. "ನಾನೇ ಮಾಡಿದ್ದರೆ ನಾನು ಇಷ್ಟು ಹೊತ್ತಿನವರೆಗೆ ಈ ಬಸ್ಸಿನಲ್ಲಿ ಇಷ್ಟು ದೂರ ಪ್ರಯಾಣ ಮಾಡುತ್ತಿದ್ದೆನೆ? ಇಂದೂರಿನಿಂದ ೭೦-೮೦ ಮೈಲು ದೂರ ಬಂದ ನಂತರವೇ ಅಪಘಾತವಾಗಲಿದೆಯೆಂದು ತಿಳಿಯಲು ನನಗೆ ಬಿಡಿ, ನಿಮಗೆ ಸಹ ಮುಂಗಡ ತಿಳಿಯಲು ಶಕ್ಯವೆ? ನಿಮ್ಮ ಮೆಕ್ಯಾನಿಕ್ಕನಿಗಾದರೂ ಇದನ್ನು ಮೊದಲೇ ಊಹಿಸಿ ಹೇಳಲು ಶಕ್ಯವಿದೆಯೆ?"– ನಾನೂ ಡ್ರೈವರನಿಗಿಂತಲೂ ಒಂದು ಕೈ ಜೋರಾಗಿಯೇ ಪ್ರತಿಭಟಿಸಿದೆ. ಆತ ನಿರುತ್ತರನಾದ.

ಸಹಪ್ರವಾಸಿಯಾಗಿದ್ದ ಮುದುಕಿಯೊಬ್ಬಳು ನನ್ನ ಬಳಿ ಬಂದು, "ತಮ್ಮಾ, ನೀನು ಯಾರು?" ಎಂದು ವಿಚಾರಿಸಿದಳು. "ನಾನೊಬ್ಬ ಇಂಜಿನಿಯರ್." ಕೂಡಲೆ ಪ್ರಯಾಣಿಕರೆಲ್ಲ ನನ್ನನ್ನು ಮುತ್ತಿ ತಮ್ಮ ತಮ್ಮ ರೀತಿಯಲ್ಲಿ ನನಗೆ ಧನ್ಯವಾದಗಳನ್ನರ್ಪಿಸಿದರು. ಘಟ್ಟದ ಈ ಭಾಗದಲ್ಲಿ ಭೈರವನ ದೇವಾಲಯವೊಂದಿದೆ. ಆ ಮುದುಕಿ ಅದನ್ನು ನೆನೆದು, "ಆ ಭೈರವನೇ ನಿನಗೆ ಈ ಬುದ್ಧಿ ಕೊಟ್ಟು ನಮ್ಮನ್ನೆಲ್ಲ ಕಾಪಾಡಿದ್ದಾನೆ," ಎಂದು ನನ್ನ ಮುಖದ ಮೇಲಿನ ದೃಷ್ಟಿ ತೆಗೆಯುವಂತೆ ಕೈ ತಿರುಗಿಸಿ ಬಟ್ಟು ಲಟ್ಟು ಮುರಿದಳು. ಅಂತೂ ಪೀಡೆ ತೊಲಗಿ ಹೋಯಿತು! ಪ್ರಯಾಣಿಕರಲ್ಲೊಬ್ಬ ತನ್ನ ಚೀಲದೊಳಗಿಂದ ತೆಂಗಿನಕಾಯಿಯೊಂದನ್ನು ತೆಗೆದು ಭೈರವನಿಗೆ ಒಡೆದು ಎಡೆ ತೋರಿಸಿ ಎಲ್ಲರಿಗೂ ಪ್ರಸಾದ ಹಂಚಿದನು. ಎಲ್ಲರೂ ಈ 'ಇಂಜಿನಿಯರ್'ನ ಬುದ್ಧಿಮತ್ತೆಯನ್ನೂ ಪ್ರಸಂಗಾವಧಾನವನ್ನೂ ಕೊಂಡಾಡುವವರೇ. ಆದರೆ ಮೋಟಾರ್ ವಿಷಯದಲ್ಲಿ ನನ್ನ ತಾಂತ್ರಿಕ ಜ್ಞಾನ ಸೊನ್ನೆಯನ್ನು ಮೀರಿಲ್ಲವೆಂದು ಹೇಳುವ ಧೈರ್ಯ ನನಗೆಂತು ಬಂದೀತು! ಯಾರಿಗೋ ಸಲ್ಲಬೇಕಾದುದನ್ನು ನನ್ನದೇ ಎಂಬಂತೆ ಸ್ವೀಕರಿಸುತ್ತ ಆತ್ಮವಂಚನೆ ಮಾಡಿಕೊಂಡೆ.

ನಾಲ್ಕು

ಗೋಪಾಲಸಿಂಹ ಅವಂತಿಯು ಮಹತ್ತರ ಪಾತ್ರ ನಿರ್ವಹಿಸಿದ ಇನ್ನೂ ಅನೇಕ ಘಟನೆ

ಗಳನ್ನು ಹೇಳುವಾಗ ಅದರಲ್ಲೇ ತನ್ಮಯ ನಾಗಿರುವಂತೆ ತೋರುತ್ತಿತ್ತು. ಇನ್ನೂ ಅವನ ಮಾತುಗಳನ್ನೇ ಕೇಳಿ.

ನಮ್ಮ ಬಂಧುಬಳಗವೆಲ್ಲ ಬಹು ದೂರ ದೂರದ ಊರುಗಳಲ್ಲಿದ್ದಾರೆ. ಇವರಲ್ಲಿ ಯಾರಿಗಾದರೂ ಆಪತ್ತುಗಳೊದಗಿದರೆ ಅವುಗಳ ಬಗ್ಗೆ ಆವಂತಿ ನನಗೆ ಮೊದಲೇ ಸೂಚನೆ ಕೊಡುತ್ತಿದ್ದಳು. ಅನೇಕ ಸಲ ಸಂಕಟಗಳನ್ನು ನಿವಾರಿಸಿದರೆ ಪ್ರತಿ ಸಲವೂ ಗಂಭೀರ ಸಂಕಟಗಳನ್ನು ಸೌಮ್ಯ ಸ್ವರೂಪದಾಗಿಯಂತೂ ನಿಶ್ಚಿತ ಪರಿವರ್ತಿಸುತ್ತಿದ್ದಳು. ಅಂಥ ಒಂದೆರಡು ಉದಾಹರಣೆಗಳನ್ನೂ ನೋಡಬಹುದು.

ನಮ್ಮ ಬೀಗ ಗೋಕುಲಸಿಂಹ ರಾಜಪೂತರ ಮಗ ರಣಜಿತಸಿಂಹ ಪುಣೆಯಲ್ಲಿ ಒಂದು ಅಪಘಾತದಲ್ಲಿ ಸಿಕ್ಕು ಗಾಯಗೊಂಡ. ಅವನು ಸೈಕಲ್ ಮೇಲೆ ಹೋಗುತ್ತಿದ್ದಾಗ ಅಟೋರಿಕ್ಷಾವೊಂದು ಅವನಿಗೆ ಡಿಕ್ಕಿ ಹೊಡೆದಿತ್ತು. ಈ ಬಗ್ಗೆ ಹಿಂದಿನ ರಾತ್ರಿಯಷ್ಟೇ ಅವಂತಿ ನನಗೆ ಸೂಚನೆ ಕೊಟ್ಟದ್ದನ್ನು ನಾನು ನನ್ನ ಹೆಂಡತಿಗೆ ಹೇಳಿದ್ದೆ. ಇದು ನಡೆದಿದ್ದು ಜುಲೈ ೧೯೭೦ರಲ್ಲಿ.

ನನ್ನ ತಂಗಿ ಆಕೆಯ ಪತಿಯೊಡನೆ ನೈಜೀರಿಯದ ರಾಜಧಾನಿ ಲಾಗೋಸಿನಲ್ಲಿದ್ದಾರೆ. ಆಕೆಯ ಗಂಡ ಒಂದು ದಿನ ಟೆನಿಸ್ ಆಡುತ್ತಿದ್ದಾಗ ಬಿದ್ದು ಅವರ ಕೈ ಮುರಿಯಿತು. ಮುಂದೆ ಕೆಲ ದಿನಗಳಲ್ಲೇ ಗಾಯ ಸಂಪೂರ್ಣ ಗುಣವಾಯಿತು. ಅಲ್ಲಿ ಈ ಘಟನೆ ನಡೆದಂತೆಯೇ ಅವಂತಿ ಅದನ್ನು ನನಗೆ ಸವಿಸ್ತರವಾಗಿ ವಿವರಿಸಿದಳು. ಮುಂದೆ ಒಂದು ತಿಂಗಳ ನಂತರ ಲಾಗೋಸಿನಿಂದ ಪತ್ರ ಬಂದ ನಂತರ ಅಲ್ಲಿ ಬರೆದ ವಿವರಗಳೆಲ್ಲ ಅವಂತಿ ಅಕ್ಷರಶಃ ಆ ಮುನ್ನವೇ ಹೇಳಿದ್ದಂತೆ ಇದ್ದವು.

೧೯೬೧-೬೨ರ ಒಂದು ಸಂಗತಿಯನ್ನು ನಮ್ಮ ಕುಟುಂಬದಲ್ಲಿರುವ ಯಾರೂ ಮರೆಯುವಂತೆಯೇ ಇಲ್ಲ. ಸಕರಾಳೆಯಲ್ಲಿ ನಮ್ಮ ಜಮೀನು ಸಾಕಷ್ಟು ಇದೆ. ಅದರ ಉಸ್ತುವಾರಿಗಾಗಿ ನಾನು ಅಲ್ಲಿಗೆ ಹೋಗಿದ್ದೆ. ನಮ್ಮ ಹೊಲದಲ್ಲಿ ಈರುಳ್ಳಿಯ ಬೆಳೆ ಸಮೃದ್ಧವಾಗಿ ಬೆಳೆದಿತ್ತು. ನಿತ್ಯ ಸಾಯಂಕಾಲ ಅಲ್ಲಿಗೆ ಹೋಗಿ ಬೆಳೆಗೆ ನೀರು ಬಿಡುವ ಪರಿಪಾಠವನ್ನು ನಾನಿಟ್ಟುಕೊಂಡಿದ್ದೆ. ಒಂದು ದಿನ ಅವಂತಿ ಬಂದು, "ಈ ದಿನ ಹೊಲಕ್ಕೆ ಹೋಗಬೇಡಿ," ಎಂದು ಸೂಚಿಸಿದಳು. "ಇದು ಹೇಗೆ ಸಾಧ್ಯ? ನಾನು ಹೋಗಲೇಬೇಕು." ನಾನುತ್ತರಿಸಿದೆ. "ಈ ಹೊತ್ತು ಮಾತ್ರ ನಿಮ್ಮ ಹೊರಗಿನ ಕೆಲಸಗಳಿಗೆಲ್ಲ ವಿಶ್ರಾಂತಿ ಕೊಟ್ಟುಬಿಡಿ. ಮನೆ ಬಿಟ್ಟು ಹೊರಬೀಳುವುದೇ ಬೇಡ." ಆಕೆ ಖಡಾಖಂಡಿತವಾಗಿ ಹೇಳಿದಳು. ಆದರೆ ಪೈರು ಬೆಳೆದು ನಿಂತಾಗ ಹೊಲದ ಕೆಲಸದ ಬಗ್ಗೆ ತಾತ್ಸಾರ ಮಾಡುವುದು ಸರಿಯಲ್ಲವೆಂದು ನನ್ನ ವಿವೇಕ ಸೂಚಿಸಿತು. ಹೊಲಕ್ಕೆ ಹೋಗಿ ನೀರಿನ ಪಂಪನ್ನು ಸುರು ಮಾಡಿ ಮಾಡಬೇಕಾದ ಕೆಲಸಗಳ ಬಗ್ಗೆ ಆಳುಗಳಿಗೆ ಮಾಹಿತಿ ಕೊಟ್ಟು ಬೇಗ ಮನೆಗೆ ಮರಳಿಬಿಟ್ಟರಾಯಿತೆಂದುಕೊಂಡು ಮಧ್ಯಾಹ್ನ ಎರಡು ಗಂಟೆಯ ಸುಮಾರಿಗೆ ಹೊಲಕ್ಕೆ ಹೋಗಿಬಿಟ್ಟೆ. ನಾನು ಮಶಿನ್ ಪ್ರಾರಂಭಿಸುವುದರಲ್ಲಿಯೇ ನನ್ನ ಶರ್ಟ್ ಅದರ ಶಾಫ್ಟಿನಲ್ಲಿ ಸಿಕ್ಕಿತು. ಕ್ಷಣಾರ್ಧದಲ್ಲೇ ಚಕ್ರ ನನ್ನನ್ನೆಳೆದುಬಿಟ್ಟು ನಾನು ಅದರ ಗುಂಟವೇ ಒಂದೆರಡು ಸುತ್ತು ಗರ್ರನೆ ಸುತ್ತಿದ ನಂತರ ಪ್ರಜ್ಞಾಹೀನ ಸ್ಥಿತಿಯಲ್ಲಿ ಬದಿಗೆ ಎಸೆಯಲ್ಪಟ್ಟೆನು. ಹತ್ತಿರವೇ ಇದ್ದ ನಮ್ಮ ಆಳು ಓಡುತ್ತ ಹೋಗಿ ಯಂತ್ರವನ್ನು ನಿಲ್ಲಿಸಿದನು. ಆದರೂ ನನಗೆ ಸಾಕಷ್ಟು ಪೆಟ್ಟು ಬಿದ್ದಿರಬೇಕು. ತಲೆ ಒಡೆದಿತ್ತು. ಕಿವಿಯಿಂದ ರಕ್ತ ಸೋರುತ್ತಿತ್ತು, ಎದೆಗೂಡಿನ ಹಾಗು ಕೈಕಾಲುಗಳಲ್ಲಿಯ ಕೆಲವಾದರೂ ಎಲುವುಗಳು ಮುರಿದಿರಬೇಕು, ಮೈಯೆಲ್ಲಾ ರಕ್ತಮಯವಾಗಿತ್ತು. ಯಂತ್ರವನ್ನು ನಿಲ್ಲಿಸಿದ್ದ ಆಳೇ ಮನೆಗೆ ಹೇಳಿಕಳಿಸಿದನಲ್ಲದೆ ಸುತ್ತಲಿನ ಕೆಲ ಜನರನ್ನೂ ಕೂಡಿಸಿದ.

ಆ ಸುಮಾರಿಗೆ ನಮ್ಮ ಮನೆಯಲ್ಲಿ ಧಾರ್ಮಿಕ

ಕಾರ್ಯಕ್ರಮವೊಂದು ನಡೆಯಲಿದ್ದುದರಿಂದ ನಮ್ಮ ತಂದೆಯವರೂ ಬಂಧು ಬಳಗದ ಅನೇಕರೂ ಆಗಲೇ ಸೇರಿದ್ದರು. ನನ್ನ ದೊಡ್ಡಣ್ಣ ಅದೇ ಸಾಯಂಕಾಲ ಬರುವವರಿದ್ದರು. ನಮ್ಮ ಅಕ್ಕನ ಗಂಡ ಗೋಕುಲಸಿಂಹರೂ ಮನೆಯಲ್ಲಿದ್ದರು. ಇಷ್ಟೊಂದು ಹೊಣೆಗಾರ ಜನ ಮನೆಯಲ್ಲಿದ್ದುದರಿಂದ ತಕ್ಷಣ ಸರಕಾರಿ ಡಾಕ್ಟರರನ್ನು ಕರೆತಂದರು, ಅವರು ನನ್ನನ್ನು ಪರೀಕ್ಷಿಸಿ ಪ್ರಾಥಮಿಕ ಉಪಚಾರ ಮಾಡಿ ಇಂಜೆಕ್ಷನ್ ಕೊಟ್ಟರು. ನನ್ನ ಶರೀರದಲ್ಲಿ ಮೂರು ದೊಡ್ಡ ಫ್ರ್ಯಾಕ್ಚರುಗಳಾಗಿವೆಯಲ್ಲದೆ ಅನೇಕ ಸಣ್ಣ ಪುಟ್ಟ ಫ್ರ್ಯಾಕ್ಚರುಗಳೂ ಉಂಟೆಂದು ಹೇಳಿದ ಡಾಕ್ಟರು, "ಇವನ ಪರಿಸ್ಥಿತಿ ಕೈ ಮೀರಿದೆ. ಆದರೆ ಕೊನೆಯ ಯತ್ನವೆಂದು ಈಗಿಂದೀಗಲೇ ಧೂಳಿಯ ಜಿಲ್ಲಾ ಆಸ್ಪತ್ರೆಗೆ ಕೊಂಡೊಯ್ದು ಚಿಕಿತ್ಸೆ ಮಾಡಿಸಿ ನೋಡಿ. ಯಶಸ್ಸು ಸಿಕ್ಕೇತಿರುವುದೆಂದೇನೂ ಹೇಳಲಿಕ್ಕಾಗದು; ಆದರೂ ಪ್ರಯತ್ನ ಮಾಡಿ ನೋಡಿರಿ. ಅಲ್ಲಿಯ ವರೆಗೆ ಮಾತ್ರ ಇವರನ್ನು ಸ್ವಲ್ಪವೂ ಅಲುಗಾಡಲು ಬಿಡಬೇಡಿರಿ," ಎಂದು ಅಭಿಪ್ರಾಯ ಹೇಳಿ ಹೊರಟು ಹೋದರು.

ಆಕಸ್ಮಾತ್ತಾಗಿ ಬರಸಿಡಿಲಿನಂತೆ ಬಂದೊದಗಿದ ಈ ಪ್ರಸಂಗದಿಂದ ಮನೆಯಲ್ಲಿಯ ವಾತಾವರಣವೇ ಗಂಭೀರವಾಗಿಬಿಟ್ಟಿತು. ವಿಶೇಷತಃ ನನ್ನ ಪತ್ನಿಯ ಪರಿಸ್ಥಿತಿ ಏನಾಗಿರಬಹುದೆಂದು ಊಹಿಸುವುದು ಕೂಡ ಅಸಾಧ್ಯ.

ಅದೇ ಸಮಯಕ್ಕೆ ಬಂದ ನನ್ನ ದೊಡ್ಡಣ್ಣ ಹಾಗು ಇತರರು ಸೇರಿ ನನ್ನನ್ನು ಧೂಳೆಗೆ ಚಿಕಿತ್ಸೆಗೆಂದು ಕರೆದೊಯ್ಯಲು ಮೋಟರ್ ಕಾರ್ ಒಂದನ್ನು ಗೊತ್ತುಪಡಿಸಿಕೊಂಡು ಬಂದರು. ಅಷ್ಟರಲ್ಲೇ ಬಂದ ಅವಂತಿ, ನಾನು ಪ್ರಜ್ಞ

ಶೂನ್ಯನಾಗಿದ್ದರೂ ನನ್ನ ಪತ್ನಿಗೆ ಹೇಳತೊಡ ಗಿದಳು: "ಇವರನ್ನು ಧುಳೆಗೆ ಒಯ್ಯಲು ಬಿಡ ಬೇಡಿರಿ. ಒಮ್ಮೆ ಇಲ್ಲಿಂದ ಹೊರಕ್ಕೊಯ್ದರೆ ಮತ್ತೆ ಮರಳಿ ಬರಲಾರರು. ಇವರು ಇಲ್ಲೇ ಇದ್ದರೆ ನಾನು ನಾಳೆ ಸಾಯಂಕಾಲದ ಹೊತ್ತಿಗೆ ಸರಿಪಡಿಸುವೆ."

ನನ್ನ ಹೆಂಡತಿಗೆ ಅವಂತಿಯ ಮೇಲೆ ಅಚಲ ವಿಶ್ವಾಸ. "ಅವಂತ ನಾಳೆ ಸಾಯಂಕಾಲದಷ್ಟೊತ್ತಿಗೆ ಇವರನ್ನು ಸರಿಪಡಿಸುವುದಾಗಿ ಹೇಳಿದ್ದಾಳೆ. ದಯಮಾಡಿ, ನೀವು ಇವರನ್ನು ಧುಳೆಗೆ ಕರೆದೊಯ್ಯಬೇಡಿ"ರೆಂದು ಎಲ್ಲರಿಗೂ ದುಂಬಾಲು ಬಿದ್ದಳು. ಆದರೆ ನಮ್ಮ ತಂದೆ, ಅಣ್ಣ ಮತ್ತು ಇತರ ಯಾವ ಹಿರಿಯರಿಗೂ ಆವಳ ಮಾದ ರುಚಿಸಲಿಲ್ಲ. ಇಂಥ ಅಂಧಶ್ರದ್ಧೆಯನ್ನು ಆವರು ನಂಬಲು ಸಿದ್ಧರಿರಲಿಲ್ಲ. ಡಾಕ್ಟರ ಅಭಿಪ್ರಾಯಕ್ಕೆ ವಿರುದ್ಧವಾಗಿ ನನ್ನನ್ನು ಮನೆಯಲ್ಲಿಟ್ಟುಕೊಂಡು ಕುಳಿತರೆ ವಿನಾಕಾರಣ ಲೋಕಾಪವಾದಕ್ಕೆ ಗುರಿಯಾಗಬೇಕಾದೀತೆಂಬ ಭಯ ಅವರಿಗೆ.

"ಡಾಕ್ಟರಂತೂ ಇವರ ಪರಿಸ್ಥಿತಿ ಕೈ ಮೀರಿದೆಯೆಂದು ಹೇಳಿದ್ದಾರೆ; ಅಂದಾಗ ಧುಳೆಯಲ್ಲಿರುವವರೂ ಇದನ್ನೇ ಹೇಳುವರು. ಆದರೆ ಇದು ವರೆಗಿನ ಅನುಭವವನ್ನು ಗಮನಿಸಿದರೆ ಅವಂತಿಯನ್ನು ನಾವು ಏಕೆ ನಂಬಬಾರದು? ಹೇಗೂ ನಾಳೆ ಸಂಜೆಯ ಹೊತ್ತಿಗೆ ಇವರನ್ನು ಗುಣಪಡಿಸುವುದಾಗಿ ಸ್ವತಃ ಹೇಳಿದ್ದಾಳೆ – ಅವಂತಿ. ಆಕೆಗೆ ಅವಕಾಶವನ್ನೇಕೆ ಕೊಟ್ಟು ನೋಡಬಾರದು?" ಎಂದು ಪದ್ಮಕುವರ ಕೇಳಿದಾಗ ಕೊನೆಗೆ 'ನಾಳೆ ಸಂಜೆಯ ವರೆಗೆ ಕಾದು ನೋಡೋಣ' ಎಂಬ ನಿರ್ಣಯಕ್ಕೆ ಹಿರಿಯರು ಬಂದರು.

ನಾನು ಇದೇ ಅವಸ್ಥೆಯಲ್ಲಿ ಬಿದ್ದಿದ್ದಾಗ ಪದ್ಮಕುವರ ನನ್ನ ಬಳಿಯೇ ಕುಳಿತಿದ್ದಳು,- ಅವಂತಿಯ ಬರವನ್ನು ಎದುರು ನೋಡುತ್ತ. ಆವಂತಿ ಬಂದು, ಕೆಲವೊಂದು ಬೇರು, ಎಲೆ ಮತ್ತು ತೊಗಟೆಗಳನ್ನು ತಂದು ಅವುಗಳ ಶಾಕವನ್ನು ನನಗೆ ಕೊಡುವಂತೆ ಹೇಳಿದಳು. ಆದರೆ ಈ ವನಸ್ಪತಿಗಳ ಹೆಸರುಗಳನ್ನು ನನ್ನ ಪತ್ನಿ ಕೇಳಿರಲೇಯಿಲ್ಲ; ಆದರೆ ನಮ್ಮ ಹೊಲದಲ್ಲಿ ಕೆಲಸ ಮಾಡುವ ಮುದುಕನೊಬ್ಬನಿಗೆ ಇವೆಲ್ಲ ಗೊತ್ತಿದ್ದವು. ಅವನೇ ಅವುಗಳನ್ನೆಲ್ಲ ತಂದುಕೊಟ್ಟನು. ಅವಂತಿಯ ಸೂಚನೆಯಂತೆಯೇ ಮಂಚದ ಮೇಲಿನ ಗಾದಿಯನ್ನು ತೆಗೆದುಹಾಕಿ ಪಟ್ಟಿಗಳ ಮೇಲೆಯೇ ನನ್ನನ್ನು ಮಲಗಿಸಲಾಯಿತು. ಅನಂತರ ಕೆಳಗಿನಿಂದ ನನಗೆ ಹೊಗೆ ಹಾಕುವ ಮೂಲಕ ಶಾಕ ಕೊಡಲು ಪ್ರಾರಂಭಿಸಲಾಯಿತು. ಈ ಕ್ರಮ ಸತತವಾಗಿ ಮುಂದಿನ ೩೦ ತಾಸುಗಳ ವರೆಗೆ ನಡೆಯಿತು. ಮಾರನೆಯ ದಿನ ಸಾಯಂಕಾಲ ಕಳೆದು ಸಂಜೆ ಆವರಿಸುತ್ತಿದ್ದಂತೆಯೇ ಅವಂತಿ ನನ್ನ ಹೆಂಡತಿಗೆ, "ಅವರ ತಲೆಗೆ ಕೈ ಕೊಟ್ಟು ಮೆಲ್ಲಗೆ ಎಬ್ಬಿಸಿ ಕೂಡಿಸಿರಿ," ಎಂದು ಸೂಚಿಸಿದಳು. ನನ್ನ ಹೆಂಡತಿ ಹೆದರುತ್ತಲೇ ಮೆಲ್ಲಗೆ ನನ್ನ ತಲೆಗೆ ಆಸರೆ ಕೊಟ್ಟು ಎತ್ತಿ ನನ್ನನ್ನು ಕೂಡಿಸಿದಳು, ಆ ಹೊತ್ತಿಗೆಯೇ ನನಗೆ ಪ್ರಜ್ಞೆ ಮರಳಿಬಂತು,

ನನಗೆಚ್ಚರವಾದಾಗ ಇಷ್ಟೊತ್ತು ನಾನು ಪ್ರಜ್ಞಾಹೀನನಾಗಿದ್ದೆನೆಂಬ ವಿಷಯ ನನ್ನ ಗಮನಕ್ಕೇ ಬರಲಿಲ್ಲ. ನಾನು ಮೂತ್ರವಿಸರ್ಜನೆ ಮಾಡಿ ಬರುವುದಾಗಿ ಹೇಳಿ ತೀರ ಸಹಜವಾಗಿಯೇ ಎದ್ದು ನಡೆದು ಹೊರಕ್ಕೆ ಹೋದೆ. ಆಗಲೇ ಗುಜುಗುಜು ಸುರುವಾಗಿಬಿಟ್ಟಿತ್ತು. ಇವನಿಗೆ ಸನ್ನಿ ಕೂಡಿದೆ; ಮನುಷ್ಯನ ಅಂತ್ಯಕಾಲದಲ್ಲಿ ಹೀಗಾಗುವುದುಂಟು ಎಂದೆಲ್ಲ ಮಾತಾಡಿಕೊಂಡು ಧುಳೆಗೆ ನನ್ನನ್ನೊಯ್ಯದಿದ್ದುದಕ್ಕೆ ಪಶ್ಚಾತ್ತಾಪಪಡತೊಡಗಿದ್ದರು, ಆದರೆ ನಾನು ಈ ರೀತಿ ಎದ್ದು ಬಂದುದು ಅವರನ್ನೆಲ್ಲ ಚಕಿತಗೊಳಿಸಿರಬೇಕು. ನನಗಾದ ಗಾಯಗಳೆಲ್ಲ ಮಾಯವಾಗಿ ಮಾತು ಸಹ ಸಹಜವಾಗಿಯೇ ಬಂದುದನ್ನು ಕಂಡು ಅವರಲ್ಲ ಆವಾಕ್ಕಾದರು. ವಾತಾವರಣ ಒಮ್ಮೆಲೇ ಬದಲಾಯಿತು. ನನಗೆ ಪುನರ್ಜನ್ಮವೇ ಅವಂತಿಯ ಕೃಪೆಯಿಂದ ದೊರೆತುದನ್ನು ಕಂಡ ನನ್ನ ಸುಶಿಕ್ಷಿತ ಬಂಧುಗಳೂ ಹತಬುದ್ಧರಾದರು.

ಕೇವಲ ಕಿವಿಗೆ ಸ್ವಲ್ಪ ನೋವಿತ್ತು. ಈ ಬಗ್ಗೆ ಅವಂತಿ ನನ್ನ ಮಡದಿಗೆ ಮೊದಲೇ ಹೇಳಿದ್ದಳು. ನನ್ನ ಕಿವಿಗೆ ತೊಂದರೆ ಬಹಳವಾದರೂ ಅವಂತಿಯು ಸೂಚನೆಯಂತೆ ಚಿಕಿತ್ಸೆ ಮಾಡಿಸಿಕೊಂಡಾಗ ಪೂರ್ತಿ ಗುಣವಾಯಿತು. ಈ ಒಂದೇ ಒಂದು ಪ್ರಸಂಗದಿಂದಲೇ ನಮ್ಮ ಕುಟುಂಬದವರೆಲ್ಲ ಅವಂತಿಯನ್ನು ನಮ್ಮ ಪ್ರಾಣ ರಕ್ಷಕಳೆಂದೇ ಗೌರವಿಸತೊಡಗಿದರು.

ಐದು

ಗೋಪಾಲಸಿಂಹನ ಬೀಗ ಗೋಕುಲ ಸಿಂಹನ ಮೇಲೆಯೂ ಇಂಥದೇ ಒಂದು ಆಪತ್ತು ಒದಗಿದಾಗಲೂ ಅವಂತಿಯೇ ರಕ್ಷಿಸಿದಳು. ಜೂನ್ ೨೧, ೧೯೬೦ರಂದು ನಡೆದ ಆ ಘಟನೆ ಚಿತ್ತವೇಧಕವಾಗಿದೆ. ಅದನ್ನು ಗೋಪಾಲಸಿಂಹನ ಮಾತುಗಳಲ್ಲೇ ಓದಿ.

ಆಗ ಖಾನದೇಶ ಜಿಲ್ಲೆಯಲ್ಲಿ ಪ್ರಸಿದ್ಧ ಅಧಿಕಾರಿಯಾಗಿದ್ದ ಗೋಕುಲಸಿಂಹ ಧೋಂಡಾಯಿಯಿಂದ ಬಿಮಾಠಾಣೆಗೆ ಸರಕಾರಿ ಜೀಪಿನಲ್ಲಿ ಘಿಲ್ತಿ ಹೊರಟಿದ್ದರು. ಜೀಪಿನಲ್ಲಿ ಅವರ ಸಂಗಡ ಅಲ್ಲಿಯ ಶಾಸಕಿ ಶ್ರೀಮತಿ ಕಮಲಾಬಾಯಿ ಅಜಮೇರರಲ್ಲದೆ ಸರಕಾರಿ ಫೋಟೊಗ್ರಾಫರ್, ಡ್ರೈವರ್ ಹಾಗೂ ಇನ್ನಿತರ ಸರಕಾರಿ ಸೇವಕರಿದ್ದರು. ಅದು ಅಮಾವಾಸ್ಯೆಯ ರಾತ್ರಿ. ಒಂದೇ ಸಮನೆ ಮುಸಲಧಾರೆಯಾಗಿ ಮಳೆ ಸುರಿಯುತ್ತಿತ್ತು.

ಅವರ ಜೀಪು ಒಂದು ಹಳ್ಳದ ಹತ್ತಿರ ಬಂದಾಗ ಧೋಂಡಾಯಿ ಅಲ್ಲಿಂದ ಒಂಬತ್ತು ಮೈಲು ಮಾತ್ರ ದೂರವಿತ್ತು. ಹಳ್ಳದಲ್ಲಿ ಸಾಕಷ್ಟು ನೀರು ಬಂದಿತಾದ್ದರೂ ಡ್ರೈವರನಿಗೆ ಅದರ ಅಂದಾಜು ಸಿಕ್ಕಂತೆ ತೋರಲಿಲ್ಲ. ಜೀಪು ಹಳ್ಳವನ್ನು ಸಹಜವಾಗಿ ದಾಟಿಕೊಂಡು ಹೋಗಬಲ್ಲದೆಂದು ಬಗೆದು ಅವನು ಅದನ್ನು ಹಳ್ಳಕ್ಕಿಳಿಸಿದನು. ಪಾತ್ರದ ನಟ್ಟ ನಡುವೆ ಹೋಗುವ ಹೊತ್ತಿಗೆ ಜೀಪು ಬಂದಾಯಿತು. ನೀರು ಆಗಲೇ ಎದೆಯ ಮಟ್ಟಕ್ಕೇರಿತ್ತು. ಜೀಪಿನ ಕಿಟಕಿಗಳಿಂದ ನೀರು ಒಸರಿ ಒಳಬರುತ್ತಿತ್ತು. ಗೋಕುಲಸಿಂಹ ಪ್ರಸಂಗಾವಧಾನದಿಂದ ಮುಂದಿನ ಕಾಜನ್ನು ಒಡೆದು ಬೊನೆಟ್ಟಿನ ಮೇಲೆ ಬಂದು ನಿಂತಾಗ ಜೀಪಿನೊಳಗಿನವರೆಲ್ಲ ಜೀವದ ಆಸೆಯನ್ನೇ ತೊರೆದಿದ್ದರು. ಗೋಕುಲಸಿಂಹ ಇದ್ದಬಿದ್ದ ಧೈರ್ಯವನ್ನೆಲ್ಲ ಒಗ್ಗೂಡಿಸಿಕೊಂಡು ಬೊನೆಟ್ಟಿನಿಂದ ಜಿಗಿದುಬಿಟ್ಟರು. ಅವರು ಹಾರಿ ನಿಂತ ಜಾಗದಲ್ಲಿ ಪುಣ್ಯವಶಾತ್ ನೀರು ಮೊಣಕಾಲವರೆಗೆ ಮಾತ್ರ ಇತ್ತಾದರೂ ಸೆಳವು ವಿಪರೀತವಿತ್ತು. ಹಾಗೆಯೇ ತೆವಳುತ್ತ ದಂಡೆಗೆ ಬಂದು ತಲುಪಿದರಾದರೂ ಆ ಕತ್ತಲಲ್ಲಿ ಏನೂ ಕಾಣುತ್ತಿರಲಿಲ್ಲ. ಆಗೀಗ ಮಿಂಚಿದಾಗ ಮಾತ್ರ ಸುತ್ತಲ ನಿರ್ಜನ ಅರಣ್ಯ ಅಲ್ಪಸ್ವಲ್ಪ ಗೋಚರಿಸುತ್ತಿತ್ತು.

ಗೋಕುಲಸಿಂಹ ಹಿಂದೆ ಹೊರಳಿ ನೋಡಿದಾಗ ಮಿಂಚು ಮಿಂಚಿತು. ಜೀಪು ಅದು ನಿಂತಿದ್ದ ಸ್ಥಾನದಲ್ಲಿ ಇದ್ದಿಲ್ಲವೆಂಬುದನ್ನು ಕಂಡ ಅವರಿಗೆ ಅವರೆಲ್ಲರೂ ಪ್ರವಾಹದಲ್ಲಿ ಜೀಪಿನೊಂದಿಗೇ ಕೊಚ್ಚಿಕೊಂಡು ಹೋಗಿರಬೇಕೆಂದು ಭಾವಿಸಿ ಅವರಿಗಾಗಿ ಮರುಗುತ್ತ ಬೆಳಗಿನ ಜಾವದ ವರೆಗೆ ಎಲ್ಲಿಯಾದರೂ ಆಸರೆ ಸಿಕ್ಕರೆ ಸಿಗಲಿ ಎಂದು ಯೋಚಿಸುತ್ತ ಮುನ್ನಡೆದರು, ಆದರೆ ಅಷ್ಟರಲ್ಲೇ ಅವರ ಹಿಂದಿನಿಂದಲೇ ಶಾಸಕಿ ಕಮಲಾಬಾಯಿ ಅವರನ್ನು ಕೂಗುತ್ತ, ಅಳುತ್ತ ಧಾವಿಸಿಬರುತ್ತಿದ್ದರು. ಅವರ ಹಿಂದೆಯೇ ಇನ್ನು ಮೂರು ನಾಲ್ಕು ಜನ. ಇವರೆಲ್ಲ ಹೇಗೆ ಪಾರಾದರೆಂಬುದೇ ಒಂದು ವಿಚಿತ್ರ ಯೋಗಾಯೋಗ. ಗೋಕುಲಸಿಂಹ ಹೊರ ಜಿಗಿದ ನಂತರ ಒಳಗಿನವರಾರೋ ಜೀಪಿನ ಬಾಗಿಲು ತೆರೆಯಲು ಯತ್ನಿಸಿದರಾದರೂ ಆಗಲಿಲ್ಲ. ಅದೇ ಕ್ಷಣಕ್ಕೆ ನೀರು ಬಲವಾಗಿ ಜೀಪಿನಲ್ಲಿ ನುಗ್ಗಿದ್ದರಿಂದ ಜೀಪು ತೇಲತೊಡಗಿತು. ನೀರಿನ ರಭಸಕ್ಕೆಯೇ ಅದು ದಂಡೆಯ ಕಡೆಗೆ ತಳ್ಳಲ್ಪಟ್ಟು ಒಂದು ಕಂಟಿಯಲ್ಲಿ ಸಿಕ್ಕು ಬಿತ್ತು. ಅಲ್ಲಿ ಮಾತ್ರ, ನೀರು ಸ್ವಲ್ಪವೇ ಇದ್ದುದರಿಂದ ಒಳಗಿನವರೆಲ್ಲ

ಹೊರಕ್ಕೆ ಇಳಿದುಬಂದರು. ಅವರೆಲ್ಲ ಈಗ ಗೋಕುಲಸಿಂಹರ ಕಡೆ ಧಾವಿಸುತ್ತಿದ್ದರು. ಇಷ್ಟೆಲ್ಲ ನಡೆದುಹೋದದ್ದು ಒಂದೆರಡು ನಿಮಿಷಗಳಲ್ಲೇ.

ಈ ಇಡೀ ಘಟನೆ ನಡೆಯುತ್ತಿದ್ದಂತೆಯೇ ಅವಂತಿ ನನ್ನ ಮನೆಯಲ್ಲಿ ನನಗೆ ಅಲ್ಲಿ ನಡೆವ ಪ್ರತಿ ವಿದ್ಯಮಾನದ ವೀಕ್ಷಕ ವಿವರಣೆ– ರನ್ನಿಂಗ್ ಕಾಮೆಂಟ್ರಿ– ನೀಡುತ್ತಿದ್ದಳು. ಅನಂತರ, "ನಿಮ್ಮ ಬೀಗನನ್ನು ನಾನೀಗ ರಕ್ಷಿಸಿದೆ," ಎಂದು ಹೇಳಿ ಮಾಯವಾದಳು. ಮುಂದೆ ಗೋಕುಲಸಿಂಹ ಭೇಟಿಯಾದಾಗ ನಾನು ನನಗೆ ಅವಂತಿಯಿಂದ ಅಂದಿನ ಘಟನೆಯ ಬಗ್ಗೆ ತಿಳಿದದ್ದೆಲ್ಲವನ್ನೂ ಹೇಳಿದಾಗ ಅವರಿಗೆ ನಿಜಕ್ಕೂ ಆಶ್ಚರ್ಯವಾಯಿತು. "ನಿಜಕ್ಕೂ ಅಂದು ನಾನೆಷ್ಟು ದೂರ ಜಿಗಿದಿದ್ದೆನೆಂಬುದರ ಕಲ್ಪನೆಯೇ ನನಗಿರಲಿಲ್ಲ. ಮಾರನೇದಿನ ಬೆಳಿಗ್ಗೆ ನೋಡಿದಾಗ ನಾನು ಇಷ್ಟು ಉದ್ದ ಜಿಗಿಯಬಲ್ಲೆನೇ ಎಂದು ನನಗೇ ಆಶ್ಚರ್ಯವಾಯಿತು. ಇದು ನನ್ನ ಶಕ್ತಿಗೆ ನಿಲುಕುವ ಮಾತಲ್ಲ. ಯಾವುದೋ ಅತಿಮಾನುಷ ಶಕ್ತಿಯೇ ನನ್ನಿಂದಿದನ್ನು ಮಾಡಿಸಿರಬೇಕು" ಎಂದು ಉದ್ಗರಿಸಿದರು.

ಗೋಕುಲಸಿಂಹರಿಗೆ ಇಂತು ಬಂದ ಆಪತ್ತಿನ ನಿವಾರಣೆಯ ನಂತರ ಅವಂತಿಯ ಬಗ್ಗೆ ನಮಗಾರಿಗೂ ಸಂಶಯವೇ ಉಳಿಯಲಿಲ್ಲ. ಅವಳಿಂದ ನಮಗೆಲ್ಲ ಆಗಾಗ ಸಹಾಯವೇ ಆಗುತ್ತಿತ್ತೇ ಹೊರತು ಯಾವ ತೊಂದರೆಯೂ ಆಗಿಲ್ಲ. ಅವಳ ಪರಿಚಯವಾಗುವುದಕ್ಕಿಂತಲೂ ಮುಂಚಿನಿಂದಲೂ ನನಗೆ ಇರುವ ಒಂದು ತೊಂದರೆಯನ್ನು ನಿವಾರಿಸಲು ಆಕೆಗೆ ಆಗಿಲ್ಲ, ಇಲ್ಲವೆ ಆಕೆ ನಿವಾರಿಸಿಲ್ಲವೆನ್ನಬೇಕು, ಅದೇ ನನಗೆ ಆಗೀಗ ಎಚ್ಚರತಪ್ಪುವ ವಿಷಯ. ಇದರ ಬಗ್ಗೆ ನಾನು ಪರೇಡ್ ಮತ್ತು ಬಿ ನಗರದಲ್ಲಿ ಅನೇಕ ಡಾಕ್ಟರಿಗೆ ತೋರಿಸಿದ್ದೇನಾದರೂ ಪ್ರಯೋಜನವಾಗಿಲ್ಲ. ಅವಂತಿ ಡಾಕ್ಟರರ ಚಿಕಿತ್ಸೆಯನ್ನು ಮುಂದುವರಿಸಲು ಹೇಳಿದಳು. ಒಂದು ದಿನ ಆಕೆ ಒಬ್ಬ ವಿಶಿಷ್ಟ ಡಾಕ್ಟರರ ಹೆಸರು ಸೂಚಿಸಿ ಅವರಿಗೆ ತೋರಿಸುವುದು ವಿಹಿತವೆಂದು ಹೇಳಿದಳು. ಆ ವ್ಯಕ್ತಿ ಮುಂಬಯಿಯ ಡಾ. ವಾಹಿಯಾ. ಅದು ವರೆಗೆ ನಾನು ಅವರ ಹೆಸರನ್ನೇ ಕೇಳಿರಲಿಲ್ಲ. ನನ್ನ ಹಿರಿಯಣ್ಣನೊಂದಿಗೆ ಮುಂಬಯಿಗೆ ಹೋಗಿ ಅವರನ್ನು ಕಂಡೆ. ಆಗಲೇ ನನಗೆ ತಿಳಿದದ್ದು –ಅವರು ಭಾರತದಲ್ಲಿಯ ಅಗ್ರಗಣ್ಯ, ಮಾನಸಿಕ ರೋಗ ತಜ್ಞರೆಂದು. ಇವರ ಸೂಚನೆಯಂತೆ ಅಲ್ಲಿಯ ಕೆ. ಇ. ಎಂ. ಆಸ್ಪತ್ರೆಯಲ್ಲಿ ಸುಮಾರು ಮೂರು ವಾರ ಇದ್ದೆ. ಅವರಿಗೆ ಅವಂತಿಯ ಬಗೆಗಿನ ಎಲ್ಲ ವಿಷಯವನ್ನೂ ಪೂರ್ತಿ ವಿವರಿಸಿ ಹೇಳಿದ್ದೇನೆ. ಅವರು ಅತ್ಯಂತ ಸಹಾನುಭೂತಿಯಿಂದ ಎಲ್ಲವನ್ನೂ ಕೇಳಿಕೊಂಡದಲ್ಲದೆ ತಮ್ಮ ಶಾಸ್ತ್ರದ ಪ್ರಕಾರ ಎಲ್ಲವನ್ನೂ ಶೋಧಿಸಲು ಪ್ರಯತ್ನಿಸಿದರು. ಆದರೆ ಅವರಿಗೆ ಅವಂತಿಯನ್ನು ಶೋಧಿಸಲು ಆಗಲಿಲ್ಲ, ಹಾಗೂ ನಾನು ಇದ್ದಕ್ಕಿದ್ದಂತೆ ಎಚ್ಚರತಪ್ಪುವುದೇಕೆಂದೂ ಅವರಿಗೆ ಅರ್ಥವಾಗಲಿಲ್ಲ. ಆಗಿನಿಂದ ನಾನು ಇದಕ್ಕಾಗಿ ಡಾಕ್ಟರನ್ನು ಕಾಣುವುದನ್ನೇ ನಿಲ್ಲಿಸಿಬಿಟ್ಟಿದ್ದೇನೆ.

ಅವಂತಿ ತಾನು ಒಂಬತ್ತು ಜನ್ಮಗಳ ಹಿಂದಿನ ನನ್ನ ಪತಿಯೆಂದೂ ಆಗ ನಾನು ಪೈಠಣದ ಬೇಲಮಾಠಕ ಎಂಬ ಬ್ರಾಹ್ಮಣ ಮನೆತನಕ್ಕೆ ಸೇರಿದ್ದೆನೆಂದೂ ಹೇಳಿದ್ದಳಷ್ಟೆ. ನಾನು ಪೈಠಣಕ್ಕೆ ಹೋಗಿ ವಿಚಾರಿಸಿದಾಗ ಅಲ್ಲಿ ಬೇಲಮಾಠಕ ಎಂಬ ಅಡ್ಡ ಹೆಸರಿನ ಅನೇಕ ಬ್ರಾಹ್ಮಣ ಮನೆತನಗಳಿವೆ. ಅವು ಬಹಳ ಹಳೆಯ ಮನೆತನಗಳೆಂದು ಹೇಳುತ್ತಾರೆ. ಆದರೆ ಇದಕ್ಕಿಂತ ಹೆಚ್ಚಿನ ಕುಲವೃತ್ತಾಂತ ನನಗೆ ದೊರೆಯಲಿಲ್ಲ. ೧೦೦೦ ವರ್ಷ ಹಿಂದಿನ ಮನೆತನದ ವೃತ್ತಾಂತವನ್ನು ಪಡೆಯುವುದು ಅದೆಷ್ಟು ಕಷ್ಟತಮವೆಂಬುದು ಅರಿವಾಗಿ ನಾನು ಮುಂದೆ ಆ ಪ್ರಯತ್ನಕ್ಕೆ ಪೂರ್ಣವಿರಾಮ ಹೇಳಿದೆ.

ಅವಂತಿಯು ಹೇಳಿಯಂತೆ ಕಳೆದ ಅಂದರೆ ವಿಶ್ವಂಭರ ಬೇಲಮಾಠಕನಾಗಿದ್ದಾಗಿನಿಂದ ಇಲ್ಲಿಯ ವರೆಗಿನ ಜನ್ಮಗಳನ್ನು ಗಣನೆಗೆ ತೆಗೆದುಕೊಂಡರೆ ನಾನು ಎಂಟನೆಯ ಜನ್ಮದಲ್ಲಿ ಬ್ರಾಹ್ಮಣನಾಗಿಯೇ ಹುಟ್ಟಿದ್ದೆ. ಈಗಿನ ಅಂದರೆ

ಒಂಭತ್ತನೆಯ ಜನ್ಮದಲ್ಲಿ ರಾಠೋಡ ರಾಜಪುತ ಮನೆತನದಲ್ಲಿ ಜನ್ಮತಾಳಿದಿದ್ದೇನೆ. ನನ್ನ ಕಳೆದ ಜನ್ಮದ ಬಗ್ಗೆಯಾಗಲಿ ಅದಕ್ಕೂ ಹಿಂದಿನ ಜನ್ಮಗಳಲ್ಲಾಗಲಿ ನಾನೇನೇನಾಗಿದ್ದೆ, ಎಲ್ಲಿದ್ದೆ ಮುಂತಾದ ಯಾವ ವಿವರಗಳನ್ನೂ ಅವಳು ಹೇಳಿಲ್ಲ, ನಾನು ಕೇಳಿಲ್ಲ, ಕೇಳುವುದೂ ಇಲ್ಲ. ನನ್ನೆಡೆ ಬರುವ ಅನೇಕರು ಅನೇಕ ಕುತೂಹಲಕರ ಪ್ರಶ್ನೆಗಳನ್ನು ಆಕೆಗೆ ಕೇಳುವಂತೆ ನನಗೆ ಸೂಚಿಸುತ್ತಲೇ ಇದ್ದಾರೆ. ಆದರೆ ಹಾಗೆ ಮಾಡುವುದು ಅಧಿಕ ಪ್ರಸಂಗವೆನಿಸೀತೆಂದು ನಾನು ನಾನಾಗಿಯೇ ಅವಳನ್ನೇನೂ ಕೇಳುವುದಿಲ್ಲ. ಅವಳು ತಾನಾಗಿ ಹೇಳಿದ್ದನ್ನು ಮಾತ್ರ ಕೇಳಿ ನೆನಪಿನಲ್ಲಿಟ್ಟುಕೊಳ್ಳುತ್ತೇನೆ. ನಾನೊಬ್ಬ ಸಾಮಾನ್ಯ ಮನುಷ್ಯ. ಪತ್ರಕರ್ತರಿಗೆ ಸಾಮಾನ್ಯವಾಗಿರುವ ತೆರನ ಕುತೂಹಲ ನನ್ನಲ್ಲೂ ಇರಲೇಬೇಕೆಂದೇನೂ ಇಲ್ಲ. ಆದರೆ ನಿಮ್ಮಂಥ ಜಿಜ್ಞಾಸುಗಳಿಗೆ ಈ ವಿಷಯದಲ್ಲಿ ಆಕೆಯೊಂದಿಗೆ ಸಂಪರ್ಕ ಬೆಳೆಸಲು ಸಾಧ್ಯವಾಗುವಂತಿದ್ದರೆ ಅದಕ್ಕೆ ನನ್ನಿಂದಾದ ಸಹಾಯ ಸಲ್ಲಿಸಲು ಸಿದ್ಧ. ಆದರೆ ಇಲ್ಲಿಯ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚಲು ನಾನು ಸಮರ್ಥನಲ್ಲ. ತಾನು ಒಂಭತ್ತು ಜನ್ಮಗಳ ಹಿಂದಿನ ನನ್ನ ಪತ್ನಿಯೆಂದು ಆಕೆ ಹೇಳಿದ್ದಾಳೆ. ಆಕೆಯ ಮಾತುಗಳನ್ನು ನಾನು ನಂಬುತ್ತೇನೆ. ಆಕೆಯ ಮಾತು ನಿಜವೇ ಹೇಗೆಂಬ ಬಗ್ಗೆ ನಾನು ತಲೆಕೆಡಿಸಿಕೊಂಡಿಲ್ಲ. ಒಂದು ವೇಳೆ ನಿಜವಾಗಿರದಿದ್ದರೂ ನಾನೇನು ಮಾಡಬಲ್ಲೆ? ಆಕೆ ನಮ್ಮೆಲ್ಲರ ವಿಶ್ವಾಸಕ್ಕೆ ಪಾತ್ರಳಾಗಿದ್ದಾಳೆ. ಕಳೆದ ೧೮ ವರ್ಷಗಳಲ್ಲಿ ಅವಳು ನನ್ನೊಡನೆ ನಮ್ಮ ಕುಟುಂಬದೊಂದಿಗೆ ಆತ್ಮೀಯ ಸದಸ್ಯ

ಳಂತೇ ಇದ್ದುಬಿಟ್ಟಿದ್ದಾಳೆ. ತನ್ನ ಮನಸ್ಸಿಗೆ ಬಂದಾಗ ಬರುತ್ತಾಳೆ. ನನ್ನೊಡನೆ ಹರಟೆ ಹೊಡೆಯುತ್ತಾಳೆ. ಮುಂದೆ ಸಂಭವಿಸ ಬಹುದಾದ ಸಂಕಟಗಳ ಬಗ್ಗೆ, ಘಟನೆಗಳ ಕುರಿತು ಒಮ್ಮೊಮ್ಮೆ ಹೇಳುತ್ತಾಳಲ್ಲದೆ ಅವು ಗಳನ್ನು ತಾನು ನಿವಾರಿಸುವುದಾಗಿಯೂ ಆಶ್ವಾಸನ ನೀಡುತ್ತಾಳೆ. ನನ್ನನ್ನು ಆಕೆ ಕಂಡ ಮೊದಮೊದಲಲ್ಲಿ ಸಂಸ್ಕೃತಪ್ರಧಾನವಾದ ಹರಕು ಮುರುಕು ಮರಾಠಿಯಲ್ಲಿ ಮಾತಾಡು ತ್ತಿದ್ದಳು. ಅನಂತರ ಉತ್ತಮ ಖಾನದೇಶೀ ಮರಾಠಿಯನ್ನೇ ಮಾತಾಡುತ್ತಿದ್ದಾಳೆ. ನನ್ನ ಅಣ್ಣನೊಂದಿಗೆ ಉತ್ತಮ ಇಂಗ್ಲೀಷಿನಲ್ಲಿ ಮಾತಾಡುತ್ತಾಳೆ. ಒಮ್ಮೊಮ್ಮೆ ಆಕೆ ಪಪ್ಪಾಕುವರ ಳೊಡನೆ ಮಾತಾಡಿ ಹೊರಟುಹೋಗುತ್ತಾಳೆ.

ಆದರೆ ಈ ಪ್ರಕರಣ ಯಾವಾಗ ಮುಗಿ ಯುವುದೆಂದು ನನಗೆ ಗೊತ್ತಿಲ್ಲ. ಆದರೆ, "ನೀವು ಬದುಕಿರುವಷ್ಟು ಕಾಲವೂ ನಿಮಗೆ ರಕ್ಷೆಯಾಗಿರು ತ್ತೇನೆ" ಎಂದು ಆಕೆ ನನಗೆ ಅನೇಕ ಸಲ ಹೇಳಿ ದ್ದಾಳೆ. ಅವಳ ಮಾತನ್ನು ನಾನಂತೂ ಸಂಪೂರ್ಣ ನಂಬುತ್ತೇನೆ.

ವಾಡೆಯ ಬಳಿಯ ಆ ಮರದ ಬಳಿ ಬರು ವಂತೆ ಅವಳು ನನ್ನನ್ನು ಒತ್ತಾಯಿಸಿದ್ದಾಳೆ – ಅನೇಕ ಸಲ. ಅವಳು ನನಗೆ ಎಲ್ಲಿಯೇ ಆಗಲಿ ಎಷ್ಟು ಅಹಿತ ಮಾಡಲಾರಳೆಂಬುದು ನನಗೆ ಗೊತ್ತು. ಆದರೂ ಆ ಮರದ ಬಳಿಯೇ ಬಾರೆಂದು ಅವಳೇಕೆ ಕರೆಯುತ್ತಾಳೆಂದು ಅವ ಳನ್ನು ಕೇಳಬೇಕೆಂದು ನನಗೆಂದೂ ಅನಿಸಿಲ್ಲ; ಆ ಮರದ ಬಗ್ಗೆ ಮಾತ್ರ ನನಗೇಕೋ ಭಯವಾಗುತ್ತದೆ. ಅದೇಕೆಂದು ಅವಳೂ ನನ ಗೆಂದೂ ಸ್ಪಷ್ಟವಾಗಿ ಹೇಳಿಲ್ಲ.

ಆರು

'ಅವಂತಿ' ಪ್ರಕರಣವನ್ನು ಮೊದಲು ಪ್ರಕಟಿ ಸಿದ್ದು ನಮ್ಮ ಪತ್ರಿಕೆ ('ತರುಣ ಭಾರತ'– ಪುಣೆ–ನಾಗಪುರಗಳಿಂದ ಏಕಕಾಲಕ್ಕೆ ಪ್ರಕಟ ವಾಗುತ್ತಿರುವ ಮರಾಠಿ ದಿನಪತ್ರಿಕೆ). ಅದು ೧೧ ವರ್ಷಗಳ ಹಿಂದೆ. ಅವಂತಿಯು ಕರ್ಮ ಭೂಮಿಯಾದ ಸರಾಳೆಗೆ ಹೋಗಿ ಬರಬೇಕೆಂದು ನಮ್ಮ ಮನಸ್ಸಿನಲ್ಲಿ ಮೊದಲಿನಿಂದಲೇ ಇತ್ತಾದರೂ ಆ ಯೋಗ ಈಗ ಒದಗಿಬಂದಿತ್ತು. ಗೋಪಾಲ ಸಿಂಹನ ಅಣ್ಣ ಸರದಾರಸಿಂಹ(ಅವರನ್ನು ದಾದಾ ಸಾಹೇಬ ಎಂದೂ ಕರೆಯುತ್ತಾರೆ)ರೂ ಅಲ್ಲಿರು ವರೆಂದು ತಿಳಿದಿತ್ತು. ಇಬ್ಬರನ್ನೂ ಕಂಡು ಬರಲು ಹೊರಟೆವು – ನಾನು ಮತ್ತು ನನ್ನ ಸಹೋದ್ಯೋಗಿ ಇಬ್ಬರೂ. ನಾವು ಹೋಗಿ ನಮ್ಮನ್ನು ಪರಿಚಯಿಸಿಕೊಂಡಾಗ ೧೧ ವರ್ಷಗಳ ನಂತರವೂ ಈ ವಿಷಯ ನಮ್ಮ ನೆನಪಿನಲ್ಲಿರ ಯಲ್ಲವೆಂದು ಅವರಿಬ್ಬರೂ ಆಶ್ಚರ್ಯಪಟ್ಟರು.

ಉಭಯಕುಶಲೋಪರಿ ಮತ್ತು ಚಹ ಪಾನದ ನಂತರ ದಾದಾಸಾಹೇಬರೇ ಮಾತ ಪ್ರಾರಂಭಿಸಿದರು. "ದೈನಿಕ 'ತರುಣ ಭಾರತ ದಲ್ಲಿ 'ಅವಂತೀಮಾತಾ' ಪ್ರಕಟವಾದ ನಂತ ಅವಂತಿಗೂ ನಮ್ಮ ಮನೆತನಕ್ಕೂ ಭಾ ಪ್ರಸಿದ್ಧಿ ಬಂದುಬಿಟ್ಟಿತು. ಅವರಿಂದಾಗಿ ನಿತ್ ನೂರಾರು ಪತ್ರಗಳು ನಮಗೆ ಬರತೊಡಗಿದವು ಅವರಿಂದ ನಮಗೆ ಯಾವುದೇ ಪ್ರಯೋಜ ವಾಗದೆ ಅವುಗಳನ್ನು ಓದುವುದೇ ಒಂದ ಸಮಸ್ಯೆಯಾಗತೊಡಗಿತು. ಮೊದಮೊದಲ ಅವುಗಳನ್ನು ಬಂದ ಬಂದಂತೆ ಒಂದು ಟ್ರಂ ನಲ್ಲಿ ತುಂಬಿ ಇಡಲಾರಂಭಿಸಿದರೆ ಅನೂ ಸಾ ದಂತಾಗಿ ಕೊನೆಗೆ ದೊಡ್ಡ ಪೀಪಾಯಿಯಲ್ಲ ಅವುಗಳನ್ನು ತುಂಬಿ ಇಡತೊಡಗಿದೆವು ಪ್ರಾರಂಭದಲ್ಲಿ ಎಲ್ಲ ಪತ್ರಗಳನ್ನೂ ಓದುತ್ತಿದ್ದ ಮುಂದೆ ಅಲ್ಲೊಂದು ಇಲ್ಲೊಂದು ಪತ್ರದ ಮೇ ಕಣ್ಣು ಹಾಯಿಸುವುದು ಮಾತ್ರ ಸಾಧ್ಯವಾ ತೊಡಗಿತು. ಪತ್ರಗಳಿಗೆ ಉತ್ತರ ಬರೆಯಬೇ ನಿಸಿದರೂ ಅದು ವ್ಯವಹಾರತಃ ಅಶಕ್ಯವಾಗಿತು ಅಪರೂಪಕ್ಕೆ ಮಾತ್ರ ಒಂದೊಂದು ಸ ಯಾರಿಗೋ ಉತ್ತರ ಹಾಕುತ್ತಿದ್ದೆವು."

"ಇಷ್ಟೊಂದು ಪತ್ರಗಳಲ್ಲಿ ಇರುತ್ತಿತಾ ದರೂ ಏನು?" ನಾನು ಕೇಳಿದೆ.

"ಜನರ ಮೇಲೆ ಅವಂತಿಯ ಪ್ರಕರಣ ಪ್ರಭಾವ ಗಾಢವಾಗಿದೆಯೆಂಬ ಮಾತ್ರ ಅ

ಗಳಿಂದ ಎದ್ದುಕಾಣುತ್ತದೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಕೆಲವು ಪತ್ರಗಳಲ್ಲಿ ಆಧ್ಯಾತ್ಮ, ರಾಜಕಾರಣ, ಭವಿಷ್ಯ, ಮುಂತಾದವುಗಳ ಬಗ್ಗೆ ಅಭ್ಯಾಸಪೂರ್ಣ ಪ್ರಶ್ನೆಗಳಿರುತ್ತಿದ್ದರೆ ಸುಮಾರು ನೂರಕ್ಕೆ ೮೫ಕ್ಕಿಂತ ಹೆಚ್ಚಿನವುಗಳಲ್ಲಿ ರೇಸು, ಮಟ್ಕಾ ಮತ್ತು ಲಾಟರಿ ನಂಬರುಗಳ ಬಗ್ಗೆ ಕೇಳಿರಲಾಗುತ್ತಿತ್ತೆಂಬುದು ನನಗೆ ತೀವ್ರ ಬೇಸರವನ್ನುಂಟುಮಾಡಿತು," ಎಂದರು ಬಾಪೂ ಸಾಹೇಬರು.

ಈ ಹಂತದಲ್ಲಿ ವಿಷಯ ಬದಲಿಸಲೆಂದು ನಾನು ದಾದಾಸಾಹೇಬರ ಗಮನವನ್ನು ಬೇರೆಡೆ ಸೆಳೆಯಲೆತ್ನಿಸಿದೆ. "೧೯೭೧ರಲ್ಲಿ ಪ್ರಕಟವಾದ ಲೇಖನಮಾಲೆಯನ್ನು ನೀವು ಓದಿದ್ದೀರಿ. ಅನಂತರವೂ ಅವಂತಿಗೆ ಸಂಬಂಧಿಸಿದಂತೆ ಉಲ್ಲೇಖನೀಯ ಘಟನೆಗಳೇನಾದರೂ ನಡೆದವೆ?"

"ಖಂಡಿತ ನಡೆದಿವೆ," ಎಂದರು ದಾದಾಸಾಹೇಬ. "ಆದರೆ ಇವುಗಳಲ್ಲಿ ಕೆಲವು ತುಂಬ ಲೋಮಹರ್ಷಕಾರಿಯಾಗಿದ್ದರೆ ಮತ್ತೆ ಹಲವು ಸ್ವಲ್ಪ ಕಡಿಮೆ ಪ್ರಮಾಣದವು. ಒಂದೆರಡನ್ನು ಮಾತ್ರ ಇಲ್ಲಿ ಹೇಳುತ್ತೇನೆ....ಇದು ನಡೆದದ್ದು ಯಾವ ವರ್ಷವೆಂದು ನೆನಪಿಲ್ಲ. ನಾವು ಆಗ ನಮ್ಮ ಹೊಲದಲ್ಲಿ ಗಿರಣಿ ಹಾಕಿದ್ದೆವು. ಆದ್ದರಿಂದ ಅಲ್ಲಿ ಸತ್ಯನಾರಾಯಣ ಪೂಜೆಯನ್ನು ಹಮ್ಮಿಕೊಂಡಿದ್ದೆವು. ಅಂದೇ ಬೆಳಿಗ್ಗೆ ಅವಂತಿ ಬಂದವಳೆ ಹೊಲದಲ್ಲಿ ಅಂದು ಪೂಜೆ ಬೇಡವೆಂದು ಹೇಳಿದಳು. ಆದರೆ ನಾನೋ ಆಗಲೇ ಆ ಬಗ್ಗೆ ನಿರ್ಧಾರ ಮಾಡಿ ನಮ್ಮ ಬಂಧುಬಳಗಕ್ಕೂ ಮಿತ್ರ ಪರಿವಾರಕ್ಕೂ ಆಮಂತ್ರಣ ಕಳಿಸಿ ಅವರೆಲ್ಲ ಮನೆಗೆ ಬಂದಾಗಿತ್ತು. ಅಸಹಾಯ ಸ್ಥಿತಿಯಲ್ಲಿದ್ದ ನನ್ನ ಅವಸ್ಥೆಯನ್ನು ಕಂಡು ಆಕೆ 'ಒಳ್ಳೇದು' ಎಂದು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಗೆಯಿತ್ತಳು. ಆ ಮಧ್ಯಾಹ್ನ ನಮ್ಮ ತಂಗಿ ಹೀರಾದೇವಿಯ ಲಂಗ ಗಿರಣಿಯ ಪಟ್ಟಾದಲ್ಲಿ ಸಿಕ್ಕು ಆಕೆ ತೀವ್ರ ಗಾಯಗೊಂಡಳು. ತಕ್ಷಣ ಅವಂತಿ ಬಂದವಳೆ, 'ಆಕೆಯನ್ನು ಈಗಿಂದೀಗಲೇ ನಾಲೆಯ ಆಚೆಗೆ ಕರೆದುಕೊಂಡು ಹೋಗಿಬಿಡಿ. ಎಷ್ಟೂ ವಿಳಂಬ ಬೇಡ,' ಎಂದು ಎಚ್ಚರಿಸಿದಳು. ನಾನು ತಂಗಿಯನ್ನು ಕುದುರೆಯ ಮೇಲೆ ಹಾಕಿಕೊಂಡು ನಾಲೆಯನ್ನು ದಾಟಿ ಹೋಗುವಷ್ಟರಲ್ಲೇ ನಾಲೆಯಲ್ಲಿ ದೈತ್ಯ ಪ್ರಮಾಣದಲ್ಲಿ ನೀರು ಹರಿಯತೊಡಗಿತು. ನೆರೆದವರೆಲ್ಲ ನೋಡ ನೋಡುವಷ್ಟರಲ್ಲೇ ಅಲ್ಲಿ ಸಾಮಾನ್ಯವಾಗಿ ಎರಡಡಿಯಷ್ಟು ಆಳವಾಗಿರುತ್ತಿದ್ದ ನೀರು ಎರಡಾಳಿಗೆ ಏರಿ ಎಲ್ಲರನ್ನೂ ಭಯಾಶ್ಚರ್ಯಗಳಿಂದ ಕಂಗೆಡಿಸಿತು. ಹೀರಾದೇವಿಗೆ ಸಕಾಲದಲ್ಲಿ ಚಿಕಿತ್ಸೆ ಸಿಕ್ಕು ಆಕೆ ಕೆಲ ದಿನಗಳಲ್ಲೇ ಪೂರ್ಣ ಆರೋಗ್ಯವನ್ನು ಮರಳಿ ಪಡೆದಳು.

"ಅದೋ, ಅಲ್ಲಿ ಒಂದು ಹಾಳು ಮನೆ ಕಾಣುತ್ತದಲ್ಲ. ಅದನ್ನು ನಾನು ಕೊಂಡುಕೊಂಡಿದ್ದೆ – ಅಲ್ಲಿ ಮನೆ ಕಟ್ಟಬೇಕೆಂಬ ಆಶಯದಿಂದ. ಆಗ ಅವಂತಿ ಅಲ್ಲಿಯ ಒಂದು ಭಾಗವನ್ನು ತೋರಿಸಿ ಅಲ್ಲಿ ಮಾತ್ರ ಕಟ್ಟಬೇಡವೆಂದು ಎಚ್ಚರಿಸಿದಳು. ಅಷ್ಟನ್ನು ಬಿಟ್ಟು ಮನೆಯನ್ನೇನೊ ಹೇಗೋ ಕಟ್ಟಿಸಿದೆ. ಹಾಳುಬಿದ್ದ ಆ ಜಾಗದಲ್ಲಿ ದನಗಳನ್ನು ಮಾತ್ರ ಕಟ್ಟತೊಡಗಿದೆನು. ಆದರೆ ಆಶ್ಚರ್ಯವೆಂದರೆ ಆ ಸದೃಢ ದನಗಳೆಲ್ಲ ಏಕಾಏಕೀ ಸತ್ತುಹೋದವು. ಅವುಗಳ ಸಾವಿಗೆ ಕಾರಣವೇನೆಂದು ಮಾತ್ರ ಏನು ಮಾಡಿದರೂ ತಿಳಿಯಲಿಲ್ಲ. ಅಲ್ಲಿ ದನ ಕಟ್ಟುವುದನ್ನು ನಿಲ್ಲಿಸಿದ ನಂತರ ಎಲ್ಲವೂ ಸುರಳೀತ ನಡೆಯಿತು.

"೧೯೭೩–೭೪ರಲ್ಲಿಯ ಒಂದು ಘಟನೆಯನ್ನು ಹೇಳಲೇಬೇಕು. ಆಗ ನಾವೊಂದು ದೊಡ್ಡ ಭಾವಿಯನ್ನು ತೋಡಿಸುತ್ತಿದ್ದೆವು. ಅದರ ವ್ಯಾಸ ೨೫ ಅಡಿ. ಸುಮಾರು ೩೧ ಅಡಿ ಆಳ ತೋಡಿದಾಗ ತಳದಲ್ಲಿ ಕರಿ ಕಲ್ಲಿನ ಥರ ಹತ್ತಿತ್ತು. ಸುರಂಗ ಹಚ್ಚಿ ಕಲ್ಲು ಹಾರಿಸುವ ಕಾರ್ಯಕ್ಕೆ ಅಣಿಮಾಡಿಕೊಳ್ಳುತ್ತಿದ್ದಂತೆಯೇ ನಾನು ದಂಡೆಯ ಮೇಲೆ ನಿಂತು ಬಗ್ಗಿ ನೋಡುತ್ತಿದ್ದೆ. ಒಂದೇ ಒಂದು ಕ್ಷಣ ಕಣ್ಣಿಗೆ ಕತ್ತಲು ಕವಿದು ಜೋಲಿ ತಪ್ಪಿತು. ಮರುನಿಮಿಷವೇ ನಾನು ೩೧ ಅಡಿ ಆಳದಲ್ಲಿ ಕಲ್ಲು ಫರಸಿಯ ಮೇಲೆ ನೇರವಾಗಿಯೇ ನಿಂತಿದ್ದೆ. ನಾನು ಮೇಲಿನಿಂದ ಕೆಳಗಡೆ ಪೂರ್ವಸೂಚನೆಯಿಲ್ಲದೆ ಬೀಳು

ತ್ತಿದ್ದುದನ್ನು ಕಂಡು ಒಳಗಿದ್ದವರು ಭಯದಿಂದ ಕಣ್ಣು ಮುಚ್ಚಿಕೊಂಡರು. ಒಬ್ಬ ಕೆಲಸಗಾರ ನಂತೂ ನಾನು ಸತ್ತೆನೆಂದು ಭಾವಿಸಿ ದೊಡ್ಡ ದನಿಯಲ್ಲಿ ಕೂಗಿಕೊಂಡನು; ಆದರೆ ನಾನು ಸುರಕ್ಷಿತವಾಗಿಯೇ ನಿಂತುದನ್ನು ಕಂಡು ಆತ ಕೈ ಮುಗಿದನು, 'ಸಾಹೇಬರೆ, ಇನ್ನೊಮ್ಮೆ ಹೀಗೆ ಜಿಗಿಯಬೇಡಿರಿ' ಎಂದನು."

ಈಗ ನಡುವೆಯೇ ಬಾಯಿ ಹಾಕಿ ಬಾಪೂ ಸಾಹೇಬರು ಇನ್ನೊಂದು ಘಟನೆಯನ್ನು ಹೇಳಿದರು: "ನಮ್ಮ ಅಕ್ಕನ ಮಗಳು ಸುಮ್ಮ ಪಾಸನವ ಎಂಬ ಊರಲ್ಲಿ ಎರಡನೆಯ ಮಜಲಿನಿಂದ ಕೆಳಕ್ಕೆ ಬಿದ್ದಳಾದರೂ ಅವಳನ್ನು ತಾನು ರಕ್ಷಿಸಿರುವುದಾಗಿ ಅವಂತಿ ಹೇಳಿದಳು. ನಂತರ ಅಲ್ಲಿಂದ ಬಂದ ಸುದ್ದಿಯಿಂದ ಈ ಸಂಗತಿ ಅಕ್ಷರಶಃ ಸತ್ಯವೆಂದು ತಿಳಿದುಬಂತು. ಈಗ ಕೊನೆಯದಾಗಿ ನಿಮಗೆ ಹೇಳಬೇಕಾದ ಒಂದು ಸಂಗತಿಯಿದೆ. ೧೯೭೩-೭೪ರಲ್ಲಿ ನಮ್ಮ ತಾಯಿಯವರ ಆರೋಗ್ಯ ಸರಿಯಿರಲಿಲ್ಲ. ಆಗ ಆ ಬಗ್ಗೆ ಅವಂತಿಯನ್ನು ಕೇಳಿದೆ. 'ಅವರ ಬಗ್ಗೆ ಹೆಚ್ಚು ಲಕ್ಷ್ಯ ಕೊಡುವ ಅಗತ್ಯ ಇಲ್ಲ, ಆದರೆ ತಂದೆಯವರ ಕಡೆಗೆ ವಿಶೇಷ ಗಮನವಿರಲಿ,' ಎಂದು ಹೇಳಿದಳು. ಮುಂದಿನ ಎರಡೇ ದಿನಗಳಲ್ಲಿ ತಾಯಿ ಸ್ವರ್ಗಸ್ಥರಾದರು. ಅನಂತರ ಆರು ವರ್ಷ ತಂದೆಯವರ ಆರೋಗ್ಯ ಸರಿಯಿರಲಿಲ್ಲವಾದ್ದರಿಂದ ಆ ಬಗ್ಗೆಯೇ ನಾವೆಲ್ಲ ವಿಶೇಷ ಗಮನವಿತ್ತು ಶುಶ್ರೂಷೆ ಮಾಡಿದೆವು. ಕೊನೆಗೆ ೧೯೮೦ರ ಸಪ್ಟೆಂಬರ್ ೧೫ರಂದು ಅವರೂ ಇಹಲೋಕ ತ್ಯಜಿಸಿದರು.

೬

ನಮ್ಮ ಸಕರಾಳೆ ವಾಸ್ತವ್ಯ ಮುಗಿಯುಬಂದಿತ್ತು. ಅವಂತಿ ಕಥೆಸದಲ್ಲಿಯ ಎಲ್ಲ 'ಐತಿಹಾಸಿಕ' ಸ್ಥಳಗಳನ್ನೂ ನೋಡಿ ಬಂದೆವು. ಅವಳ ಸ್ಮೃತಿ ಅಲ್ಲಿಯ ಹೊಲಗದ್ದೆಗಳಲ್ಲಿ. ತೋಟ ಪಟ್ಟಿಗಳಲ್ಲಿ, ಕಣಗಳಲ್ಲಿ, ಭಾವಿ ಕಟ್ಟೆಯ ಮೇಲೆ, ಮಾವಿನ ತೋಪಿನಲ್ಲಿ, ಹಳ್ಳದ ದಂಡೆಯ ಮೇಲೆ – ಎಲ್ಲೆಲ್ಲೂ ಕಲ್ಲು ಕಲ್ಲುಗ ಮೇಲೆ, ಗಿಡಮರಗಳಲ್ಲಿ ಕೊರೆದಿಟ್ಟಿರುವಂ ನಮಗೆ ಭಾಸವಾಯಿತು.

ಅದೊಂದು ರಾತ್ರಿ ಮಾತ್ರ ಅಲ್ಲಿದ್ದು ಮರ ದಿನ ಪುಣೆಗೆ ಮರಳುವವರಿದ್ದೆವು. ಬಾಪ ಸಾಹೇಬರಿಗೆ ಮರೆತಿರಬಹುದಾದ ಅಥವ ನಮಗೆ ಅವರಿನ್ನೂ ಹೇಳದೆ ಇರಬಹುದಾ ಘಟನೆಗಳು ಮತ್ತೇನಾದರೂ ಉಳಿದಿರಬಹುದ ಎಂಬ ಕುತೂಹಲ ನಮಗೆ. ಆಗ ೧೯೭೨-೭೩ರ ನಡೆದೊಂದು ಸಂಗತಿ ಅವರಿಗೆ ನೆನಪಾಯಿತು.

"ಒಂದು ಮಧ್ಯಾಹ್ನ ಹೊಲದಲ್ಲಿ ಆಳುಗಳ ಊಟ ಮಾಡುತ್ತಿದ್ದಾಗ ನಾನು ಚಕ್ಕಡಿಯ ನೆರಳಲ್ಲಿ ವಿಶ್ರಾಂತಿ ಪಡೆಯುತ್ತಿದ್ದೆ. ಆಗೊ ಮ್ಮೆಲೆ ಒಂದು ದೊಡ್ಡ ನಾಗರಹಾವು ನನ ಕಾಲಿಗೆ ಸುತ್ತಿಕೊಂಡು ಬಲವಾಗಿ ಕಚ್ಚಿತು ಕಡಿದ ನಂತರ ನಾನು ಕೂಗುವಷ್ಟರಲ್ಲೇ ಅದ ಹರಿದು ಹೋಗುವುದನ್ನು ನೋಡಿದೆ, ನನ ಪೈಜಾಮವಾದ ಮೇಲೆ ಅದು ಕಚ್ಚಿದ ಸ್ಥ ದಲ್ಲಿ ಹಸಿರು ಗುರುತಿತ್ತಲ್ಲದೆ ರಕ್ತ ಅವ್ಯಾಹ ವಾಗಿ ಹರಿಯುತ್ತಲೇ ಇತ್ತು. ನನ್ನ ಅಂತ ಸನ್ನಿಹಿತವಾಯಿತೆಂದು ನಾನು ಭಯವಿಹ್ವ ನಾದೆನು. ಈ ಸುದ್ದಿಯನ್ನು ಕೇಳಿದ ನನ ವೃದ್ಧ ತಾಯಿ-ತಂದೆಗಳು ಧಾವಿಸಿ ಹೊಲ ಬಂದರು. ಅಷ್ಟರಲ್ಲೇ ಅವಂತಿ ನನ್ನೆದುರ ಪ್ರತ್ಯಕ್ಷಳಾಗಿ, 'ಏನೂ ಅಪಾಯವಿಲ್ಲ, ಹೆದ ಬೇಡಿ,' ಎಂದು ಅಭಯ ರಕ್ಷೆ ನೀಡಿದಳ ಅದರಿಂದ ಆತ್ಮವಿಶ್ವಾಸ ನನ್ನಲ್ಲಿ ಮರುಕಳಿ ನಾನು ಬೇರೆ ಯಾವ ಉಪಾಯದ ಅಗತ್ಯವ ಇಲ್ಲವೆಂದು ಹಟದಿಂದ ಹೇಳಿದೆ; ಅವಳ ಆಶ ಸನದಂತೆಯೇ ಏನೂ ಆಗದೆ ಬದುಕಿದೆ!" ಈ ಮಾತುಗಳನ್ನಾಡುವಾಗ ಅವರ ಕಣ್ಣುಗಳ ಕೃತಜ್ಞತೆ ಹೆಪ್ಪುಗಟ್ಟಿದಂತೆ ತೋರುತ್ತಿತ್ತು.

ಬಾಪೂಸಾಹೇಬ(ಗೋಪಾಲಸಿಂಹ ರ ಪುತ್ರ)ರ ಜೀವನವನ್ನು ಇನ್ನಷ್ಟು ಒಗೆದು ನೋಡುವ ಆಸೆ ನನಗಾಯಿತು. ಮತ್ತೆ ಕೆಲ ಪ್ರಶ್ನೆಗಳನ್ನು ಕೇಳಬಹುದೇನೆಂದು ವಿಚಾರಿ ಒಪ್ಪಿಗೆ ಪಡೆದೆ.

'ಅವಂತಿ'
ಮತ್ತು
ಪಾಶ್ಚಾತ್ಯ ಸಂಶೋಧಕರು

'ಅವಂತಿ' ಪ್ರಕರಣದಂತಹ ಕೆಲ ಘಟನೆಗಳು ಅಲ್ಲಲ್ಲಿ ವರದಿಯಾಗುವುದನ್ನು ನೋಡುತ್ತೇವೆ. ಆದರೆ ಅವುಗಳನ್ನು ತಥ್ಯರಹಿತವೆಂದು ಒಮ್ಮೆಲೆ ತಳ್ಳಿ ಹಾಕುವುದು ಸಾಧುವೆನಿಸದು. ಬಂದ ಕಾಲಕ್ಕೆ ಮಿಥ್ಯವೆಂದು ಜನ ಹೇಳುತ್ತಿದ್ದುದರಲ್ಲಿ ಇಂದು ತಥ್ಯಾಂಶ ಕಂಡುಬರುತ್ತಿರುವ ಉದಾಹರಣೆಗಳೂ ಇವೆ.

ಪುನರ್ಜನ್ಮದಲ್ಲಿ ಹಿಂದೂಗಳು ಧಾರ್ಮಿಕ ರೀತ್ಯಾ ನಂಬಿಗೆಯಿರಿಸಿದ್ದಾರೆ; ಆದರೆ ಕ್ರೈಸ್ತರೂ ಮುಸಲ್ಮಾನರೂ ಇದನ್ನು ಧಾರ್ಮಿಕ ಕಾರಣಗಳಿಗಾಗಿಯೇ ನಂಬುವುದಿಲ್ಲ. ಇತ್ತೀಚೆ ಪರಮಾನಸಶಾಸ್ತ್ರ (Para-psychology) ದಂತಹ ವಿಜ್ಞಾನ ಭಾಗ ಹೊಸದು ಮೈದಳೆದಿದ್ದು ಜಗತ್ತಿನ ಕೆಲವೆಡೆಗಳಲ್ಲಾದರೂ ಅದರನ್ವಯ ಇಂಥ ಪ್ರಕರಣಗಳಲ್ಲಿ ಸಂಶೋಧನೆ ನಡೆದಿದೆ.

ಅಮೇರಿಕದ ಮೆಟಾಸೈನ್ಸ್ ಕಾರ್ಪೊರೇಶನ್ ಎಂಬ ಸಂಸ್ಥೆ (ಪೋ. ಬಾ. ನಂ. ೭೪೭ ಫ್ರಾಂಕ್ಲಿನ್, ನಾರ್ತ್ ಕೆರೋಲಿನಾ, ೨೮೭೩೪) ದಿವಂಗತರ ಆತ್ಮಗಳೊಡನೆ ಸಂಪರ್ಕ ಸಾಧಿಸುವ ಪ್ರಯತ್ನದಲ್ಲಿ ಬಹು ಮಟ್ಟಿಗೆ ಯಶಸ್ವಿಯಾಗಿದೆ. ಈ ಸಂಪರ್ಕವೆಂದರೆ ಪ್ಲಾಂಚೆಟ್ ಅಥವಾ ಅಂಗಸಂಚಾರದಲ್ಲಿ (ಸತ್ತವರ ಆತ್ಮ ಇನ್ನೊಬ್ಬ ಜೀವಂತ ವ್ಯಕ್ತಿಯ ಮೈಯಲ್ಲಿ ಬಂದು ಮಾತಾಡುವುದು) ಹೈ ಫ್ರಿಕ್ವೆನ್ಸಿ ಧ್ವನಿ ತರಂಗಗಳ ನೆರವಿನಿಂದ ಮೃತರ ಆತ್ಮಗಳ ಧ್ವನಿಯನ್ನು ಟೇಪುಗಳಲ್ಲಿ ಮುದ್ರಿಸಿಕೊಳ್ಳಲಾಗುತ್ತಿದೆ. ಅಮೇರಿಕದ ಜಾರ್ಜ್ ಮೀಕ್ ಎಂಬುವರು ಈ ಸಂಸ್ಥೆಯ ಜಾಗತಿಕ ಅಧ್ಯಕ್ಷರಾಗಿದ್ದು ಅವರು ಈ ಬಗೆಯ ಸಂಶೋಧನಕ್ಕೆಂದೇ ತಮ್ಮ ಆಯುಷ್ಯವನ್ನು ಮೀಸಲಾಗಿರಿಸಿದ್ದಾರೆ. ಅವರ ಭಾರತೀಯ ಮಿತ್ರರು 'ಅವಂತಿ' ಪ್ರಕರಣವನ್ನು ಅವರಿಗೆ ಪೂರ್ತಿ ವರದಿಮಾಡಿ ಸಂಶೋಧನೆಯನ್ನು ಕೈಕೊಳ್ಳಲು ವಿನಂತಿಸಿದ್ದು ಅವರು ಕಾರ್ಯಪ್ರವೃತ್ತರಾಗಿದ್ದಾರೆ.

ಮಹಾರಾಷ್ಟ್ರದ ಸಾತಾರೆಯಲ್ಲಿ ಜ್ಞಾನೇಶ್ವರ ಸಂಶೋಧನ ಕೇಂದ್ರದ ಸಂಚಾಲಕರಾದ ದಾಸ ಕೃಷ್ಣ ಡೋಂಗ್ರೆಯವರೂ 'ಅವಂತಿ' ಪ್ರಕರಣದಲ್ಲಿ ಸಂಶೋಧನದಲ್ಲಿ ನಿರತರಾಗಿದ್ದಾರೆ. ಭಾರತೀಯ ಅಧ್ಯಾತ್ಮಶಾಸ್ತ್ರ ಇಂಥ ಸಂಗತಿಗಳಿಗೆ ಸಮಾಧಾನಕರ ಅರ್ಥ ಹೇಳಲು ಸಮರ್ಥವೆಂದವರು ನಂಬುತ್ತಾರೆ.

"ನಿಮಗೆ ಅವಂತಿಯ ಪ್ರಥಮ ದರ್ಶನ ಆದುದು ೧೯೫೫ರಲ್ಲಿ ಅಲ್ಲವೆ? ಆದರೆ ನಿಮ್ಮನ್ನು ಕಾಡುತ್ತಿರುವ ಬೇಡುಬ್ಬು ರೋಗ ಪ್ರಾರಂಭವಾದದ್ದು ಯಾವಾಗ?" ನಾನು ಕೇಳಿದೆ.

"೧೯೪೨ರಲ್ಲಿ."

"ಆದರೆ ನಿಮ್ಮ ಜೀವನದಲ್ಲಿ ಅವಂತಿಯ ಪ್ರವೇಶವಾದಾಗಿನಿಂದ ನಿಮಗೆ ಈ ಬಾಧೆಯ ತೊಂದರೆ ಹೆಚ್ಚಾಯಿತಲ್ಲವೇ?"

"ಹಾಗೆ ಹೇಳಲು ಬಾರದು. ಅವಳನ್ನು ಕಾಣುವುದಕ್ಕಿಂತ ೧೫ ವರ್ಷ ಮುಂಚಿನಿಂದಲೂ ನನಗೆ ಈ ಬಾಧೆಯಿದ್ದೇಯಿತ್ತು. ಆಕೆಯನ್ನು ಭೆಟ್ಟಿಯಾದ ಹೊಸದರಲ್ಲಿ ಅದು ಸ್ವಲ್ಪ ಉಲ್ಬಣಿಸಿತ್ತೆಂಬುದು ನಿಜ. ಆದರೆ ಅವಳ ಯಥಾವತ್ ಪರಿಚಯವಾದ ನಂತರ ನನ್ನ ದೃಷ್ಟಿಯೇ ಬದಲಾಗಿದೆ. ಈಗ ಅವಂತಿ ನಮ್ಮನ್ನೆಲ್ಲ ಹೇಗೆ ಕಾಪಾಡುತ್ತ ಬಂದಿದ್ದಾಳೆಂಬ ಬಗ್ಗೆ ನಿಮಗೆಲ್ಲ ವಿವರಗಳೂ ತಿಳಿದಿವೆ. ಹೀಗಿರುವಾಗಲೂ ಅವಳು ನನಗೆ ತೊಂದರೆ ಕೊಡುತ್ತಿದ್ದಾಳೆಂದು ಭಾವಿಸುವುದು ಸಾಧುವೆ ?"

ಈ ಪ್ರಶ್ನೆಯಿಂದ ಅವರು ನನ್ನ ಬಾಯಿ ಕಟ್ಟಿದರು. ಆದರೂ ಮುಂದಿನ ಮಾತು ಕತೆಯಲ್ಲಿ ಅವರ ಅಸ್ವಾಸ್ಥ್ಯದ ಬಗ್ಗೆ ಇನ್ನೂ ಅನೇಕ ವಿವರಗಳನ್ನು ಕಲೆ ಹಾಕಿದಾಗ ಇನ್ನೂ ಒಂದು ಆಶ್ಚರ್ಯ ನನಗಾಗಿ ಕಾದಿತ್ತು.

ಬಾಪೂಸಾಹೇಬರಿಗೆ ೧೯೭೦ರ ನಂತರ ಮಳೆಗಾಲದಲ್ಲಿ ದಮ್ಮಿನ ತೊಂದರೆ ಪ್ರಾರಂಭವಾಯಿತು. ಆಗೆಲ್ಲ ಮೇಲಿಂದ ಮೇಲೆ ಎಚ್ಚರದಪ್ಪುವುದೂ ನಡೆಯಿತು. ೧೯೭೩-೭೪ರ ನಂತರ ಈ ಪ್ರಮಾಣ ಮತ್ತಷ್ಟು ಹೆಚ್ಚಿತು. ಅನಂತರ ಮೂರು ವರ್ಷ ಅವರು ಮಳೆಗಾಲವನ್ನು ಸಕರಾಳೆಯಲ್ಲಿ ಕಳೆಯದೆ ಮುಂಬಯಿ, ಪುಣೆಗಳಲ್ಲಿ ಇರತೊಡಗಿದರು.

ಅವಂತಿ ಇವರ ಬಳಿ ಬರುವ ಪ್ರಮಾಣ ೧೯೭೬ರ ನಂತರ ಮೆಲ್ಲಗೆ ಕಡಿಮೆಯಾಗ ತೊಡಗಿತು. ಮೊದಲು ದಿನಾಲು ಬರುತ್ತಿದ್ದಾಕೆ ನಂತರ ವಾರಕ್ಕೊಮ್ಮೆ ಬರತೊಡಗಿದಳು. ಆ ಮೇಲೆ ಆ ಪ್ರಮಾಣವಿನ್ನೂ ಕಡಿಮೆಯಾಗಲಾರಂಭಿಸಿದಾಗ ಬಾಪೂ ಸಾಹೇಬರು ಆಕೆಯನ್ನೊಮ್ಮೆ ಹೀಗೇಕೆಂದು ಕೇಳಿದರು, "ವಿಶೇಷ ಕಾರಣವೇನೂ ಇಲ್ಲ. ನನ್ನ ಮನಸ್ಸಿಗೆ ಬಂದಾಗ ಮಾತ್ರ ಬರುವೆ. ಇನ್ನು ಮುಂದೆ ಈ ಪ್ರಮಾಣ ಇನ್ನೂ ಕಡಿಮೆಯಾಗಲಿದೆ," ಎಂದು ಅವಂತಿ ಉತ್ತರಿಸಿದಳಂತೆ.

ಮುಂದೆ ಆಕೆ ಮೂರು ನಾಲ್ಕು ತಿಂಗಳಿಗೊಮ್ಮೆ ಮಾತ್ರ ಬರತೊಡಗಿದಳು. ಬಂದಾಗ ಮಾತೂ ಕಡಿಮೆ. ಕಾರಣ ಕೇಳಿದರೂ ಸ್ಪಷ್ಟ ಉತ್ತರವಿಲ್ಲ. ೧೯೭೭-೭೮ ರ ನಂತರ ಬಾಪೂಸಾಹೇಬರಿಗೆ ಎಚ್ಚರದಪ್ಪುವುದು ಕಡಿಮೆಯಾಗಿದೆಯಲ್ಲದೆ ದಮ್ಮು ನಿಂತಿದೆ. ಈಗ ಅವರು ಮಳೆಗಾಲದಲ್ಲೂ ಸಕರಾಳೆಯಲ್ಲೇ ಇರಲಾರಂಭಿಸಿದ್ದಾರೆ. **ಆದರೆ ಒಂದು ವಿಶೇಷವೆಂದರೆ ತಾಮ್ರಥಳಿಯ ವಾಡೆಯ ಹತ್ತಿರದ ಆ ದೊಡ್ಡ ಮರ ಮಾತ್ರ ಒಣಗುತ್ತ ಬಂದು ಈಗ ಪೂರ್ಣ ನಾಶವಾಗಿ ಹೋಗಿದೆ. ಇದೇನು ಯೋಗಾಯೋಗವೆ ?**

ಎಂಟು

ನಾನು ಬಾಪೂಸಾಹೇಬರ ಮನವೊಲಿಸಿ ಅವರ ಧರ್ಮಪತ್ನಿ ಪದ್ಮಕುವರ (ರಾಜಕೌರ ಎಂಬುದು ಅವರ ತವರ್ಮನೆಯ ಹೆಸರು.) ಅವರ ಸಂದರ್ಶನ ಪಡೆಯಲು ನನಗೆ ಸಾಧ್ಯವಾಯಿತು.

ಅವರು ಮದುವೆಯಾಗಿ ಅತ್ತೆಯ ಮನೆ ಸೇರಿದಾಗ ಅವರ ವಯಸ್ಸು ೧೪-೧೫ ಮಾತ್ರ. ತವರ್ಮನೆಯ ಸ್ಥಿತಿ ತೀರ ಸಾಮಾನ್ಯ. ಈ ಗೃಹಿಣಿಯ ಸ್ವಭಾವ ಮಾತ್ರ ತೀರಾ ಸೌಮ್ಯ. ಬಾಪೂಸಾಹೇಬರಿಗೆ ಅವಂತಿಯ ಪ್ರಥಮ ದರ್ಶನ ಮಾದುವೆಗಿಂತ ಮುಂಚೆಯೇ ಆಗಿತ್ತು. ಅವಂತಿಯಂಥ ನಿಗೂಢ ಪ್ರಕರಣಗಳು ಮನೆಯಲ್ಲಿ ನಡೆದರೂ ಅವರು ಎಷ್ಟೂ ವಿಚಲಿತರಾಗದೆ ಸರಿಯಾಗಿ ಎದುರಿಸಿದ್ದರು. ಅಷ್ಟೇನೂ ಸುಶಿಕ್ಷಿತೆಯಲ್ಲದಿದ್ದರೂ ನನ್ನ ಪ್ರಶ್ನೆಗಳನ್ನು ಯೋಗ್ಯ ರೀತಿಯಲ್ಲೇ ಉತ್ತರಿಸಿದರು.

ಅವರ ಹೇಳಿಕೆಯ ಸಾರವನ್ನು ಮಾತ್ರ ಇಲ್ಲಿ ಕೊಡುವೆ.

“ಅವಂತಿ ನನ್ನೊಡನೆ ಮಾತಾಡಿದ್ದು ನಾನು ಈ ಮನೆಯಲ್ಲಿ ಕಾಲಿಟ್ಟ ಕೂಡಲೇ. ಆದರೆ ಅವಳನ್ನೆಂದೂ ಸ್ಪಷ್ಟವಾಗಿ ನೋಡಲು ನನಗೆ ಸಾಧ್ಯವಾಗಿಲ್ಲ. ಸ್ಪಷ್ಟ ಮಾನುಷ್ಯ ರೂಪದಲ್ಲಿ ನೋಡಿಲ್ಲವಾದರೂ ಅವಳು ಬಂದಂತೆ ಭಾಸ ಮಾತ್ರ ಆಗುವುದು. ಮಾತು ಮಾತ್ರ ಸ್ಪಷ್ಟವಾಗಿ ಕೇಳಿಸುತ್ತದೆ... ನನ್ನೊಡನೆ ಅವಳು ಮಾತಾಡಿದ ಮೊಟ್ಟ ಮೊದಲ ಬಾರಿ ನನಗಾದ ಆಶ್ಚರ್ಯವೆಂದರೆ ನನ್ನನ್ನು ‘ರಾಜಕೌರ’ ಎಂದು ತವರ್ಮನೆಯ ಹೆಸರಿನಲ್ಲೇ ಕರೆದದ್ದು. ಆಗಿನಿಂದಲೂ ನನ್ನನ್ನು ಆಕೆ ಇದೇ ಹೆಸರಿನಿಂದಲೇ ಕರೆಯುತ್ತಾಳಲ್ಲದೆ ಹೋಗುವಾಗ ‘ನಮಸ್ತೆ’ ಎಂದು ಹೇಳಿ ಹೋಗುತ್ತಾಳೆ.

“ಇವರಿಗೆ ಎಚ್ಚರದಪ್ಪಿದಾಗ ಮಾತ್ರ ಖಂಡಿತ ನನ್ನೊಡನೆ ಮಾತಾಡುತ್ತಿದ್ದಳು. ಮೋಜೆಂದರೆ ನನ್ನೊಡನೆ ಮರಾಠಿಯಲ್ಲಿ ಮಾತಾಡುತ್ತಿದ್ದ ಆಕೆ ನನ್ನ ಭಾವನವರೊಂದಿಗೆ ಇಂಗ್ಲೀಷಿನಲ್ಲಿ ಮಾತಾಡುತ್ತಿದ್ದಳು. ಅವಳ ಬಗ್ಗೆ ಮೊದ ಮೊದಲು ನನಗೆ ಸ್ವಲ್ಪ ಭಯವೆನಿಸಿತ್ತಾದರೂ ಮುಂದೆ ಅವಳೊಂದು ದಿನ ತಾನು ಪಿಶಾಚಿಯೋ ಭೂತವೋ ಅಲ್ಲವೆಂದೂ ಇವರನ್ನು ತಾನು ಪೂರ್ತಿ ರಕ್ಷಿಸುವೆನೆಂದೂ ಆಶ್ವಾಸನವಿತ್ತ ನಂತರ ನನ್ನ ಭಯ ಪೂರ್ತಿ ನಿವಾರಣೆಯಾಯಿತು. ‘ರಾಜಕೌರ’ ಎಂಬ ಅವಳ ಕಿನ್ನರ ಧ್ವನಿ ನನ್ನ ಕಿವಿಗೆ ಬಿದ್ದೊಡನೆಯೇ ನನಗೆ ಅಪೂರ್ವ ಆನಂದವಾಗುತ್ತದೆ. ತನ್ನ ಪೂರ್ವವೃತ್ತಾಂತವನ್ನೆಲ್ಲ ಆಕೆ ನನಗೂ ಹೇಳಿದ್ದಾಳಲ್ಲದೆ ಇವರು ಮೇಲಿಂದ ಮೇಲೆ ಎಚ್ಚರತಪ್ಪಿ ಬೀಳುವ ಬಾಧೆಯ ಬಗ್ಗೆಯೂ ಒಂದು ವಿಚಾರ ಹೇಳಿ ಎಲ್ಲರನ್ನೂ ಚಕಿತಗೊಳಿಸಿದಳು. ಅದಕ್ಕೆ ಕಾರಣ, ಸಣ್ಣವರಿದ್ದಾಗ ಇವರು ಚಕ್ಕಡಿಯಿಂದ ಬಿದ್ದು ಇವರಿಗಾದ ಪೆಟ್ಟಂತೆ. ಅದು ತೀರ ಸಾವಕಾಶವಾಗಿ ಕಡಿಮೆಯಾಗಿ ಮುಂದೆ ಪೂರ್ತಿ ಸರಿ ಹೋಗುವುದೆಂದೂ ನಾವು ಯಾರೂ ಆ ಬಗ್ಗೆ ಎಷ್ಟೂ ಚಿಂತಿಸಬಾರದೆಂದೂ ಹೇಳಿದ್ದಾಳೆ. (ಅಲ್ಲಿಯೇ ಇದ್ದ ಬಾಪೂಸಾಹೇಬರು ತಾವು ೧೯೪೧–೪೨ರ ಮಧ್ಯೆ ಚಕ್ಕಡಿ ಅಪಘಾತದಲ್ಲಿ ಪೆಟ್ಟು ತಿಂದಿದ್ದು ನಿಜವೆಂದು ಒಪ್ಪಿದರು.)

“ಅವಳ ತೊಂದರೆಯನ್ನು ನಿವಾರಿಸಲು ಒಮ್ಮೆ
ಇವರು ಒಬ್ಬ ಮಾಂತ್ರಿಕನನ್ನು ಮನೆಗೆ ಕರೆ
ದಾಗ ಆಕೆ ಖಡಾ ಖಂಡಿತ ಹೇಳಿದ್ದಳು, ‘ನನ
ಮೇಲೆ ಈ ಉಪಾಯುಗಳು ಯಾವ ಪರಿಣಾಮ
ವನ್ನೂ ಬೀರಲಾರವು. ನಿಮ್ಮ ಸಪ್ತಶೃಂಗಿ
ಮಾತಾ ಇಲ್ಲವೆ? ನಾನು ಅವಳ ಮಗಳಂ
ಇದ್ದೇನೆ,’ ಎಂದು.

“ಆಕೆ ತನ್ನ ಮೈಮೇಲಿನ ಚಿನ್ನ ರನ್ನ
ಒಡವೆಗಳ ವರ್ಣನೆಯನ್ನು ಮಾಡುತ್ತಿದ್ದಾ
ಹಾಗೂ ಇವರು ಆ ಬಗ್ಗೆ ಹೇಳುತ್ತಿದ್ದಾ
ಅವುಗಳನ್ನು ನೋಡಬೇಕೆಂಬಾಸೆ ನನಗೂ ಆಗ
ತ್ತಿತ್ತು. ಒಮ್ಮೆ ನಾನು ಆ ಬಗ್ಗೆ ಆಕೆಯನ್
ನನಗೂ ತೋರಿಸಬಾರದೇಕೆಂದು ಕೇಳಿದೆ. ‘ಇವ
ಗಳಿಂದ ನಿನಗೇನಾಗಬೇಕಾಗಿದೆ? ನಿನ್ನ ಪತಿಯೆ
ನಿನ್ನ ಅತ್ಯಮೂಲ್ಯ ಒಡವೆಯಲ್ಲವೇ?’ ಎಂದ
ಆಕೆ ಹೇಳಿದಾಗ ಅಂಥ ಮಾತನ್ನೇ ಆಕೆ ಮತ್ತೆ
ಮತ್ತೆ ಹೇಳಬೇಕೆಂದು ನನಗನಿಸುತ್ತಿತ್ತು. ನಾ
ವಳನ್ನು ಒಮ್ಮೆ ನೋಡಬಯಸಿ ಅದಕ್ಕಾ
ಪ್ರಾರ್ಥಿಸಿದೆ. ‘ನನ್ನ ತೇಜವನ್ನು ನೋಡಿ ಸಹಿಸಿ
ಕೊಳ್ಳುವ ಶಕ್ತಿ ನಿನ್ನ ಕಣ್ಣುಗಳಿಗಿಲ್ಲ. ಇವರ
(ಗೋಪಾಲಸಿಂಹ) ಎದುರು ಮಾತ್ರ ನನ್ನ ತೇಜ
ಕ್ಷೀಣಿಸುವುದರಿಂದ ಇವರೊಬ್ಬರು ನನ್ನನ್ನು
ಸತತವಾಗಿ ನೋಡಲು ಶಕ್ತರಾಗಿದ್ದಾರೆ,’ ಎಂದು
ತ್ತರಿಸಿದಳು.

“ಅವಂತಿಯು ದೈವೀ ಶಕ್ತಿಯ ಗಾಢ ಪರಿ
ಚಯ ನನಗಾದದ್ದು, ಹೊಲದಲ್ಲಿ ಯಂತ್ರದಲ್ಲಿ
ಇವರ ಅಂಗಿ ಸಿಕ್ಕು ಇವರು ವಿಪರೀತ ಗಾಯ
ಗೊಂಡು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾಗ
ಸ್ಥಳೀಯ ಡಾಕ್ಟರರ ಅಭಿಪ್ರಾಯದಂತೆ ಇವ
ರನ್ನು ಧುಳೆಗೆ ಕರೆದೊಯ್ಯಲು ಹಿರಿಯರೆಲ್ಲರೂ
ನಿರ್ಧರಿಸಿದ್ದರು. ಅವಂತಿಯು ಮಾತಿನಲ್ಲಿ ಶ್ರದ್ಧೆ
ಯಿಟ್ಟು ನಾನು ಅದನ್ನು ವಿರೋಧಿಸಿ ಇವರನ್ನು
ಮನೆಯಲ್ಲೇ ಉಳಿಸಿಕೊಂಡೆ. ಆ ಸಂಜೆಯ
ಅವಳು ಹೇಳಿದ ವನಸ್ಪತಿಗಳನ್ನೆಲ್ಲ ತರಿಸಿ ಅವಳು
ಹೇಳಿದ ರೀತಿಯಲ್ಲೇ ಹೊಗೆ ಹಾಕತೊಡಗಿದೆ.
೨೪ ಗಂಟೆಗಳ ಕಾಲವೂ ನಾನು ಸತತವಾಗಿ

ಗೋಪಾಲಸಿಂಹರ ಸುಶಿಕ್ಷಿತ ಕುಟುಂಬ

ಗೋಪಾಲಸಿಂಹರ ಕುಟುಂಬ ಅಶಿಕ್ಷಿತ ಅಥವಾ ಅರ್ಧ-ಶಿಕ್ಷಿತ ಕುಟುಂಬವಲ್ಲ. ಅವರ ತಂದೆ ಪ್ರಲ್ಹಾದಸಿಂಹರು ಮಹಾರಾಷ್ಟ್ರದ ಸತಾರಾ ಮತ್ತು ನಗರ ಜಿಲ್ಲೆಗಳಲ್ಲಿ ಡೆಪ್ಯುಟಿ ಕಲೆಕ್ಟರ್ ಆಗಿದ್ದರು. ನಿವೃತ್ತರಾದ ಮೇಲೆ ಹೈದರಾಬಾದ ಸಂಸ್ಥಾನದಲ್ಲಿ ಪೋಲೀಸ್ ಕಾರ್ಯಾಚರಣೆಯ ನಂತರ ಅವರು ಉಸ್ಮಾನಾಬಾದ್ ಮತ್ತು ಕಲಬುರ್ಗಿಗಳ ಪ್ರಶಾಸಕರಾಗಿದ್ದರು. ನಂತರ ರಜಾಕಾರರ ಚಟುವಟಿಕೆಗಳ ಬಗ್ಗೆ ತನಿಖೆ ನಡೆಸಲು ನೇಮಿಸಲಾಗಿದ್ದ ರಜಾಕಾರ್ ಬೋರ್ಡಿನ ಅಧ್ಯಕ್ಷರೂ ಆಗಿದ್ದರು. ೧೯೪೨ರ ಆಂದೋಲನ ಕಾಲದಲ್ಲಿ ಸತಾರಾ ಜಿಲ್ಲೆಯಲ್ಲಿ ಡೆಪ್ಯುಟಿ ಕಲೆಕ್ಟರಾಗಿದ್ದ ಅವಧಿಯ ವರ್ಣನೆ ಆ ಕಾಲದ ಗೊಂದಲಿಗರ ಕಥೆಗಳಲ್ಲಿ ಬರುತ್ತದೆ. ಆಗ ಆ ಜಿಲ್ಲೆಯಲ್ಲಿ ಸ್ವಾತಂತ್ರ್ಯಾಂದೋಲನಕಾರರು ಪತ್ರಿ ಸರಕಾರ'ವನ್ನು ಸ್ಥಾಪಿಸಿ ರಾಷ್ಟ್ರದ್ವಜವನ್ನೇರಿಸಿದ್ದರು. ಈ ಕಥೆಗಳಲ್ಲಿ ಅವರನ್ನು 'ದೇವ ರಾವಸಾಹೇಬ'ರೆಂದು ಕರೆಯಲಾಗಿದೆ.

ಗೋಪಾಲಸಿಂಹರ ಹಿರಿಯಣ್ಣ ದಾದಾಸಾಹೇಬರು ಮಹಾರಾಷ್ಟ್ರದ ಮಣ್ಣು ಸಂರಕ್ಷಣೆ ಇಲಾಖೆಯಲ್ಲಿ ಅಧಿಕಾರಿಯಾಗಿದ್ದವರು ಸಾಮಾನ್ಯ ಸೇವಾನಿವೃತ್ತಿಗಿಂತ ಮುಂಚೆಯೇ ನಿವೃತ್ತಿ ಪಡೆದು ಸಕರಾಳೆಯಲ್ಲಿ ಒಕ್ಕಲತನ ಮಾಡಿಕೊಂಡಿದ್ದಾರೆ. ಇನ್ನೊಬ್ಬ ಅಣ್ಣ ಗೋವಿಂದಸಿಂಹ ಮುಂಬಯಿಯಲ್ಲಿ ಅಸಿಸ್ಟಂಟ್ ಡ್ರಗ್ ಕಮೀಶನರ್ ಆಗಿ ನಿವೃತ್ತರಾಗಿದ್ದಾರೆ. ಇಬ್ಬರು ತಮ್ಮಂದಿರು ಬ್ಯಾಂಕ್ ನೌಕರಿಯಲ್ಲಿದ್ದಾರೆ. ಅಕ್ಕ ಪುಣೆಯ ವೈಕುಂಠ ಮೆಹತಾ ಇನ್‌ಸ್ಟಿಟ್ಯೂಟಿನಲ್ಲಿ ಕೆಲಸದಲ್ಲಿದ್ದರೆ ಅವರ ಗಂಡ ರಜಪೂತಸಿಂಹ ಠಾಣೆಯಲ್ಲಿ ವೈದ್ಯರಾಗಿದ್ದಾರೆ.

ಆ ಕ್ರಿಯೆಯಲ್ಲಿ ತೊಡಗಿದಾಗ ಆಕೆ ನನಗೆ ಧೈರ್ಯ ಕೊಡುವುದಲ್ಲದೆ ಕೋಣೆಯ ಒಂದು ಮೂಲೆಯಲ್ಲಿ ಕುಳಿತು ಸಂಸ್ಕೃತದಲ್ಲೊ ಇನ್ನಾವ ಭಾಷೆಯಲ್ಲೋ ಮಂತ್ರೋಚ್ಚಾರಣೆ ಮಾಡುತ್ತಿದ್ದಳು. ಆ ಕಾಲಕ್ಕೆ ಬೇರಾವ ಚೆರ್ಚೆಯನ್ನೂ ಆಕೆ ಮಾಡಲಿಲ್ಲ. ೨೪ ತಾಸುಗಳ ನಂತರ ನನಗೆ 'ನಮಸ್ತೆ' ಎಂದು ಹೇಳಿ ಹೋಗಿಬಿಟ್ಟರು.

"ಇಷ್ಟು ವರ್ಷಗಳಲ್ಲಿ ಅವಳ ಮೇಲೆ ನಿಮಗೆಂದೂ ಕೋಪ ಬಂದಿಲ್ಲವೇ?

"ಒಮ್ಮೆ ಬಂದಿತ್ತು – ಸುಮಾರು ನಾಲ್ಕು ವರ್ಷಗಳ ಹಿಂದೆ. ಆಗ ನನ್ನ ಅಳಿಯ ಒಂದು ಭೀಕರ ಅಪಘಾತದಲ್ಲಿ ಸಿಕ್ಕಿದ್ದ. ಆದರೆ ಅದಕ್ಕೆ ಮುಂಚಿತವಾಗಿ ಹಿಂದೆಲ್ಲ ಮಾಡಿದಂತೆ ಅವಳು ನಮಗ್ಯಾರಿಗೂ ಸೂಚನೆಯನ್ನು ಕೊಡಲಿಲ್ಲ, ನಂತರ ಬಂದು ಧೈರ್ಯವನ್ನೂ ಹೇಳಲಿಲ್ಲ. ಅದರಿಂದಾಗಿ ಸಹಜವಾಗಿಯೆ ನನಗೆ ಅವಳ ಬಗ್ಗೆ ಬೇಸರವುಂಟಾಗಿ ತುಸು ಕೋಪವೂ ಬಂದಿತ್ತು. ಆದರೆ ಮುಂದೆ ಕೆಲ ದಿನಗಳ ನಂತರ ಇಂಥ ದೊಡ್ಡ ಅಪಘಾತದಲ್ಲಿ ಸಿಕ್ಕು ಡಾಕ್ಟರೆಲ್ಲ ಆಶೆಯನ್ನು ಬಿಟ್ಟಾಗಲೂ ನನ್ನ ಅಳಿಯ ಬದುಕಿ ಉಳಿಯುನೆಂಬ ಸಂಗತಿ ತಿಳಿದು ನನಗೆ ಸಮಾಧಾನವಾಯಿತಲ್ಲದೆ ಕದಾಚಿತ್ ಅವಳೇ ಕಾಪಾಡಿರಬೇಕೆಂಬ ಅನಿಸಿಕೆಯೂ ನನ್ನನ್ನಾವರಿಸಿತು."

"ಆಗಿನಿಂದಲೂ ಆಕೆ ಬಂದಿಲ್ಲವಲ್ಲವೇ?"

"ನನ್ನ ಅಳಿಯನಿಗಾದ ಅಪಘಾತದ ನಂತರ-ಬಂದಿಲ್ಲ. ಅಥವಾ ಬಂದಿದ್ದರೂ ನಮಗೆ ತಿ[...] ದಿಲ್ಲ."

"ನಿಮ್ಮ ಅಳಿಯನಿಗೆ ಅಪಘಾತವಾಗಿ ನಾಲ[...] ವರ್ಷಗಳಾಯಿತು. ಈ ನಾಲ್ಕು ವರ್ಷಗಳ[...] ಬಾಪೂಸಾಹೇಬರಿಗೆ ಫಿಟ್ಸ್ ಬಂದಿಲ್ಲ. ಅಲ್ಲ[...] ನಾಲ್ಕು ವರ್ಷಗಳ ಹಿಂದೆಯೇ ಆ ವಾಡೆಯ[...] ಬಳಿಯ ದೊಡ್ಡ ಮರ ಕೂಡ ನಾಶವಾ[...] ಬಿಟ್ಟಿದೆ. ಆದ್ದರಿಂದ ಇನ್ನು ಆಕೆ ಬರಲಾರಳೆಂದ[...] ಹೇಳಬಹುದಲ್ಲವೇ?" ನಾನು ಕೇಳಿದೆ.

"ಇರಬಹುದು. ಆದರೆ ಅದನ್ನು ನಾನ[...] ನಂಬುವುದಿಲ್ಲ. ತನ್ನ ಮನಸ್ಸಿಗೆ ಬಂದಾ[...] ಮಾತ್ರ ಬರುವುದಾಗಿ ಆಕೆಯೇ ಹೇ[...] ಲ್ಲವೇ? ನಾಲ್ಕು ವರ್ಷಗಳಿಂದ ಬಂದಿ[...] ದಿದ್ದಾಕೆ ಆರು ವರ್ಷಗಳ ನಂತರ ಬ[...] ಬಹುದು. ಅಥವಾ – ಈಗಲೂ ಆಕೆ ಬರ[...] ತ್ತಿದ್ದರೂ ನಮಗೆ ಕಾಣುತ್ತಿರಲಿಕ್ಕಿಲ[...] ಸ್ವತಃ ದೇವತೆಯಂತಿರುವ ಆಕೆ ಬರುವುದಿಲ್ಲ[...] ವೆಂದರೆ ನಾನು ಹೇಗೆ ನಂಬಲಿ? ಇವರ[...] ಬದುಕಿರುವ ವರೆಗೂ ಇವರನ್ನು ಸಂರಕ್ಷಿ[...] ವುದಾಗಿ ಹೇಳಿರುವ ಅವಳ ಮಾತನ[...] ನಾನು ಅಕ್ಷರಶಃ ನಂಬುತ್ತೇನೆ. ಜನ ಏ[...] ಹೇಳಿದರೂ ನನ್ನ ವಿಶ್ವಾಸದಲ್ಲಿ ಕಿಂಚಿತ[...] ಬದಲಾಗುವುದಿಲ್ಲ," ಎಂದು ಪದ್ಮಕುಮ[...] ಹೇಳಿದಾಗ ಬಾಪೂಸಾಹೇಬರು ನಸುನಕ[...] ಅದಕ್ಕೆ ತಮ್ಮ ಸಮ್ಮತಿಯನ್ನೂ ಸೂ[...] ಸಿದರು.

Edited, printed & published by M. N. Mahishi on behalf of the Receiver (Moveables), Loka Shikshana Trust, Samyukta Karnataka Press, Koppikar Road, Hubli-580 020. Rept: Bombay: V. Satyamurthy Phone: 5510592. Calcutta: H. Majumdar Phone: 46-42331 Madras: K. A. Subramanian Phone: 842201. New Delhi: V. K. Chopra Phone: 7114785.

Registered with the Registrar of News papers for India under No.3533/57

KASTURI PRICE: 2-50 Regd. No. KRNG 43
Licensed to Post without Prepayment. *Licence No. L2120 | WPP No. 33*